# ಭಾಗವತಸಂಪ್ರದಾಯ

ಪ್ರಕಾಶಕರು:
ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ.
2000

# ಭಕ್ತರ ಪ್ರೇಮವನ್ನು ಉಕ್ಕೇರಿಸುವ ಕೆಲವು ಸ್ತೋತ್ರ, ಪದ, ಪದ್ಯ - ಗ್ರಂಥಗಳು

೧. **ಭಗವಚ್ಛರಣಸ್ತೋತ್ರ :** ಬ್ರಹ್ಮಾನಂದಸ್ವಾಮಿಗಳವರ ಕೃತಿ, ಅಧ್ಯಾತ್ಮತತ್ತ್ವವನ್ನು ಸಾಕ್ಷಾತ್ಕಾರಗೊಳಿಸಿಕೊಳ್ಳಬೇಕೆನ್ನುವವರು ಯಾವಯಾವ ಸಾಧನಗಳನ್ನು ಅಳವಡಿಸಿಕೊಂಡಿರಬೇಕೆಂಬುದನ್ನೂ ಭಗವಂತನಿಗೆ ಶರಣುಹೋಗುವದು ಬಹುಮುಖ್ಯವಾದ ಸಾಧನವೆಂಬುದನ್ನೂ ಪ್ರಕಟಿಸುವ ಸಣ್ಣ ಪ್ರಕರಣವಿದು. ಸಾಧಕರಿಗೆ ಅಮೂಲ್ಯವಾದದ್ದು, ಮೂಲಶ್ಲೋಕಗಳು, ಭಾವಾರ್ಥವಿವರಣೆ - ಇಷ್ಟೂ ಇವೆ. (ನಾಲ್ಕನೆಯ ಮುದ್ರಣ : ೧೯೮೯ ಪು. ಕ್ರೌನ್ ೪+೬೦)

೨. **ಶ್ರೀರಾಮ ಹೃದಯ :** ಅಧ್ಯಾತ್ಮರಾಮಾಯಣದ ಮೊದಲನೆಯ ಸರ್ಗದ ಭಾಗವು ಮೂಲಸಮೇತ ಇದರಲ್ಲಿದೆ. ಸೀತಾದೇವಿಯೂ ಶ್ರೀರಾಮನೂ ಹನುಮಂತನಿಗೆ ಮಾಡಿದ ತತ್ತ್ವೋಪದೇಶವಿದು. ರಾಮಭಕ್ತರಿಗೆ ಅನುಸಂಧಾನಕ್ಕೆ ತಕ್ಕ ಗ್ರಂಥ. ಪಾಠಾಂತರ ಸಹಿತ ಮೂಲ, ಅರ್ಥ, ಟಿಪ್ಪಣಿ, ಸಾರಾಂಶ ಇಷ್ಟೂ ಇವೆ. (ಮೂರನೆಯ ಮುದ್ರಣ : ೧೯೮೦ ಪು. ಕ್ರೌನ್ ೨೨)

೩. **ಶ್ರೀರಾಮಗೀತೆ ಮತ್ತು ವಾಗ್ದೇವೀ ಸ್ತೋತ್ರ :** ಅಧ್ಯಾತ್ಮರಾಮಾಯಣದಿಂದ ಆರಿಸಿದ ಭಾಗವಿದು. ಶ್ರೀರಾಮನು ಲಕ್ಷ್ಮಣನಿಗೆ ಮಾಡಿದ ಅಮೋಘವಾದ ಉಪದೇಶವು ಇದರಲ್ಲಿದೆ. ಇದರಲ್ಲಿ ಮಹಾವಾಕ್ಯವಿಚಾರವೂ, ಪರಮಾತ್ಮನಲ್ಲಿ ಪ್ರಪಂಚವನ್ನೆಲ್ಲ ಲಯಗೊಳಿಸಿಕೊಳ್ಳುವ ಸಾಧನ ಕ್ರಮವೂ - ಉಕ್ತವಾಗಿವೆ. ಜ್ಞಾನಕ್ಕೆ ಭಕ್ತಿಯೇ ಸಾಧನವೆಂದೂ ಪ್ರತಿಪಾದಿಸಿದೆ. ಭಜನೆಗೆ ಅನುಕೂಲವಾಗುವಂತೆ ಸರಸ್ವತಿ (ವಾಗ್ದೇವೀ) ಸ್ತೋತ್ರವನ್ನು ಅಳವಡಿಸಿದೆ.

(ಮೂರನೆಯ ಮುದ್ರಣ : ೧೯೯೯ ಪು. ಕ್ರೌನ್ ೧೦+೪೪)

೪. **ಮೂಲರಾಮಾಯಣಮ್ :** ಶ್ರೀಮದ್ವಾಲ್ಮೀಕಿರಾಮಾಯಣದ ಬಾಲ ಕಾಂಡದ ಮೊದಲನೆಯ ಸರ್ಗವನ್ನು ಮೂಲ, ಕನ್ನಡ ಅನುವಾದ ಸಮೇತ ಕೊಡಲಾಗಿದೆ. ರಾಮಾಯಣದ ಪೂರ್ಣಕಥೆಯು ಸಂಕ್ಷೇಪವಾಗಿದೆ.

(ನಾಲ್ಕನೆಯ ಮುದ್ರಣ : ೧೯೯೯ ಪು. ಕ್ರೌನ್ ೪+೨೨)

೫. **ಮುಕುಂದಮಾಲಾ :** ಕುಲಶೇಖರಾಚಾರ್ಯರಿಂದ ವಿರಚಿತವಾದ ಈ ಭಕ್ತಿ ಪ್ರಧಾನಸ್ತೋತ್ರವು ವಿಷ್ಣುಭಕ್ತರಿಗೆಲ್ಲ ಪ್ರಿಯವಾಗಿರುತ್ತದೆ. ಭಗವದ್ಭಕ್ತಿಯ ಮರ್ಮವನ್ನು ವಿವರಿಸುವ ಈ ಪದ್ಯಗಳು ಹಾಡಿ ನಲಿಯಲು ಯೋಗ್ಯವಾಗಿವೆ. ಮೂಲ, ಅರ್ಥ, ಪಾಠಾಂತರಗಳನ್ನೂ ಕೊಟ್ಟಿದೆ.

(ಐದನೆಯ ಮುದ್ರಣ : ೧೯೯೧ ಪು. ಕ್ರೌನ್ ೪+೨೦)

೬. **ಶಿವಕವಚ :** ಭದ್ರಾಯುವೆಂಬ ರಾಜಕುಮಾರನಿಗೆ ಋಷಭಯೋಗೀಶ್ವರರೆಂಬ ಮಹಾತ್ಮರು ಉಪದೇಶಿಸಿದ ಸ್ತೋತ್ರವಿದು. ಸ್ಕಾಂದಪುರಾಣದ ಬ್ರಹ್ಮೋತ್ತರ ಖಂಡದಿಂದ ಆರಿಸಿದ ಈ ಸುಪ್ರಸಿದ್ಧ ಸ್ತೋತ್ರವನ್ನು ಮೂಲ, ಅರ್ಥ, ವಿವರಣೆಗಳ ಸಮೇತವಾಗಿ ಪ್ರಕಟಿಸಿದೆ. (ಐ. ಮುದ್ರಣ : ೧೯೯೯ ಪು. ಕ್ರೌನ್ ೪+೫೬)

(ರಕ್ಷಾಕವಚದ ಮೂರನೇ ಪುಟದಲ್ಲಿ ಮುಂದುವರೆದಿದೆ. )

೭. **ಶಿವನಾಮಾಷ್ಟೋತ್ತರಶತಕ:** ಶಿವರಹಸ್ಯದಲ್ಲಿರುವ ಗೌರೀನಾರಾಯಣ ಸಂವಾದ ರೂಪವಾದ ಸ್ತೋತ್ರವಿದು. ಅರ್ಥವಿವರಣೆ ಸಹಿತವಾಗಿದೆ. ಅಷ್ಟೋತ್ತರ ಶತನಾಮಾವಳಿಯನ್ನೂ ಕೊಟ್ಟಿದೆ.

**(ಮೂ. ಮು: ೧೯೯೨ ಪು. ಕ್ರೌನ್ ೪+೪೨)**

೮. **ಗಣೇಶಾಷ್ಟಕ :** ಗಣೇಶಪುರಾಣದಿಂದ ಆರಿಸಿದ ಸ್ತೋತ್ರ, ಪ್ರಪಂಚವೆಲ್ಲವೂ ಬ್ರಹ್ಮವೇ ಎಂಬ ಸಿದ್ಧಾಂತವನ್ನು ಮನೋಹರ ರೀತಿಯಿಂದ ವಿವರಿಸಿರುವ ಈ ಸ್ತೋತ್ರಕ್ಕೆ ತಿಳಿಗನ್ನಡದ ಭಾವಾರ್ಥವನ್ನೂ ವಿವರಣೆಯನ್ನೂ ಜೋಡಿಸಿದೆ.

**(ಮೂ. ಮು: ೧೯೮೮ ಪು. ಕ್ರೌನ್ ೪+೨೫)**

೯. **ಭೀಷ್ಮಸ್ತವರಾಜ : (ಸ್ತೋತ್ರಮಾಲಾ. ಭಾಗ ೧)** ಮಹಾಭಾರತದಿಂದ ಆರಿಸಿದ ಸ್ತೋತ್ರ. ಸುಪ್ರಸಿದ್ಧ ಜ್ಞಾನಿಗಳೂ ಭಕ್ತರೂ ಉಪಾಸಕರೂ ಆದ ಭೀಷ್ಮಾಚಾರ್ಯರು ದೇಹವನ್ನು ಬಿಡುವ ಕಾಲದಲ್ಲಿ ಶ್ರೀಕೃಷ್ಣನು ಎದುರಿಗೆ ಇದ್ದಾಗ ಮಾಡಿದ ಉತ್ತಮಸ್ತೋತ್ರವಿದು. ಪಾಠಾಂತರ ಸಮೇತ ಮೂಲ ಭಾವಾರ್ಥಗಳನ್ನೊಳಗೊಂಡಿದೆ. **(ಎ. ಮು. : ೧೯೯೯ ಪು. ಡೆಮ್ಮಿ ೬ + ೯೫)**

೧೦. **ವೇದಾಂತಬಾಲಬೋಧೆ : (ಪ್ರಾತಃಸ್ಮರಣಸ್ತೋತ್ರ)** ಶಂಕರಾಚಾರ್ಯ ಕೃತ. ಗುರುಶಿಷ್ಯ ಸಂಭಾಷಣಾರೂಪವಾದ ವ್ಯಾಖ್ಯಾನ. ಮೊಟ್ಟಮೊದಲು ವೇದಾಂತ ವಿಚಾರವನ್ನು ಪ್ರಾರಂಭಿಸುವವರಿಗೆ ಉಪಯುಕ್ತವಾಗಿರುವ ಗ್ರಂಥ. ಕೊನೆಯಲ್ಲಿ ಪಾರಿಭಾಷಕ ಶಬ್ದಗಳ ಅರ್ಥವನ್ನು ವಿವರಿಸುವ ಶಬ್ದಾನುಕ್ರಮಣಿಕೆಯಿದೆ. **(ನಾಲ್ಕನೆಯ ಮುದ್ರಣ : ೧೯೯೨, ಪು . ಡೆಮ್ಮಿ ೬+೪೨)**

೧೧. **ವೇದಾಂತಪ್ರವೇಶಿಕೆ : (ಅದ್ವೈತ ಪಂಚರತ್ನ ಸ್ತೋತ್ರ)** ಶ್ರೀ ಶಂಕರ ಭಗವತ್ಪಾದರವರ ಅದ್ವೈತ ಪಂಚರತ್ನ ಸ್ತೋತ್ರದ ವಿವರಣೆಯಿದು. 'ವೇದಾಂತ ಬಾಲ ಬೋಧೆ' ಯನ್ನು ಓದಿದ ಮೇಲೆ ಇದನ್ನು ಓದುವವರಿಗೆ ವೇದಾಂತದ ದರ್ಶನದ ಸವಿಯನ್ನು ತೋರಿಸಿಕೊಡುವದು. ನಮ್ಮಗಳ ಆತ್ಮನು ಸಂಸಾರ ಧರ್ಮರಹಿತನು, ಪ್ರಪಂಚವು ಅವನಿಗಿಂತ ಬೇರೆಯಿಲ್ಲ- ಎಂಬುದನ್ನು ಮನಗಾಣಿಸುವದು. **(ಮೂ. ಮುದ್ರಣ : ೧೯೮೩ ಪು. ಕ್ರೌನ್ ೬+೭೦)**

೧೨. **ದಕ್ಷಿಣಾಮೂರ್ತಿಸ್ತೋತ್ರ :** ಸಿದ್ಧಾಂತ ಪ್ರಧಾನವಾದ ಈ ಸ್ತೋತ್ರದಲ್ಲಿ ಗುರುಮೂರ್ತಿಯಾದ ಪರಮೇಶ್ವರನ ತತ್ತ್ವವನ್ನು ಹತ್ತು ಶ್ಲೋಕಗಳಲ್ಲಿ ವರ್ಣಿಸಿರುವದನ್ನು ಶ್ರೀಶ್ರೀಗಳವರು ತಮ್ಮ ವಿಸ್ತಾರವಾದ ಕನ್ನಡ ವಿವರಣೆಯಲ್ಲಿ ಅಂಗೈನಲ್ಲಿರುವ ನೆಲ್ಲಿಯಕಾಯಿಯಂತೆ ಸುಸ್ಪಷ್ಟವಾಗಿ ಪ್ರತಿಪಾದಿಸಿರುತ್ತಾರೆ. ಆತ್ಮತತ್ತ್ವಜಿಜ್ಞಾಸುಗಳಿಗೆ ಇದೊಂದು ಕಾಮಧೇನು ವಂತಿದೆ. **(ಮೂರನೆಯ ಮುದ್ರಣ : ೧೯೯೨, ಪು.ಡೆಮ್ಮಿ ೪+೭೦)**

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :

**ಅ .ಪ್ರ. ಕಾ. ಹೊಳೆನರಸೀಪುರ**
ಹಾಸನ ಜಿಲ್ಲೆ- ೫೭೩೨೧೧
ದೂ: ೦೮೧೭೫-೭೩೮೨೦

**ಅ .ಪ್ರ. ಕಾ. ತ್ಯಾಗರಾಜನಗರ**
ಬೆಂಗಳೂರು - ೫೬೦ ೦೨೮
ದೂ : ೦೮೦-೬೭೬೫೫೪೮

ಅಧ್ಯಾತ್ಮಗ್ರಂಥಾವಳಿ

# ಭಾಗವತಸಂಪ್ರದಾಯ

## (ಸಿದ್ಧಾಂತ ಮತ್ತು ಸಾಧನಗಳು)

ಬರೆದವರು :

**ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು**

ಕ್ರಮಾಂಕ ೧೪೯

ಪ್ರಕಾಶಕರು :

**ಅಧ್ಯಾತ್ಮಪ್ರಕಾಶಕಾರ್ಯಾಲಯ,**

ಹೊಳೆನರಸೀಪುರ.

2000

ಒಂದನೆಯ ಮುದ್ರಣ, ೧೯೭೦ (ಪ್ರತಿಗಳು ೨೦೦೦)
ಎರಡನೆಯ ಮುದ್ರಣ, ೨೦೦೦ (ಪ್ರತಿಗಳು ೧೦೦೦)

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
All Rights Reserved

Registered under the Copy Right Act of 1957

ಮುದ್ರಣ ಸ್ಥಾನ :
**ಶ್ರೀ ಗಣೇಶಮಾರುತಿ ಪ್ರಿಂಟರ್ಸ್**
ನಂ. 76, 3ನೇ ಬ್ಲಾಕ್, 6ನೇ ಮುಖ್ಯರಸ್ತೆ
ತ್ಯಾಗರಾಜನಗರ, ಬೆಂಗಳೂರು - 560 028
ದೂರವಾಣಿ : 6528542

# ಮುನ್ನುಡಿ

ಪರಮಪೂಜ್ಯ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರು 1970ನೇ ಇಸವಿಯಲ್ಲಿ ಆಗ್ಗೆ ಶ್ರೀದ್ವಾರಕಾಪೀಠಾಧೀಶ್ವರರಾಗಿದ್ದ ಜಗದ್ಗುರು ಶ್ರೀ ಅಭಿನವ ಸಚ್ಚಿದಾನಂದತೀರ್ಥಮಹಾಸ್ವಾಮಿಗಳವರ ಸೂಚನೆಯಂತೆ ಬರೆದು ಆಧ್ಯಾತ್ಮಪ್ರಕಾಶ ಕಾರ್ಯಾಲಯದ ಮೂಲಕ ಪ್ರಕಟಿಸಿದ್ದ ಈ ಗ್ರಂಥವು ಈಗ ಎರಡನೆಯ ಬಾರಿಗೆ ಪುನರ್ಮುದ್ರಿತವಾಗಿ ವಾಚಕರ ಕರಕಮಲವನ್ನು ಅಲಂಕರಿಸಿರುತ್ತದೆ. ದಕ್ಷಿಣ ದೇಶದಲ್ಲಿರುವ, ಅದರಲ್ಲಿಯೂ ಕರ್ನಾಟಕ ರಾಜ್ಯದಲ್ಲಿರುವ ಜನರಿಗೆ ಈ ಪ್ರಕಟನೆಯಿಂದ ಉತ್ತಮ ಲಾಭವಾಗಬಹುದೆಂತ ನಂಬುತ್ತೇವೆ.

ಗ್ರಂಥಕರ್ತರಾದ ಶ್ರೀ ಶ್ರೀಗಳವರು ಪೂರ್ವಾಶ್ರಮದಲ್ಲಿ ಭಾಗವತಸಂಪ್ರದಾಯಕ್ಕೆ ಸೇರಿದವರಾಗಿದ್ದು ಪರಂಪರೆಯಿಂದ ನಡೆದು ಬಂದಿರುವ ಆಚಾರ ವಿಚಾರಗಳನ್ನು ಬಲ್ಲವರಾಗಿದ್ದರು ಮತ್ತು ಶ್ರೀ ಶ್ರೀಗಳವರು ಶ್ರೀ ಶಂಕರಾಚಾರ್ಯರ ಅನುಯಾಯಿಗಳಾಗಿದ್ದು ಅದ್ವೈತವೇದಾಂತಸಿದ್ಧಾಂತದಲ್ಲಿಯೂ ಪ್ರಖ್ಯಾತ ವಿದ್ವಾಂಸರಾಗಿದ್ದು ಶ್ರುತಿಸ್ಮೃತಿಸದಾಚಾರಗಳ ಬಲದಿಂದ ಭಾಗವತಸಂಪ್ರದಾಯದ ಮೂಲಸಿದ್ಧಾಂತಗಳನ್ನು ಸಪ್ರಮಾಣವಾಗಿ ನಿರ್ಣಯಿಸಿ ಬರೆಯಬಲ್ಲ ಲೇಖಕರಾಗಿದ್ದರು. ಇಂಥ ಮಹನೀಯರ ಈ ಕೃತಿಯು ಭಾಗವತಸಂಪ್ರದಾಯಸ್ಥರು ಮಾತ್ರವೇ ಅಲ್ಲದೆ ಗುಣಗ್ರಾಹಿಗಳಾದ ವೈಷ್ಣವ ವಿಷ್ಣುಭಕ್ತರೆಲ್ಲರೂ ಪಠನಮಾಡಲು ಯೋಗ್ಯವಾಗಿದೆ.

ಈ ಗ್ರಂಥದಲ್ಲಿ ಶ್ರೀಶಂಕರಭಗವತ್ಪಾದರು ತಮ್ಮ ಸೂತ್ರಭಾಷ್ಯದಲ್ಲಿ ಮಾಡಿರುವ ಭಾಗವತಮತ ವಿಮರ್ಶೆಯ ಪರಾಮರ್ಶದಿಂದಲೂ ಮಹಾಭಾರತದಲ್ಲಿರುವ ನಾರಾಯಣೀಯಾಖ್ಯಾನದಿಂದಲೂ ಈ ಸಂಪ್ರದಾಯದ ಸಿದ್ಧಾಂತವು ಶುದ್ಧರೂಪದಿಂದ ಗೊತ್ತಾಗುವಂತಿದೆಯಾದರೂ ಶ್ರೀಮದ್ಭಾಗವತ ಪುರಾಣ, ವಿಷ್ಣುಪುರಾಣ, ಇವುಗಳಿಗೆ ಬೇರೆಬೇರೆಯ ಸಿದ್ಧಾಂತದವರು ಬರೆದಿರುವ ವ್ಯಾಖ್ಯಾನಭೇದದಿಂದ ತತ್ತ್ವಜಿಜ್ಞಾಸುಗಳಿಗೆ ವ್ಯಾಮೋಹವುಂಟಾಗುವ ಸಂಭವವಿದೆ. ಈ ಪ್ರತಿಬಂಧವನ್ನು ಹೋಗಲಾಡಿಸುವ ದಕ್ಕಾಗಿಯೂ ಭಾಗವತಸಂಪ್ರದಾಯದವರಿಗೆ ತತ್ತ್ವದಲ್ಲಿ ಅಭಿಮಾನವುಂಟಾಗು ವದಕ್ಕಾಗಿಯೂ ಈ ಗ್ರಂಥವು ರಚಿಸಿಲ್ಪಟ್ಟಿದೆ ಎಂದು ಲೇಖಕರು ಅಭಿಪ್ರಾಯಪಟ್ಟಿರುತ್ತಾರೆ.

ಇಂಥ ಅಪೂರ್ವಗ್ರಂಥವನ್ನು ವಾಚಕರು ಬರಮಾಡಿಕೊಂಡು ಓದಿ ಕಾರ್ಯಾಲಯದ ಗ್ರಂಥಪ್ರಕಟನಕಾರ್ಯಕ್ಕೆ ಪ್ರೋತ್ಸಾಹವನ್ನು ನೀಡಬೇಕಾಗಿ ಕೋರಿದೆ.

ಹೊಳೆನರಸೀಪುರ,
ತಾ : 5-4-2000
ವಿಕ್ರಮ ಸಂ ||
ಚೈತ್ರ ಶುಕ್ಲ ಪಾಡ್ಯ

ಇತಿ
**ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ**
ಸಂಪಾದಕ

# ಪೀಠಿಕೆ

ಕನ್ನಡನಾಡಿನಲ್ಲಿ ಭಾಗವತಸಂಪ್ರದಾಯದವರೆಂದು ಪ್ರಸಿದ್ಧರಾಗಿರುವವರ ಉಪಯೋಗಕ್ಕಾಗಿ ಈ ಗ್ರಂಥವನ್ನು ಶ್ರೀಶ್ರೀದ್ವಾರಕಾಜಗದ್ಗುರುಪೀಠಾಧೀಶ್ವರ ಶಂಕರಾಚಾರ್ಯಮಹಾಸ್ವಾಮಿಗಳವರ ಪ್ರೇರಣೆಯಿಂದ ಬರೆದಿರುತ್ತೇನೆ.

ಗ್ರಂಥದ ಮುಖ್ಯೋದ್ದೇಶವನ್ನು ಉಪಸಂಹಾರದಲ್ಲಿ ವಿವರಿಸಿರುತ್ತೇನೆ. ಶ್ರೀಶಂಕರಭಗವತ್ಪಾದರವರು ತಮ್ಮ ಸೂತ್ರಭಾಷ್ಯದಲ್ಲಿ ಮಾಡಿರುವ ಪರಾಮರ್ಶದಿಂದಲೂ ಮಹಾಭಾರತದಲ್ಲಿರುವ ನಾರಾಯಣೀಯೋಪಾಖ್ಯಾನದಿಂದಲೂ ಈ ಸಂಪ್ರದಾಯದ ಸಿದ್ಧಾಂತವು ಶುದ್ಧರೂಪದಿಂದ ಗೊತ್ತಾಗುವಂತಿದೆಯಾದರೂ ಶ್ರೀಮದ್ಭಾಗವತಪುರಾಣ ಮತ್ತು ವಿಷ್ಣುಪುರಾಣ, ಇವುಗಳಿಗೆ ಬೇರೆಯ ಸಿದ್ಧಾಂತದ ವೇದಾಂತಿಗಳು ಬರೆದಿರುವ ಗ್ರಂಥಗಳು ಈವರೆಗೆ ಯಾವವೂ ಇಲ್ಲವಾದ್ದರಿಂದಲೂ ತತ್ತ್ವಜಿಜ್ಞಾಸುಗಳಿಗೆ ವ್ಯಾಮೋಹವುಂಟಾಗುವ ಸಂಭವವೇ ಹೆಚ್ಚಾಗಿದೆ. ಈ ಪ್ರತಿಬಂಧವನ್ನು ಹೋಗಲಾಡಿಸಿ ಭಾಗವತಸಂಪ್ರದಾಯದವರಿಗೆ ತತ್ತ್ವದಲ್ಲಿ ಅಭಿಮಾನವುಂಟಾಗಲೆಂಬ ಗುರಿಯಿಂದಲೇ ಈ ಗ್ರಂಥ ರಚನೆಗೆ ಕೈಹಾಕಿದೆನು.

ಭಾಗವತ-ವಿಷ್ಣುಪುರಾಣಗಳಿಂದ ಇನ್ನೂ ಹೆಚ್ಚಾಗಿ ಪ್ರಮಾಣವಚನಗಳನ್ನು ಎತ್ತಿಬರೆಯಬೇಕೆಂಬ ಆಶೆಯಿದ್ದಿತಾದರೂ ಗ್ರಂಥಾಂತರಗಳ ಬರಹದ ಒತ್ತಡದಿಂದಲೂ ಶರೀರದ ಅಸ್ವಾಸ್ಥ್ಯದಿಂದಲೂ ಅದಕ್ಕೆ ಅವಕಾಶವಾಗಿಲ್ಲ. ಶ್ರೀಮನ್ನಾರಾಯಣನ ಕೃಪೆಯಿದ್ದರೆ ಆ ಕೆಲಸವನ್ನು ಕಾರ್ಯಾಲಯದಲ್ಲಿ ಮತ್ತೆ ಯಾರಾದರೂ ಮಾಡಲಿ ! - ಎಂದು ಹಾರೈಸುತ್ತೇನೆ.

ಗ್ರಂಥದ ಕೈಬರಹದ ಪ್ರತಿಯನ್ನು ಶೋಧಿಸುವದು, ಅಚ್ಚಿನ ಕರಡುಗಳನ್ನು ತಿದ್ದುವದು - ಮುಂತಾದ ರೀತಿಯಿಂದ ಸಹಕರಿಸಿದ ಕಾರ್ಯಾಲಯದ ಪಂಡಿತ ಶ್ರೀ ॥ ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ, ಅಧ್ಯಾತ್ಮವಿದ್ಯಾಪ್ರವೀಣ ಇವರಿಗೆ ನನ್ನ ನಾರಾಯಣಸ್ಮೃತಿಗಳು. ಈ ಗ್ರಂಥವನ್ನು ಪ್ರಕಟಿಸುವ ಭಾರವನ್ನು ಕೈಕೊಂಡ ಕಾರ್ಯಾಲಯದವರಿಗೂ ಧನಸಹಾಯವನ್ನು ನೀಡಿದ ಶ್ರೀದ್ವಾರಕಾಜಗದ್ಗುರು ಸಂಸ್ಥಾನದವರಿಗೂ ನನ್ನ ಹಾರ್ದಿಕ ನಾರಾಯಣ ಸ್ಮರಣೆಗಳು.

ಹೊಳೆನರಸೀಪುರ,
ಸೌಮ್ಯ ಸಂವತ್ಸರದ ಪುಷ್ಯ ಬ॥ ೧೧ — ಗ್ರಂಥಕರ್ತ.

# ವಿಷಯಾನುಕ್ರಮಣಿಕೆ

**(ಕಂಸದಲ್ಲಿರುವದು ಖಂಡಗಳ ಸಂಖ್ಯೆ)**


| ವಿಷಯ | ಪುಟ |
|---|---|
| ವಿಚಾರದ ಆವಶ್ಯಕತೆ (೧) | ೧ |
| ಬ್ರಹ್ಮಸೂತ್ರಭಾಷ್ಯದಲ್ಲಿ ಭಾಗವತಮತದ ಪರಾಮರ್ಶ (೨) | ೨ |
| ಭಾಗವತಮತದ ಸಿದ್ಧಾಂತ (೩) | ೨ |
| ಶಾಂಕರಭಾಷ್ಯದಿಂದ ತಿಳಿದುಬರುವ ಭಾಗವತಮತಸ್ವರೂಪ (೪) | ೩ |
| ಬಾದರಾಯಣರಿಗಿಂತ ಹಿಂದೆಯೇ ಭಾಗವತಸಿದ್ಧಾಂತವಿದ್ದಿತು (೫) | ೪ |
| 'ಭಗವಾನ್' ಎಂಬ ಶಬ್ದಕ್ಕೆ ಏನರ್ಥ ? (೬) | ೬ |
| ನಿರ್ವಿಶೇಷವಸ್ತುವಿಗೆ ಭಗವಚ್ಛಬ್ದವಾಚ್ಯತ್ವವು ಹೇಗೆ ? (೭) | ೮ |
| ಭಗವಚ್ಛಬ್ದದಲ್ಲಿರುವ ಸಂಕೇತಾಕ್ಷರಗಳ ಅರ್ಥವಿವರಣೆ (೮) | ೯ |
| ಭಗವಂತನ ಗುಣಗಳೂ ಆತನೇ (೯) | ೧೦ |
| ಗುಣಗಳ ಸ್ವರೂಪ (೧೦) | ೧೧ |
| ಜಗತ್ತು ಪರಮಾರ್ಥವೆ?(೧೧) | ೧೨ |
| ಚತುರ್ವ್ಯೂಹರೂಪವೂ ಪರಮಾರ್ಥತತ್ತ್ವವೂ (೧೨) | ೧೪ |
| ಶಂಕರಾಚಾರ್ಯರು ವ್ಯೂಹಗಳ ವಿಷಯದಲ್ಲಿ ಏನನ್ನು ಖಂಡಿಸಿರುತ್ತಾರೆ ? (೧೩) | ೨೪ |
| ಪಾಂಚರಾತ್ರವೆಂದರೇನು ? (೧೪) | ೩೪ |
| ಸಾತ್ವತವೆಂದರೇನು? (೧೫) | ೩೬ |
| ವಾಸುದೇವತತ್ತ್ವ(೧೬) | ೪೦ |
| ಏಕಾಂತಿಧರ್ಮ (೧೭) | ೪೫ |
| ಏಕಾಂತಿಯಾಗುವದಕ್ಕೆ ಸಹಕಾರಿಸಾಧನ (೧೮) | ೪೭ |
| ಏಕಾಂತಿಧರ್ಮವು ಪ್ರವೃತ್ತಿಪರವೆ? (೧೯) | ೪೯ |
| ಭಾಗವತಧರ್ಮವು ವೇದವಿರುದ್ಧವೆ? (೨೦) | ೫೩ |
| ಭಾಗವತಧರ್ಮವೂ ಅಹಿಂಸಾಪ್ರಧಾನ (೨೧) | ೫೭ |
| ಭಾಗವತಪುರಾಣವೂ ಭಾಗವತಮತವೂ (೨೨) | ೬೩ |
| ವಿಷ್ಣುಪುರಾಣಕ್ಕೂ ಭಾಗವತಕ್ಕೂ ಹೋಲಿಕೆ (೨೩) | ೬೪ |
| ಪಾಂಚರಾತ್ರದ ಸಂಹಿತೆಗಳು (೨೪) | ೬೫ |
| ಆಗಮಗಳು ಅಥವಾ ತಂತ್ರಗಳು (೨೫) | ೬೭ |
| ಶಾಂಕರಭಾಷ್ಯದಲ್ಲಿ ಒಪ್ಪಿರುವ ಪಾಂಚರಾತ್ರಾಭ್ಯುಪಗಮಗಳು (೨೬) | ೭೨ |
| ಅಭಿಗಮನಾದಿಸಾಧನಗಳು (೨೭) | ೭೩ |
| ತಂತ್ರಗ್ರಂಥಗಳಲ್ಲಿ ಸಾಧನಗಳು (೨೮) | ೭೫ |
| ಶಾಂಡಿಲ್ಯಸಂಹಿತೆ (೨೯) | ೭೬ |
| ಸ್ಮೃತಿಗಳಲ್ಲಿ ಸಾಧನವಿಚಾರ (೩೦) | ೭೯ |
| ಬೋಧಾಯನಸ್ಮೃತಿ (೩೧) | ೮೦ |
| ಆಪಸ್ತಂಬಧರ್ಮಸೂತ್ರ (೩೨) | ೮೦ |
| ಶ್ಲೋಕರೂಪದಲ್ಲಿರುವ ಸ್ಮೃತಿಗಳು (೩೩) | ೮೩ |
| ಸ್ಮೃತಿವಿಚಾರದ ಉಪಸಂಹಾರ (೩೪) | ೯೦ |
| ಪುರಾಣಗಳಲ್ಲಿ ಸಾಧನವಿಚಾರ (೩೫) | ೯೧ |
| ಭಗವದ್ಗೀತೆ (೩೬) | ೧೦೦ |
| ನಿತ್ಯಾಹ್ನಿಕವೂ ಆಚರಣೆಗಳೂ (೩೭) | ೧೦೨ |
| ಉಪಸಂಹಾರ (೩೮) | ೧೧೯ |

# ಸಂಕೇತವಿವರಣೆ

| ಸಂಕೇತ | ವಿವರಣೆ |
|---|---|
| ಆ. ಧ. | ಆಪಸ್ತಂಬಧರ್ಮಸೂತ್ರ |
| ಈ. ಸಂ. | ಈಶ್ವರಸಂಹಿತಾ |
| ಕ. ಪ. | ಶಾಂಕರಬ್ರಹ್ಮಸೂತ್ರಭಾಷ್ಯದ ಭಾಮತೀವ್ಯಾಖ್ಯಾನದಮೇಲೆ ಅಪ್ಪಯ್ಯ ದೀಕ್ಷಿತರು ರಚಿಸಿರುವ "ಕಲ್ಪತರು ಪರಿಮಳ" ವ್ಯಾಖ್ಯಾನ. |
| ಗೀ. | ಭಗವದ್ಗೀತೆ |
| ಗೀ. ರ. | ಬಾಲಗಂಗಾಧರತಿಲಕರ ಗೀತಾರಹಸ್ಯ |
| ಗೌ. ಕಾ. | ಗೌಡಪಾದೀಯಮಾಂಡೂಕ್ಯಕಾರಿಕೆಗಳು |
| ತೈ. ಆ. | ತೈತ್ತಿರೀಯ-ಆರಣ್ಯಕಭಾಗ |
| ತೈ. ಬ್ರಾ. | ತೈತ್ತಿರೀಯಬ್ರಾಹ್ಮಣ |
| ಪಾ. | ಪಾಣಿನೀಯವ್ಯಾಕರಣಸೂತ್ರಗಳು |
| ಪು. | ಪುಟ |
| ಭಾಗ. | ಶ್ರೀಮದ್ಭಾಗವತಮಹಾಪುರಾಣ |
| ಭಾ. ಸಂ. | ಭಾಗವತಸಂಪ್ರದಾಯ (ಬಲದೇವ ಉಪಾಧ್ಯಾಯರ ಹಿಂದೀಭಾಷೆಯ ಗ್ರಂಥ). |
| ಮ. ಭಾ. ಶಾಂ. | ಮಹಾಭಾರತ-ಶಾಂತಿಪರ್ವ |
| ಮೋ. ಧ. | ಮಹಾಭಾರತ-ಮೋಕ್ಷಧರ್ಮಪರ್ವ |
| ವಿ. ಪು. | ವಿಷ್ಣುಪುರಾಣ |
| ವಿ. ಸ. | ವಿಷ್ಣುಸಹಸ್ರನಾಮಸ್ತೋತ್ರ |
| ವೇ. ಸೂ. | ಬಾದರಾಯಣಕೃತ ವೇದಾಂತಸೂತ್ರಗಳು |
| ಶಾ. ಸಂ. | ಶಾಂಡಿಲ್ಯಸಂಹಿತೆ |
| ಶ್ಲೋ. | ಶ್ಲೋಕಗಳು |
| ಸಾ. ತಂ. | ಸಾತ್ವತತಂತ್ರ |
| ಸೂ. ಭಾ. | ಬ್ರಹ್ಮಸೂತ್ರಶಾಂಕರಭಾಷ್ಯ |

*ಓಂ ನಮೋ ಭಗವತೇ ವಾಸುದೇವಾಯ*

# ಭಾಗವತಸಂಪ್ರದಾಯ

## ವಿಚಾರದ ಆವಶ್ಯಕತೆ

೧. ದಕ್ಷಿಣದೇಶದಲ್ಲಿ ಭಾಗವತಸಂಪ್ರದಾಯವನ್ನು ಅನುಸರಿಸುವವರೆಂದು ಹೇಳಿಕೊಳ್ಳುವವರು ಅನೇಕರು ಇರುತ್ತಾರೆ. ಆದರೆ ತಮ್ಮ ಮತದ ಸ್ವರೂಪವು ಯಾವದೆಂಬ ವಿಷಯಕ್ಕೆ ಆ ಸಂಪ್ರದಾಯದವರಿಗೇ ಈಗ್ಗೆ ತಿಳಿಯದಂತೆ ಆಗಿಬಿಟ್ಟಿರುತ್ತದೆ. ಇವರಲ್ಲಿ ಕೆಲವರು ಮಾಧ್ವವೈಷ್ಣವರ ಆಚರಣೆಗಳನ್ನುಅನುಸರಿಸುವದಕ್ಕೆ ಮೊದಲುಮಾಡಿರುತ್ತಾರೆ. **'ಭಾಗವತ'** ಮತ ಎಂಬ ಹೆಸರಿನಿಂದ ಪ್ರಭಾವಿತರಾಗಿ ಕೆಲವರು ತಮ್ಮ ಮತವು ಭಾಗವತಪುರಾಣವನ್ನೇ ಮುಖ್ಯವಾಗಿ ಅವಲಂಬಿಸಿರುತ್ತದೆ ಎಂದೂ ಭಾವಿಸಿಕೊಂಡಿರುತ್ತಾರೆ. ಬ್ರಹ್ಮಸೂತ್ರಗಳಿಗೆ ಭಾಗವತಪುರಾಣದ ವಿಷಯವಾಕ್ಯಗಳನ್ನು ಉದಾಹರಿಸಿಕೊಂಡು ಅಧಿಕರಣಗಳ ವಿಚಾರವನ್ನು ಮಾಡಿರುವ **ಶುಕಭಾಷ್ಯ**[1] ವೆಂಬ ಒಂದು ಅಪೂರ್ವಗ್ರಂಥವೂ ಹುಟ್ಟಿಕೊಂಡಿದೆ. ಆ ಗ್ರಂಥವೇ ತಮ್ಮ ಮತಕ್ಕೆ ಆಧಾರಗ್ರಂಥವೆಂದು ಭಾವಿಸಿರುವವರೂ ಕೆಲವರು ಉಂಟು. ನಾನು ಪೂರ್ವಾಶ್ರಮದಲ್ಲಿ ಇನ್ನೂ ಬಾಲ್ಯವಯಸ್ಸಿನಲ್ಲಿದ್ದಾಗ ನಮ್ಮವರೊಬ್ಬರು. "ನಮ್ಮ ಹಿರಿಯರು **'ಭಾಗವತರ ಆಟ'**ವೆಂಬ ಯಕ್ಷಗಾನದ ಬಯಲಾಟದಲ್ಲಿ ಪರಿಶ್ರಮವುಳ್ಳವರಾಗಿದ್ದದ್ದರಿಂದ ನಮ್ಮದು ಭಾಗವತ ಸಂಪ್ರದಾಯವೆನಿಸಿತು". ಎಂದು ಹೇಳಿದ್ದನ್ನು ಕೂಡ ನಾನು ಕೇಳಿದ ನೆನಪಿದೆ! ಈಗ್ಗೆ 'ಭಾಗವತ- ವೈಷ್ಣವ -ಶ್ರೀವೈಷ್ಣವಾನಾಮ್ ಏಕಾದಶೀ' ಎಂಬ ಪಂಚಾಂಗವಾಕ್ಯವನ್ನು ನೋಡಿಕೊಂಡು ಭಾಗವತೈಕಾದಶಿಯನ್ನು ಆಚರಿಸುವ ಸಂಪ್ರದಾಯವೊಂದು ಮಾತ್ರ ಈ ಗುಂಪಿನವರಲ್ಲೆಲ್ಲ ಸಾಮಾನ್ಯವಾಗಿರುತ್ತದೆ; 'ಸ್ಮಾರ್ತರ ಏಕಾದಶಿ' ಯನ್ನು ಬಿಟ್ಟು ಮಾರನೆಯ ದಿನವನ್ನೇ ಏಕಾದಶಿಯೆಂದು ಹಿಡಿದು ಉಪವಾಸವನ್ನು ಮಾಡುವದೇ 'ಭಾಗವತೈಕಾದಶಿ'ಯ ವಿಶೇಷ ಎಂದು ಆಡಿಕೊಳ್ಳುವವರೂ ಅಲ್ಲಲ್ಲಿ ಕಾಣಬರುತ್ತಿದ್ದಾರೆ. ಈ ಸಂಪ್ರದಾಯದವರ ಮತದ ಮೂಲವು ಯಾವದೆಂಬುದು ತಿಳಿಯದೆ ಹೀಗೆಲ್ಲ ಆಚಾರವಿಚಾರಗಳು ಅವ್ಯವಸ್ಥಿತವಾಗುತ್ತಿರುವದರಿಂದ ಇದರ ನಿಜವನ್ನು ನಿರ್ಣಯಿಸುವದಕ್ಕಾಗಿ ವಿಚಾರಮಾಡುವದು ಈಗ ಅತ್ಯವಶ್ಯವಾಗಿರುತ್ತದೆ.

---

1. ಬೆಂಗಳೂರು ವಾಗೀಶ್ವರ ಮುದ್ರಣಶಾಲೆಯಲ್ಲಿ ಅಚ್ಚಾದ ಈ ಪುಸ್ತಕದ ಪ್ರತಿಯೊಂದು ನಮ್ಮಲ್ಲಿದೆ; ಅಮಲ್ದಾರ್ ವೆಂಕಟಾಚಲಯ್ಯ ಎಂಬವರು ಅಚ್ಚುಮಾಡಿಸಿದ ಗ್ರಂಥವಿದು.

# ಬ್ರಹ್ಮಸೂತ್ರಭಾಷ್ಯದಲ್ಲಿ ಭಾಗವತಮತಪರಾಮರ್ಶೆ

೨. ಬಾದರಾಯಣಾಚಾರ್ಯರು ಬರೆದಿರುವ ವೇದಾಂತಮೀಮಾಂಸಾಶಾಸ್ತ್ರದ ಎರಡನೆಯ ಅಧ್ಯಾಯದ ಎರಡನೆಯ ಪಾದದ ಕಟ್ಟಕಡೆಯದಾಗಿರುವ **ಉತ್ಪತ್ತ್ಯಧಿಕರಣದಲ್ಲಿ ಶಂಕರಾಚಾರ್ಯರು, ರಾಮಾನುಜಾಚಾರ್ಯರು, ಮಧ್ವಾಚಾರ್ಯರು** - ಈ ಮೂವರು ಆಚಾರ್ಯರ ಅಭಿಪ್ರಾಯದಂತೆಯೂ ಭಾಗವತಮತದವರ ಸಿದ್ಧಾಂತದ ಪರಾಮರ್ಶವು ಕಂಡುಬರುತ್ತದೆ. ಶ್ರೀಕಂಠ ಭಾಷ್ಯದಲ್ಲಿಯೂ ಈ ಮತದ ಪರಾಮರ್ಶವಿದೆ. ಆದರೆ ಈ ಅಧಿಕರಣದಲ್ಲಿ ಭಾಗವತಮತದವರ ಸಿದ್ಧಾಂತವನ್ನು ಖಂಡಿಸಿದೆಯೋ, ಅಥವಾ ಎತ್ತಿ ಹೊಗಳಿದೆಯೋ?– ಎಂಬ ಬಗೆಗೆ ಭಾಷ್ಯಕಾರರುಗಳಲ್ಲಿ ಪರಸ್ಪರವಾಗಿ ಅಭಿಪ್ರಾಯಭೇದವಿರುತ್ತದೆ. ನಾವು ಈಗ ಉಪಲಬ್ಧವಾಗಿರುವ ಭಾಷ್ಯಗಳಲ್ಲೆಲ್ಲ ಅತ್ಯಂತ ಪ್ರಾಚೀನವಾದ ಶಂಕರಾಕಚಾರ್ಯರವರ ಭಾಷ್ಯವನ್ನೇ ಮೊದಲು ವಿಚಾರಕ್ಕೆ ತೆಗೆದುಕೊಳ್ಳುತ್ತೇವೆ. ಏಕೆಂದರೆ ರಾಮಾನುಜಾಚಾರ್ಯರೇ ಮೊದಲಾದ ಈಚಿನ ಭಾಷ್ಯಾಕಾರರುಗಳ ಸಿದ್ಧಾಂತಭೇದಗಳನ್ನು ಶಾರೀರಕಮೀಮಾಂಸಾ ಸೂತ್ರಗಳಲ್ಲಿ ಖಂಡನೆಗೆ ಅಥವಾ ಮಂಡನೆಗೆ ತೆಗೆದುಕೊಂಡಿದೆ ಎಂಬುದಕ್ಕೆ ಆಯಾ ಆಚಾರ್ಯರುಗಳ ಭಾಷ್ಯಗಳು ಮಾತ್ರವೇ ಪ್ರಮಾಣವಾಗಿರುತ್ತವೆ. ಅತ್ಯಂತಪ್ರಾಚೀನವಾದ ಶ್ರೀಶಂಕರರ ಭಾಷ್ಯದಲ್ಲಿ ಈ ಯಾವ ವೇದಾಂತಸಿದ್ಧಾಂತಗಳನ್ನೂ ಹೆಸರಿನಿಂದಕೂಡ ಪರಾಮರ್ಶಿಸಿಲ್ಲ; ಅವರ ಕಾಲಕ್ಕೆ ಅಥವಾ ಅದಕ್ಕೂ ಹಿಂದೆ ದ್ವೈತವಿಶಿಷ್ಟಾದ್ವೈತಾದಿ ಸಿದ್ಧಾಂತಗಳು ಇದ್ದವೆಂಬುದಕ್ಕೆ ನಮಗೆ ದರ್ಶನಕಾರರ ಗ್ರಂಥಗಳಲ್ಲಿಯಾಗಲಿ ಮತ್ತೆ ಯಾವ ಪ್ರಾಚೀನಗ್ರಂಥಗಳಲ್ಲಿಯೇ ಆಗಲಿ ಈವರೆಗೆ ಸೂಚನೆ ಸಿಕ್ಕಿರುವದಿಲ್ಲ. ಆದ್ದರಿಂದ ಮೊಟ್ಟಮೊದಲು ಶಾಂಕರಭಾಷ್ಯವನ್ನೇ ಈ ಪ್ರಕೃತವಾದ ಭಾಗವತಸಂಪ್ರದಾಯದವರ ವಿಷಯಕ್ಕೆ ವಿಶ್ವಾಸಾರ್ಹವಾದ ಅತ್ಯಂತ ಪುರಾತನಾಧಾರವೆಂದು ಹಿಡಿಯಬೇಕಾಗಿರುತ್ತದೆ.

## ಭಾಗವತಮತದ ಸಿದ್ಧಾಂತ

೩. ಶ್ರೀಶಂಕರಭಗವತ್ಪಾದರವರು ಉತ್ಪತ್ತ್ಯಧಿಕರಣಭಾಷ್ಯದಲ್ಲಿ ಈ ಮತವನ್ನು ಈ ರೀತಿಯಲ್ಲಿಅನುವಾದಮಾಡಿಕೊಂಡಿರುತ್ತಾರೆ:

> **"ತತ್ರ ಭಾಗವತಾ ಮನ್ಯನ್ತೇ । ಭಗವಾನೇವೈಕೋ ವಾಸುದೇವೋ ನಿರಞ್ಜನಜ್ಞಾನಸ್ವರೂಪಃ ಪರಮಾರ್ಥತತ್ತ್ವಮ್ । ಸ ಚತುರ್ಧಾ ಆತ್ಮಾನಂ ಪ್ರವಿಭಜ್ಯ ಪ್ರತಿಷ್ಠಿತಃ- ವಾಸುದೇವವ್ಯೂಹರೂಪೇಣ, ಸಙ್ಕರ್ಷಣವ್ಯೂಹರೂಪೇಣ, ಪ್ರದ್ಯುಮ್ನವ್ಯೂಹರೂಪೇಣ,**

ಅನಿರುದ್ಧವ್ಯೂಹರೂಪೇಣ ಚ । ವಾಸುದೇವೋ ನಾಮ ಪರಮಾತ್ಮಾ ಉಚ್ಯತೇ; ಸಙ್ಕರ್ಷಣೋ ನಾಮ ಜೀವಃ; ಪ್ರದ್ಯುಮ್ನೋ ನಾಮ ಮನಃ; ಅನಿರುದ್ಧೋ ನಾಮ ಅಹಙ್ಕಾರಃ । ತೇಷಾಂ ವಾಸುದೇವ: ಪರಾ ಪ್ರಕೃತಿಃ , ಇತರೇ ಸಙ್ಕರ್ಷಣಾದಯಃ ಕಾರ್ಯಮ್। ತಮ್ ಇತ್ಥಂ ಭೂತಂ ಪರಮೇಶ್ವರಂ ಭಗವನ್ತಮ್ ಅಭಿಗಮನೋಪಾದಾನೇಜ್ಯಾಸ್ವಾಧ್ಯಾಯಯೋಗೈ:, ವರ್ಷಶತಮ್ ಇಷ್ಟ್ವಾ ಕ್ಷೀಣಕ್ಲೇಶಃ, ಭಗವನ್ತಮೇವ ಪ್ರತಿಪದ್ಯತೇ" ಇತಿ॥

ಸೂ. ಭಾ.[1] ೨-೨-೪೨, ಪುಟ ೧೫೩(II)

ಈ ಭಾಷ್ಯಭಾಗದ ಅಭಿಪ್ರಾಯವಿದು: "ಇಲ್ಲಿ ಭಾಗವತರ ಮತವೇನೆಂದರೆ: ನಿರಂಜನಜ್ಞಾನಸ್ವರೂಪನಾದ ವಾಸುದೇವಭಗವಂತನೊಬ್ಬನೇ ಪರಮಾರ್ಥತತ್ತ್ವವು. ಆತನು ವಾಸುದೇವವ್ಯೂಹರೂಪ, ಸಂಕರ್ಷಣವ್ಯೂಹರೂಪ, ಪ್ರದ್ಯುಮ್ನವ್ಯೂಹರೂಪ, ಮತ್ತು –ಅನಿರುದ್ಧವ್ಯೂಹರೂಪ ಎಂಬ ನಾಲ್ಕು ಬಗೆಯ ರೂಪಗಳಿಂದ ವಿಂಗಡಿಸಿಕೊಂಡು ಇರುತ್ತಾನೆ. 'ವಾಸುದೇವ' ಎಂದು ಪರಮಾತ್ಮನನ್ನೇ ಹೆಸರಿಸಿದೆ; 'ಸಂಕರ್ಷಣ' ಎಂದರೆ ಜೀವನು– 'ಪ್ರದ್ಯುಮ್ನ' ಎಂದರೆ ಮನಸ್ಸು; 'ಅನಿರುದ್ಧ' ಎಂದರೆ ಅಹಂಕಾರವು– ಇವರೊಳಗೆ ವಾಸುದೇವನೇ ಪರಮಕಾರಣವು; ಸಂಕರ್ಷಣನೇ ಮುಂತಾದ ಉಳಿದವರು ಕಾರ್ಯವು. ಹೀಗಿರುವ ಆ ಪರಮೇಶ್ವರನಾದ ಭಗವಂತನನ್ನು ಅಭಿಗಮನ, ಉಪಾದಾನ, ಇಜ್ಯಾ, ಸ್ವಾಧ್ಯಾಯ, ಯೋಗ- ಇವುಗಳಿಂದ ನೂರುವರ್ಷವೂ ಪೂಜಿಸಿ ಕ್ಲೇಶಗಳನ್ನೆಲ್ಲ ಸವೆಯಿಸಿಕೊಂಡವನು ಭಗವಂತನನ್ನೇ ಸೇರಿಕೊಳ್ಳುತ್ತಾನೆ."

## ಶಾಂಕರ ಭಾಷ್ಯದಿಂದ ತಿಳಿದುಬರುವ ಭಾಗವತಮತಸ್ವರೂಪ

೪. ಮೇಲಿನ ಶಾಂಕರಭಾಷ್ಯಭಾಗದ ಅಭಿಪ್ರಾಯವನ್ನು ಲಕ್ಷ್ಯದಲ್ಲಿಟ್ಟು ಆಲೋಚಿಸಿದರೆ 'ವಾಸುದೇವ' ನೆಂಬ ಹೆಸರಿನಿಂದ ಪರಮಾತ್ಮನನ್ನು ಭಜಿಸುವವರ ಮತವೇ ಭಾಗವತಮತವು – ಎಂಬ ಅಭಿಪ್ರಾಯವು ಹೊರಡುತ್ತದೆ. 'ನಿರಂಜನಜ್ಞಾನಸ್ವರೂಪನಾದ ವಾಸುದೇವಭಗವಂತನೊಬ್ಬನೇ ಪರಮಾರ್ಥತತ್ತ್ವವು' ಎಂದಿರುವದರಿಂದ ಭಾಗವತಮತದಲ್ಲಿ ಪರಮಾರ್ಥವು ಅದ್ವೈತರೂಪವಾಗಿರುವದೆಂದೂ ಮಿಕ್ಕದ್ದೆಲ್ಲವೂ ಅನೃತವೆಂದೂ ಏರ್ಪಡುತ್ತದೆ. ಇದು ನಿಜವಾದರೆ ಶಂಕರಾಚಾರ್ಯರು ಒಪ್ಪಿರುವ ಅದ್ವೈತಸಿದ್ಧಾಂತವನ್ನೇ ಭಾಗವತರೂ ಒಪ್ಪಿದ್ದರೆಂದು ಹೇಳಬೇಕಾಗುತ್ತದೆ. ಆದರೆ ಉಪಾಸಕರಿಗೆ ಯಾವಜ್ಜೀವವೂ ಭಗವಂತನನ್ನು ಧ್ಯಾನಿಸುವದರಿಂದ ಭಗವಂತನ

1. ಸೂ. ಭಾ ಎಂದರೆ ಅಧ್ಯಾತ್ಮಪ್ರಕಾಶ ಕಾರ್ಯಾಲಯದಿಂದ ( 1998ರಲ್ಲಿ) ಪ್ರಕಟಿತವಾದ ಬ್ರಹ್ಮಸೂತ್ರಭಾಷ್ಯದ ಪುಸ್ತಕ ( ೨ನೇ ಭಾಗ).

ಸಾಯುಜ್ಯವು ದೊರೆಯುವದು– ಎಂದಿರುವದರಿಂದ ಅದಕ್ಕಿಂತ ಮೊದಲು ಈಶ್ವರನಿಗಿಂತ ಜೀವರು ಬೇರೆಯಾಗಿಯೇ ಇರುತ್ತಾರೆ– ಎಂಬ ನಂಬಿಕೆಯು ಅವರ ಸಿದ್ಧಾಂತದಲ್ಲಿ ಇತ್ತೆಂದು ತೋರುತ್ತದೆ.[1]

## ಬಾದರಾಯಣರಿಗಿಂತ ಹಿಂದೆಯೇ ಭಾಗವತಸಿದ್ಧಾಂತವಿದ್ದಿತು

೫. ಈ ಸಿದ್ಧಾಂತವನ್ನು ಅವಲಂಬಿಸಿದ್ದವರ ಮತವು ಬಾದರಾಯಣರಿಗಿಂತ ಬಹಳ ಪೂರ್ವದಲ್ಲಿಯೇ ಪ್ರಚಾರದಲ್ಲಿತ್ತೆಂಬುದಕ್ಕೆ ನಮಗೆ ಬ್ರಹ್ಮಸೂತ್ರಗಳಲ್ಲಿಯೇ ಆಧಾರವು ಸಿಕ್ಕುತ್ತದೆ. ಹೇಗೆಂದರೆ : **"आत्मा वा अरे द्रष्टव्यः श्रोतव्यो मंतव्यो निदिध्यासितव्यो मैत्रेय्यात्मनो वा अरे दर्शनेन श्रवणेन मत्या विज्ञानेनेदं सर्वं विदितम्"** (ಎಲೆ, ಆತ್ಮನನ್ನೇ ಕಂಡುಕೊಳ್ಳಬೇಕು. ಶ್ರವಣಮಾಡಬೇಕು, ಮನನಮಾಡಬೇಕು, ನಿದಿಧ್ಯಾಸನಮಾಡಬೇಕು, ಮೈತ್ರೇಯಿಯೆ, ಆತ್ಮನನ್ನೇ ಕಂಡುಕೊಳ್ಳುವದರಿಂದ, ಶ್ರವಣಮಾಡುವದರಿಂದ, ಮನನಮಾಡುವದರಿಂದ, ನಿದಿಧ್ಯಾಸನಮಾಡುವದರಿಂದ ಇದೆಲ್ಲವನ್ನೂ ಅರಿತುಕೊಂಡಂತೆ ಆಗುವದು)ಎಂಬ **ಬೃಹದಾರಣ್ಯಕ(೪-೫-೬)** ವಾಕ್ಯದಲ್ಲಿ ಜೀವಾತ್ಮನನ್ನೇನೂ ಶ್ರವಣಾದಿಗಳಿಂದ ಕಂಡುಕೊಳ್ಳಬೇಕೆಂದು ಹೇಳಿರುವದಿಲ್ಲ; ಪರಮಾತ್ಮನ ಸಾಕ್ಷಾತ್ಕಾರವನ್ನೇ ಇಲ್ಲಿ ಹೇಳಿದೆ ಎಂದು **ವಾಕ್ಯಾನ್ವಯಾಧಿಕರಣದಲ್ಲಿ** ಸಿದ್ಧಾಂತವನ್ನು ಮಾಡಿದೆ. ಹಾಗಾದರೆ ಈ ಪ್ರಕರಣದಲ್ಲಿ **'आत्मनस्तु कामाय सर्वं प्रियं भवति'** (ಆತ್ಮನ ಕಾಮಕ್ಕಾಗಿಯೇ ಇದೆಲ್ಲವೂ ಪ್ರಿಯವಾಗಿರುತ್ತದೆ.) ಜೀವನು ಎಲ್ಲವನ್ನೂ ತನಗೋಸ್ಕರವಾಗಿಯೇ ಪ್ರೀತಿಸುತ್ತಾನೆಂದು ಹೇಳಿದೆಯಲ್ಲ! ಇದರಿಂದ ಸಂಸಾರಿಯಾದ ಆತ್ಮನನ್ನೇ ಈ ರೀತಿಯಲ್ಲಿ ಶ್ರವಣಾದಿಗಳಿಂದ ಕಂಡುಕೊಳ್ಳಬೇಕೆಂದು ಹೇಳಿದಂತಾಗುವದಿಲ್ಲವೆ?– ಎಂಬ ಆಕ್ಷೇಪವು ಬರಲಾಗಿ ಅದಕ್ಕೆ ಮೂರುಜನ ಋಷಿಗಳು ಬೇರೆಬೇರೆಯಾಗಿ ಪರಿಹಾರವನ್ನು ಹೇಳಿರುತ್ತಾರೆ. ಹೇಗೆಂದರೆ

> **(೧) 'ಆತ್ಮನನ್ನು ಅರಿತುಕೊಂಡರೆ ಇದೆಲ್ಲವನ್ನೂ ಅರಿತುಕೊಂಡಂತೆ ಆಗುತ್ತದೆ.' ಎಂದು ಪ್ರತಿಜ್ಞಾವಾಕ್ಯದಲ್ಲಿರುವದರಿಂದ ವಿಜ್ಞಾನಾತ್ಮನಿಗಿಂತಲೂ ಪರಮಾತ್ಮನು ಬೇರೆಯಲ್ಲ ಎಂದಾಗುತ್ತದೆ. ಆದ್ದರಿಂದ ಪರಮಾತ್ಮನಿಗಿಂತ ವಿಜ್ಞಾನಾತ್ಮನು ಪೂರ್ಣವಾಗಿ ಬೇರೆಯಲ್ಲ; ಆ ಇಬ್ಬರು ಆತ್ಮರಿಗೂ ಅಭೇದವೂ ಉಂಟು– ಎಂದಾಯಿತು. ಇದನ್ನು ಜೀವಾತ್ಮಪರಾಮರ್ಶವು ತಿಳಿಸುತ್ತದೆ. (ಸೂ. ೧-೪-೨೦)**

ಇದು ಆಶ್ಮರಥ್ಯ ಎಂಬ ಆಚಾರ್ಯರ ಮತ.

---

**1.** ಮಾಂಡೂಕ್ಯೋಪನಿಷತ್ತಿನಮೇಲೆ ಗೌಡಪಾದಾಚಾರ್ಯರು ಬರೆದಿರುವ ಕಾರಿಕೆಗಳ ಮೂರನೆಯ ಪ್ರಕರಣದಲ್ಲಿ ಈ ಮತವನ್ನು ಅನುವಾದಮಾಡಿಕೊಂಡು ಖಂಡಿಸುವದಕ್ಕೆ ಹೊರಟಿದೆ. ಉಪದೇಶಸಾಹಸ್ರಿ ಗದ್ಯ, ಬೃಹದಾರಣ್ಯಕಭಾಷ್ಯ ೨-೧-೨೦ ಇವುಗಳಲ್ಲಿಯೂ ಈ ಮತದ ಅನುವಾದವಿದೆ.

(೨) ಈ ಪರಮಾತ್ಮನೇ ವಿಜ್ಞಾನಾತ್ಮನ ರೂಪದಿಂದಲೂ ಇದ್ದುಕೊಂಡಿದ್ದಾನೆ; ಆದ್ದರಿಂದ ಹೀಗೆ ಜೀವನನ್ನು ವರ್ಣಿಸುವ ವಾಕ್ಯದಿಂದ ಉಪಕ್ರಮಿಸಿದೆ.

ಹೀಗೆಂಬುದು **ಕಾಶಕೃತ್ಸ್ನ**ರೆಂಬ ಆಚಾರ್ಯರು (ಸೂ.೧-೪-೨೨) ಹೇಳಿರುವ ಪರಿಹಾರ.

(೩) ಇನ್ನು ಮೂರನೆಯವರಾದ **ಔಡುಲೋಮಿ** ಎಂಬ ಆಚಾರ್ಯರ ಅಭಿಪ್ರಾಯವು ಹೇಗಿದೆ ?– ಎಂದರೆ :

**"ಉತ್ಕ್ರಮಿಷ್ಯತ ಏವಂ ಭಾವಾದಿತ್ಯೌಡುಲೋಮಿಃ" (ವೇ.ಸೂ. ೧-೪-೨೧) : ಉತ್ಕ್ರಾಂತಿಯಾಗುವಾಗ ಈ ರೂಪವು ಜೀವನಿಗೆ ಬರುವದಾದ್ದರಿಂದ ಹೀಗೆ ಸಂಸಾರಿಯ ಪರಾಮರ್ಶದಿಂದ ಉಪಕ್ರಮವನ್ನು ಮಾಡಿರುತ್ತದೆ–ಎಂಬುದು ಅವರ ಪರಿಹಾರ.**

ಈ ಔಡುಲೋಮಿ ಆಚಾರ್ಯರ ಅಭಿಪ್ರಾಯವನ್ನು ಶಂಕರಭಾಷ್ಯದಲ್ಲಿ ಹೀಗೆ ವರ್ಣಿಸಿರುತ್ತದೆ:

**"ವಿಜ್ಞಾನಾತ್ಮನ ಏವ ದೇಹೇಂದ್ರಿಯಮನೋಬುದ್ಧಿಸಙ್ಘಾತೋಪಾಧಿಸಂಪರ್ಕಾತ್ ಕಲುಷೀಭೂತಸ್ಯ ಜ್ಞಾನಧ್ಯಾನಾದಿಸಾಧನಾನುಷ್ಠಾನಾತ್ ಸಂಪ್ರಸನ್ನಸ್ಯ ದೇಹಾದಿಸಙ್ಘಾತಾದುತ್ಕ್ರಮಿಷ್ಯತಃ ಪರಮಾತ್ಮೈಕ್ಯೋಪಪತ್ತೇಃ, ಇದಮ್ ಅಭೇದೇನೋಪಕ್ರಮಣಮ್ ಇತಿ ಔಡುಲೋಮಿರಾಚಾರ್ಯೋ ಮನ್ಯತೇ॥"**

ಸೂ.ಭಾ. ೧-೪-೨೧, ಪು ೬೨೩(I)

'ವಿಜ್ಞಾನಾತ್ಮನೇ ದೇಹ, ಇಂದ್ರಿಯಗಳು, ಮನಸ್ಸು, ಬುದ್ಧಿ- ಇವುಗಳ ಸಂಘಾತದ ಸಂಪರ್ಕದಿಂದ ಕಲ್ಮಷಯುಕ್ತನಾಗಿರುತ್ತಾನೆ. ಜ್ಞಾನ, ಧ್ಯಾನ- ಮುಂತಾದ ಸಾಧನಗಳನ್ನು ಅನುಷ್ಠಾನಮಾಡಿ ಶುದ್ಧನಾದರೆ ಈ ದೇಹಾದಿಸಂಘಾತವನ್ನು ಬಿಟ್ಟು ಉತ್ಕ್ರಾಂತಿಯನ್ನು ಹೊಂದುವಾಗ ಇವನು ಪರಮಾತ್ಮನಲ್ಲಿ ಒಂದಾಗಬಹುದಾಗಿದೆಯಾದ್ದರಿಂದ ಹೀಗೆ ಜೀವಪರಮಾತ್ಮರ ಅಭೇದವನ್ನಿಟ್ಟುಕೊಂಡು ಉಪಕ್ರಮದಲ್ಲಿ ಹೇಳಿರುತ್ತದೆ- ಎಂಬುದು **ಔಡುಲೋಮಿ** ಎಂಬ ಆಚಾರ್ಯರ ಮತವು.

ಈ ವಾಕ್ಯದ ಅಭಿಪ್ರಾಯವನ್ನು ಸರಿಯಾಗಿ ಮನನಮಾಡಿದರೆ ತೋರುವದೇನೆಂದರೆ: ಜೀವನು ಈಗ ಭಗವಂತನಿಗಿಂತ ಬೇರೆಯಾಗಿದ್ದರೂ ಸಾಯುವ ಕಾಲಕ್ಕೆ ಪರಿಶುದ್ಧನಾಗಿದ್ದರೆ ಭಗವಂತನ ಸಾಯುಜ್ಯವನ್ನೇ ಪಡೆಯುವನು. ಸಂಸಾರಾವಸ್ಥೆಯಲ್ಲಿ ಜೀವಪರಮಾತ್ಮರಿಗೆ ಭೇದವೇ ಇರುತ್ತದೆಯಾದರೂ ಮುಕ್ತನಾದ ಜೀವನು ಪರಮಾತ್ಮನಿಗಿಂತ ಬೇರೆಯಲ್ಲ- ಎಂಬುದು ಔಡುಲೋಮಿಗಳ ಮತವು. ಆದ್ದರಿಂದ **'ಭಗವನ್ತಂ ವರ್ಷಶತಮಿಷ್ಟ್ವಾ ಕ್ಷೀಣಕ್ಲೇಶಃ, ಭಗವನ್ತಮೇವ ಪ್ರತಿಪದ್ಯತೇ'** (ನೂರುವರ್ಷಗಳೂ ಭಗವಂತನ

ಆರಾಧನೆಯನ್ನು ಮಾಡಿ ಕ್ಲೇಶಗಳನ್ನೆಲ್ಲ ಸವೆಯಿಸಿಕೊಂಡು ಭಗವಂತನನ್ನೇ ಸೇರಿಕೊಳ್ಳುತ್ತಾನೆ) ಎಂದು ಆಚಾರ್ಯರು ಹೇಳಿರುವ ಮತವೇ ಇದು ಎಂದಾಯಿತು.[1] **ಭಗವಂತನನ್ನು ಸಂತತವಾಗಿ ಆರಾಧನೆಮಾಡುವುದೇ ಭಾಗವತಮತ; ಈ ಆರಾಧನೆಗೆ** ಭಗವಂತನ ಸಾಯುಜ್ಯವೇ ಫಲ ಎಂದು ಹೇಳುವ ಈ ಮತದವರು ಸೂತ್ರಕಾರರಾದ ಬಾದರಾಯಣಾಚಾರ್ಯರಿಗಿಂತಲೂ ಹಿಂದೆಯೇ ಇದ್ದರು– ಎಂಬುದು ಇದರಿಂದ ಸಿದ್ಧವಾಗುತ್ತದೆ.

## ಭಗವಾನ್ ಎಂಬ ಶಬ್ದಕ್ಕೆ ಏನರ್ಥ ?

೬. 'ಈಗ ಭಗವಂತನಾದ ವಾಸುದೇವನೇ ಪರಮಾರ್ಥ'; 'ನೂರು ವರ್ಷವೂ ಆರಾಧನೆಮಾಡಿದ ಬಳಿಕ ಜೀವನು ಕ್ಲೇಶಗಳನ್ನು ಸವೆಯಿಸಿಕೊಂಡು ಭಗವಂತನನ್ನೇ ಸೇರುತ್ತಾನೆ' ಎಂಬ ಭಾಷ್ಯಭಾಗದಲ್ಲಿರುವ **'ಭಗವಾನ್', 'ವಾಸುದೇವ' ಎಂಬೀ ಶಬ್ದಗಳ ಅರ್ಥವನ್ನು** ಕುರಿತು ವಿಚಾರಮಾಡಬೇಕಾಗಿರುತ್ತದೆ. ಭಗವದ್ಗೀತೆಯ ಮೂರನೆಯ ಅಧ್ಯಾಯದಲ್ಲಿ ಅರ್ಜುನನು ಕೇಳಿದ ಪ್ರಶ್ನೆಗೆ ಶ್ರೀಕೃಷ್ಣನು ಉತ್ತರವನ್ನು ಕೊಟ್ಟಿರುವ ಸಂದರ್ಭದಲ್ಲಿ ಆಚಾರ್ಯರು ಭಗವಚ್ಛಬ್ದದ ನಿರ್ವಚನವನ್ನೊಳಗೊಂಡ ಎರಡು ಶ್ಲೋಕಗಳನ್ನು ವಿಷ್ಣುಪುರಾಣದಿಂದ ಆರಿಸಿಕೊಂಡಿರುತ್ತಾರೆ. ಆಚಾರ್ಯರು ಬೇರೆಯ ಕಡೆಯಲ್ಲಿಯೂ ಈ ಪುರಾಣದಿಂದ ವಾಕ್ಯಗಳನ್ನು ಆರಿಸಿ ಉದಾಹರಿಸಿರುವದರಿಂದ ಇದನ್ನು ತಮ್ಮ ಸಿದ್ಧಾಂತಕ್ಕೆ ಪ್ರಮಾಣವೆಂದು ಅವರು ಹಿಡಿದಿರುತ್ತಾರೆಂದು ತಿಳಿಯಬೇಕಾಗಿದೆ. ಅರ್ಜುನನು "ಈ ಜೀವನು ತನಗೆ ಇಚ್ಛೆಯಿಲ್ಲದಿದ್ದರೂ ಬಲಾತ್ಕಾರದಿಂದ ಕಟ್ಟುವಡೆದವನಂತೆ ಮಾಡಬಾರದ ಪಾಪವನ್ನು ಮಾಡುತ್ತಿರುವನಲ್ಲ, ಅದು ಯಾರ ಪ್ರೇರಣೆಯಿಂದ?" (ಗೀ.೩-೩೬) ಎಂದು ಕೇಳಿದ ಪ್ರಶ್ನೆಗೆ ಉತ್ತರವನ್ನು ಹೇಳುವದಕ್ಕೆ ಶ್ರೀಕೃಷ್ಣನು ಹೊರಟಿರುವಾಗ ಬಂದಿರುವ **'ಶ್ರೀಭಗವಾನುವಾಚ'** ಎಂಬ ವಾಕ್ಯಕ್ಕೆ ವ್ಯಾಖ್ಯಾನಮಾಡುವಾಗ ಭಗವಂತನೆಂದರೆ ಯಾರು? ಎಂಬುದನ್ನು ತಿಳಿಸುವ ಈ ಎರಡು ಪುರಾಣವಚನಗಳನ್ನು ಆಚಾರ್ಯರು ಆಧಾರವಾಗಿ ಬರೆದಿರುತ್ತಾರೆ:

**ಐಶ್ವರ್ಯಸ್ಯ ಸಮಗ್ರಸ್ಯ ಧರ್ಮಸ್ಯ ಯಶಸಃ ಶ್ರಿಯಃ।**
**ವೈರಾಗ್ಯಸ್ಯಾಥ ಮೋಕ್ಷಸ್ಯ[2] ಷಣ್ಣಾಂ ಭಗ ಇತೀಙ್ಗನಾ[3] ॥**

ವಿ.ಪು. ೬-೫-೭೪

---

**1.** ಈ ಸೂತ್ರದ ಭಾಷ್ಯದ ವ್ಯಾಖ್ಯಾನದಲ್ಲಿಯೇ ವಾಚಸ್ಪತಿಮಿಶ್ರರು "ಯಥಾಹುಃ ಪಾಞ್ಚರಾತ್ರಿಕಾಃ "ಆಮುಕ್ತೇರ್ಭೇದ ಏವ ಸ್ಯಾಜ್ಜೀವಸ್ಯ ಚ ಪರಸ್ಯ ಚ । ಮುಕ್ತಸ್ಯ ತು ನ ಭೇದೋಽಸ್ತಿ ಭೇದಹೇತೋರಭಾವತಃ॥" ಎಂಬ ಶ್ಲೋಕವನ್ನು ಉದಾಹರಿಸಿರುತ್ತಾರೆ. ಅವರಿಗಿಂತಲೂ ಪೂರ್ವದಲ್ಲಿ ಭಾಸ್ಕರಾಚಾರ್ಯರು (ಸೂ. ಭಾ. ೧-೪-೨೦) ಇದನ್ನು ಉದಾಹರಿಸಿದ್ದರು.

**2.** 'ಜ್ಞಾನವೈರಾಗ್ಯಯೋಶ್ಚೈವ' ಎಂದು ಅಚ್ಚಿನ ಪುಸ್ತಕದ ಪಾಠ.

**3.** 'ಇತೀರಣಾ' ಎಂದು ಪುರಾಣದ ಪಾಠ

**ಉತ್ಪತ್ತಿಂ ಪ್ರಲಯಂ ಚೈವ ಭೂತಾನಾಮಾಗತಿಂ ಗತಿಮ್**
**ವೇತ್ತಿ ವಿದ್ಯಾಮವಿದ್ಯಾಂ ಚ ಸ ವಾಚ್ಯೋ ಭಗವಾನಿತಿ ॥**

ವಿ.ಪು. ೬- ೫ -೭೮

ಷಡ್ಗುಣೈಶ್ವರ್ಯಸಂಪನ್ನನೂ ಪ್ರಾಣಿಗಳ ವಿದ್ಯೆಯ ಮತ್ತು ಅವಿದ್ಯಾಕಾಮ ಕರ್ಮಗಳ ಫಲವನ್ನು ತಿಳಿದಿರುವಾತನೂ **ಭಗವಂತನು** – ಎಂಬುದು ಶ್ಲೋಕಗಳ ಅರ್ಥಗಳ ಸಾರ.

ವಿಷ್ಣುಪುರಾಣದ ಈ ಅಧ್ಯಾಯದಲ್ಲಿ ಪರಮಾತ್ಮಸ್ವರೂಪವನ್ನು ಹೇಗೆ ವರ್ಣಿಸಿದೆ ಎಂಬುದನ್ನು ಸ್ವಲ್ಪ ವಿಸ್ತರದಿಂದ ತಿಳಿಯುವದರಿಂದ ಲಾಭವುಂಟು. ಏಕೆಂದರೆ ಭಾಗವತ ಸಂಪ್ರದಾಯದವರು ಭಗವಂತನ ವಿಷಯಕ್ಕೆ ಯಾವ ಅಭಿಪ್ರಾಯವುಳ್ಳವರಾಗಿದ್ದರೆಂದು ಆಚಾರ್ಯರು ಭಾವಿಸಿದ್ದರೆಂಬುದು ಅದರಿಂದ ಸ್ಫುಟವಾದೀತು. "ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ– ಎಂಬ ತಾಪತ್ರಯದ ಸ್ವರೂಪವನ್ನು ತಿಳಿದುಕೊಂಡ ವಿವೇಕಿಯು ಜ್ಞಾನವೈರಾಗ್ಯಗಳನ್ನು ಹೊಂದಿ ಆ ಆತ್ಯಂತಿಕಲಯವನ್ನು ಹೊಂದುತ್ತಾನೆ. (ವಿ.ಪು. ೬-೫-೧) ಎಂದು ಜೀವನಿಗೆ ಪರಮಾತ್ಮನಲ್ಲಿ ಲಯವು ಹೇಗಾಗುವದೆಂಬುದನ್ನು ಹೇಳುವದಕ್ಕೇ ಹೊರಟಿರುವ ಪರಾಶರರು ಧ್ಯೇಯವಾದ ಪರಮಾತ್ಮತತ್ತ್ವವನ್ನು ಮೈತ್ರೇಯನಿಗೆ ವರ್ಣಿಸಿ ಹೇಳಿರುವ ಬಗೆಯು ಇಲ್ಲಿದೆ. ಈ ಶ್ಲೋಕಗಳ ಅರ್ಥವನ್ನು ಮನನಮಾಡುವದರಿಂದ ಅವರು ಅಪ್ಪಣೆಕೊಡಿಸಿರುವದನ್ನು ಮನದಟ್ಟುಮಾಡಿಕೊಳ್ಳಬಹುದು.

**ದ್ವೇ ಬ್ರಹ್ಮಣೀ ವೇದಿತವ್ಯೇ ಶಬ್ದಬ್ರಹ್ಮ ಪರಂ ಚ ಯತ್ ।**
**ಶಬ್ದಬ್ರಹ್ಮಣಿ ನಿಷ್ಣಾತಃ ಪರಂ ಬ್ರಹ್ಮಾಧಿಗಚ್ಛತಿ ॥೬೪॥**
**ದ್ವೇ ವೈ ವಿದ್ಯೇ ವೇದಿತವ್ಯೇ ಇತಿ ಚಾಥರ್ವಣೀ ಶ್ರುತಿಃ ।**
**ಪರಯಾ ತ್ವಕ್ಷರಪ್ರಾಪ್ತಿರ್ಋಗ್ವೇದಾದಿಮಯಾಽಪರಾ ॥೬೫॥**
**ಯತ್ತದವ್ಯಕ್ತಮಜರಮಚಿನ್ತ್ಯಮಜಮವ್ಯಯಮ್ ।**
**ಅನಿರ್ದೇಶ್ಯಮರೂಪಂ ಚ ಪಾಣಿಪಾದಾದ್ಯಸಂಯುತಮ್ ॥೬೬॥**
**ವಿಭುಂ ಸರ್ವಗತಂ ನಿತ್ಯಂ ಭೂತಯೋನಿರಕಾರಣಮ್ ।**
**ವ್ಯಾಪ್ಯವ್ಯಾಪ್ತಂ ಯತಃ ಸರ್ವಂ ಯದ್ವೈ ಪಶ್ಯಂತಿ ಸೂರಯಃ ॥೬೭॥**
**ತದ್ ಬ್ರಹ್ಮ ತತ್ಪರಂ ಧಾಮ ತದ್ಧ್ಯೇಯಂ ಮೋಕ್ಷಕಾಙ್ಕ್ಷಿಭಿಃ ।**
**ಶ್ರುತಿವಾಕ್ಯೋದಿತಂ ಸೂಕ್ಷ್ಮಂ ತದ್ವಿಷ್ಣೋಃ ಪರಮಂ ಪದಮ್ ॥೬೮॥**
**ತದೇವ ಭಗವದ್ವಾಚ್ಯಂ ಸ್ವರೂಪಂ ಪರಮಾತ್ಮನಃ ।**
**ವಾಚಕೋ ಭಗವಚ್ಛಬ್ದಸ್ತಸ್ಯಾದ್ಯಸ್ಯಾಕ್ಷಯಾತ್ಮನಃ ॥೬೯॥**
**ಏವಂ ನಿಗದಿತಾರ್ಥಸ್ಯ ತತ್ತತ್ತ್ವಂ ತಸ್ಯ ತತ್ತ್ವತಃ ।**
**ಜ್ಞಾಯತೇ ಯೇನ ತಜ್ಜ್ಞಾನಂ ಪರಮನ್ಯತ್ತ್ರಯೀಮಯಮ್ ॥೭೦॥**

ವಿ. ಪು. ೬-೫-೬೪ ರಿಂದ ೭೦

'ಮೈತ್ರೇಯನೆ', 'ಶಬ್ದಬ್ರಹ್ಮ', 'ಪರಬ್ರಹ್ಮ'– ಎಂದು ಎರಡು ಬ್ರಹ್ಮಗಳನ್ನು ಅರಿತುಕೊಳ್ಳಬೇಕು. ಶಬ್ದಬ್ರಹ್ಮದಲ್ಲಿ ಪಂಡಿತನಾದವನು ಪರಬ್ರಹ್ಮನನ್ನು ಅರಿತುಕೊಳ್ಳುತ್ತಾನೆ. ಆಥರ್ವಣ (ಮುಂಡಕ) ಶ್ರುತಿಯಲ್ಲಿ 'ಎರಡು ವಿದ್ಯೆಗಳನ್ನು ಅರಿತುಕೊಳ್ಳಬೇಕು; ಪರವಿದ್ಯೆಯಿಂದ ಅಕ್ಷರಪ್ರಾಪ್ತಿಯಾಗುವದು, ಋಗ್ವೇದಾದಿಮಯ ವಾಗಿರುವದೇ ಅಪರವಿದ್ಯೆ. ಯಾವದು ಅವ್ಯಕ್ತವೂ ಮುಪ್ಪಿಲ್ಲದ್ದೂ, ಅಚಿಂತ್ಯವೂ, ಜನ್ಮರಹಿತವೂ, ಅವ್ಯಯವೂ, ಇಂಥದ್ದೆಂದು ನಿರ್ದೇಶಿಸಿ ತಿಳುಹುವದಕ್ಕಾಗದ್ದೂ, ರೂಪವಿಲ್ಲದ್ದೂ, ಪಾಣಿಪಾದಾದಿಗಳಿಲ್ಲದ್ದೂ, ವಿಭುವೂ ಸರ್ವಗತವೂ ನಿತ್ಯವೂ ಭೂತಗಳಿಗೆ ಕಾರಣವೂ ತನಗೆ ಕಾರಣವಿಲ್ಲದ್ದೂ, ಸರ್ವವ್ಯಾಪಿಯೂ ಮತ್ತೊಂದರಿಂದ ವ್ಯಾಪ್ತವಲ್ಲದ್ದೂ ಆಗಿರುವದೋ, ಯಾವದರಿಂದ ಎಲ್ಲವೂ ಉಂಟಾಗಿರುವದೋ, ಯಾವದನ್ನು ಸೂರಿಗಳು ಮಾತ್ರ ಕಾಣಬಲ್ಲರೋ ಅದೇ ಬ್ರಹ್ಮವು. ಅದೇ ಪರಧಾಮವು, ಮುಮುಕ್ಷುಗಳಾದವರು ಅದನ್ನೇ ಧ್ಯಾನಮಾಡತಕ್ಕದ್ದು. ಶ್ರುತಿವಾಕ್ಯಗಳಿಂದ ಉಕ್ತನಾಗಿರುವ ಸೂಕ್ಷ್ಮವಾದ ಆ ವಿಷ್ಣುವಿನ ಪರಮಪದವೇ ಅದಾಗಿರುತ್ತದೆ. ಅದೇ ಭಗವಂತನೆಂಬ ಶಬ್ದಕ್ಕೆ ವಾಚ್ಯವಾಗಿರುತ್ತದೆ, ಅದೇ ಪರಮಾತ್ಮನ ಸ್ವರೂಪವು. ಹೀಗೆ ನಾನು ಹೇಳಿರುವ ಅರ್ಥವನ್ನು, ಅದರ ತತ್ತ್ವವನ್ನು ಇದ್ದದ್ದು ಇದ್ದಂತೆ, ಯಾವದರಿಂದ ಅರಿಯಲು ಆಗುವದೋ ಅದೇ ಜ್ಞಾನವು, ಪರವಿದ್ಯೆ; ಮಿಕ್ಕದ್ದು ವೇದಮಯವಾಗಿರುವ ಅಜ್ಞಾನವು, ಅಪರವಿದ್ಯೆ".

## ನಿರ್ವಿಶೇಷವಸ್ತುವಿಗೆ ಭಗವಚ್ಛಬ್ದವಾಚ್ಯತ್ವವು ಹೇಗೆ?

೭. ಈ ವರ್ಣನೆಯಿಂದ 'ಭಗವಂತನೆಂಬ ಶಬ್ದದಿಂದ ನಿರ್ವಿಶೇಷವಾದ ಪರತತ್ತ್ವವನ್ನೇ ವ್ಯವಹರಿಸುತ್ತಾರೆ' ಎಂಬುದು ಸ್ಪಷ್ಟವಾಗುತ್ತದೆ; ಭಾಗವತ ಸಂಪ್ರದಾಯದವರಿಗೆ ಒಪ್ಪಾಗಿರುವ ಪರಮಾರ್ಥತತ್ತ್ವವಿದು ಎಂದೂ ಏರ್ಪಡುತ್ತದೆ. ಹಾಗಾದರೆ ನಿರ್ವಿಶೇಷವಾದ ತತ್ತ್ವವನ್ನು 'ಭಗವಾನ್' (ಭಗಗಳೆಂಬ ಗುಣಗಳುಳ್ಳವನು) ಎನ್ನುವದು ಹೇಗೆ?– ಎಂಬ ಪ್ರಶ್ನೆ ಎದ್ದುಕೊಳ್ಳುತ್ತದೆಯಷ್ಟೆ? ಅದಕ್ಕೆ ಉತ್ತರವಿದು :

ಅಶಬ್ದಗೋಚರಸ್ಯಾಪಿ ತಸ್ಯ ವೈ ಬ್ರಹ್ಮಣೋ ದ್ವಿಜ ।
ಪೂಜಾಯಾಂ ಭಗವಚ್ಛಬ್ದಃ ಕ್ರಿಯತೇ ಹ್ಯುಪಚಾರತಃ ॥೭೧॥
ಶುದ್ಧೇ ಮಹಾವಿಭೂತ್ಯಾಖ್ಯೇ ಪರೇ ಬ್ರಹ್ಮಣಿ ಶಬ್ದ್ಯತೇ ।
ಮೈತ್ರೇಯ ಭಗವಚ್ಛಬ್ದಃ ಸರ್ವಕಾರಣಕಾರಣೇ ॥೭೨॥

ವಿ. ಪು. ೬–೫–೭೧, ೭೨

"ಎಲೈ ಬ್ರಾಹ್ಮಣೋತ್ತಮನೇ, ಯಾವ ಶಬ್ದಕ್ಕೂ ಗೋಚರವಲ್ಲದೆ ಇದ್ದರೂ ಆ ಬ್ರಹ್ಮವನ್ನು ಗೌರವಿಸಿ ಆರಾಧಿಸುವದಕ್ಕಾಗಿ 'ಭಗವಾನ್' ಎಂಬ ಶಬ್ದವನ್ನು ಉಪಚಾರದಿಂದ

ಪ್ರಯೋಗಿಸುವರು. ಮೈತ್ರೇಯನೆ, ಶುದ್ಧವಾದ 'ಮಹಾವಿಭೂತಿ' ಎಂಬ ಹೆಸರಿನಿಂದ ಸರ್ವಕಾರಣಗಳಿಗೂ ಕಾರಣವಾಗಿರುವ ಪರಬ್ರಹ್ಮದಲ್ಲಿ ಭಗವಾನ್ ಎಂಬ ಶಬ್ದವನ್ನು ಪ್ರಯೋಗಿಸುತ್ತಾರೆ."

ಈ ಮೇಲಿನ ವಾಕ್ಯಗಳಲ್ಲಿ ಪರಮಾತ್ಮನು ನಿರ್ವಿಶೇಷನಾಗಿದ್ದರೂ, ಎಂದರೆ ಅವನಲ್ಲಿ ಶಬ್ದಪ್ರತ್ಯಯಗಳ ಪ್ರವೃತ್ತಿಗೆ ನಿಮಿತ್ತವಾಗಿರುವ ಜಾತಿದ್ರವ್ಯಗುಣಾದಿವಿಶೇಷಗಳು ಯಾವವೂ ಇಲ್ಲದಿದ್ದರೂ ಗೌರವವನ್ನು ತೋರಿಸುವದಕ್ಕೆಂದು, ಅಥವಾ ಉಪಾಸನೆಗೆ ವಿಷಯವಾಗಿ ಮಾಡಿಕೊಳ್ಳುವದಕ್ಕೆಂದು **'ಭಗವಾನ್'** ಎಂಬ ಹೆಸರನ್ನು ಉಪಯೋಗಿಸುತ್ತಾರೆ.– ಎಂದಿರುವದರಿಂದ ಈ ವಿಶೇಷಣವನ್ನು **ಧನವಾನ್** ಎಂಬಂತೆ ಗುಣಗುಣಿಭಾವಸಂಬಂಧವನ್ನು ಸೂಚಿಸುವ ವಿಶಿಷ್ಟವಾಚಕವೆಂದು ಪರಿಗಣಿಸಬಾರದು ಎಂದು ಹೇಳಿದಂತೆ ಆಗಿರುತ್ತದೆ. ನಾವು ಉದಾಹರಿಸಿರುವ ಸೂತ್ರಭಾಷ್ಯದಲ್ಲಿ ಭಗವಂತನು ಒಬ್ಬನೇ (ಅದ್ವಿತೀಯನು), ನಿರಂಜನಜ್ಞಾನಸ್ವರೂಪನು– ಎಂದು ಬರೆದಿರುವದಕ್ಕೆ ಇದು ಅನುಗುಣವಾಗಿರುತ್ತದೆ. ಈ ನಿರ್ವಿಶೇಷಬ್ರಹ್ಮವಾದವನ್ನು ಇಷ್ಟರಲ್ಲಿಯೇ ಮತ್ತೆ ವಿಚಾರಕ್ಕೆ ತೆಗೆದುಕೊಳ್ಳಬೇಕಾಗಿರುವದರಿಂದ ಇಲ್ಲಿ ಈ ವಿಚಾರವನ್ನು ಇಷ್ಟಕ್ಕೇ ನಿಲ್ಲಿಸೋಣ.

## ಭಗವಚ್ಛಬ್ದದಲ್ಲಿರುವ ಸಂಕೇತಾಕ್ಷರಗಳ ಅರ್ಥವಿವರಣೆ

೮. ಭಗವಚ್ಛಬ್ದದಲ್ಲಿರುವ ಅಕ್ಷರಗಳಲ್ಲಿ ಪ್ರತಿಯೊಂದಕ್ಕೂ ಬೇರೆಬೇರೆಯ ಅರ್ಥವಿಶೇಷವನ್ನು ವಿಷ್ಣುಪುರಾಣದ ಈ ಆಧ್ಯಾಯದಲ್ಲಿ ವರ್ಣಿಸಿರುತ್ತದೆ. ಅದನ್ನು ಇಲ್ಲಿ ಉದಾಹರಿಸಲಾಗುವದು:

**ಸಂಭರ್ತೇತಿ ತಥಾ ಭರ್ತಾ ಭಕಾರೋಽರ್ಥದ್ವಯಾನ್ವಿತಃ ।**
**ನೇತಾ ಗಮಯಿತಾ ಸ್ರಷ್ಟಾ ಗಕಾರಾರ್ಥಸ್ತಥಾ ಮುನೇ** ॥೭೩॥
**ಐಶ್ವರ್ಯಸ್ಯ ಸಮಗ್ರಸ್ಯ ಧರ್ಮಸ್ಯ ಯಶಸಃ ಶ್ರಿಯಃ ।**
**ಜ್ಞಾನವೈರಾಗ್ಯಯೋಶ್ಚೈವ ಷಣ್ಣಾಂ ಭಗ ಇತೀರಣಾ** ॥೭೪[1]॥

"ಎಲ್ಲರನ್ನೂ ಪೋಷಿಸುವಾತನು, ಎಲ್ಲರನ್ನೂ ಧರಿಸುವ ಆಧಾರಸ್ವರೂಪನು ಎಂದು **ಭಕಾರಕ್ಕೆ** ಎರಡರ್ಥ, ಕರ್ಮಫಲಪ್ರಾಪ್ತಿಗೆ ಕಾರಣನು, ಪ್ರಾಪ್ಯಸ್ಥಾನಕ್ಕೆ ಕಳುಹಿಸುವಾತನು, ಸೃಷ್ಟಿಮಾಡುವಾತನು (ಅಥವಾ ಸೃಷ್ಟಿಸ್ಥಿತಿಪ್ರಲಯಕಾರಣನು) ಎಂಬಿವು **ಗಕಾರಕ್ಕೆ** ಅರ್ಥ, ಸಮಗ್ರವಾದ ಐಶ್ವರ್ಯ, ಧರ್ಮ, ಯಶಸ್ಸು, ಶ್ರೀ, ಜ್ಞಾನ, ವೈರಾಗ್ಯ- ಇವು ಆರಕ್ಕೂ 'ಭಗ' ಎಂಬ (ಎರಡಕ್ಷರಗಳಿಂದ ಕೂಡಿದ ಭಗಶಬ್ದವು) ಹೆಸರು.

---

1. ಈ ಶ್ಲೋಕವು ಗೀತೆಯ ಮೂರನೆಯ ಅಧ್ಯಾಯದ ಭಾಷ್ಯದಲ್ಲಿ ಬಂದಿದೆ ಎಂದು ಆಗಲೆ ಉದಾಹರಿಸಿರುತ್ತೇವೆ. 'ಇತೀಙ್ಗನಾ' ಎಂದು ಅಲ್ಲಿಯ ಪಾಠ.

**ವಸನ್ತಿ ತತ್ರ ಭೂತಾನಿ ಭೂತಾತ್ಮನ್ಯಖಿಲಾತ್ಮನಿ ।**
**ಸ ಚ ಭೂತೇಷ್ವಶೇಷೇಷು ವಕಾರಾರ್ಥಸ್ತತೋಽವ್ಯಯಃ ॥೭೫॥**

"ಅಖಿಲಾತ್ಮನಾದ ಆ ಭೂತಾತ್ಮನಲ್ಲಿ ಸರ್ವಭೂತಗಳೂ ವಾಸಿಸುತ್ತಿರುವವು; ಆತನು ಎಲ್ಲಾ ಭೂತಗಳೊಳಗೂ ವಾಸಮಾಡುತ್ತಿರುತ್ತಾನೆ. ಆದ್ದರಿಂದ ಆ ಅವ್ಯಯನಾದ ಪರಮಾತ್ಮನು ವಕಾರದ ಅರ್ಥವು."

**ಏವಮೇಷ ಮಹಾಞ್ಛಬ್ದೋ ಮೈತ್ರೇಯ ಭಗವಾನಿತಿ ।**
**ಪರಮಬ್ರಹ್ಮಭೂತಸ್ಯ ವಾಸುದೇವಸ್ಯ ನಾನ್ಯಗಃ ॥೭೬॥**
**ತತ್ರ ಪೂಜ್ಯಪದಾರ್ಥೋಕ್ತಿಪರಿಭಾಷಾಸಮನ್ವಿತಃ ।**
**ಶಬ್ದೋಽಯಂ ನೋಪಚಾರೇಣ ತ್ವನ್ಯತ್ರ ಹ್ಯುಪಚಾರತಃ ॥೭೭॥**

"ಎಲೈ ಮೈತ್ರೇಯನೇ, ಈ ಭಗವಾನ್ ಎಂಬ ಮಹಾಶಬ್ದವು ಪರಬ್ರಹ್ಮವಾಗಿರುವ ವಾಸುದೇವನಿಗೆ ಸಲ್ಲತಕ್ಕದ್ದೇ ಹೊರತು ಮತ್ತೊಬ್ಬರಿಗೆ ಸಲ್ಲದು. 'ಪೂಜ್ಯ' ಎಂಬ ಪಾರಿಭಾಷಿಕಾರ್ಥವುಳ್ಳ ಈ ಶಬ್ದವು ಆತನಲ್ಲಿಯೇ ಮುಖ್ಯಾರ್ಥದಲ್ಲಿ ಪ್ರಯುಕ್ತವಾಗುತ್ತದೆ; ಮಿಕ್ಕದರಲ್ಲಿ ಉಪಚಾರದಿಂದ ಪ್ರಯುಕ್ತವಾಗುತ್ತದೆ.

**ಉತ್ಪತ್ತಿಂ ಪ್ರಲಯಂ ಚೈವ ಭೂತಾನಾಮಾಗತಿಂ ಗತಿಮ್ ।**
**ವೇತ್ತಿ ವಿದ್ಯಾಮವಿದ್ಯಾಂ ಚ ಸ ವಾಚ್ಯೋ ಭಗವಾನಿತಿ[1] ॥೭೮॥**

"ಉತ್ಪತ್ತಿಯನ್ನೂ ಪ್ರಲಯವನ್ನೂ ಪ್ರಾಣಿಗಳ ಬರುವಿಕೆಯನ್ನೂ ಹೋಗನ್ನೂ ವಿದ್ಯೆಯನ್ನೂ ಅವಿದ್ಯೆಯನ್ನೂ ಅರಿತಿರುವನಲ್ಲವೆ, ಆದ್ದರಿಂದ ಅವನೇ **"ಭಗವಾನ್"** ಎಂಬ ಶಬ್ದಕ್ಕೆ ವಾಚ್ಯನಾಗಿರುತ್ತಾನೆ."

ಒಟ್ಟಿನಲ್ಲಿ ಪ್ರಾಣಿಗಳ ಉತ್ಪತ್ತಿ, ಕರ್ಮ, ಕರ್ಮಫಲಶಕ್ತಿ, ಸಂಸಾರಕ್ರಮ,– ಇವೆಲ್ಲವನ್ನೂ ಬಲ್ಲ ಸರ್ವಜ್ಞನೂ, ತಾನು ಮತ್ತೊಂದರಿಂದ ಹುಟ್ಟದೆ ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಕಾರಣನೂ ಆಗಿರುವ ಪರಮಾತ್ಮನೊಬ್ಬನಿಗೇ 'ಭಗವಾನ್' ಎಂಬ ಹೆಸರು ಪೂರ್ಣಾರ್ಥದಲ್ಲಿ ಸಲ್ಲುತ್ತದೆ ಎಂದು ಹೇಳಿದಂತೆ ಆಯಿತು.

## ಭಗವಂತನ ಗುಣಗಳೂ ಆತನೇ

೯. ಈಗ ಇನ್ನೊಂದು ವಿಶೇಷ. ಭಗವಂತನ ಗುಣಗಳು ಆರು. ಅವುಗಳಿಗೂ ಭಗವಂತನೆಂದೇ ಹೆಸರು ಎಂದು ಇಲ್ಲಿ ಹೇಳಿರುತ್ತದೆ :

---

1. ಈ ಶ್ಲೋಕವನ್ನು ಶಂಕರಾಚಾರ್ಯರವರು ತಮ್ಮ ಗೀತಾಭಾಷ್ಯದಲ್ಲಿ ಉದಾಹರಿಸಿಕೊಂಡಿರುತ್ತಾರೆ. ಗೀ. ಭಾ. ೩-೩೬

**ಜ್ಞಾನಶಕ್ತಿಬಲೈಶ್ವರ್ಯವೀರ್ಯತೇಜಾಂಸ್ಯಶೇಷತಃ ।**
**ಭಗವಚ್ಛಬ್ದವಾಚ್ಯಾನಿ ವಿನಾ ಹೇಯೈರ್ಗುಣಾದಿಭಿಃ** ||೭೯||

'ಜ್ಞಾನ, ಶಕ್ತಿ, ಬಲ, ಐಶ್ವರ್ಯ, ವೀರ್ಯ, ತೇಜಸ್ಸು– ಎಂಬಿವೇ ಭಗವಂತನ ಆರು ಗುಣಗಳು. ಆ ಗುಣಗಳಿಗೂ ಭಗವಂತನೆಂದೇ ಹೆಸರು–' ಎಂದು ಇಲ್ಲಿ ಹೇಳಿರುವದರಿಂದ ಭಗವಂತನ ಗುಣಗಳಿಗೂ ಭಗವಂತನಿಗೂ ಯಾವ ಭೇದವೂ ಇಲ್ಲ ಎಂದು ಹೇಳಿದಂತಾಯಿತು. ಗೀತಾಭಾಷ್ಯದಲ್ಲಿಯೂ ಇದರ ಸೂಚನೆಯಿದೆ. ಅದರಲ್ಲಿರುವ '**ಸ ಚ ಭಗವಾನ್ ಜ್ಞಾನೈಶ್ವರ್ಯಶಕ್ತಿಬಲ ವೀರ್ಯತೇಜೋಭಿಃ ಸದಾ ಸಂಪನ್ನಃ**' ಎಂಬ ವಾಕ್ಯದ ಅರ್ಥವನ್ನು ಮನಸ್ಸಿನಲ್ಲಿ ಹೊರಳಾಡಿಸಿದರೆ ಬೆಂಕಿಗೆ ಬಿಸಿ, ಬೆಳಕು– ಮುಂತಾದವು ಗಳಿರುವಂತೆ ಗುಣಗಳು ಭಗವಂತನಿಗೆ ಸ್ವಭಾವವಾಗಿಯೇ ಇರುತ್ತವೆಯೆಂದೂ ಅಲ್ಲಿ ಗುಣಗುಣಿಗಳಿಗೆ ಭೇದವೇನೂ ಇಲ್ಲವೆಂದೂ 'ಸದಾ ಸಂಪನ್ನಃ' (ಈ ಗುಣಗಳಿಂದ ನಿತ್ಯವೂ ಕೂಡಿದಾತನು) ಎಂಬ ವಿಶೇಷಣದಿಂದ ವ್ಯಕ್ತವಾಗುತ್ತದೆ. ವೇದದಲ್ಲಿ 'ಭಗವಃ', 'ಭಗ' ಎಂಬ ಹೆಸರುಗಳನ್ನು ಐಕ್ಯಭಾವನೆಯಿಂದ ಪ್ರಯೋಗಿಸಿ ದೇವತೆಗಳನ್ನು ಸ್ತೋತ್ರಮಾಡಿರುವದು ಕಂಡುಬರುತ್ತದೆ. '**श्रेष्ठो देवानां भगवो भगासि ।......भगो ह दाता भग इत् प्रदाता। भगो देवीः फल्गुनीराविवेश।**' (ತೈ.ಬ್ರಾ. ೩–೧–೧–೮) ಎಂದು ಯಜುರ್ವೇದಬ್ರಾಹ್ಮಣದಲ್ಲಿದೆ. **ಋಗ್ವೇದದಲ್ಲಿಯೂ** (ಮಂ.೭, ಅ.೩, ಸೂ. ೪೨, ಮಂತ್ರ ೧ರಿಂದ ೫) **ತೈತ್ತಿರೀಯಬ್ರಾಹ್ಮಣದಲ್ಲಿಯೂ** ಇರುವ ಪ್ರಾತಃಸೂಕ್ತದಲ್ಲಿಯೂ ಇದೇ ಭಗದೇವತೆಯ ಉಲ್ಲೇಖವಿದೆ, ಅಲ್ಲಿ 'भग एव भगवाँ अस्तु।'ಎಂಬ ವಾಕ್ಯವಿದೆ. ಆದ್ದರಿಂದ ಭಗ, ಭಗವಾನ್– ಎಂಬ ಶಬ್ದಗಳನ್ನು ಪರ್ಯಾಯಗಳೆಂದು ಗಣಿಸುವದು ವೇದಾನುಸಾರಿಯೇ ಆಗಿರುತ್ತದೆ.

## ಗುಣಗಳ ಸ್ವರೂಪ

೧೦. ಭಗವಂತನ ಷಡ್ಗುಣಗಳ ಸ್ವರೂಪದ ತತ್ತ್ವವನ್ನು ವ್ಯಾಖ್ಯಾನಕಾರರು ಬಗೆಬಗೆಯಾಗಿ ವಿವರಿಸಿರುತ್ತಾರೆ. ಉದಾಹರಣೆಗೆ **ಅಪ್ಪಯ್ಯದೀಕ್ಷಿತರ ಕಲ್ಪತರುವಿನಲ್ಲಿ** ಹೀಗಿದೆ: (೧). ಚೇತನಾಚೇತನಾತ್ಮಕವಾದ ಸಕಲವಸ್ತುಗಳನ್ನೂ ಸಾಮಾನ್ಯವಾಗಿಯೂ ವಿಶೇಷವಾಗಿಯೂ ವಿಷಯೀಕರಿಸಿ ಅರಿಯುವ ಗುಣವು **ಜ್ಞಾನವು.** (೨) ಜಗತ್ತಿಗೆ ಪ್ರಕೃತಿಯಾಗಿರುವಿಕೆಯೇ **ಶಕ್ತಿ.** (೩) ಸೃಷ್ಟಿಯನ್ನು ಮಾಡುವದಕ್ಕೆ ಆಯಾಸವಿಲ್ಲದಿರುವದೂ ಸೃಷ್ಟವಾದ ಜಗತ್ತೆಲ್ಲವನ್ನೂ ಪೋಷಿಸುವದೂ **ಬಲವು.** (೪) ತನ್ನಿಚ್ಛೆಗೆ ತಡೆಯಿಲ್ಲದಿರುವದೇ **ಐಶ್ವರ್ಯವು.** (೫) ಜಗತ್ತಿಗೆ ಪ್ರಕೃತಿಯಾಗಿದ್ದರೂ ವಿಕಾರವಿಲ್ಲದಿರುವದು **ವೀರ್ಯವು.** (೬) ಸೃಷ್ಟಿಗೆ ಸಹಕಾರಿಯನ್ನು ಬಯಸದಿರುವದೂ ಮತ್ತೊಬ್ಬರನ್ನು ಸೋಲಿಸುವ ಸಾಮರ್ಥ್ಯವೂ **ತೇಜಸ್ಸು.**

**ಸೂತ್ರಭಾಷ್ಯದ ಆನಂದಗಿರೀಯಟೀಕೆಯಲ್ಲಿ** ಇಂತಿದೆ: ಜ್ಞಾನ, ಐಶ್ವರ್ಯ- ಇವುಗಳ ಒಳಗಿರುವ ಸಾಮರ್ಥ್ಯವು **ಶಕ್ತಿ;** ಬಲವೆಂದರೆ ಶರೀರಸಾಮರ್ಥ್ಯ, **ವೀರ್ಯ**ವೆಂದರೆ ಶೌರ್ಯವು, **ತೇಜಸ್ಸು** ಎಂದರೆ ಪ್ರಗಲ್ಭತೆ.

**ಗೀತಾಭಾಷ್ಯದ ಆನಂದಗಿರೀಯಟೀಕೆಯಲ್ಲಿ** ಹೀಗಿದೆ. (೧) **ಜ್ಞಾನ**ವೆಂದರೆ ವಸ್ತುತತ್ತ್ವವನ್ನು ಗೊತ್ತುಪಡಿಸುವ ಅರಿವು (೨) **ಐಶ್ವರ್ಯ**ವೆಂದರೆ ಈಶ್ವರತ್ವ, ಸ್ವಾತಂತ್ರ್ಯ; (೩) **ಶಕ್ತಿ** ಎಂದರೆ ಆ ವಸ್ತುವನ್ನುಂಟುಮಾಡುವ ಸಾಮರ್ಥ್ಯವು. (೪) **ಬಲ**ವೆಂದರೆ ಸಹಾಯಸಂಪತ್ತಿ (೫) **ವೀರ್ಯ**ವೆಂದರೆ ಪರಾಕ್ರಮವುಳ್ಳವನಾಗಿರುವದು. (೬) **ತೇಜಸ್ಸು**- ಎಂದರೆ ಪ್ರಗಲ್ಭನಾಗಿ ಮತ್ತೊಬ್ಬನು ಮೇಲೆ ಬೀಳದಂತೆ ಇರುವದು.

ಈ ಗುಣಗಳ ಸ್ವರೂಪವು ಏನೇ ಆಗಿರಲಿ, ಇವುಗಳೆಲ್ಲವೂ ಭಗವಂತನ ಸ್ವರೂಪವೇ ಆಗಿರುತ್ತವೆ ಎಂಬುದು ಇಲ್ಲಿ ತಿಳಿಯಬೇಕಾದದ್ದು. **ಗೀತಾಶಂಕರಭಾಷ್ಯ**ದಲ್ಲಿರುವ ಕೆಲವು ವಿವರಗಳನ್ನು ಇಲ್ಲಿ ಸಂಗ್ರಹಿಸಿಕೊಡುವೆವು. (1) "ನೀನು (ಅರ್ಜುನನು) ಆ ಜನ್ಮಗಳೆಲ್ಲವನ್ನೂ ಅರಿಯೆ; ಏಕೆಂದರೆ ಧರ್ಮ, ಅಧರ್ಮ" – ಮುಂತಾದವುಗಳು ನಿನ್ನ ಜ್ಞಾನಶಕ್ತಿಗೆ ಅಡ್ಡಿಯಾಗಿವೆ. ನಾನಾದರೋ 'ನಿತ್ಯಶುದ್ಧಬುದ್ಧಮುಕ್ತಸ್ವಭಾವದವನಾಗಿರುವದರಿಂದ ನನ್ನ **ಜ್ಞಾನಶಕ್ತಿಗೆ ಆವರಣವಿಲ್ಲ**'. (೪-೫)(2) **ಜ್ಞಾನಬಲವೀರ್ಯಾದಿಧರ್ಮಗಳಿಂದ ಕೂಡಿದ** ನನ್ನನ್ನು ಒಬ್ಬರಿಗೊಬ್ಬರು ಹೇಳುತ್ತಾ ಭಕ್ತರು ಪರಿತುಷ್ಟರಾಗುವರು. (೧೦-೯) (3) ನಿರತಿಶಯವಾದ ಜ್ಞಾನೈಶ್ವರ್ಯಬಲಾದಿಶಕ್ತಿಗಳುಳ್ಳ ನಿನ್ನನ್ನು ನೀನೊಬ್ಬನೇ ಅರಿಯಬಲ್ಲೆ (೧೦-೧೫). **(4) ಸರ್ವಯೋಗೈಶ್ವರ್ಯ ಸರ್ವಜ್ಞಾನಶಕ್ತಿಗಳುಳ್ಳ** ಸತ್ತ್ವೋಪಾಧಿಯಾಗಿರುವ ವಿಶ್ವರೂಪನಾದ ನಿನ್ನ ಉಪಾಸನೆಯನ್ನು ಅಲ್ಲಲ್ಲಿ ಹೇಳಿದೀಯೆ (೧೨ - ೧)

## ಜಗತ್ತು ಪರಮಾರ್ಥವೇ?

೧೧. **ಶಂಕರಾಚಾರ್ಯರು ಅನುವಾದಮಾಡಿರುವಂತೆ ಭಾಗವತಮತದಲ್ಲಿ** 'ವಾಸುದೇವಭಗವಂತನೊಬ್ಬನೇ ಪರಮಾರ್ಥತತ್ತ್ವವು ಎಂದು ಬರೆದಿದೆಯಷ್ಟೆ? ಇದರಿಂದಲೇ ಜಗತ್ತು ಅಪರಮಾರ್ಥ– ಎಂದು ಹೇಳಿದಂತೆ ಆಗುತ್ತದೆ. ವಿಷ್ಣುಪುರಾಣದಿಂದ ಆರಿಸಿ ನಾವು ಉದಾಹರಿಸಿರುವ ಶ್ಲೋಕಗಳಲ್ಲಿ ಈ ವಿಷಯಕ್ಕೆ ಸ್ಪಷ್ಟವಾದ ನಿರ್ಣಯವಾಕ್ಯವು ಕಂಡುಬರುವದಿಲ್ಲ. ನಾವು ಉದಾಹರಿಸಿರುವ (ಆರನೆಯ ಅಂಶದ ಐದನೆಯ) ಅಧ್ಯಾಯದ ಕೊನೆಯ ಶ್ಲೋಕವು ಹೀಗಿದೆ :

**ಸಂಜ್ಞಾಯತೇ ಯೇನ ತದಸ್ತದೋಷಂ**
**ಶುದ್ಧಂಪರಂ ನಿರ್ಮಲಮೇಕರೂಪಮ್**
**ಸಂದೃಶ್ಯತೇ ವಾಪ್ಯವಗಮ್ಯತೇ ವಾ**
**ತಜ್ಞಾನಮಜ್ಞಾನಮತೋಽನ್ಯದುಕ್ತಮ್** ||೮೭||

"ಯಾವ ದೋಷವೂ ಇಲ್ಲದೆ ಶುದ್ಧವಾಗಿ ಉತ್ಕೃಷ್ಟವಾಗಿ ನಿರ್ಮಲವಾಗಿ ಏಕರೂಪವಾಗಿರುವ ಆ ತತ್ತ್ವವು ಏತರಿಂದ ತಿಳಿಯಬರುತ್ತದೆಯೋ ಅಥವಾ ನಿಶ್ಚಿತವಾಗುತ್ತದೆಯೋ ಅದೇ ಜ್ಞಾನವು. ಅದಕ್ಕಿಂತ ಬೇರೆಯಾದದ್ದು ಅಜ್ಞಾನವೆನಿಸುವದು." ಎಂಬುದು ಶ್ಲೋಕಾರ್ಥ. ಇಲ್ಲಿ ಪರಮಾತ್ಮನನ್ನು ಬಿಟ್ಟು ಏನನ್ನು ಅರಿತರೂ ಅದು ಅಜ್ಞಾನವೇ- ಎಂದಿರುವದರಿಂದ ಪರಮಾತ್ಮನಿಗಿಂತ ಬೇರೆಯಾಗಿ ತೋರುವದೆಲ್ಲವೂ ಅಪರಮಾರ್ಥವೇ ಎಂಬ ತೀರ್ಮಾನವನ್ನು ಈ ಶ್ಲೋಕಾಭಿಪ್ರಾಯವೆಂತ ಹೇಗೋ ತೆಗೆಯಬಹುದಾದರೂ ಹಾಗೆಂತ ಶ್ಲೋಕಾಕ್ಷರದಿಂದ ಸ್ಪಷ್ಟವಾಗುವದಿಲ್ಲ. ಇದೇ ಪುರಾಣದಿಂದ ಬೇರೆಯ ಕೆಲವು ಶ್ಲೋಕಗಳನ್ನು ಇಲ್ಲಿ ಕೊಡುವೆವು:

**ಏವಮೇಕಮಿದಂ ವಿದ್ಧಿ ನ ಭೇದಿ ಸಕಲಂ ಜಗತ್ ।**
**ವಾಸುದೇವಾಭಿಧೇಯಸ್ಯ ಸ್ವರೂಪಂ ಪರಮಾತ್ಮನಃ ॥**

ವಿ. ಪು. ೨-೧೫-೩೫

"ಹೀಗೆ ಈ ಜಗತ್ತೆಲ್ಲವೂ ಒಂದೇ, ವಾಸುದೇವನೆಂಬ ಹೆಸರಿನ ಪರಮಾತ್ಮನ ಸ್ವರೂಪವಾಗಿರುತ್ತದೆ, ಭಿನ್ನವಲ್ಲ."

**ಸಿತನೀಲಾದಿಭೇದೇನ ಯಥೈಕಂ ದೃಶ್ಯತೇ ನಭಃ ।**
**ಭ್ರಾಂತಿದೃಷ್ಟಿಭಿರಾತ್ಮಾಪಿ ತಥೈಕಃ ಸನ್ ಪೃಥಕ್ ಪೃಥಕ್ ॥**

ವಿ. ಪು. ೨-೧೬-೨೨

"ಒಂದೇ ಆಕಾಶವು ಭ್ರಾಂತಿದೃಷ್ಟಿಯವರಿಗೆ ಬೆಳ್ಳಗೆ, ಕಪ್ಪಗೆ- ಎಂದು ಬಗೆಬಗೆಯ ರೂಪದಿಂದ ಹೇಗೆ ಕಾಣುವದೋ ಹಾಗೆಯೇ ಒಬ್ಬ ಆತ್ಮನೇ ಬೇರೆಬೇರೆಯಾಗಿ ತೋರುತ್ತಿರುವನು."

**ಏಕಃ ಸಮಸ್ತಂ ಯದಿಹಾಸ್ತಿ ಕಿಞ್ಚಿತ್**
**ತದಚ್ಯುತೋ ನಾಸ್ತಿ ಪರಂ ತತೋऽನ್ಯತ್ ।**
**ಸೋऽಹಂ ಸ ಚ ತ್ವಂ ಸ ಚ ಸರ್ವಮೇತ-**
**ದಾತ್ಮಸ್ವರೂಪಂ ತ್ಯಜ ಭೇದಮೋಹಮ್ ॥**

ವಿ. ಪು. ೨-೧೬-೨೩

"ಇಲ್ಲಿರುವದೇನಿದ್ದರೂ ಅದೆಲ್ಲವೂ ಒಂದೇ, ಅದೇ ಅಚ್ಯುತಪರಮಾತ್ಮನು. ಅದಕ್ಕಿಂತ ಬೇರೆಯಾಗಿ ಇನ್ನೇನೂ ಇರುವದೇ ಇಲ್ಲ. ನಾನೂ ಆತನೇ, ನೀನೂ ಆತನೇ, ಇದೆಲ್ಲವೂ ಆತನೇ, ಆತ್ಮಸ್ವರೂಪವೇ; ಭೇದಮೋಹವನ್ನು ಬಿಟ್ಟುಬಿಡು."

ಋಭುವು ನಿದಾಘನಿಗೆ ಉಪದೇಶಮಾಡಿದ ವಾಕ್ಯಗಳಿವು. ಇಲ್ಲಿ 'ಎಲ್ಲಾ ಜಗತ್ತೂ ವಾಸುದೇವಸ್ವರೂಪವೇ ಆಗಿರುತ್ತದೆ; ಅವನೇ ನಮ್ಮ ಆತ್ಮನು, ಆತನಿಗಿಂತ ವ್ಯತಿರಿಕ್ತವಾಗಿ ಏನೊಂದೂ ಇರುವದೇ ಇಲ್ಲ' ಎಂದು ಸುಸ್ಪಷ್ಟವಾಗಿ ಹೇಳಿರುತ್ತದೆ.

ಇದೇ ಪಾಂಚರಾತ್ರಸಂಪ್ರದಾಯದವರ ಅಭಿಪ್ರಾಯವೆಂಬುದಕ್ಕೆ ಕಾಶ್ಮೀರ ಸದಾನಂದಯತಿವಿರಚಿತವಾದ 'ಅದ್ವೈತಬ್ರಹ್ಮಸಿದ್ಧಿ' ಎಂಬ ಗ್ರಂಥದಿಂದ ಒಂದು ಉದಾಹರಣೆಯನ್ನು ಇಲ್ಲಿ ಕೊಡುವೆವು.

"ನಾರದಪಾಞ್ಚರಾತ್ರೇ ಪ್ರಥಮಪಟಲೇ ಜೀವಬ್ರಹ್ಮೈಕ್ಯ
ನಿರ್ಣಯೇ ಜಗನ್ಮಿಥ್ಯಾತ್ವಪ್ರತಿಪಾದಕಃ ಷಣ್ಣವತಿತಮಃ
ಶ್ಲೋಕ ಉದಾಹೃತಃ–
'ಅಯಂ ಪ್ರಪಞ್ಚೋ ಮಿಥ್ಯೈವ ಸತ್ಯಂ ಬ್ರಹ್ಮಾಹಮದ್ವಯಮ್ ।
ತತ್ರ ಪ್ರಮಾಣಂ ವೇದಾನ್ತಾ ಗುರುಃ ಸ್ವಾನುಭವಸ್ತಥಾ ॥' ಇತಿ "

ಈ ಶ್ಲೋಕವು ಪೂರ್ಣವಾಗಿಯೂ ಶಾಂಕರವೇದಾಂತಸಿದ್ಧಾಂತವನ್ನೇ ಅನುಸರಿಸಿ 'ಬ್ರಹ್ಮಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ' ಎಂಬ ಅಭಿಪ್ರಾಯವನ್ನೇ ಪಾಂಚರಾತ್ರಸಂಪ್ರದಾಯದವರು ಒಪ್ಪಿದ್ದರೆಂದು ಸ್ಫುಟಗೊಳಿಸಿದೆ. 'ಪಾಂಚರಾತ್ರಸಿದ್ಧಾಂತವೇ ಭಾಗವತರದು' ಎಂಬುದನ್ನು ಮುಂದೆ ಸ್ಫುಟಗೊಳಿಸಲಾಗುವದು. ಸದಾನಂದಯತಿಗಳು ಇತ್ತೀಚಿನವರಾದ್ದರಿಂದಲೂ ಅವರು ಉದಾಹರಿಸಿರುವ ಶ್ಲೋಕವು ಯಾವ ಮೂಲಗ್ರಂಥದಿಂದ ತೆಗೆದದ್ದು– ಎಂಬುದು ನಿಶ್ಚಿತವಾಗಿಲ್ಲದಿರುವದರಿಂದಲೂ ಇಷ್ಟರಿಂದಲೇ ಜಗನ್ಮಿಥ್ಯಾತ್ವದ ವಿಷಯಕ್ಕೆ ಭಾಗವತಮತವು ಏನನ್ನುತ್ತದೆ– ಎಂಬ ಬಗೆಗೆ ಏನನ್ನೂ ನಿಶ್ಚಿತವಾಗಿ ಧೈರ್ಯದಿಂದ ಹೇಳುವದಕ್ಕೆ ಬರುವಂತಿಲ್ಲ. ಈ ವಿಷಯವನ್ನು ಸದ್ಯಕ್ಕೆ ಇಲ್ಲಿಗೆ ನಿಲ್ಲಿಸಿ ಮುಂದಿನ ಪ್ರಮೇಯದ ವಿಚಾರಕ್ಕೆ ಹೊರಡೋಣ.

## ಚತುರ್ವ್ಯೂಹರೂಪವೂ ಪರಮಾರ್ಥತತ್ತ್ವವೂ

೧೨. ನಾವು ವಿಮರ್ಶೆಗೆಂದು ಭಾಷ್ಯದಿಂದ ಉದಾಹರಿಸಿಕೊಂಡಿರುವ ಭಾಗವತಮತದ ಅನುವಾದದಲ್ಲಿ ವಾಸುದೇವನ ವ್ಯೂಹಚತುಷ್ಟಯದ ಪರಾಮರ್ಶವು ಇದೆಯಷ್ಟೆ? ಅದಕ್ಕೆ ಎಲ್ಲೆಲ್ಲಿ ಆಧಾರವು ಸಿಕ್ಕುತ್ತದೆ ಎಂಬುದನ್ನು ಈಗ ನೋಡೋಣ.:

ಭಾಷ್ಯಕಾರರು 'ವಾಸುದೇವಭಗವಂತನು ತನ್ನನ್ನೇ ನಾಲ್ಕು ಪ್ರಕಾರವಾಗಿ ವಿಂಗಡಿಸಿಕೊಂಡು ವಾಸುದೇವವ್ಯೂಹ, ಸಂಕರ್ಷಣವ್ಯೂಹ, ಪ್ರದ್ಯುಮ್ನವ್ಯೂಹ, ಅನಿರುದ್ಧವ್ಯೂಹ– ಎಂದು ನಾಲ್ಕು ವ್ಯೂಹಗಳಾಗಿ ತೋರಿಕೊಳ್ಳುತ್ತಿದ್ದಾನೆ' ಎಂದು

ಹೇಳಿರುತ್ತಾರಷ್ಟೆ? ಸರ್ವರೂ ಪ್ರಮಾಣವೆಂದು ಒಪ್ಪಿರುವ ಮಹಾಭಾರತದಲ್ಲಿ (ಮೋ. ಧ. ೩೩೪ನೆ[1] ಯ ಅಧ್ಯಾಯದಿಂದ ಪ್ರಾರಂಭವಾಗಿರುವ) **ನಾರಾಯಣೀಯ ಭಾಗದಲ್ಲಿ** ಇದಕ್ಕೆ ಆಧಾರವು ಕಂಡುಬರುತ್ತದೆ. ಅಲ್ಲಿ ಯುಧಿಷ್ಠಿರನು ಭೀಷ್ಮರನ್ನು ಕುರಿತು 'ನಾಲ್ಕು ಆಶ್ರಮದವರೂ ಸಿದ್ಧಿಗಾಗಿ ಯಾವ ದೇವತೆಯನ್ನು ಪೂಜಿಸಬೇಕು ? ಸ್ವರ್ಗಕ್ಕೆ ಹೋದವನು ಅಲ್ಲಿಂದ ಹಿಂತಿರುಗದೆ ಇರುವದಕ್ಕೆ ಏನುಮಾಡಬೇಕು ? ಪರಮನಿಃಶ್ರೇಯಸವು ಏತರಿಂದ ದೊರಕುವದು ? ಮುಕ್ತನು ಯಾವ ಗತಿಯನ್ನು ಹೊಂದುವನು ? ಮೋಕ್ಷವು ಯಾವ ಸ್ವರೂಪದ್ದು ? ದೇವತೆಗಳಿಗೆಲ್ಲ ದೇವನು ಯಾರು? ಪಿತೃಗಳಿಗೆಲ್ಲ ಪಿತೃ ಯಾರು? ಅವನಿಗಿಂತಲೂ ಶ್ರೇಷ್ಠನು ಯಾರು ? ಅದನ್ನು ನನಗೆ ಹೇಳಯ್ಯ, ಪಿತಾಮಹನೆ' ಎಂದು ಕೇಳಿರುತ್ತಾನೆ. ಅದಕ್ಕೆ ಉತ್ತರವಾಗಿ ಭೀಷ್ಮರು ಒಂದು ಆಖ್ಯಾನವನ್ನು ಹೇಳಿರುವರು:

**ನಾರಾಯಣೋ ಹಿ ವಿಶ್ವಾತ್ಮಾ ಚತುರ್ಮೂರ್ತಿಃ ಸನಾತನಃ**
**ಧರ್ಮಾತ್ಮಜಃ ಸಂಬಭೂವ ಪಿತೈವಂ ಮೇಽಭ್ಯಭಾಷತ** ||೮||
**ಕೃತೇ ಯುಗೇ ಮಹಾರಾಜ ಪುರಾ ಸ್ವಾಯಂಭುವೇಽನ್ತರೇ ।**
**ನರೋ ನಾರಾಯಣಶ್ಚೈವ ಹರಿಃ ಕೃಷ್ಣಃ ಸ್ವಯಂಭುವಃ[2]** ||೯||

"ಮಹಾರಾಜನೆ, ಹಿಂದೆ ಕೃತಯುಗದಲ್ಲಿ ಸ್ವಾಯಂಭುವಮನ್ವಂತರದಲ್ಲಿ ವಿಶ್ವಾತ್ಮನೂ ಚತುರ್ಮೂರ್ತಿಯೂ ಸನಾತನನೂ ಆಗಿರುವ ನಾರಾಯಣನು 'ನರ, ನಾರಾಯಣ, ಹರಿ, ಕೃಷ್ಣ'– ಎಂದು ಸ್ವಯಂಭುಗಳಾದ ನಾಲ್ಕು ರೂಪಗಳಿಂದ ಹುಟ್ಟಿದನು. ಹೀಗೆಂದು ನನಗೆ ನಮ್ಮ ತಂದೆ ಹೇಳಿದ್ದರು."

ಈ ವಾಕ್ಯದಲ್ಲಿ 'ಚತುರ್ಮೂರ್ತಿ' ಎಂಬ ವಿಶೇಷಣವು ಇರುವ ಕಡೆಯಲ್ಲಿಯೇ ಅದನ್ನು ಅನ್ವಯಿಸಿದರೆ ಪರಮಾತ್ಮನಿಗೆ ಯಾವಾಗಲೂ ನಾಲ್ಕು ಮೂರ್ತಿಗಳಿರುವವೆಂದೂ ಅರ್ಥವನ್ನು ಮಾಡುವದಕ್ಕೆ ಬರುತ್ತದೆ. 'ಚತುರ್ಮೂರ್ತಿಶ್ಚತುರ್ಬಾಹುಶ್ಚತುರ್ವ್ಯೂಹಃ' (ವಿ.ಸ.೯೫) ಎಂಬ ವಿಷ್ಣುಸಹಸ್ರನಾಮಶ್ಲೋಕದಲ್ಲಿ ಚತುರ್ಮೂರ್ತಿ, ಚತುರ್ವ್ಯೂಹ– ಎಂದು ಎರಡು ಬೇರೆಬೇರೆಯ ನಾಮಗಳನ್ನು ಕೊಟ್ಟೂ ಇರುತ್ತದೆ. ಅಲ್ಲಿ ನೀಲಕಂಠೀಯವ್ಯಾಖ್ಯಾನವಿಲ್ಲ. ಇಲ್ಲಿ **"ಚತಸ್ರೋ ಮೂರ್ತಯೋ ನರಾದ್ಯಾಃ 'ಸ್ವಯಂಭುವ'ಇತ್ಯನೇನ ವಾಸುದೇವಸ್ಯೈತೇ ಚತ್ವಾರೋ ವ್ಯೂಹಾಃ ಅಜನ್ಮಾನಃ । ತೇನ ತು ಪಾಞ್ಚರಾತ್ರಾಣಾಮಿವ ವಾಸುದೇವಾತ್ ಪರಮಕಾರಣಾತ್ ಸಙ್ಕರ್ಷಣಾಖ್ಯೋ ಜೀವ ಉತ್ಪದ್ಯತೇ,ತತಃ ಪ್ರದ್ಯುಮ್ನಾಖ್ಯಂ ಮನೋ ಜಾಯತೇ। ತತೋಽನಿರುದ್ಧಾಖ್ಯೋ ಅಹಙ್ಕಾರ ಉತ್ಪದ್ಯತೇ ಇತಿ ಮತಂ ನಿರಸ್ತಮ್॥"** ಇವು ನಾಲ್ಕೂ ಪರಮಾತ್ಮನ

1. ಕುಂಭಕೋಣದ ಮುದ್ರಣದಲ್ಲಿ ಇದು ೩೪೭ನೆಯ ಅಧ್ಯಾಯ
2. ಕೃಷ್ಣಸ್ತಥೈವ ಚ ಎಂದು ಕುಂಭಕೋಣದ ಪಾಠ

ವ್ಯೂಹಗಳೇ, ಇವು ಜನ್ಮರಹಿತವಾಗಿವೆ; ಇವರು ಸ್ವಯಂಭೂಗಳಾಗಿರುತ್ತಾರೆ ಎಂದಿರುವದರಿಂದ ಪಾಂಚರಾತ್ರರು ಹೇಳುವಂತೆ ಒಬ್ಬರಿಂದೊಬ್ಬರು ಹುಟ್ಟುತ್ತಾರೆ ಎಂದು–ಒಪ್ಪುವದು ಸರಿಯಲ್ಲ." ಎಂದು ನೀಲಕಂಠರು ಬರೆದಿರುತ್ತಾರೆ ಈ ವಿಷಯವನ್ನು ಮುಂದೆ ಭಾಷ್ಯಕಾರರ ಮತವನ್ನು ವಿಮರ್ಶೆಗೆ ತೆಗೆದುಕೊಂಡಾಗ ಮತ್ತೆ ಆಲೋಚಿಸಬಹುದಾಗಿರುತ್ತದೆ.

ಇರಲಿ, ಭೀಷ್ಮರು ಹೇಳಿದ ಆಖ್ಯಾನವನ್ನು ಮುಂದುವರಿಸೋಣ. ಬದರಿಕಾಶ್ರಮದಲ್ಲಿ ನರನಾರಾಯಣರು ತಪಸ್ಸುಮಾಡುತ್ತಿರುವಲ್ಲಿ ಅಲ್ಲಿಗೆ ನಾರದರು ಬಂದರು. ಆಗ ಅವರಿಬ್ಬರೂ ಆಹ್ನಿಕವನ್ನು ಮಾಡುವ ವೇಳೆಯಾಗಿದ್ದಿತು. ನಾರದರನ್ನು ಕಂಡು ಅವರಿಬ್ಬರೂ ಶಾಸ್ತ್ರೋಕ್ತವಿಧಿಯಿಂದ ಅವರನ್ನು ಪೂಜಿಸಿದ ಬಳಿಕ ನಾರದರು ನಾರಾಯಣನನ್ನು ವಿನಯದಿಂದ ಹೀಗೆಂದು ಕೇಳಿದರು: "ಭಗವಂತನೆ, ನೀನೇ ಸರ್ವೋತ್ತಮನಾದ ಭಗವಂತನೆಂದು ಶ್ರುತಿಸ್ಮೃತಿಪುರಾಣಗಳು ಸಾರುತ್ತಿರುವವು. ನಿನ್ನನ್ನೇ ಎಲ್ಲ ಆಶ್ರಮದವರೂ ಪೂಜಿಸುತ್ತಿರುವರು. ಹೀಗಿರುವಲ್ಲಿ ನೀನು ಯಾವ ದೇವನನ್ನು ಅಥವಾ ಪಿತೃವನ್ನು ಕುರಿತು ಹೀಗೆ ಪೂಜಿಸುತ್ತಿರುವೆ?"

ಆಗ ನಾರಾಯಣಭಗವಂತನಿಂತೆಂದನು :

**ಅವಾಚ್ಯಮೇತದ್ ವಕ್ತವ್ಯಮಾತ್ಮಗುಹ್ಯಂ ಸನಾತನಮ್ ।**
**ತವ ಭಕ್ತಿಮತೋ ಬ್ರಹ್ಮನ್ ವಕ್ಷ್ಯಾಮಿ ತು ಯಥಾತಥಮ್** ೩೩೪–೨೮
**ಯತ್ತತ್ ಸೂಕ್ಷ್ಮಮವಿಜ್ಞೇಯಮವ್ಯಕ್ತಮಚಲಂ ಧ್ರುವಮ್ ।**
**ಇನ್ದ್ರಿಯೈರಿನ್ದ್ರಿಯಾರ್ಥೈಶ್ಚ ಸರ್ವಭೂತೈಶ್ಚ ವರ್ಜಿತಮ್** ॥೨೯॥
**ಸ ಹ್ಯನ್ತರಾತ್ಮಾ ಭೂತಾನಾಂ ಕ್ಷೇತ್ರಜ್ಞಶ್ಚೇತಿ ಕಥ್ಯತೇ ।**
**ತ್ರಿಗುಣವ್ಯತಿರಿಕ್ತೋ ವೈ ಪುರುಷಶ್ಚೇತಿ ಕಲ್ಪಿತಃ** ॥೩೦॥
**ತಸ್ಮಾದವ್ಯಕ್ತಮುತ್ಪನ್ನಂ ತ್ರಿಗುಣಂ ದ್ವಿಜಸತ್ತಮ ।**
**ಅವ್ಯಕ್ತಾ ವ್ಯಕ್ತಭಾವಸ್ಥಾ ಯಾ ಸಾ ಪ್ರಕೃತಿರವ್ಯಯಾ** ॥೩೧॥
**ತಾಂ ಯೋನಿಮಾವಯೋರ್ವಿದ್ಧಿ ಯೋಽಸೌ ಸದಸದಾತ್ಮಕಃ ।**
**ಆವಾಭ್ಯಾಂ ಪೂಜ್ಯತೇಽಸೌ ಹಿ ದೈವೇ ಪಿತ್ರ್ಯೇ ಚ ಕಲ್ಪ್ಯತೇ** ॥೩೨॥
**ನಾಸ್ತಿ ತಸ್ಮಾತ್ ಪರೋಽನ್ಯೋ ಹಿ ಪಿತಾ ದೇವೋಽಥವಾ ದ್ವಿಜ ।**
**ಆತ್ಮಾ ಹಿ ನಃ ಸ ವಿಜ್ಞೇಯಸ್ತತಸ್ತಂ ಪೂಜಯಾವಹೇ** ॥೩೩॥

"ಎಲೈ ಬ್ರಾಹ್ಮಣನೆ, ಇದು ಹೇಳತಕ್ಕದ್ದಲ್ಲ, ಇದು ಸನಾತನವಾದ ಪರಮಾತ್ಮತತ್ತ್ವವು. ನೀನು ಭಕ್ತಿಯುಕ್ತನಾಗಿರುವದರಿಂದ ನಿನಗೆ ಹೇಳುವೆನು. ಯಾವದು ಸೂಕ್ಷ್ಮವಾಗಿರುವದೋ, ಯಾವದನ್ನು ವಿಷಯೀಕರಿಸಿ ತಿಳಿಯಲಾಗುವದಿಲ್ಲವೋ, ಯಾವದು ನಿಶ್ಚಲವಾಗಿ

ಕೂಟಸ್ಥನಿತ್ಯವಾಗಿ ಇಂದ್ರಿಯಗಳಿಂದಲೂ ಇಂದ್ರಿಯಾರ್ಥಗಳಿಂದಲೂ ಸರ್ವಭೂತಗಳಿಂದಲೂ ರಹಿತವಾಗಿರುವದೋ, ಅದೇ ಆತ್ಮತತ್ತ್ವವು. ಆತನೇ ಪ್ರಾಣಿಗಳಿಗೆ ಅಂತರಾತ್ಮನು, ಅವನೇ ಕ್ಷೇತ್ರಜ್ಞನೆನಿಸುವನು. ಮೂರುಗುಣಗಳ ಪ್ರಕೃತಿಗಿಂತ ವ್ಯತಿರಿಕ್ತನಾಗಿರುವ ಕ್ಷೇತ್ರಜ್ಞನೆಂದೂ ಅವನನ್ನು ಕರೆಯುವರು. ಆತನಿಂದಲೇ ಮೂರು ಗುಣಗಳ ಅವ್ಯಕ್ತವು ಉತ್ಪನ್ನವಾಗಿರುವದು. ಎಲೈ ದ್ವಿಜಶ್ರೇಷ್ಠನೆ, ಯಾವದು ಅವ್ಯಕ್ತವಾಗಿ ವ್ಯಕ್ತವಾಗಿರುವ ಭಾವಗಳೊಳಗೆ ಇದ್ದುಕೊಂಡಿರುವದೋ ಅದೇ ನಮ್ಮಿಬ್ಬರ ಮೂಲಕಾರಣವು. ಆತನೇ ಸದಸದ್ರೂಪನಾಗಿರುತ್ತಾನೆ. ದೈವಕರ್ಮದಲ್ಲಿಯೂ ಪಿತ್ರ್ಯಕರ್ಮದಲ್ಲಿಯೂ ಆತನನ್ನೇ ದೇವತೆಯಾಗಿ ಕಲ್ಪಿಸಿಕೊಂಡು ಪೂಜಿಸುತ್ತಿರುವೆವು. ಆತನಿಗಿಂತ ಹೆಚ್ಚಿನ ದೇವತೆಯಾಗಲಿ ಪಿತೃವಾಗಲಿ ಮತ್ತೆ ಯಾವನೂ ಇರುವದಿಲ್ಲ. ಆತನು ನಮ್ಮ ಆತ್ಮನೆಂದೇ ತಿಳಿಯತಕ್ಕದ್ದು. ಆದ್ದರಿಂದ ಆತನನ್ನೇ ನಾವಿಬ್ಬರೂ ಪೂಜಿಸುತ್ತಿರುವೆವು."

ಈವರೆಗಿನ ಗ್ರಂಥದಲ್ಲಿ ಪರಮಾತ್ಮನ ಚತುರ್ಮೂರ್ತಿಗಳನ್ನು ಹೇಳಿರುವದಲ್ಲದೆ ಎಲ್ಲಾ ಕಾರ್ಯಗಳಿಗೂ ಕಾರಣವಾಗಿ ಅವ್ಯಕ್ತಕ್ಕೂ ಆಚೆಯಿರುವ **"ಪುರುಷ," "ಕ್ಷೇತ್ರಜ್ಞ"**– ಎಂಬ ಹೆಸರುಗಳಿಂದ ಶಾಸ್ತ್ರವೇದ್ಯವಾಗಿರುವ **ನಾರಾಯಣನೆಂಬ** ಹೆಸರಿನ ಮೂಲತತ್ತ್ವವನ್ನು ಹೇಳಿರುತ್ತದೆ. ಮಹಾ ತಪಸ್ವಿಗಳೂ ಸರ್ವಪೂಜ್ಯರೂ ವಿಷ್ಣ್ವಂಶಸಂಭೂತರೂ ಆಗಿರುವ ನರನಾರಾಯಣರುಕೂಡ ಆ ಮೂಲನಾರಾಯಣನನ್ನೇ ತಮ್ಮ ಆತ್ಮನೆಂದು ಪೂಜಿಸುತ್ತಿದ್ದರು- ಎಂದೂ, ಇಂದ್ರಿಯಗಳು, ವಿಷಯಗಳು- ಎಂದು ವ್ಯಕ್ತವಾಗಿರುವ ಭಾವಗಳಿಗೂ ಕಾರಣವಾಗಿರುವ ಅವ್ಯಕ್ತಕ್ಕಿಂತಲೂ ಹೆಚ್ಚಿನ ಪರತತ್ತ್ವವೇ ಆ ನಾರಾಯಣತತ್ತ್ವವೆಂದೂ ಹೇಳಿದೆ ಎಂಬುದನ್ನು ಲಕ್ಷಿಸಬೇಕು.

**ಶಂಕರಭಗವತ್ಪಾದರವರು** ಸಾಂಖ್ಯರ ಮತವನ್ನು ತಿರಸ್ಕರಿಸುವಾಗ (ಸೂ. ಭಾ. ೨-೧-೧) ಇಲ್ಲಿ ನಾವು ಉದಾಹರಿಸಿರುವ ಪರಮಾರ್ಥತತ್ತ್ವವರ್ಣನೆಯ ಶ್ಲೋಕವನ್ನೇ ತಮ್ಮ ಸಿದ್ಧಾಂತಕ್ಕೆ ಪ್ರಮಾಣವಾಗಿ ಉದಾಹರಿಸಿಕೊಂಡಿರುತ್ತಾರೆ. **'ಯತ್ತತ್ ಸೂಕ್ಷ್ಮಮವಿಜ್ಞೇಯಮ್' (೨೯)** ಇತಿ ಪರಂಬ್ರಹ್ಮ ಪ್ರಕೃತ್ಯ **'ಸ ಹ್ಯನ್ತರಾತ್ಮಾ ಭೂತಾನಾಂ ಕ್ಷೇತ್ರಜ್ಞಶ್ಚೇತಿ ಕಥ್ಯತೇ' (೩೦)** ಎಂದು ಈ ನಾರಾಯಣೀಯದ ಶ್ಲೋಕಗಳನ್ನೇ ತಮ್ಮ ಸಿದ್ಧಾಂತಕ್ಕೆ ಆಧಾರವೆಂತ ವರ್ಣಿಸಿರುತ್ತಾರೆ. 'ನಿರ್ವಿಶೇಷವಾದ ಪರಮಾರ್ಥತತ್ತ್ವವೇ ವಾಸುದೇವನು 'ಎಂದು ಭಾಗವತಮತದವರು ಒಪ್ಪಿರುವಂತೆಯೇ ಆ ಆಚಾರ್ಯರೂ ಒಪ್ಪಿರುತ್ತಾರೆ- ಎಂದು ಇದರಿಂದ ನಿಶ್ಚಿತವಾಯಿತು. ನಾರಾಯಣೀಯದ ಭಾಗವು ಭಾಗವತ ಸಂಪ್ರದಾಯದವರಿಗೆ ಹೇಗೋ ಹಾಗೆಯೇ ಆಚಾರ್ಯರಿಗೂ ಆಧಾರಗ್ರಂಥವಾಗಿತ್ತೆಂದೂ ಅದರಿಂದಲೇ ಅಲ್ಲಿರುವ ಶ್ಲೋಕಗಳನ್ನು ಅವರು ತಮ್ಮ ಸೂತ್ರಭಾಷ್ಯದಲ್ಲಿ ಮತ್ತೆ ಮತ್ತೆ ಉದಾಹರಿಸಿಕೊಂಡಿರುವರೆಂದೂ ಮುಂದೆ ಅಲ್ಲಲ್ಲಿ ತೋರಿಸುತ್ತಾ ಹೋಗುವೆವು.

ಇರಲಿ, ನಾರಾಯಣಋಷಿಯಿಂದ ಅನುಜ್ಞಪ್ತರಾದ ನಾರದರು ಆತನಿಗೂ ಪ್ರಕೃತಿಯಾದ ಪರಮಾತ್ಮನನ್ನು ಕಾಣುವದಕ್ಕೆಂದು ಶ್ವೇತದ್ವೀಪಕ್ಕೆ[1] ಹೋಗಿ ಅಲ್ಲಿ ಭಗವನ್ನಾರಾಯಣನನ್ನು ಇನ್ನೂರು ನಾಮಗಳಿಂದ ಭಾವಪೂರ್ವಕವಾಗಿ ಸ್ತುತಿಸಿದರು. ಆಗ ಭಗವಂತನಾದ ನಾರಾಯಣನು ಪ್ರಸನ್ನನಾಗಿ ಅವರಿಗೆ ವಿಶ್ವರೂಪವನ್ನು ಧರಿಸಿ ದರ್ಶನವನ್ನು ಕೊಟ್ಟನು; ನಾರದರಿಗೆ ತತ್ತ್ವೋಪದೇಶವನ್ನು ಮಾಡಿದನು. ಭಗವಂತನ ವಾಕ್ಯಗಳನ್ನೆಲ್ಲ ವಿಸ್ತರಿಸಿ ಹೇಳುವುದಕ್ಕೆ ಇದು ಸ್ಥಲವಲ್ಲ. ಪ್ರಕೃತಕ್ಕೆ ಬೇಕಾಗಿರುವ ಭಗವತ್ತತ್ತ್ವ ಮತ್ತು ಚತುರ್ವ್ಯೂಹರೂಪ– ಇವುಗಳನ್ನು ಮಾತ್ರ ಇಲ್ಲಿ ಸಂಗ್ರಹಿಸುವೆವು:

**ಮತ್ತಃ ಸರ್ವಂ ಸಮ್ಭವತಿ ಜಗತ್ ಸ್ಥಾವರಜಙ್ಗಮಮ್ ।**
**ಅಕ್ಷರಂ ಚ ಕ್ಷರಂ ಚೈವ ಸಚ್ಚಾಸಚ್ಚೈವ ನಾರದ ॥೩೩೯-೪೨॥**
**ಮಾಂ ಪ್ರವಿಶ್ಯ ಭವನ್ತೀಹ ಮುಕ್ತಾ ಭಕ್ತಾಸ್ತು ಯೇ ಮಮ ।**
**ಅಹಂ ಹಿ ಪುರುಷೋ ಜ್ಞೇಯೋ ನಿಷ್ಕ್ರಿಯಃ ಪಞ್ಚವಿಂಶಕಃ ॥ ॥೪೩॥**
**ನಿರ್ಗುಣೋ ನಿಷ್ಕಲಶ್ಚೈವ ನಿರ್ದ್ವನ್ದ್ವೋ ನಿಷ್ಪರಿಗ್ರಹಃ ।**
**ಏತತ್ ತ್ವಯಾ ನ ವಿಜ್ಞೇಯಂ ರೂಪವಾನಿತಿ ದೃಶ್ಯತೇ ॥೪೪॥**
**ಇಚ್ಛನ್ ಮುಹೂರ್ತಾನ್ನಶ್ಯೇಯಮೀಶೋಽಹಂ ಜಗತೋ ಗುರುಃ ।**
**ಮಾಯಾ ಹ್ಯೇಷಾ ಮಯಾ ಸೃಷ್ಟಾ ಯನ್ಮಾಂ ಪಶ್ಯಸಿ ನಾರದ ॥೪೫॥**
**ಸರ್ವಭೂತಗುಣೈರ್ಯುಕ್ತಂ ನೈವಂ ತ್ವಂ[2] ಜ್ಞಾತುಮರ್ಹಸಿ ॥**

"ಸ್ಥಾವರಜಂಗಮಾತ್ಮಕವಾದ ಸರ್ವಜಗತ್ತೂ ನನ್ನಿಂದಲೇ ಹುಟ್ಟುತ್ತದೆ. ಕ್ಷರವೂ ಅಕ್ಷರವೂ, ಸತ್ತು ಮತ್ತು ಅಸತ್ತು - ಇವೆಲ್ಲವೂ ಎಲೈ ನಾರದನೆ, ನನ್ನಿಂದಲೇ ಹುಟ್ಟುತ್ತದೆ. ನನ್ನ

1. ಶ್ವೇತದ್ವೀಪವು ಭರತವರ್ಷದ ಉತ್ತರದಲ್ಲಿದೆ ಎಂದು ವರ್ಣಿಸಿರುವದನ್ನು ನೋಡಿ ಕೆಲವು ಪಾಶ್ಚಾತ್ಯರು ಬ್ಯಾಕ್ಟ್ರಿಯಾ ದೇಶದಲ್ಲಿದ್ದ ಕ್ರಿಸ್ತಿಯನ್ ಜನರಿಂದಲೇ ಭಾಗವತದ ಭಕ್ತಿಮಾರ್ಗವು ನಮ್ಮ ದೇಶಕ್ಕೆ ಬಂದಿರಬೇಕೆಂದು ಕಲ್ಪಿಸಿರುತ್ತಾರೆ. ಈ ಕಲ್ಪನೆಯು ನಿರಾಧಾರವೆಂಬುದನ್ನು ಬಲದೇವ ಉಪಾಧ್ಯಾಯರು ತಮ್ಮ 'ಭಾಗವತ ಸಂಪ್ರದಾಯ' ಎಂಬ ಗ್ರಂಥದಲ್ಲಿ (ಪು. ೧೧೧ ರಲ್ಲಿ) ತಿರಸ್ಕರಿಸಿರುತ್ತಾರೆ. ಐತಿಹಾಸಿಕ ದೃಷ್ಟಿಯಿಂದಲೇ ಬಹಳಮಟ್ಟಿಗೆ ಅವರು ಈ ಪಕ್ಷವನ್ನು ತಿರಸ್ಕರಿಸಿರುತ್ತಾರೆ. ಗಂಗಾಧರತಿಲಕರೂ ತಮ್ಮ "ಗೀತಾರಹಸ್ಯ"ದಲ್ಲಿ ಈ ವಾದವನ್ನು ಖಂಡಿಸಿರುತ್ತಾರೆ. (ಗೀ. ರ. ಪರಿಶಿಷ್ಟ ಪು. ೫೩೭). ಆದರೆ ಭಾಗವತ ಧರ್ಮದ ಸಿದ್ಧಾಂತಗಳಿಗೂ ಕ್ರೈಸ್ತಮತದ ಸಿದ್ಧಾಂತಗಳಿಗೂ ಅನೇಕ ವೈಲಕ್ಷಣ್ಯಗಳಿವೆ ಎಂಬುದು ಈ ಗ್ರಂಥವನ್ನು ಓದುವವರಿಗೆಲ್ಲ ಸ್ಫುಟವಾಗಿರುವದರಿಂದ ಇದರ ಚರ್ಚೆಯು ನಮಗೆ ಅವಶ್ಯವಿಲ್ಲವೆಂತ ತೋರುತ್ತದೆ. ವಿಷ್ಣುಭಕ್ತಿಮಾತ್ರವು ವೇದಕಾಲದಲ್ಲಿಯೇ ಇತ್ತೆಂಬುದನ್ನು ಬಲದೇವ ಉಪಾಧ್ಯಾಯರು ತೋರಿಸಿಕೊಟ್ಟಿರುತ್ತಾರೆ. ಆದರೆ ಇಲ್ಲಿರುವ ದ್ವೀಪದ ಪರಾಮರ್ಶವು ಕೇವಲ ವಿಷ್ಣುಭಕ್ತಿಗೆ ಸಂಬಂಧಿಸಿಲ್ಲ; ಪಾಂಚರಾತ್ರಪದ್ಧತಿಯ ವಿಚಾರಕ್ಕೆ ಸಂಬಂಧಿಸಿರುತ್ತದೆ- ಎಂಬುದನ್ನು ಲಕ್ಷಿಸಬೇಕು. 'ಭಕ್ತಿ' ಎಂಬ ಶಬ್ದವು ಹೇಗೆ ಯಾವಾಗ ಉತ್ಪನ್ನವಾಯಿತು? ಎಂಬುದನ್ನು ಪುರಾತನಗ್ರಂಥತತ್ತ್ವಜ್ಞರು ನಿರ್ಣಯಿಸಬೇಕಾಗಿರುತ್ತದೆ.

2. 'ಮಾಮ್' ಎಂದು ಶಂಕರಾಚಾರ್ಯರು ಒಪ್ಪಿರುವ ಪಾಠ; ಒಂದು ಕಡೆಯಲ್ಲಿ 'ನೈವಂ' ಎಂಬುದಕ್ಕೆ 'ಮೈವಂ' ಎಂದೂ ಅಲ್ಲಿದೆ.

ಭಕ್ತರಾಗಿರುವವರು ನನ್ನನ್ನೇ ಪ್ರವೇಶಿಸಿ ಮುಕ್ತರಾಗುವರು. ನಾನು ನಿಷ್ಕ್ರಿಯನಾದ, ಇಪ್ಪತ್ತೈದನೆಯ ತತ್ತ್ವವಾದ ಪುರುಷನು. ನಿರ್ಗುಣನು, ನಿಷ್ಕಲನು, ನಿರ್ದ್ವಂದ್ವನು, ನನ್ನದೆಂಬುದು ಯಾವುದೂ ಇಲ್ಲದವನು, ರೂಪವಂತನಾಗಿರುವದರಿಂದ ಕಾಣಬರುತ್ತಿದಾನೆ– ಎಂದಿಂತು ನೀನು ತಿಳಿಯದಿರು. ಈಶ್ವರನೂ ಜಗತ್ತಿಗೆಲ್ಲ ಗುರುವೂ ಆಗಿರುವ ನಾನು ಇಚ್ಛಾಮಾತ್ರದಿಂದ ಒಂದೇ ಮುಹೂರ್ತದಲ್ಲಿ ಕಾಣದಂತೆ ಆಗಬಲ್ಲೆನು. ಎಲೈ ನಾರದನೆ, ನನ್ನನ್ನು ನೋಡುತ್ತಿರುವೆಯಲ್ಲ, ಇದು ನಾನು ಸೃಷ್ಟಿಸಿರುವ ಮಾಯೆಯೇ; ಸರ್ವಭೂತಗಳ ಗುಣಗಳಿಂದಲೂ ಕೂಡಿರುವವನೆಂದು ನನ್ನನ್ನು ನೀನು ತಿಳಿಯದಿರು."

ಇಲ್ಲಿ ವರ್ಣಿಸಿರುವ ಪರಮಾರ್ಥತತ್ತ್ವವು ಶಂಕರಭಾಷ್ಯಕ್ಕೆ ಎಲ್ಲಾ ಬಗೆಯಿಂದಲೂ ಒಪ್ಪಾಗಿರುತ್ತದೆ. ಇಲ್ಲಿರುವ 'ಮಾಯಾ ಹ್ಯೇಷಾ ಮಯಾ ಸೃಷ್ಟಾ' ಎಂಬ ಶ್ಲೋಕವನ್ನು ಆ ಆಚಾರ್ಯರು ತಮ್ಮ ಸೂತ್ರಭಾಷ್ಯದಲ್ಲಿ ಮತ್ತೆ ಮತ್ತೆ ಉದಾಹರಿಸಿರುತ್ತಾರೆ. ಉದಾಹರಣೆಗೆ **"ಸ್ಯಾತ್ ಪರಮೇಶ್ವರಸ್ಯಾಪಿ ಇಚ್ಛಾವಶಾತ್ ಮಾಯಾಮಯಂ ರೂಪಂ ಸಾಧಕಾನುಗ್ರಹಾರ್ಥಮ್। 'ಮಾಯಾ ಹ್ಯೇಷಾ ಮಯಾ ಸೃಷ್ಟಾ ಯನ್ಮಾಂ ಪಶ್ಯಸಿ ನಾರದ। ಸರ್ವಭೂತಗುಣೈರ್ಯುಕ್ತಂ ಮೈ(ನೈ?) ವಂ ಮಾಂ ಜ್ಞಾತುಮರ್ಹಸಿ' ಇತಿ ಸ್ಮರಣಾತ್॥"** 'ಪರಮೇಶ್ವರನಿಗೂ ಇಚ್ಛಾವಶದಿಂದ ಮಾಯಾಮಯವಾದ ರೂಪವು ಸಾಧಕರಿಗೆ ಅನುಗ್ರಹಮಾಡಲು ಉಂಟಾಗಬಹುದು; 'ಮಾಯಾ ಹ್ಯೇಷಾ ಮಯಾ ಸೃಷ್ಟಾ ....ಜ್ಞಾತುಮರ್ಹಸಿ' ಎಂಬ ಸ್ಮೃತಿಪ್ರಮಾಣವು ಇದಕ್ಕಿದೆ' ಎಂದು (ಸೂ. ಭಾ. ೧-೧-೨೦ರಲ್ಲಿ) ಅವರು ಬರೆದಿರುತ್ತಾರೆ. ಮತ್ತು **"ತಥಾ ಸ್ಮೃತಿಷ್ವಪಿ ಪರಪ್ರತಿಷೇಧೇನೈವ ಉಪದಿಶ್ಯತೇ 'ಜ್ಞೇಯಂ ಯತ್ತತ್ ಪ್ರವಕ್ಷ್ಯಾಮಿ ಯಜ್ಞಾತ್ವಾಽಮೃತಮಶ್ನುತೇ। ಅನಾದಿಮತ್ ಪರಂ ಬ್ರಹ್ಮ ನ ಸತ್ತನ್ನಾಸದುಚ್ಯತೇ (ಗೀ. ೧೩ - ೧೨) ಇತ್ಯೇವಮಾದ್ಯಾಸು। ತಥಾ ವಿಶ್ವರೂಪಧರೋ ನಾರಾಯಣೋ ನಾರದಮುವಾಚೇತಿ ಸ್ಮರ್ಯತೇ 'ಮಾಯಾ ಹ್ಯೇಷಾ ಮಯಾ ಸೃಷ್ಟಾ ಯನ್ಮಾಂ ಪಶ್ಯಸಿ ನಾರದ। ಸರ್ವಭೂತಗುಣೈರ್ಯುಕ್ತಂ ನೈವ ಮಾಂ ಜ್ಞಾತುಮರ್ಹಸಿ" ಇತಿ॥** "(ಬ್ರಹ್ಮವು ನಿರ್ವಿಶೇಷವಾಗಿರುವದರಿಂದ ಅದನ್ನು) ಮತ್ತೊಂದು ರೂಪವಿಲ್ಲವೆಂದು ಅಲ್ಲಗಳೆಯುವದರಿಂದಲೇ 'ಜ್ಞೇಯಂ ಯತ್ತತ್ ಪ್ರವಕ್ಷ್ಯಾಮಿ ಯಜ್ಜ್ಞಾತ್ವಾಽಮೃತಮಶ್ನುತೇ। ಅನಾದಿಮತ್ ಪರಂಬ್ರಹ್ಮ ನ ಸತ್ತನ್ನಾಸದುಚ್ಯತೇ" (ಗೀ ೧೩ - ೧೨) ಮುಂತಾದ ಸ್ಮೃತಿಗಳಲ್ಲಿಯೂ ಉಪದೇಶಿಸಿರುತ್ತದೆ. ಇದರಂತೆ ವಿಶ್ವರೂಪಧರನಾದ ನಾರಾಯಣನು ನಾರದನಿಗೆ 'ಮಾಯಾ ಹ್ಯೇಷಾ ಮಯಾ ಸೃಷ್ಟಾ ಯನ್ಮಾಂ ಪಶ್ಯಸಿ ನಾರದ। ಸರ್ವಭೂತಗುಣೈರ್ಯುಕ್ತಂ ನೈವ ಮಾಂ ಜ್ಞಾತುಮರ್ಹಸಿ' ಎಂದೇ ಉಪದೇಶಿಸಿದನೆಂದು ಸ್ಮೃತಿಯಲ್ಲಿದೆ" ಎಂದು ಬ್ರಹ್ಮವು ನಿರ್ವಿಶೇಷವೆಂಬ ತಮ್ಮ ಸಿದ್ಧಾಂತಕ್ಕೆ ಪ್ರಮಾಣವಾಗಿ ಇದೇ ಶ್ಲೋಕವನ್ನು ಆಚಾರ್ಯರು (ಸೂ. ಭಾ. ೩-೨-೧೭ರಲ್ಲಿಯೂ) ಉದಾಹರಿಸಿಕೊಂಡಿರುತ್ತಾರೆ.

ಇದು ನಾರಾಯಣೀಯದಲ್ಲಿರುವಂತೆ ಭಾಗವತಮತಕ್ಕೆ ಸಮ್ಮತವಾದ ಪರಬ್ರಹ್ಮತತ್ತ್ವವೆಂದಾಯಿತು. ಈಗ ಅಲ್ಲಿಯೇ ಇರುವ **ಚತುರ್ವ್ಯೂಹ ವಿಚಾರವನ್ನು** ಉದಾಹರಿಸುವೆವು.

**ಮಮೈತಾಸ್ತನವಃ ಶ್ರೇಷ್ಠಾ ಜಾತಾ ಧರ್ಮಗೃಹೇ ದ್ವಿಜ ।**
**ತಾಸ್ತ್ವಂ ಭಜಸ್ವ ಸತತಂ ಸಾಧಯಸ್ವ ಯಥಾಗತಮ್** ॥೩೩೯-೧೪॥
**ವೃಣೀಷ್ವ ಚ ವರಂ ವಿಪ್ರ ಮತ್ತಸ್ತ್ವಂ ಯದಿಹೇಚ್ಛಸಿ ।**
**ಪ್ರಸನ್ನೋಽಹಂ ತವಾದ್ಯೇಹ ವಿಶ್ವಮೂರ್ತಿರಿಹಾವ್ಯಯಃ** ॥೧೫॥

"ಧರ್ಮನ ಮನೆಯಲ್ಲಿ ಹುಟ್ಟಿರುವ ಈ (ನಾಲ್ವರು) ನನ್ನ ತನು (ಮೂರ್ತಿ) ಗಳಾಗಿರುತ್ತಾರೆ. ಎಲೈ ದ್ವಿಜನೆ, ಅವರನ್ನು ನೀನು ಯಾವಾಗಲೂ ಭಜಿಸುತ್ತಿರು. ಇನ್ನು ನೀನು ಬಂದಂತೆ ಹಿಂದಕ್ಕೆ ಹೋಗು. ವಿಪ್ರನೆ, ನಿನಗೆ ಯಾವ ವರವು ಬೇಕೆನಿಸುವದೋ ಅದನ್ನು ನನ್ನಿಂದ ಕೇಳಿಕೊ, ವಿಶ್ವಮೂರ್ತಿಯೂ, ಅವ್ಯಯನೂ ಆಗಿರುವ ನಾನು ನಿನಗೆ ಇಲ್ಲಿ ಪ್ರಸನ್ನನಾಗಿರುವೆನು."

ಇಲ್ಲಿಯೂ ನರನಾರಾಯಣಾದಿಗಳನ್ನು **'ನನ್ನ ತನುಗಳು'** ಎಂದಿದೆ; ಹಿಂದೆ **ಮೂರ್ತಿ** ಗಳೆಂದಿದೆ, **'ವ್ಯೂಹಗಳು'** ಎಂದು ಕರೆದಿಲ್ಲ. ಇದೇಕೆಂಬುದನ್ನು ತತ್ತ್ವಶೋಧಕರು ನಿರ್ಣಯಿಸಬೇಕಾಗಿದೆ. ಇಲ್ಲಿ ನಮ್ಮ ಅಭಿಪ್ರಾಯವೇನೆಂದರೆ, ವ್ಯೂಹಗಳು ವಾಸುದೇವಸ್ವರೂಪರೇ, ಅವರೆಲ್ಲರೂ ನಿರ್ವಿಶೇಷರಾಗಿರುತ್ತಾರೆ; ನರನಾರಾಯಣಾದಿಗಳು ಧರ್ಮನ ಸಂತತಿಯು ಬೆಳೆಯಲೆಂದು ವಿಶ್ವಾತ್ಮನಾದ ನಾರಾಯಣನು ಧರ್ಮಾತ್ಮಜನಾಗಿ ಅವತರಿಸಿದ ಮೂರ್ತಿವಿಶೇಷಗಳು. **'ನಾರಾಯಣೋ ಹಿ ವಿಶ್ವಾತ್ಮಾ ಚತುರ್ಮೂರ್ತಿಃ ಸನಾತನಃ । ಧರ್ಮಾತ್ಮಜಃ ಸಂಬಭೂವ ಪಿತ್ರೈವಂ ಮೇಽಭ್ಯಭಾಷತ'** (ಮೋ. ಧ. ೩೩೪ - ೮)ಎಂಬ ಶ್ಲೋಕದಲ್ಲಿ ಈ ಅಭಿಪ್ರಾಯವನ್ನು ಹೇಳಿದೆ. ಆದ್ದರಿಂದ ಅವು ಸವಿಶೇಷರೂಪಗಳು; ನಿರ್ವಿಶೇಷರೂಪಗಳಲ್ಲ. ಶ್ರೀ ಶಂಕರಾಚಾರ್ಯರು ತಮ್ಮ ಭಾಷ್ಯದಲ್ಲಿ ಬರೆದಿರುವಂತೆ **'ನ ಚ ಪಞ್ಚರಾತ್ರಸಿದ್ಧಾನ್ತಿಭಿರ್ವಾಸುದೇವಾದಿಷು ಏಕಸ್ಮಿನ್ ಸರ್ವೇಷು ವಾ ಜ್ಞಾನೈಶ್ವರ್ಯಾದಿತಾರತಮ್ಯಕೃತಃ ಕಶ್ಚಿದ್ ಭೇದೋಽಭ್ಯುಪಗಮ್ಯತೇ। ವಾಸುದೇವ ಏವ ಹಿ ಸರ್ವೇ ವ್ಯೂಹಾ ನಿರ್ವಿಶೇಷಾ ಇಷ್ಯನ್ತೇ॥"** (ಸೂ. ಭಾ. ೨-೨-೪೪) 'ಪಂಚರಾತ್ರಸಿದ್ಧಾಂತದವರು ವಾಸುದೇವನೇ ಮೊದಲಾದ ಭಗವದ್ವ್ಯೂಹಗಳಲ್ಲಿ ಒಬ್ಬೊಬ್ಬನಲ್ಲಿಯಾಗಲಿ ಎಲ್ಲರಲ್ಲಿಯೂ ಆಗಲಿ ಜ್ಞಾನ, ಐಶ್ವರ್ಯ- ಮುಂತಾದವುಗಳ ತಾರತಮ್ಯದಿಂದ ಯಾವದಾದರೂ ಭೇದವುಂಟಾಗಿದೆ ಎಂದು ಒಪ್ಪುವದಿಲ್ಲ. ಎಲ್ಲಾ ವ್ಯೂಹಗಳೂ ವಾಸುದೇವನೇ, ಎಲ್ಲರೂ ನಿರ್ವಿಶೇಷರೇ **ಎಂದು ಒಪ್ಪಿರುತ್ತಾರೆ.** ಈ ವಾಕ್ಯವನ್ನು ಮನಸ್ಸಿನಲ್ಲಿ ಹೊರಳಾಡಿಸಿದರೆ ನಿರ್ಣಯವಾಗುವದೇನೆಂದರೆ, ನಾಲ್ಕು

ವ್ಯೂಹಗಳೂ ಭಗವಂತನೇ. ನಾಲ್ಕೂ ನಿರ್ವಿಶೇಷತತ್ತ್ವವೇ, ಜ್ಞಾನೈಶ್ವರ್ಯಾದಿಗಳೂ ಒಂದಕ್ಕಿಂತ ಒಂದು ಭಿನ್ನವಲ್ಲ. ಅವುಗಳ ತಾರತಮ್ಯದಿಂದಲೂ ವಾಸುದೇವನಲ್ಲಿಯಾಗಲಿ ಮಿಕ್ಕ ವ್ಯೂಹಗಳಲ್ಲಿಯಾಗಲಿ ಯಾವ ಭೇದವೂ ಆಗಿರುವದಿಲ್ಲ. ವಾಸುದೇವ, ಸಂಕರ್ಷಣ-ಮುಂತಾದವರಲ್ಲಿಯೂ ಒಬ್ಬರಿಗಿಂತ ಒಬ್ಬರಲ್ಲಿ ಯಾವ ಭೇದವೂ ಜ್ಞಾನೈಶ್ವರ್ಯಗಳ ತಾರತಮ್ಯದಿಂದ ಆಗಿರುವದಿಲ್ಲ- ಎಂಬುದು ಆಚಾರ್ಯರ ಮತವು. **ಜ್ಞಾನೈಶ್ವರ್ಯಾದಿಗುಣಗಳೂ ಭಗವತ್ಸ್ವರೂಪವೇ; ಎಲ್ಲವೂ ನಿರ್ವಿಶೇಷತತ್ತ್ವವೇ. ಅಲ್ಲಿ ಗುಣಗುಣಿಭಾವದಿಂದಾದ ಯಾವಭೇದವೂ ಇರುವದಿಲ್ಲ- ಎಂಬುದೇ ಭಾಗವತಮತ.** ಇದು ಶಂಕರಾಚಾರ್ಯರಿಗೆ ಸರ್ವಪ್ರಕಾರದಿಂದಲೂ ಒಪ್ಪಾಗಿರುವ ಸಿದ್ಧಾಂತವಾಗಿರುತ್ತದೆ.

ಈಗ ಮಹಾಭಾರತದ ನಾರಾಯಣೀಯಾಖ್ಯಾನದೊಳಗೇ ಇರುವ ವ್ಯೂಹತತ್ತ್ವವನ್ನು ನೋಡೋಣ:

**ನ ದೃಶ್ಯಶ್ಚಕ್ಷುಷಾ ಯೋಽಸೌ ನ ಸ್ಪೃಶ್ಯಃ ಸ್ಪರ್ಶನೇನ ಚ ।**
**ನ ಘ್ರೇಯಶ್ಚೈವ ಗನ್ಧೇನ ರಸೇನ ಚ ವಿವರ್ಜಿತಃ ॥೩೩೯-೨೧॥**
**ಸತ್ತ್ವಂ ರಜಸ್ತಮಶ್ಚೈವ ನ ಗುಣಾಸ್ತಂ ಭಜನ್ತಿ ವೈ ।**
**ಯಶ್ಚ ಸರ್ವಗತಃ ಸಾಕ್ಷೀ ಲೋಕಸ್ಯಾಽಽತ್ಮೇತಿ ಕಥ್ಯತೇ ॥೨೨॥**
**ಭೂತಗ್ರಾಮಶರೀರೇಷು ನಶ್ಯತ್ಸು ನ ವಿನಶ್ಯತಿ ।**
**ಅಜೋ ನಿತ್ಯಃ ಶಾಶ್ವತಶ್ಚ ನಿರ್ಗುಣೋ ನಿಷ್ಕಲಸ್ತಥಾ ॥೨೩॥**
**ದ್ವಿರ್ದ್ವಾದಶೇಭ್ಯಸ್ತತ್ತ್ವೇಭ್ಯಃ ಖ್ಯಾತೋ ಯಃ ಪಞ್ಚವಿಂಶಕಃ ।**
**ಪುರುಷೋ ನಿಷ್ಕ್ರಿಯಶ್ಚೈವ ಜ್ಞಾನದೃಶ್ಯಶ್ಚ ಕಥ್ಯತೇ ॥೨೪॥**
**ಯಂ ಪ್ರವಿಶ್ಯ ಭವನ್ತೀಹ ಮುಕ್ತಾ ವೈ ದ್ವಿಜಸತ್ತಮಾಃ ।**
**ಸ ವಾಸುದೇವೋ ವಿಜ್ಞೇಯಃ ಪರಮಾತ್ಮಾ ಸನಾತನಃ ॥೨೫॥**
**ಪಶ್ಯ ದೇವಸ್ಯ ಮಾಹಾತ್ಮ್ಯಂ ಮಹಿಮಾನಂ ಚ ನಾರದ ।**
**ಶುಭಾಶುಭೈಃ ಕರ್ಮಭಿರ್ಯೋ ನ ಲಿಪ್ಯತಿ ಕದಾಚನ ॥೨೬॥**
**ಸತ್ತ್ವಂ ರಜಸ್ತಮಶ್ಚೇತಿ ಗುಣಾನೇತಾನ್ ಪ್ರಚಕ್ಷತೇ ।**
**ಯತ್ತೇ ಸರ್ವಶರೀರೇಷು ತಿಷ್ಠನ್ತಿ ವಿಚರನ್ತಿ ಚ ॥೨೭॥**
**ಏತಾನ್ ಗುಣಾಂಸ್ತು ಕ್ಷೇತ್ರಜ್ಞೋ ಭುಙ್ಕ್ತೇ ನೈಭಿಃ ಸ ಭುಜ್ಯತೇ ।**
**ನಿರ್ಗುಣೋ ಗುಣಭುಕ್ ಚೈವ ಗುಣಸ್ರಷ್ಟಾ ಗುಣಾಧಿಕಃ ॥೨೮॥**

ಈ ವರಗೆ ಹೇಳಿದ್ದು ವಾಸುದೇವವ್ಯೂಹವು.ಇದರ ಕನ್ನಡ ಅನುವಾದವನ್ನು ಇದ್ದದ್ದು ಇದ್ದಂತೆ ಕೊಡುವೆವು. "ಯಾವಾತನನ್ನು ಕಣ್ಣಿನಿಂದ ನೋಡಲಾಗುವದಿಲ್ಲವೋ, ಸ್ಪರ್ಶೇಂದ್ರಿಯದಿಂದ ಮುಟ್ಟಲಾಗುವಂತಿಲ್ಲವೋ, ಘ್ರಾಣೇಂದ್ರಿಯದಿಂದ

ಮೂಸಲಾಗುವದಿಲ್ಲವೋ ಯಾವನು ಸಪಿಯೇ ಇಲ್ಲದವನೋ; ಸತ್ತ್ವ, ರಜಸ್ಸು, ತಮಸ್ಸು-ಎಂಬ ಗುಣಗಳು ಯಾರನ್ನು ಸೇರದೆ ಇರುವವೋ; ಯಾವನನ್ನು ಸರ್ವಗತನು, ಸಾಕ್ಷಿ, ಲೋಕಕ್ಕೆಲ್ಲ ಆತ್ಮನು- ಎನ್ನುವರೋ; ಯಾವನು ಭೂತಗ್ರಾಮಗಳ ಶರೀರಗಳು ನಾಶವಾದರೂ ನಾಶವಾಗುವದಿಲ್ಲವೋ; ಯಾವನು ಅಜನು, ನಿತ್ಯನು, ಶಾಶ್ವತನು, ನಿರ್ಗುಣನು, ನಿಷ್ಕಲನು ಮತ್ತು ಇಪ್ಪತ್ತುನಾಲ್ಕು ತತ್ತ್ವಗಳಿಂದ ಬೇರೆಯಾಗಿ ಇಪ್ಪತ್ತೈದನೆಯವನೆಂದೂ ಪುರುಷನೆಂದೂ ನಿಷ್ಕ್ರಿಯನೆಂದೂ ಜ್ಞಾನದೃಶ್ಯನೆಂದೂ ಹೇಳುವರೋ, ದ್ವಿಜಶ್ರೇಷ್ಠರಾದವರು ಯಾವಾತನನ್ನು ಪ್ರವೇಶಿಸಿ ಮುಕ್ತರೇ ಆಗುತ್ತಾರೋ, ಅವನೇ ವಾಸುದೇವನೆಂದು ತಿಳಿಯಬೇಕು, ಅವನೇ ಸನಾತನನಾದ ಪರಮಾತ್ಮನು.

"ನಾರದನೆ, ದೇವನ ಮಾಹಾತ್ಮ್ಯವನ್ನೂ ಮಹಿಮೆಯನ್ನೂ ನೋಡು. ಆತನಿಗೆ ಶುಭಾಶುಭಕರ್ಮಗಳು ಎಂದಿಗೂ ಅಂಟಿಕೊಳ್ಳದೆ ಇರುವವು. ಸತ್ತ್ವ, ರಜಸ್ಸು, ತಮಸ್ಸು-ಇವು ಸರ್ವಶರೀರಗಳಲ್ಲಿಯೂ ಇದ್ದುಕೊಂಡು ವ್ಯಾಪಾರಮಾಡುತ್ತಿರುವದರಿಂದ ಇವುಗಳನ್ನು 'ಗುಣಗಳು' ಎನ್ನುವರು. ಈ ಗುಣಗಳನ್ನು'ಕ್ಷೇತ್ರಜ್ಞನು' ಭುಂಜಿಸುವನು; ಆದರೆ ಇವುಗಳಿಂದ ಅವನು ಭುಕ್ತನಾಗನು. ಅವನು ನಿರ್ಗುಣನು, ಗುಣಭೋಕ್ತೃವು, ಗುಣಗಳನ್ನು ಸೃಷ್ಟಿಸುವಾತನು, ಗುಣಗಳಿಗಿಂತ ಹೆಚ್ಚಿನ ತತ್ತ್ವವು."

ಆ ವಾಸುದೇವನು ಸ್ಥಿತಿಕಾಲದ ದೃಷ್ಟಿಯಿಂದ ಹೇಗಿರುವನೆಂಬುದನ್ನು ಮೇಲೆ ವರ್ಣಿಸಿದ್ದಾಗಿದೆ. ಅವನಲ್ಲಿಯೇ ಎಲ್ಲವೂ ಲಯವಾಗುವದೆಂದೂ ಆತನು ಮಾತ್ರ ಎಂದಿಗೂ ಬೇರಲ್ಲಿಯೂ ಲಯವಾಗನೆಂಬುದನ್ನೂ ಈ ಕೆಳಗಿನ ಶ್ಲೋಕಗಳಲ್ಲಿ ವಿವರಿಸಿ ತಿಳಿಸಿರುತ್ತಾರೆ:

**ಜಗತ್ಪ್ರತಿಷ್ಠಾ ದೇವರ್ಷೇ ಪೃಥಿವ್ಯಪ್ಸು ಪ್ರಲೀಯತೇ ।**
**ಜ್ಯೋತಿಷ್ಯಾಪಃ ಪ್ರಲೀಯನ್ತೇ ಜ್ಯೋತಿರ್ವಾಯೌ ಪ್ರಲೀಯತೇ ॥**
**ಖೇ ವಾಯುಃ ಪ್ರಲಯಂ ಯಾತಿ ಮನಸ್ಯಾಕಾಶಮೇವ ಚ ।**
**ಮನೋ ಹಿ ಪರಮಂ ಭೂತಂ ತದವ್ಯಕ್ತೇ ಪ್ರಲೀಯತೇ ।**
**ಅವ್ಯಕ್ತಂ ಪುರುಷೇ ಬ್ರಹ್ಮನ್ ನಿಷ್ಕ್ರಿಯೇ ಸಮ್ಪ್ರಲೀಯತೇ ।**
**ನಾಸ್ತಿ ತಸ್ಮಾತ್ ಪರತರಃ ಪುರುಷಾದ್ ವೈ ಸನಾತನಾತ್ । ॥೩೧॥**
**ನಿತ್ಯಂ ಹಿ ನಾಸ್ತಿ ಜಗತಿ ಭೂತಂ ಸ್ಥಾವರಜಙ್ಗಮಮ್ ।**
**ಋತೇ ತಮೇಕಂ ಪುರುಷಂ ವಾಸುದೇವಂ ಸನಾತನಮ್ ॥೩೨॥**
**ಸರ್ವಭೂತಾತ್ಮಭೂತೋ ಹಿ ವಾಸುದೇವೋ ಮಹಾಬಲಃ ॥**

ಇಲ್ಲಿರುವ ಪ್ರಲಯಕ್ರಮವನ್ನು ಹೇಳುವ ಶ್ಲೋಕಗಳನ್ನು **ಶಂಕರಭಗವತ್ಪಾದರವರು** **'ವಿಪರ್ಯಯೇಣ ತು ಕ್ರಮೋಽತ ಉಪಪದ್ಯತೇ ಚ'** (ವೇ. ಸೂ. ೨-೩-೧೪) ಎಂಬ ಸೂತ್ರದ ಭಾಷ್ಯದಲ್ಲಿ ಉದಾಹರಿಸಿಕೊಂಡಿರುತ್ತಾರೆ; ಅವ್ಯಕ್ತಪರ್ಯಂತವಾಗಿರುವದೆಲ್ಲವೂ

ನಿರ್ಗುಣವಾದ ಬ್ರಹ್ಮದಲ್ಲಿ ಲಯವಾಗುವದೆಂದು ತಿಳಿಸುವದಕ್ಕೆ (ವೇ. ಸೂ. ೨-೧-೧) ಪ್ರಮಾಣವಾಗಿಯೂ ಉದಾಹರಿಸಿಕೊಂಡಿರುತ್ತಾರೆ. ಇವುಗಳ ಅಭಿಪ್ರಾಯವೇನೆಂದರೆ:

"ಎಲೈ ದೇವರ್ಷಿಯೆ, ಜಗತ್ತಿಗೆಲ್ಲ ಆಧಾರವಾಗಿರುವ ಪೃಥ್ವಿಯು ಅಪ್ಪಿನಲ್ಲಿ ಪ್ರಲಯವಾಗುತ್ತದೆ. ಅಪ್ಪು ಜ್ಯೋತಿಯಲ್ಲಿ ಪ್ರಲಯವಾಗುತ್ತದೆ. ಜ್ಯೋತಿಯು ವಾಯುವಿನಲ್ಲಿ ಪ್ರಲಯವಾಗುತ್ತದೆ. ಆಕಾಶದಲ್ಲಿ ವಾಯು ಪ್ರಲಯವಾಗುತ್ತದೆ. ಆಕಾಶವು ಮನಸ್ಸಿನಲ್ಲಿ ಪ್ರಲಯವಾಗುತ್ತದೆ. ಮನಸ್ಸು ಎಲ್ಲಕ್ಕಿಂತ ಮೂಲವಲ್ಲವೆ, ಅದು ಅವ್ಯಕ್ತದಲ್ಲಿ ಪ್ರಲಯವಾಗುತ್ತದೆ. ಎಲೈ ಬ್ರಾಹ್ಮಣನೆ, ಅವ್ಯಕ್ತವು ನಿಷ್ಕ್ರಿಯನಾದ ಪುರುಷನಲ್ಲಿ ಪ್ರಲಯವಾಗಿಬಿಡುತ್ತದೆ. ಆ ಸನಾತನಪುರುಷನಿಗಿಂತ ಪರತತ್ತ್ವವಿನ್ನೊಂದಿಲ್ಲ. ಆ ಸನಾತನ ಪುರುಷನನ್ನು ಹೊರತು ಜಗತ್ತಿನಲ್ಲಿ ಸ್ಥಾವರಜಂಗಮರೂಪವಾದ ಭೂತವು ಯಾವದೂ ನಿತ್ಯವಾದದ್ದು ಇರುವದಿಲ್ಲ; ಏಕೆಂದರೆ ಮಹಾಬಲನಾದ ವಾಸುದೇವನೇ ಸರ್ವಭೂತಗಳಿಗೂ ಆತ್ಮನಾಗಿರುತ್ತಾನೆ.

ಇನ್ನು ಸಂಕರ್ಷಣಾದಿವ್ಯೂಹಗಳನ್ನು ಹೀಗೆ ವರ್ಣಿಸಿರುತ್ತದೆ

ಪೃಥಿವೀವಾಯುರಾಕಾಶಮಾಪೋ ಜ್ಯೋತಿಶ್ಚ ಪಞ್ಚಮಮ್ ।
ತೇ ಸಮೇತಾ ಮಹಾತ್ಮಾನಃ ಶರೀರಮಿತಿ ಸಂಜ್ಞಿತಮ್ ।
ತದಾವಿಶತಿ ಯೋ ಬ್ರಹ್ಮನ್ನದೃಶ್ಯೋ ಲಘುವಿಕ್ರಮಃ ॥೩೩೯ ೩೪॥
ಉತ್ಪನ್ನ ಏವ ಭವತಿ ಶರೀರಂ ಚೇಷ್ಟಯನ್ ಪ್ರಭುಃ ।
ನ ವಿನಾ ಧಾತುಸಙ್ಘಾತಂ ಶರೀರಂ ಭವತಿ ಕ್ವಚಿತ್ ॥೩೫॥
ನ ಚ ಜೀವಂ ವಿನಾ ಬ್ರಹ್ಮನ್ ವಾಯವಶ್ಚೇಷ್ಟಯನ್ತ್ಯುತ ।
ಸ ಜೀವಃ ಪರಿಸಙ್ಖ್ಯಾತಃ ಶೇಷಃ ಸಙ್ಕರ್ಷಣಃ ಪ್ರಭುಃ ॥೩೬॥
ತಸ್ಮಾತ್ ಸನತ್ಕುಮಾರತ್ವಂ ಯೋऽಲಭತ್ ಸ್ವೇನ ಕರ್ಮಣಾ ।
ಯಸ್ಮಿಂಶ್ಚ ಸರ್ವಭೂತಾನಿ ಪ್ರಲಯಂ ಯಾನ್ತಿ ಸಙ್ಕ್ಷಯಮ್ ॥೩೭॥
ಸ ಮನಃ ಸರ್ವಭೂತಾನಾಂ ಪ್ರದ್ಯುಮ್ನಃ ಪರಿಪಠ್ಯತೇ ।
ತಸ್ಮಾತ್ ಪ್ರಸೂತೋ ಯಃ ಕರ್ತಾ ಕಾರಣಂ ಕಾರ್ಯಮೇವ ಚ ॥೩೮॥
ತಸ್ಮಾತ್ ಸರ್ವಂ ಸಮ್ಭವತಿ ಜಗತ್ ಸ್ಥಾವರಜಙ್ಗಮಮ್ ।
ಸೋऽನಿರುದ್ಧಃ ಸ ಈಶಾನೋ ವ್ಯಕ್ತಃ (?) ಸ[1] ಸರ್ವಕರ್ಮಸು ॥೩೯॥

"ಪೃಥಿವಿ, ವಾಯು, ಆಕಾಶ, ಅಪ್ಪು, ಜ್ಯೋತಿಯೆಂಬ ಐದನೆಯದು, ಈ ಮಹಾಭೂತಗಳು ಸೇರಿ ಶರೀರವೆಂಬ ಹೆಸರನ್ನು ಪಡೆಯುವದು. ಎಲೈ ಬ್ರಾಹ್ಮಣನೆ, ಅದನ್ನು ಯಾವ ಲಘುವಿಕ್ರಮನಾದ ಆತ್ಮನು ಸೇರಿಕೊಳ್ಳುವನೋ ಆ ಪ್ರಭುವು ಹುಟ್ಟುವಾಗಲೆ ಶರೀರವನ್ನು

1. 'ವ್ಯಕ್ತಿ' ಸಾ' ಕುಂ॥

ವ್ಯಾಪಾರಗೊಳಿಸುವನಾಗುತ್ತಾನೆ. ಧಾತುಗಳ ಸಂಘಾತವಿಲ್ಲದೆ ಎಲ್ಲಿಯೂ ಶರೀರವಾಗುವದಿಲ್ಲ. ಎಲೈ ಬ್ರಾಹ್ಮಣನೆ, ಜೀವನಿಲ್ಲದ ಪ್ರಾಣಿಗಳು ವ್ಯಾಪಾರಮಾಡುವದಿಲ್ಲ. ಆ ಶೇಷನೇ ಪ್ರಭುವಾದ **ಸಂಕರ್ಷಣನೇ** ಜೀವನೆಂದು ಗಣಿಸಲ್ಪಡುತ್ತಾನೆ. ಆತನಿಂದ ಯಾವನು ತನ್ನ ಕರ್ಮದಿಂದ ಸನತ್ಕುಮಾರತ್ವವನ್ನು ಪಡೆದುಕೊಂಡನೋ, ಯಾವನಲ್ಲಿ ಎಲ್ಲಾ ಭೂತಗಳೂ ಪ್ರಲಯಕಾಲದಲ್ಲಿ ಅಡಗಿಕೊಳ್ಳುವವೋ ಸರ್ವಭೂತಗಳಿಗೂ ಆತನೇ 'ಮನಸ್ಸು' ಆತನೇ 'ಪ್ರದ್ಯುಮ್ನನು' ಎನಿಸುತ್ತಾನೆ. ಆತನಿಂದ ಹುಟ್ಟಿದ ಕರ್ತೃ, ಕಾರಣ, ಕಾರ್ಯ- ಇವುಗಳೆಲ್ಲವೂ ಆಗಿರುವ ಆತನಿಂದಲೇ ಸರ್ವಸ್ಥಾವರಜಂಗಮಗಳೂ ಹುಟ್ಟಿರುವವು. ಅವನೇ 'ಅನಿರುದ್ಧನು' ಅವನೇ ಸರ್ವಕರ್ಮಗಳಿಗೂ ಸ್ವಾಮಿಯಾಗಿ ತೋರುವವನು. (ಮೋ.ಧ.೩೩೯ - ೩೩ರಿಂದ ೩೯).

## ಶಂಕರಾಚಾರ್ಯರವರು ವ್ಯೂಹಗಳ ವಿಷಯದಲ್ಲಿ ಏನು ಖಂಡಿಸಿರುತ್ತಾರೆ?

೧೩. ಸೂತ್ರಭಾಷ್ಯದಲ್ಲಿ ಎರಡನೆಯ ಅಧ್ಯಾಯದ ಎರಡನೆಯ ಪಾದದ ಕೊನೆಯ ಅಧಿಕರಣದಲ್ಲಿ ಭಾಗವತಮತವನ್ನು ಖಂಡಿಸಿರುತ್ತದೆ ಎಂದು ಶಂಕರಾಚಾರ್ಯರು ಬರೆದಿರುತ್ತಾರಷ್ಟೆ ? ಅದರ ಸಾರಾಸಾರವನ್ನು ಇಲ್ಲಿ ವಿಮರ್ಶಿಸುವದು ಅವಶ್ಯ. ಏಕೆಂದರೆ ಶಂಕರಾಚಾರ್ಯರು ಭಾಗವತಮತವನ್ನು ಖಂಡಿಸಿರುತ್ತಾರೆಂಬ ಪ್ರತೀತಿಯು ವೇದಾಂತಿಗಳಲ್ಲೆಲ್ಲ ಪ್ರಸಿದ್ಧವಾಗಿರುತ್ತದೆ. ಅವರಿಂದೀಚೆಗೆ ಬಂದಿರುವ ರಾಮಾನುಜ ಮಧ್ವಾಚಾರ್ಯರುಗಳು ಅವರು ಪಾಂಚರಾತ್ರಸಿದ್ಧಾಂತವನ್ನು ಸರಿಯಾಗಿ ತಿಳಿದುಕೊಳ್ಳದೆ ಖಂಡಿಸಿರುತ್ತಾರೆ- ಎಂದೇ ತಮ್ಮ ತಮ್ಮ ಭಾಷ್ಯಗಳಲ್ಲಿ ಬರೆದುಕೊಂಡಿರುತ್ತಾರೆ. ಆದ್ದರಿಂದ ಶಂಕರಾಚಾರ್ಯರ ಮತಕ್ಕೂ ಪಾಂಚರಾತ್ರರ ಮತಕ್ಕೂ ಯಾವದಾದರೂ ಭೇದಗಳಿವೆಯೆ?- ಎಂಬುದನ್ನು ನಿಷ್ಪಕ್ಷಪಾತವಾಗಿ ವಿಚಾರಮಾಡಿ ಗೊತ್ತುಮಾಡಿಕೊಳ್ಳುವದು ನ್ಯಾಯವಾಗಿರುತ್ತದೆ. ಶಂಕರಾಚಾರ್ಯರು ಈ ವಿಷಯಕ್ಕೆ ಸ್ವತಃ ಏನು ಬರೆದಿರುತ್ತಾರೆ ಎಂಬುದನ್ನು ಮೊದಲು ಅವರ ಭಾಷ್ಯದಿಂದಲೇ ತಿಳಿದುಕೊಳ್ಳುವದು ಯುಕ್ತವಾದ್ದರಿಂದ ಅವರ ಭಾಷ್ಯಪಙ್ಕ್ತಿಗಳನ್ನೇ ಕೊಟ್ಟು, ನಾವು ಅಲ್ಲಲ್ಲಿ ಶಾಂಕರವೇದಾಂತಸಿದ್ಧಾಂತವನ್ನೂ ಪಾಂಚರಾತ್ರಸಿದ್ಧಾಂತವನ್ನೂ ಹೋಲಿಸಿನೋಡುತ್ತಾ ಬಂದಿರುತ್ತೇವೆ. ಭಗವಂತನ ಸ್ವರೂಪ, ಭಗವಂತನ ಗುಣಗಳು, ಪರಮಾರ್ಥ - ತತ್ತ್ವ- ಇವುಗಳ ವಿಷಯದಲ್ಲಿ ಈವರೆಗೆ ನಾವು ವಿಮರ್ಶಿಸಿದ್ದರಲ್ಲಿ ಆ ಆಚಾರ್ಯರು ಒಪ್ಪಿರುವ **ನಿರ್ವಿಶೇಷಾದ್ವೈತಾತ್ಮನನ್ನೇ ನಾರಾಯಣ, ವಾಸುದೇವ, ಪುರುಷ- ಮುಂತಾದ ಹೆಸರುಗಳಿಂದ ಪಾಂಚರಾತ್ರಜ್ಞರೂ ಒಪ್ಪಿರುತ್ತಾರೆಂದು ಕಂಡುಬಂದಿದೆ.** ಹೀಗಿರುವದಾದರೆ, ಪಾಂಚರಾತ್ರ ಅಥವಾ ಭಾಗವತಮತದವರ ಅಭಿಪ್ರಾಯದಲ್ಲಿ ಯಾವ ದೋಷವನ್ನು ಅವರು ಕಂಡು ಅದನ್ನು ಎಷ್ಟರ ಮಟ್ಟಿಗೆ

ತಿರಸ್ಕರಿಸಿರುತ್ತಾರೆ?- ಎಂಬುದನ್ನು ಅವರಿಂದಲೇ ಕೇಳಿ ತಿಳಿದುಕೊಂಡು ಆ ವಿಷಯಕ್ಕೆ ನಮ್ಮ ತೀರ್ಮಾನವನ್ನು ಮಾಡಿಕೊಳ್ಳುವದು ಯುಕ್ತವೆಂದು ಒಪ್ಪಬೇಕು. ಆದ್ದರಿಂದ ಈ ವಿಷಯಕ್ಕೆ ಸೂತ್ರಭಾಷ್ಯದಲ್ಲಿ ಅವರು ಬರೆದಿರುವದನ್ನು ಇಲ್ಲಿ ಅನುವಾದಮಾಡಿಕೊಳ್ಳುವದಕ್ಕೆ ಪ್ರಯತ್ನಿಸುವೆವು.

ವೇದಾಂತಮೀಮಾಂಸಾಶಾಸ್ತ್ರದ ಎರಡನೆಯ ಅಧ್ಯಾಯದ ಎರಡನೆಯ ಪಾದದ ಕೊನೆಯ ಅಧಿಕರಣದಲ್ಲಿ ಅವರು ಹೀಗೆಂದು ಬರೆದಿರುತ್ತಾರೆ:

"ಯೇಷಾಮ್ ಅಪ್ರಕೃತಿಃ ಅಧಿಷ್ಠಿತಾ, ಕೇವಲನಿಮಿತ್ತಕಾರಣಮ್ ಈಶ್ವರಃ ಅಭಿಮತ: ತೇಷಾಂ ಪಕ್ಷಃ ಪ್ರತ್ಯಾಖ್ಯಾತಃ | ಯೇಷಾಂ ಪುನಃ ಪ್ರಕೃತಿಶ್ಚ ಅಧಿಷ್ಠಾತಾ ಚ ಉಭಯಾತ್ಮಕಂ ಕಾರಣಮ್, ಈಶ್ವರಃ ಅಭಿಮತಃ ತೇಷಾಂ ಪಕ್ಷಃ ಪ್ರತ್ಯಾಖ್ಯಾಯತೇ | ನನು ಶ್ರುತಿಸಮಾಶ್ರಯಣೇನಾಪಿ ಏವಂರೂಪ ಏವ ಈಶ್ವರಃ ಪ್ರಾಕ್ ನಿರ್ಧಾರಿತಃ ಪ್ರಕೃತಿಶ್ಚ ಅಧಿಷ್ಠಾತಾ ಚ ಇತಿ | ಶ್ರುತ್ಯನುಸಾರಿಣೀ ಚ ಸ್ಮೃತಿಃ ಪ್ರಮಾಣಮ್ ಇತಿ ಸ್ಥಿತಿಃ | ತತ್ ಕಸ್ಯ ಹೇತೋಃ, ಏಷ ಪಕ್ಷಃ ಪ್ರತ್ಯಾಚಿಖ್ಯಾಸಿತಃ ಇತಿ ?

ಉಚ್ಯತೇ| ಯದ್ಯಪಿ ಏವಞ್ಜಾತೀಯಕೋಽಂಶಃ ಸಮಾನತ್ವಾತ್ ನ ವಿಸಂವಾದ ಗೋಚರೋ ಭವತಿ, ಅಸ್ತಿ ತು ಅಂಶಾನ್ತರಂ ವಿಸಂವಾದಸ್ಥಾನಮ್ ಇತ್ಯತಃ, ತತ್ಪ್ರತ್ಯಾಖ್ಯಾನಾಯ ಆರಮ್ಭಃ ||" ಸೂ. ಭಾ. ೨-೨-೪೨

ಈ ಭಾಷ್ಯಭಾಗದ ಅಭಿಪ್ರಾಯವೇನೆಂದರೆ: ಶಂಕರಾಚಾರ್ಯರು ಒಪ್ಪಿರುವಂತೆ ಬ್ರಹ್ಮವು ಜಗತ್ತಿಗೆ ಉಪಾದಾನಕಾರಣವೂ ನಿಮಿತ್ತಕಾರಣವೂ ಆಗಿದೆ ಎಂದು ಸೂತ್ರದಲ್ಲಿ (ವೇ. ಸೂ. ೧-೪-೨೩ರಲ್ಲಿ) ತೀರ್ಮಾನವಾಗಿತ್ತು. ಅದಕ್ಕೆ ವಿರುದ್ಧವಾಗಿ ಪಾಶುಪತಾಗಮನವನ್ನು ಪ್ರಮಾಣವಾಗಿ ಹಿಡಿದಿರುವವರು ಪರಮಾತ್ಮನು ಜಗತ್ತಿಗೆ ಕೇವಲ ನಿಮಿತ್ತಕಾರಣನೇ ಎಂದು ವೇದವಿರುದ್ಧವಾದ ಸಿದ್ಧಾಂತವನ್ನು ಅವಲಂಬಿಸಿದ್ದರು. ಅವರ ಮತವನ್ನು ಹಿಂದಿನ ಅಧಿಕರಣದಲ್ಲಿ ಖಂಡಿಸಲಾಗಿತ್ತು. ಈಗ ಪಾಂಚರಾತ್ರಾಗಮವನ್ನು ಪ್ರಮಾಣವಾಗಿ ಹಿಡಿದಿರುವವರ ಮತವನ್ನು ಇಲ್ಲಿ ಖಂಡಿಸುವದಕ್ಕೆ ಮೊದಲಾಗಿದೆ.

ಈ ಆಗಮವನ್ನು ನಂಬಿರುವವರು ವೇದಾಂತಿಗಳಂತೆಯೇ ಪರಮಾತ್ಮನು ಜಗತ್ತಿಗೆ ನಿಮಿತ್ತಕಾರಣಮಾತ್ರವಲ್ಲ. ಉಪಾದಾನಕಾರಣನೆಂದೂ ನಂಬಿರುತ್ತಾರೆ. ಈವರೆಗೆ ನಾವು ವರ್ಣಿಸಿರುವ ವಾಸುದೇವವ್ಯೂಹದ ವರ್ಣನೆಯಲ್ಲಿ ಆ ವಾಸುದೇವಭಗವಂತನಿಂದಲೇ ಜಗತ್ತು ಹುಟ್ಟಿ ಆತನಲ್ಲಿಯೇ ಪ್ರಲಯವಾಗುವದೆಂಬುದನ್ನು ಆಗಲೇ ಕಂಡುಕೊಂಡದ್ದಾಗಿದೆ. ಆದ್ದರಿಂದ ಪಾಂಚರಾತ್ರಾಗಮಕ್ಕೂ ವೇದಾಂತಕ್ಕೂ ಈ ವಿಷಯದಲ್ಲಿ ಯಾವ ವೈಷಮ್ಯವೂ ಇಲ್ಲವೆಂದಾಯಿತಷ್ಟೆ? ಹಾಗಾದರೆ ಅವರ ಮತವನ್ನೇಕೆ ಖಂಡಿಸಬೇಕು?

ಶ್ರುತಿಗೆ ಅನುಗುಣವಾಗಿರುವ ಸ್ಮೃತಿಯನ್ನು ಪ್ರಮಾಣವೆಂದೇ ಹಿಡಿಯುವದು ವೇದಾಂತಿಗಳಿಗೆ ಯುಕ್ತವಷ್ಟೆ? ಎಂಬುದು ಆಕ್ಷೇಪ.

ಇದಕ್ಕೆ ಸಮಾಧಾನವೇನೆಂದರೆ ಈ ಅಂಶದಲ್ಲಿ ಈ ಎರಡು ಸಿದ್ಧಾಂತಗಳಿಗೂ ವೈಲಕ್ಷಣ್ಯವಿಲ್ಲದಿದ್ದರೂ ಮತ್ತೆ ಬೇರೆಯ ಅಂಶದಲ್ಲಿ ಪರಸ್ಪರವಿರೋಧವಿದೆ. ಆದ್ದರಿಂದ ಅದನ್ನು ಖಂಡಿಸಿರುತ್ತೇವೆ– ಎಂಬುದು. ಶಂಕರಾಚಾರ್ಯರು ಭಾಗವತರು ಒಪ್ಪಿರುವ ಸಿದ್ಧಾಂತದ ಮತ್ತು ಸಾಧನಪ್ರಕಾರಗಳ ಬಹ್ವಂಶಗಳನ್ನು ಒಪ್ಪಿರುತ್ತಾರೆ; ಇಷ್ಟೇ ಅಲ್ಲ ತಾವೂ ಅವನ್ನು ವೇದಾಂತಸಮ್ಮತವೆಂದೇ ಹೇಳಿ ಪ್ರಮಾಣವಾಕ್ಯಗಳನ್ನು ಮಹಾಭಾರತದ ನಾರಾಯಣಾಖ್ಯಾನದಿಂದಲೇ ಉದಾಹರಿಸಿಕೊಂಡಿರುತ್ತಾರೆ. ಆದರೆ ಅವರು ಒಪ್ಪದೆ ಇರುವ ಒಂದೇ ಒಂದು ಅಂಶವೆಂದರೆ ಇದು:

> ನ ವಾಸುದೇವಸಂಜ್ಞಕಾತ್ ಪರಮಾತ್ಮನಃ ಸಙ್ಕರ್ಷಣಸಂಜ್ಞಕಸ್ಯ ಜೀವಸ್ಯ ಉತ್ಪತ್ತಿಃ ಸಂಭವತಿ । ಅನಿತ್ಯತ್ವಾದಿದೋಷಪ್ರಸಙ್ಗಾತ್ । ಉತ್ಪತ್ತಿಮತ್ತ್ವೇ ಹಿ ಜೀವಸ್ಯ ಅನಿತ್ಯತ್ವಾದಯೋ ದೋಷಾಃ ಪ್ರಸಜ್ಯೇರನ್ । ತತಶ್ಚ ನೈವಾಸ್ಯ ಭಗವತ್ಪ್ರಾಪ್ತಿಃ ಮೋಕ್ಷಃ ಸ್ಯಾತ್ । ಕಾರಣಪ್ರಾಪ್ತೌ ಕಾರ್ಯಸ್ಯ ಪ್ರವಿಲಯಪ್ರಸಙ್ಗಾತ್ । ಪ್ರತಿಷೇಧಿಷ್ಯತಿ ಚ ಆಚಾರ್ಯಃ ಜೀವಸ್ಯೋತ್ಪತ್ತಿಮ್ "ನಾತ್ಮಾಽಶ್ರುತೇಃ, ನಿತ್ಯತ್ವಾಚ್ಚ ತಾಭ್ಯಃ" (ವೇ. ಸೂ. ೨-೩-೧೭) ಇತಿ। ತಸ್ಮಾತ್ ಅಸಙ್ಗತಾ ಏಷಾ ಕಲ್ಪನಾ ॥
>
> "ಇತಶ್ಚ ಅಸಙ್ಗತೈಷಾ ಕಲ್ಪನಾ। ಯಸ್ಮಾತ್ ನ ಹಿ ಲೋಕೇ ಕರ್ತುರ್ದೇವದತ್ತಾದೇಃ ಕರಣಂ ಪರಶ್ವಾದಿ ಉತ್ಪದ್ಯಮಾನಂ ದೃಶ್ಯತೇ। ವರ್ಣಯನ್ತಿ ಚ ಭಾಗವತಾಃ ಕರ್ತುರ್ಜೀವಾತ್ ಸಙ್ಕರ್ಷಣಸಂಜ್ಞಕಾತ್ ಕರಣಂ ಮನಃ ಪ್ರದ್ಯುಮ್ನಸಂಜ್ಞಕಮ್ ಉತ್ಪದ್ಯತೇ ಕರ್ತೃಜಾಚ್ಚ ತಸ್ಮಾತ್ ಅನಿರುದ್ಧಸಂಜ್ಞಕೋಽಹಙ್ಕಾರ ಉತ್ಪದ್ಯತ ಇತಿ। ನ ಚೈದತ್ ದೃಷ್ಟಾನ್ತಮನ್ತರೇಣ ಅಧ್ಯವಸಾತುಂ ಶಕ್ನುಮಃ। ನ ಚ ಏವಂ ಭೂತಾಂ ಶ್ರುತಿಮ್ ಉಪಲಭಾಮಹೇ॥"
>
> ಸೂ. ಭಾ. ೨-೨-೪೨,೪೩

ಈ ಭಾಷ್ಯಭಾಗದ ಅಭಿಪ್ರಾಯವೇನೆಂದರೆ: ಜೀವನಿಗೆ ಉತ್ಪತ್ತಿಯುಂಟೆಂದು ಈ ಆಗಮದವರು ಕಲ್ಪಿಸಿರುವದು ಸರಿಯಲ್ಲ; ಏಕೆಂದರೆ ಅದು ನಿಜವಾದರೆ ಜೀವನು ಅನಿತ್ಯನೆಂದೇ ಆಗುತ್ತದೆ; ಆಗ ಅವನಿಗೆ ಮೋಕ್ಷವಾಗುವದೆಂಬ ಆಶೆಯೇ ಇಲ್ಲವಾಗುವದು. ಜೀವನು ಬ್ರಹ್ಮದ ಕಾರ್ಯವೆಂದಾದರೆ ತನ್ನ ಕಾರಣಸ್ವರೂಪನಾದ ಭಗವಂತನನ್ನು ಸೇರಿಕೊಂಡಾಗ–ಮಡಕೆ, ಕುಡಿಕೆ–ಮುಂತಾದ ಕಾರ್ಯಗಳು ಮಣ್ಣನ್ನು ಸೇರಿಕೊಂಡಾಗ ತಾವೇ ಇಲ್ಲವಾಗುವಂತೆ –ತಾನೇ ಇಲ್ಲವಾಗಿಬಿಡುತ್ತಾನೆ ಎಂದಾಗುವದು. ಇದು

ಶ್ರುತಿಯುಕ್ತಿಗಳಿಗೆ ವಿರುದ್ಧವಾದ ಕಲ್ಪನೆ ಎಂಬುದನ್ನು ಸೂತ್ರಕಾರರೂ (ವೇ. ಸೂ. ೨-೩-೧೭ರಲ್ಲಿ) ತಿಳಿಸಿಕೊಟ್ಟಿರುತ್ತಾರೆ. ಇನ್ನು ಕರ್ತೃವಾದ ಜೀವನಿಂದ ಕರಣವಾದ ಮನಸ್ಸು ಉತ್ಪತ್ತಿಯಾಗುವದೆಂದು ಹೇಳುವದು ಎಂದಿಗೂ ಯುಕ್ತವಾಗಲಾರದು. ಕಟ್ಟಿಗೆಯನ್ನು ಕಡಿಯುವವನಿಂದ ಅವನ ಕೊಡಲಿಯು ಹುಟ್ಟುವದೆಂದು ಹೇಳುವಂತೆ ಇದು ಹಾಸ್ಯಾಸ್ಪದವಾಗಿರುತ್ತದೆ. ಲೋಕದಲ್ಲಿ ಕರ್ತೃವಿನಿಂದ ಕರಣವು ಹುಟ್ಟುವದೆಂಬುದಕ್ಕೆ ಯಾವ ದೃಷ್ಟಾಂತವೂ ಇಲ್ಲದ್ದರಿಂದ ಜೀವನಿಂದ ಮನಸ್ಸು ಹುಟ್ಟುವದೆಂಬುದನ್ನು ಅನುಮಾನಪ್ರಮಾಣದಿಂದಲೂ ಸಿದ್ಧಪಡಿಸುವದಾಗುವಂತಿಲ್ಲ; ಇದಕ್ಕೆ ಶ್ರುತಿಯ ಪ್ರಮಾಣವಂತೂ ಇಲ್ಲವೇ ಇಲ್ಲ.

ಈಗ ಇನ್ನೊಂದು ವಿಷಯವನ್ನು ಮನಸ್ಸಿಗೆ ತಂದುಕೊಳ್ಳಬೇಕಾಗುತ್ತದೆ. ಪ್ರಕೃತವಾದ ನಾರಾಯಣೀಯದಲ್ಲಿ **'ಉತ್ಪನ್ನ ಏವ ಭವತಿ ಶರೀರಂ ಚೇಷ್ಟಯನ್ ಪ್ರಭುಃ'** (೩೩೯-೩೫) **ಎಂದು ಸಂಕರ್ಷಣನಿಗೆ ಉತ್ಪತ್ತಿಯನ್ನು** ಹೇಳಿದೆ; **'ಸ ಜೀವಃ ಪರಿಸಂಖ್ಯಾತಃ'** ಎಂದು ಅವನನ್ನು ಜೀವನೆಂಬ ಹೆಸರಿನಿಂದಲೂ ಕರೆದಿದೆ. ಮುಂದೆ ಅವನಿಂದ ಹುಟ್ಟುವ ಪ್ರದ್ಯುಮ್ನನನ್ನು 'ಮನಸ್ಸು' ಎಂದೂ ಕರೆದಿರುವದು ಕಂಡುಬರುತ್ತದೆ. **'ಸ ಮನಃ ಸರ್ವಭೂತಾನಾಂ ಪ್ರದ್ಯುಮ್ನಃ ಪರಿಪಠ್ಯತೇ'** (೩೩೯-೩೮) ಅವನಿಂದ ಹುಟ್ಟಿದ **ಅಹಂಕಾರವು** ಅನಿರುದ್ಧನು (**'ತಸ್ಮಾತ್ ಪ್ರಸೂತೋ ಯಃ ಕರ್ತಾ.......... ಸೋऽನಿರುದ್ಧಃ** ೩೩೯-೩೯') ಎಂದು ಹೇಳಿರುವದು ನಿಜ. ಆದರೆ ಅಲ್ಲಿನ ಈ ಶ್ಲೋಕಗಳನ್ನು ಮನಸ್ಸಿಗೆ ತಂದುಕೊಳ್ಳುವದು ಅವಶ್ಯ:-

**ಯೋ ವಾಸುದೇವೋ ಭಗವಾನ್ ಕ್ಷೇತ್ರಜ್ಞೋ ನಿರ್ಗುಣಾತ್ಮಕಃ |**
**ಜ್ಞೇಯಃ ಸ ಏವ ರಾಜೇನ್ದ್ರ ಜೀವಃ ಸಂಕರ್ಷಣಃ ಪ್ರಭುಃ** ॥೩೩೯-೪೦॥
**ಸಙ್ಕರ್ಷಣಾಚ್ಚ ಪ್ರದ್ಯುಮ್ನೋ ಮನೋಭೂತಃ ಸ ಉಚ್ಯತೇ |**
**ಪ್ರದ್ಯುಮ್ನಾದ್ ಯೋऽನಿರುದ್ಧಸ್ತು ಸೋऽಹಙ್ಕಾರಃ ಸ ಈಶ್ವರಃ** ॥೪೧॥

ಪಾಂಚರಾತ್ರರಲ್ಲಿ 'ಕ್ಷೇತ್ರಜ್ಞ' ಎಂಬ ಹೆಸರನ್ನು ಪರಮಾತ್ಮನಿಗೇ ಪಾರಿಭಾಷಿಕವಾಗಿ ಇಟ್ಟುಕೊಂಡಂತೆ ಕಾಣುತ್ತದೆ. ಅದರಂತೆ ಇಲ್ಲಿಯೂ 'ನಿರ್ಗುಣಕ್ಷೇತ್ರಜ್ಞನಾದ ವಾಸುದೇವನಿದಾನಲ್ಲ. ಅವನೇ ಜೀವನಾದ ಸಂಕರ್ಷಣಪ್ರಭು, ಸಂಕರ್ಷಣನಿಂದಾಗುವ ಪ್ರದ್ಯುಮ್ನನೇ ಮನಸ್ಸಾಗಿರುವಾತನು ಎನ್ನಿಸಿಕೊಳ್ಳುತ್ತಾನೆ. ಪ್ರದ್ಯುಮ್ನನಿಂದ ಉಂಟಾಗುವ ಅನಿರುದ್ಧನಿದಾನಲ್ಲ ಅವನೇ ಅಹಂಕಾರವು, ಅವನೇ ಈಶ್ವರನು' - ಎಂದಿರುತ್ತದೆ. ವಾಸುದೇವನೇ ಸಂಕರ್ಷಣಾದಿವ್ಯೂಹಗಳಾಗಿ ಇರುತ್ತಾನೆಂದು ಸ್ಪಷ್ಟವಾಗಿ ಹೇಳಿರುತ್ತದೆ. ಇದನ್ನು ನೋಡಿದರೆ 'ಜೀವ', 'ಮನಸ್ಸು', 'ಅಹಂಕಾರ'- ಎಂಬಿವು ಲೋಕಪ್ರಸಿದ್ಧವಾದ ಜೀವಾದಿಗಳ ವಾಚಕಶಬ್ದಗಳಲ್ಲದೆ ಇರಬಹುದೆ? ಅದು ನಿಜವಾದರೆ ಭಾಗವತಮತದವರು

ಜೀವಾದ್ಯುತ್ಪತ್ತಿಯನ್ನು ಒಪ್ಪಿರುತ್ತಾರೆಂಬುದೇ ಸುಳ್ಳಾಗುವದಲ್ಲ! ಸೂತ್ರಕಾರರು ಈ ವಿಷಯವನ್ನು ಮನಸ್ಸಿಗೆ ತಂದುಕೊಳ್ಳದೆ ಈ ವಿಷಯದಲ್ಲಿ ಪಾಂಚರಾತ್ರಾಗಮವನ್ನು ಹೇಗೆ ಖಂಡಿಸಿದರು?- ಎಂಬ ಸಂಶಯವುಂಟಾಗುತ್ತದೆ. ಶ್ರೀ ರಾಮಾನುಜಾಚಾರ್ಯರೂ ಮಧ್ವಾಚಾರ್ಯರೂ ಪಾಂಚರಾತ್ರಾಗಮವನ್ನು ತಮ್ಮ ತಮ್ಮ ಸಿದ್ಧಾಂತಕ್ಕೆ ಪ್ರಮಾಣವೆಂದು ನಂಬಿರುತ್ತಾರೆ. ಅವರಿಬ್ಬರೂ ಈ ವಿಷಯದಲ್ಲಿ ಶಂಕರಾಚಾರ್ಯರಿಗಿಂತ ಬೇರೆಯಾದ ಅಭಿಪ್ರಾಯವನ್ನೇ ಪ್ರಕಟಿಸಿರುತ್ತಾರೆ.

ಶ್ರೀ ರಾಮಾನುಜಾಚಾರ್ಯರವರ ಮತದಂತೆ ಇಲ್ಲಿ ಪಂಚರಾತ್ರ ಶಾಸ್ತ್ರವನ್ನು ಖಂಡಿಸಿಯೇ ಇಲ್ಲ. ಅವರು ಸೂತ್ರದ ಅಭಿಪ್ರಾಯವನ್ನು ಹೀಗೆ ಬರೆದಿರುತ್ತಾರೆ:

(೧) **'ಉತ್ಪತ್ತ್ಯಸಂಭವಾತ್'** ಈ ಸೂತ್ರದಲ್ಲಿ ಪೂರ್ವಪಕ್ಷವಿದೆ. ವಾಸುದೇವನಿಂದ ಜೀವನ ಉತ್ಪತ್ತಿಯನ್ನು ಹೇಳಿರುವದು ಶ್ರುತಿವಿರುದ್ಧ.

(೨) **'ನ ಚ ಕರ್ತುಃ ಕರಣಮ್'** ಇದೂ ಪೂರ್ವಪಕ್ಷಸೂತ್ರ. ಜೀವನಿಂದ ಕರಣವಾದ ಮನಸ್ಸು ಉತ್ಪನ್ನವಾಯಿತೆಂದು ಹೇಳುವದೂ ಸಂಭವಿಸುವದಿಲ್ಲ. ಏಕೆಂದರೆ ಪರಬ್ರಹ್ಮದಿಂದಲೇ ಮನಸ್ಸು ಉಂಟಾಯಿತೆಂದು ಶ್ರುತಿಯಿದೆ.

ಹೀಗೆ ಈ ಆಗಮದಲ್ಲಿ ಹೇಳಿರುವದು ಶ್ರುತಿವಿರುದ್ಧವೆಂಬ ಪೂರ್ವಪಕ್ಷಕ್ಕೆ ಮುಂದಿನ ಎರಡು ಸೂತ್ರಗಳಲ್ಲಿ ಸಮಾಧಾನವನ್ನು ಹೇಳಿದೆ:-

(೩) **'ವಿಜ್ಞಾನಾದಿಭಾವೇ ವಾ ತದಪ್ರತಿಷೇಧ।'** ವಿಜ್ಞಾನಾದಿ ಎಂದರೆ ಪರಬ್ರಹ್ಮವು; ಸಂಕರ್ಷಣಾದಿಗಳೂ ಪರಬ್ರಹ್ಮವೇ ಆಗಿರುವದರಿಂದ ಈ ಪಾಂಚರಾತ್ರಶಾಸ್ತ್ರವನ್ನು ವಿರುದ್ಧವೆನ್ನಲಾಗದು- ಎಂದು ಸೂತ್ರದ ಅರ್ಥ. ಶ್ರೀ ರಾಮಾನುಜರ ಮತದಲ್ಲಿ ಜೀವ, ಮನಸ್ಸು, ಅಹಂಕಾರ– ಈ ತತ್ತ್ವಗಳಿಗೆ ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಇವರು ಅಧಿಷ್ಠಾತೃದೇವತೆಗಳು, ಆದ್ದರಿಂದ ಅವರನ್ನು ಆಗಮದಲ್ಲಿ ಜೀವಾದಿಶಬ್ದಗಳಿಂದ; ಹೆಸರಿಸಿ ಹೇಳಿರುತ್ತದೆ.

(೪) **'ವಿಪ್ರತಿಷೇಧಾಚ್ಚ ।'** ಪಂಚರಾತ್ರತಂತ್ರದಲ್ಲಿಯೂ ಜೀವನು ನಿತ್ಯನೆಂದೇ ಹೇಳಿರುವದರಿಂದ ಉತ್ಪತ್ತಿಯನ್ನು ಅಲ್ಲಿಯೂ ಪ್ರತಿಷೇಧಿಸಿದೆ ಎಂದು ಸೂತ್ರಕ್ಕೆ ಅರ್ಥ. (ಆಗಮಶಾಸ್ತ್ರದಲ್ಲಿ ವಿರುದ್ಧಾರ್ಥವಿದೆ ಎಂದು ಶಂಕರಾಚಾರ್ಯರು ಹೇಳಿರುವದು ಸೂತ್ರದ ಅರ್ಥವಲ್ಲ- ಎಂಬುದು ಈ ಆಚಾರ್ಯರ ಮತ).

ಇನ್ನು ಶ್ರೀ ಮಧ್ವಾಚಾರ್ಯರವರ ಮತದಂತೆ ಈ ಸೂತ್ರಗಳಲ್ಲಿ 'ಮಹಾವಾಮ', 'ಮಧ್ಯವಾಮ', 'ಅಣುವಾಮ'- ಎಂಬ ಶಾಕ್ತರ ಮತಭೇದಗಳನ್ನು ಖಂಡಿಸಿದೆ. ಈ ಆಚಾರ್ಯರೂ ಶ್ರೀ ರಾಮಾನುಜಾಚಾರ್ಯರು ಕೊಟ್ಟಿರುವ ಯುಕ್ತಿಗಳನ್ನೇ ಮುಖ್ಯವಾಗಿ

ಕೊಟ್ಟಿರುತ್ತಾರಾದ್ದರಿಂದ ಸೂತ್ರಗಳಿಗೆ ಪಂಚರಾತ್ರಾಗಮನಿಂದಾಪರತ್ವವನ್ನು ಹೇಳುವದು ಸರಿಯಲ್ಲ- ಎಂಬುದು ಅವರ ಅಭಿಪ್ರಾಯವೂ ಆಗಿರುತ್ತದೆ.

ನಾವು ಈ ಚಿಕ್ಕ ಪುಸ್ತಕವನ್ನು ಬರೆದಿರುವದು 'ಭಾಗವತಸಂಪ್ರದಾಯವು ಎಷ್ಟರಮಟ್ಟಿಗೆ ಶಾಂಕರಮತಕ್ಕೆ ಹೊಂದುತ್ತದೆ?' ಎಂಬುದನ್ನು ತಿಳಿಸುವುದಕ್ಕೇ ಹೊರತು ಮತಾಂತರದವರ ಅಭಿಪ್ರಾಯವನ್ನು ವಿಮರ್ಶೆಮಾಡುವುದಕ್ಕಲ್ಲ. ಆದ್ದರಿಂದ ಇಲ್ಲಿ ಶ್ರೀ ಮಧ್ವರಾಮಾನುಜಾದಿಗಳು ಉದಾಹರಿಸಿರುವ ಪ್ರಮಾಣವಚನಗಳನ್ನು ವಿಸ್ತಾರವಾಗಿ ಪರಿಶೀಲಿಸುವ ಗೋಜಿಗೆ ಹೋಗುವದಿಲ್ಲ. ಪ್ರಕೃತದಲ್ಲಿ ನಾರಾಯಣೀಯಪ್ರೋಕ್ತವಾದ ವ್ಯೂಹವಾದಕ್ಕೆ ಶಂಕರಾಚಾರ್ಯರು ಅಂಟಿಸಿರುವ ದೋಷವು ಹತ್ತುವದಿಲ್ಲವೆಂದು ಪ್ರತಿವಾದವನ್ನು ಹೂಡಬಹುದಾಗಿದೆ- ಎಂಬುದಿಷ್ಟನ್ನೇ ತಿಳಿಸುವದಕ್ಕಾಗಿ ಶ್ರೀ ರಾಮಾನುಜ ಶ್ರೀ ಮಧ್ವಾದಿಗಳ ಅಭಿಪ್ರಾಯಗಳನ್ನು ಇಲ್ಲಿ ತರಬೇಕಾಯಿತು. ಇದಂತಿರಲಿ. ಶಂಕರಾಚಾರ್ಯರವರಿಗೆ ಈ ವ್ಯಾಖ್ಯಾನಭೇದವು ಮನಸ್ಸಿಗೆ ಹೊಳೆದಿರಲಿಲ್ಲವೆ?- ಎಂಬುದಕ್ಕೆ ಉತ್ತರವಾಗಿ ಇದೇ ಅಧಿಕರಣದಲ್ಲಿರುವ ಅವರ ಭಾಷ್ಯದ ವಾಕ್ಯಾಂತರವನ್ನು ಈಗ ಉದಾಹರಿಸುವೆವು: 'ವಿಜ್ಞಾನಾದಿಭಾವೇ ವಾ ತದಪ್ರತಿಷೇಧಃ' (ವೇ. ಸೂ. ೨-೨-೪೪) ಎಂಬ ಸೂತ್ರಕ್ಕೆ ಅವರು ಬರೆದಿರುವದೇನೆಂದರೆ:

> "ಅಥಾಪಿ ಸ್ಯಾತ್, ನ ಚೈತೇ ಸಙ್ಕರ್ಷಣಾದಯೋ ಜೀವಾದಿಭಾವೇನ ಅಭಿಪ್ರೇಯನ್ತೇ, ಕಿಂ ತರ್ಹಿ, ಈಶ್ವರಾ ಏವೈತೇ ಸರ್ವೇ ಜ್ಞಾನೈಶ್ವರ್ಯಶಕ್ತಿಬಲವೀರ್ಯತೇಜೋಭಿರೈಶ್ವರೈರ್ಧರ್ಮೈರನ್ವಿತಾ ಅಭ್ಯುಪಗಮ್ಯನ್ತೇ। ವಾಸುದೇವಾ ಏವೈತೇ ಸರ್ವೇ ನಿರ್ದೋಷಾ ನಿರಧಿಷ್ಠಾನಾ ನಿರವದ್ಯಾಶ್ಚ ಇತಿ। ತಸ್ಮಾನ್ನಾಯಂ ಯಥಾವರ್ಣಿತ ಉತ್ಪತ್ತ್ಯಸಮ್ಭವೋ ದೋಷಃ ಪ್ರಾಪ್ನೋತಿ- ಇತಿ। ಅತ್ರೋಚ್ಯತೇ- ಏವಮಪಿ ತದಪ್ರತಿಷೇಧಃ, ಉತ್ಪತ್ತ್ಯಸಮ್ಭವಸ್ಯ ಅಪ್ರತಿಷೇಧಃ। ಪ್ರಾಪ್ನೋತ್ಯೇವಾಯಮ್ ಉತ್ಪತ್ತ್ಯಸಮ್ಭವೋ ದೋಷಃ ಪ್ರಕಾರಾನ್ತರೇಣ ಇತ್ಯಭಿಪ್ರಾಯಃ- ಕಥಮ್? ಯದಿ ತಾವತ್ ಅಯಮ್ ಅಭಿಪ್ರಾಯಃ- ಪರಸ್ಪರಭಿನ್ನಾ ಏವೈತೇ ವಾಸುದೇವಾದಯಶ್ಚತ್ವಾರ ಈಶ್ವರಾಃ, ತುಲ್ಯಧರ್ಮಾಣಃ; ನೈಷಾಮ್ ಏಕಾತ್ಮಕತ್ವಮಸ್ತಿ- ಇತಿ। ತತೋ ಅನೇಕೇಶ್ವರಕಲ್ಪನಾನರ್ಥಕ್ಯಮ್; ಏಕೇನೈವ ಈಶ್ವರೇಣ ಈಶ್ವರಕಾರ್ಯಸಿದ್ಧೇಃ। ಸಿದ್ಧಾನ್ತಹಾನಿಶ್ಚ, ಭಗವಾನೇವೈಕೋ ವಾಸುದೇವಃ ಪರಮಾರ್ಥತತ್ತ್ವಮ್ ಇತ್ಯಭ್ಯುಪಗಮಾತ್। ಅಥಾಯಮಭಿಪ್ರಾಯಃ, ಏಕಸ್ಯೈವ ಭಗವತಃ, ಏತೇ ಚತ್ವಾರೋ ವ್ಯೂಹಾಃ, ತುಲ್ಯಧರ್ಮಾಣಃ– ಇತಿ; । ತಥಾಪಿ ತದವಸ್ಥ ಏವ ಉತ್ಪತ್ತ್ಯಸಮ್ಭವಃ। ನ ಹಿ ವಾಸುದೇವಾತ್ ಸಙ್ಕರ್ಷಣಸ್ಯ ಉತ್ಪತ್ತಿಃ ಸಮ್ಭವತಿ

> **ಸಙ್ಕರ್ಷಣಾಚ್ಚ ಪ್ರದ್ಯುಮ್ನಸ್ಯಪ್ರದ್ಯುಮ್ನಾಚ್ಚ ಅನಿರುದ್ಧಸ್ಯ, ಅತಿಶಯಾಭಾವಾತ್। ಭವಿತವ್ಯಂ ಹಿ ಕಾರ್ಯಕಾರಣಯೋಃ ಅತಿಶಯೇನ, ಯಥಾ ಮೃದ್ಘಟಯೋಃ। ನ ಹಿ ಅಸತ್ಯತಿಶಯೇ 'ಕಾರ್ಯಮ್', 'ಕಾರಣಮ್'– ಇತ್ಯವಕಲ್ಪತೇ। ನ ಚ ಪಞ್ಚರಾತ್ರಸಿದ್ಧಾನ್ತಿಭಿಃ ವಾಸುದೇವಾದಿಷು ಏಕೈಕಸ್ಮಿನ್ ಸರ್ವೇಷು ವಾ ಜ್ಞಾನೈಶ್ವರ್ಯಾದಿ ತಾರತಮ್ಯಕೃತಃ ಕಶ್ಚಿದ್ ಭೇದೋಽಭ್ಯುಪಗಮ್ಯತೇ। ವಾಸುದೇವಾ ಏವ ಹಿ ಸರ್ವೇ ವ್ಯೂಹಾ ನಿರ್ವಿಶೇಷಾ ಇಷ್ಯನ್ತೇ । ನ ಚೈತೇ ಭಗವದ್ವ್ಯೂಹಾಃ, ಚತುಃ ಸಙ್ಖ್ಯಾಯಾಮೇವ ಅವತಿಷ್ಠೇರನ್, ಬ್ರಹ್ಮಾದಿಸ್ತಮ್ಬಪರ್ಯನ್ತಸ್ಯ ಸಮಸ್ತಸ್ಯೈವ ಜಗತೋ ಭಗವದ್ವ್ಯೂಹತ್ವಾವಗಮಾತ್।"**

ಈ ಭಾಷ್ಯದ ಅಭಿಪ್ರಾಯವೇನೆಂದರೆ: ಹೀಗಿದ್ದರೂ ಈ ತಂತ್ರದವರು ಹೀಗೆನ್ನಬಹುದು: ಸಂಕರ್ಷಣನೇ ಮುಂತಾದವರು ಜೀವನೇ ಮುಂತಾದ ಸ್ವರೂಪದವರೆಂದು ನಮ್ಮ ಅಭಿಪ್ರಾಯವಿಲ್ಲ; ಇವರೆಲ್ಲರೂ ವಾಸುದೇವರೂಪರೇ, ಅವರಲ್ಲಿ ಯಾವ ದೋಷವೂ ಇಲ್ಲ, ಅವರಿಗೆ ಮತ್ತೊಂದು ಆಶ್ರಯವಿಲ್ಲ, ಆದ್ದರಿಂದ ಪರಿಶುದ್ಧರು, ಆದ್ದರಿಂದ ಉತ್ಪತ್ತ್ಯ ಸಂಭವದೋಷವಿಲ್ಲ– ಎನ್ನುವದಾದರೆ, ಆಗ ಅವರು ಬೇರೆ ಬೇರೆ ಎನ್ನುವಿರಾದರೆ ಅನೇಕೇಶ್ವರರನ್ನು ಕಲ್ಪಿಸಿದ ಗೌರವದೋಷವು ನಿಮಗೆ ತಟ್ಟುತ್ತದೆ. ಹಾಗೆನ್ನುವದಾದರೆ ನಿಮ್ಮ ಸಿದ್ಧಾಂತವನ್ನು ಕೈಬಿಡಬೇಕಾಗುತ್ತದೆ; ಏಕೆಂದರೆ **ವಾಸುದೇವಭಗವಂತನೊಬ್ಬನೇ ಪರಮಾರ್ಥತತ್ತ್ವವೆಂದೇ** ನೀವು ಒಪ್ಪಿರುತ್ತೀರಿ. ಅಥವಾ ಒಬ್ಬನೇ ಭಗವಂತನ ನಾಲ್ಕು ವ್ಯೂಹಗಳಿವು, ಇವುಗಳಿಗೆ ಸಮಾನವಾದ ಧರ್ಮಗಳೇ ಇರುತ್ತವೆ– ಎನ್ನುವಿರಾದರೆ ಅವರಿಗೆ ಉತ್ಪತ್ತಿಯನ್ನು ಹೇಳಿದ್ದು ಸಂಭವಿಸುವದಿಲ್ಲ, ಕಾರಣಕ್ಕಿಂತ ಕಾರ್ಯದಲ್ಲಿ ಏನಾದರೂ ಅತಿಶಯವಿರಬೇಕಲ್ಲವೆ? ಇದಲ್ಲದೆ ವಾಸುದೇವಾದಿಗಳಲ್ಲಿ ಜ್ಞಾನಾದಿಗಳಿಂದಾಗಿರುವ ಯಾವ ಭೇದವನ್ನೂ ನಿಮ್ಮ ಸಿದ್ಧಾಂತದಲ್ಲಿ ಒಪ್ಪಿರುವದಿಲ್ಲ. ಎಲ್ಲಾ ವ್ಯೂಹಗಳೂ ನಿರ್ವಿಶೇಷರೇ ವಾಸುದೇವರೂಪರೇ ಎಂದಲ್ಲವೆ, ನೀವು ಒಪ್ಪಿರುವದು? ಇದೂ ಅಲ್ಲದೆ ಭಗವಂತನಿಗೆ ಇವು ನಾಲ್ಕೇ ವ್ಯೂಹಗಳು ಎಂದು ಇಲ್ಲಿಗೇ ನಿಲ್ಲಿಸುವದಕ್ಕೂ ಬರುವದಿಲ್ಲ; ಏಕೆಂದರೆ ಬ್ರಹ್ಮಾದಿಸ್ತಂಬಪರ್ಯಂತವಾಗಿರುವ ಜಗತ್ತೆಲ್ಲವೂ ಭಗವಂತನ ವ್ಯೂಹವೆಂದು ನಿಶ್ಚಿತವಾಗಿರುತ್ತದೆ.

ಈ ಖಂಡನೆಯಲ್ಲಿ ಮನಸ್ಸಿಗೆ ತಂದುಕೊಳ್ಳಬೇಕಾಗಿರುವ ಮುಖ್ಯ ವಿಷಯವೇನೆಂದರೆ: ಭಗವಂತನಿಗೆ ನಾಲ್ಕು ವ್ಯೂಹಗಳಿವೆ ಎಂಬ ಬಗೆಗೆ ಆಚಾರ್ಯರ ವಿರೋಧವೇನೂ ಇಲ್ಲ. ಆದರೆ ಜೀವಾದಿಗಳಿಗಾಗಲೀ, ಸಂಕರ್ಷಣಾದಿಭಗವದ್ವ್ಯೂಹಾದಿಗಳಿಗಾಗಲಿ ನಿಜವಾಗಿ ಉತ್ಪತ್ತಿಯಿದೆ– ಎನ್ನುವುದಾದರೆ ಇಲ್ಲಿ ಹೇಳಿರುವ ದೋಷಗಳೆಲ್ಲ ಪಂಚರಾತ್ರಶಾಸ್ತ್ರಕ್ಕೆ ಅಂಟುತ್ತವೆ. ಆದರೆ ಈ ಸಂಪ್ರದಾಯದವರು ಈ ದೋಷಗಳನ್ನು ಎಲ್ಲಿಯೂ ಒಪ್ಪಿಲ್ಲ;

ಆದ್ದರಿಂದ ಹೀಗೆ ಈ ಮತಕ್ಕೆ ಅಭಿಪ್ರಾಯವನ್ನು ಕಲ್ಪಿಸಬಾರದು– ಎಂಬುದೇ ಆಚಾರ್ಯರ ಆಶಯವಾಗಿರಬೇಕು. ಅವರು ನಾರಾಯಣೀಯವನ್ನು ಎಲ್ಲಾ ಪ್ರಕಾರಗಳಿಂದಲೂ ಒಪ್ಪಿ, ಅದರಿಂದ ತಮ್ಮ ಸಿದ್ಧಾಂತಕ್ಕೆ ಅನುಕೂಲವಾಗಿರುವ ಪ್ರಮಾಣವಚನಗಳನ್ನು ಮತ್ತೆ ಮತ್ತೆ ಭಾಷ್ಯದಲ್ಲಿ ಉದಾಹರಿಸಿಕೊಂಡಿರುತ್ತಾರೆಂಬುದನ್ನು ಆಗಲೇ ತೋರಿಸಿಕೊಟ್ಟಿರುತ್ತೇವೆ. ಎಲ್ಲವೂ ಪರಮಾತ್ಮನಿಂದಲೇ ಉತ್ಪನ್ನವಾಗುವದೆಂದೂ ಪ್ರಲಯದಲ್ಲಿ ಎಲ್ಲವೂ ಆತನಲ್ಲಿಯೇ ಪ್ರಲಯವಾಗುವವೆಂದೂ ಈ ವ್ಯೂಹಚತುಷ್ಟಯವರ್ಣನೆಯ ಅಧ್ಯಾಯದಲ್ಲಿಯೇ ಸ್ಪಷ್ಟವಾಗಿ ಬಂದಿರುತ್ತದೆ; ಹೀಗಿರುವಲ್ಲಿ ಆ ವಾಸುದೇವಭಗವಂತನೇ ವ್ಯೂಹಚತುಷ್ಟಯವಾಗಿ ತೋರಿಕೊಳ್ಳುತ್ತಾನೆಂದು ಸ್ಪಷ್ಟವಾಗಿ ಹೇಳಿರುವದನ್ನು ಆಚಾರ್ಯರು ಅರಿತುಕೊಂಡಿಲ್ಲವೆಂದು ಹೇಗೆ ಹೇಳುವದು ? ಶ್ರೀ ರಾಮಾನುಜಾಚಾರ್ಯರೇ ಮೊದಲಾದವರು ಉದಾಹರಿಸಿರುವ **ಸಂಹಿತೆಗಳನ್ನು** ಇಲ್ಲಿ ನಾವು ಪರಿಶೀಲನೆಗೆ ತೆಗೆದುಕೊಳ್ಳಬೇಕಾದದ್ದಿಲ್ಲ. ಏಕೆಂದರೆ ಆಚಾರ್ಯರ ಕಾಲಕ್ಕೆ ವಿಶಿಷ್ಟಾದ್ವೈತಾದಿವೇದಾಂತಪ್ರಭೇದಗಳಿದ್ದವೆ ? ಅವರುಗಳು ಪ್ರಮಾಣವಾಗಿ ಒಪ್ಪಿರುವ ಆಗಮಸಂಹಿತೆಗಳನ್ನು ಆಚಾರ್ಯರಕಾಲಕ್ಕೆ ಪಂಚರಾತ್ರಸಿದ್ಧಾಂತದವರು ಪ್ರಮಾಣವಾಗಿ ತಂದಿದ್ದರೆ ?– ಎಂಬುದನ್ನೇ ಮೊದಲು ವಿಚಾರಿಸಬೇಕಾಗಿರುತ್ತದೆ. ಅದು ಪ್ರಕೃತಗ್ರಂಥದ ವಿಷಯಕ್ಷೇತ್ರದಲ್ಲಿ ಸೇರಿಲ್ಲವೆಂಬುದನ್ನು ಆಗಲೇ ಹೇಳಿಟ್ಟಿದ್ದೇವೆ. ಆ ವಿಚಾರವನ್ನು ಕೈಬಿಟ್ಟರೂ ಈಗ ನಾವು ಪರಿಶೀಲಿಸುತ್ತಿರುವ ಮೋಕ್ಷಧರ್ಮಪರ್ವದ ಅಧ್ಯಾಯದಲ್ಲಿಯೇ **'ಮಾಯಾ ಹ್ಯೇಷಾ ಮಯಾ ಸೃಷ್ಟಾ ಯನ್ಮಾಂ ಪಶ್ಯಸಿ ನಾರದ'** ಈ ವಿಶ್ವರೂಪವು ನಾನು ಸೃಷ್ಟಿಸಿ ತೋರಿಸಿದ ಮಾಯೆಯು – ಎಂದು ಸುಸ್ಪಷ್ಟವಾಗಿ ಹೇಳಿದ ಭಗವಂತನು–

**ಅಹಂ ಹಿ ಜೀವಸಂಜ್ಞಾತೋ ಮಯಿ ಜೀವಃ ಸಮಾಹಿತಃ ।**
**ನೈವಂ ತೇ ಬುದ್ಧಿರತ್ರಾಭೂದ್ ದೃಷ್ಟೋ ಜೀವೋ ಮಯೇತಿ ವೈ॥** ೩೩೯–೪೭

"ನಾನೇ ಜೀವನೆಂಬ ಹೆಸರಿನಿಂದ ಪ್ರಸಿದ್ಧನಾಗಿರುವವನು, ನನ್ನಲ್ಲಿಯೇ ಜೀವನು ಸೇರಿಕೊಂಡಿರುತ್ತಾನೆ. 'ನಾನು ಜೀವನನ್ನು ಕಂಡೆನು' ಎಂಬ ಬುದ್ಧಿಯು ನಿನಗೆ ಉಂಟಾಗದಿರಲಿ!" ಎಂದು ಶ್ರೀಮನ್ನಾರಾಯಣನು ನಾರದರಿಗೆ ಹೇಳಿರುತ್ತಾನೆಂದಿದೆ. ಇದನ್ನೆಲ್ಲ ಮನದಂದುಕೊಂಡರೆ ಆಚಾರ್ಯರ ಅಭಿಪ್ರಾಯದಂತೆ ನಿರ್ವಿಶೇಷಾದ್ವೈತ ತತ್ತ್ವವೇ ವಾಸುದೇವನೆಂಬುದೇ ಪಾಂಚರಾತ್ರಸಿದ್ಧಾಂತವೆಂದಾಗುತ್ತದೆ. ಹೀಗಿರುವಾಗ ಜೀವರ ಉತ್ಪತ್ತಿಯೂ ಜಗತ್ತಿನ ಉತ್ಪತ್ತಿಯಂತೆ ಮಾಯಿಕವೇ, ಭಗವಂತನಾದ ವಾಸುದೇವನಲ್ಲಿಯೇ ಅವಿದ್ಯೆಯಿಂದ ಜೀವತ್ವವು ಕಲ್ಪಿತ– ಎಂಬುದೇ ಪಾಂಚರಾತ್ರರ ಸಿದ್ಧಾಂತವೆಂದು ಏರ್ಪಡಬೇಕಾಗುತ್ತದೆ. ಆದರೂ ಹೀಗೆಂದು ಸ್ಪಷ್ಟವಾಗಿ ಭಾಗವತರು ಒಪ್ಪದೆ ಇದ್ದದ್ದರಿಂದಲೋ, ಅಥವಾ ತಮ್ಮ ಕಾಲದಲ್ಲಿದ್ದ ಆ ಸಿದ್ಧಾಂತದ ಏಕದೇಶಿಗಳು

ಜೀವೋತ್ಪತ್ತಿಯೂ ಪರಮಾರ್ಥವೆಂದೇ ಹಟವನ್ನು ತೊಟ್ಟಿದ್ದರಿಂದಲೋ ಸೂತ್ರಕಾರರೂ ಶಂಕರಾಚಾರ್ಯರೂ ಹೀಗೆ ಭಾಗವತಮತವನ್ನು ಖಂಡಿಸಿರಬೇಕೆಂದು ಹೇಳಬೇಕಾಗುತ್ತದೆ.

ಈ ಊಹೆಯೇ ಸರಿ- ಎಂಬುದಕ್ಕೆ ಶಂಕರಭಗವತ್ಪಾದರವರು ತಮ್ಮ ಪರಮ ಗುರುಗಳೆಂದೂ ವೇದಾಂತಸಂಪ್ರದಾಯವನ್ನು ಬಲ್ಲವರೆಂದೂ ಬರೆದುಕೊಂಡಿರುವ ಶ್ರೀ **ಗೌಡಪಾದಾಚಾರ್ಯರವರ** ಸಮ್ಮತಿಯೂ ದೊರಕುತ್ತದೆ. ಹೇಗೆಂದರೆ, ಗೌಡಪಾದರವರ **ಮಾಂಡೂಕ್ಯಕಾರಿಕೆಗಳ** ಅದ್ವೈತಪ್ರಕರಣದಲ್ಲಿ ಪ್ರಾರಂಭದಲ್ಲಿಯೇ ಈ ಶ್ಲೋಕವಿದೆ : **'ಉಪಾಸನಾಶ್ರಿತೋ ಧರ್ಮೋ ಜಾತೇ ಬ್ರಹ್ಮಣಿ ವರ್ತತೇ । ಪ್ರಾಗುತ್ಪತ್ತೇರಜಂ ಸರ್ವಂ ತೇನಾಽಸೌ ಕೃಪಣಃ ಸ್ಮೃತಃ॥"** (೩–೧) ಉತ್ಪತ್ತಿಗೆ ಪೂರ್ವದಲ್ಲಿ ಎಲ್ಲ ಅಜವಾದ ಬ್ರಹ್ಮವೇ ಆಗಿತ್ತು, ಈಗ ನಾನು ಅಜಾತಬ್ರಹ್ಮದಿಂದ ಹುಟ್ಟಿ ಜಾತಬ್ರಹ್ಮದಲ್ಲಿರುತ್ತೇನೆ. ಉಪಾಸನೆಯಿಂದ ಮತ್ತೆ ಅದೇ ಬ್ರಹ್ಮವನ್ನು ಸೇರುತ್ತೇನೆ – ಎಂದಿಂತು ಜಾತಬ್ರಹ್ಮವಾದಿಯಾಗಿರುವ ಉಪಾಸಕನು ಕೃಪಣನು– ಎಂದಿಂತು ಜೀವೋತ್ಪತ್ತಿಯನ್ನು ನಿಂದಿಸಿದ ಬಳಿಕ ಅಜಾತಿವಾದವನ್ನು ತಿಳಿಯಿಸಿಕೊಡುವದಕ್ಕಾಗಿ-

**ಆತ್ಮಾ ಹ್ಯಾಕಾಶವಜ್ಜೀವೈರ್ಘಟಾಕಾಶೈರಿವೋದಿತಃ ।**
**ಘಟಾದಿವಚ್ಚ ಸಂಘಾತೈರ್ಜಾತಾವೇತನ್ನಿದರ್ಶನಮ್॥** ಗೌ. ಕಾ. ೩-೩

ಎಂದು ಜೀವರಿಗೆ– ಆಕಾಶದಿಂದ ಘಟಾಕಾಶಗಳ ಉತ್ಪತ್ತಿಯಂತೆ ಗೌಣೋತ್ಪತ್ತಿಯನ್ನು ಶ್ರುತ್ಯನುಸಾರವಾಗಿ ಒಪ್ಪಿರುತ್ತದೆ. ಇದೇ ಆಚಾರ್ಯರಿಗೂ ಸಮ್ಮತವಾದ ಮತವಾಗಿರುತ್ತದೆ. ಆದ್ದರಿಂದ ಉಪಾಸನಾಪ್ರಧಾನರಾದ ಭಾಗವತಮತದವರು ಕೆಲವರು ಶ್ರೀ ಗೌಡಪಾದರ ಕಾಲಕ್ಕೇ ಜೀವೋತ್ಪತ್ತಿಯನ್ನು ಹೇಳುತ್ತಿದ್ದರೆಂದೂ ಅದನ್ನು ಗೌಡಪಾದರೂ ಶಂಕರರೂ ಖಂಡಿಸಿರುತ್ತಾರೆಂದೂ ಹೇಳಬೇಕಾಗಿದೆ.

ಹೀಗೆಯೇ **'ವಿಪ್ರತಿಷೇಧಾಚ್ಚ'** (ವೇ. ಸೂ. ೨–೨–೪೫) ಎಂಬ ಸೂತ್ರಕ್ಕೆ ಬರೆದಿರುವ ಭಾಷ್ಯದ ಅಭಿಪ್ರಾಯವನ್ನು ವರ್ಣಿಸಬೇಕಾಗಿದೆ. ಜ್ಞಾನೈಶ್ವರ್ಯಶಕ್ತಿ ಬಲವೀರ್ಯತೇಜಸ್ಸುಗಳು ಗುಣಗಳು; ಅವು ವಾಸುದೇವಭಗವಂತನ ಸ್ವರೂಪವಾಗಿರುವ ಆತ್ಮನೇ– ಎಂಬುದೊಂದು ಪರಸ್ಪರ ವಿರೋಧೋಕ್ತಿ ಎಂದು ಭಾಷ್ಯದಲ್ಲಿದೆ. ಆದರೆ **ಗೀತಾಭಾಷ್ಯದಲ್ಲಿ** ಆಚಾರ್ಯರು ಪ್ರಮಾಣವೆಂದು ಹಿಡಿದಿರುವ ವಿಷ್ಣುಪುರಾಣದಲ್ಲಿಯೂ ಇದೇ ವಾದವೇ ಇದೆ. ಇದೂ ಅಲ್ಲದೆ 'सत्यं ज्ञानमनन्तं ब्रह्म' ಎಂಬ ತೈತ್ತಿರೀಯಾದಿ ವಾಕ್ಯಗಳಲ್ಲಿ ಸತ್ಯ, ಜ್ಞಾನ, ಅನಂತ – ಮೊದಲಾದವು ಆತ್ಮನ ಸ್ವರೂಪವೇ ಎಂದು ಅದ್ವೈತಿಗಳು ಹೇಳುವಂತೆಯೂ **'ಆನನ್ದಾದಯಃ ಪ್ರಧಾನಸ್ಯ'** (ವೇ. ಸೂ. ೩–೩–೧೧) ಎಂಬ ಸೂತ್ರದ ಭಾಷ್ಯದಲ್ಲಿ ಆನಂದಾದಿಗಳನ್ನು ಬ್ರಹ್ಮಧರ್ಮಗಳೆಂದು ಕರೆಯುವಂತೆಯೂ

**'ಅದೃಶ್ಯತ್ವಾದಿಗುಣಕೋ ಧರ್ಮೋಕ್ತೇಃ'** (ವೇ. ಸೂ. ೧.೨.೨೧) ಎಂಬ ಸೂತ್ರದಲ್ಲಿಯೂ ಅದರ ಭಾಷ್ಯದಲ್ಲಿಯೂ ಅದೃಶ್ಯತ್ವವೇ ಮುಂತಾದ ನಿಷೇಧರೂಪವಿಶೇಷಣಗಳನ್ನು **'ಗುಣ'**ವೆಂದು ವ್ಯಪದೇಶಮಾಡಿರುವಂತೆಯೂ ಭಾಗವತಸಂಪ್ರದಾಯದವರು ಜ್ಞಾನೈಶ್ವರ್ಯಾದಿಗಳನ್ನು ಗುಣಗಳೆಂದೂ ಭಗವತ್ ಸ್ವರೂಪವೇ ಎಂದೂ ವ್ಯವಹರಿಸಿದ ಮಾತ್ರದಿಂದ ಯಾವ ವ್ಯಾಘಾತವೂ ಅವರಿಗೆ ತಗಲುವಂತೆ ಕಾಣುವದಿಲ್ಲ. ಇದಕ್ಕನುಗುಣವಾಗಿ ಆಚಾರ್ಯರೂ ತಮ್ಮ ಗೀತಾಭಾಷ್ಯದಲ್ಲಿ **'ಸ ಚ ಭಗವಾನ್, ಜ್ಞಾನೈಶ್ವರ್ಯಶಕ್ತಿಬಲವೀರ್ಯತೇಜೋಭಿಃ ಸದಾ ಸಂಪನ್ನಃ'** (ಆ ಭಗವಂತನು ಜ್ಞಾನ, ಐಶ್ವರ್ಯ, ಶಕ್ತಿ, ಬಲ, ವೀರ್ಯ, ತೇಜಸ್ಸು– ಇವುಗಳಿಂದ ನಿತ್ಯವೂ ಕೂಡಿಕೊಂಡಿರುವವನು)– ಎಂದು ಬರೆದಿರುತ್ತಾರೆಂದು ಹಿಂದೆಯೇ (ಪು. ೧೧, ೧೨) ಹೇಳಿರುತ್ತೇವೆ. ಹೀಗಿರುವದರಿಂದ ಗುಣಗುಣಿಭಾವವು ಇಲ್ಲದ ಕಡೆಯಲ್ಲಿಯೂ ಹಾಗೆ ವ್ಯವಹರಿಸುವದು ಪಾಂಚರಾತ್ರರಿಗೂ ವೇದಾಂತಿಗಳಿಗೂ ಸಮಾನವೇ ಆಗಿರುತ್ತದೆಯಾಗಿ ಈ ವಿಷಯದಲ್ಲಿ ಆಚಾರ್ಯರು ಭಾಗವತಮತದಲ್ಲಿ ದೋಷವನ್ನು ಆರೋಪಿಸಿರುತ್ತಾರೆನ್ನುವದಕ್ಕೆ ಬರುವದಿಲ್ಲ. ತಮ್ಮ ಕಾಲದಲ್ಲಿದ್ದ ಭಾಗವತರು ಕೆಲವರು ಗುಣಗುಣಿಭಾವವನ್ನು ವಾಸ್ತವವೆಂದೇ ಹೇಳುತ್ತಿದ್ದದ್ದನ್ನು ಖಂಡಿಸಿದ್ದಾರೆ– ಎಂದಿಷ್ಟೇ ಕಲ್ಪಿಸಬೇಕಾಗಿದೆ.

ಇದರಂತೆ 'ನಾಲ್ಕು ವೇದಗಳಲ್ಲಿಯೂ ಪರಮಶ್ರೇಯಸ್ಸನ್ನು ಕಾಣದೆ ಶಾಂಡಿಲ್ಯನು ಈ ಶಾಸ್ತ್ರವನ್ನು ಅಭ್ಯಾಸಮಾಡಿದನು' ಎಂಬುದು ವೇದನಿಂದೆ ಎಂದು (ಸೂ. ಭಾ. ೨-೨-೪೫) ಆಚಾರ್ಯರು ಬರೆದಿರುವದನ್ನು– ಶಾಸ್ತ್ರದ ಪ್ರಶಂಸೆ ಮಾತ್ರ - 'ಒಂದನ್ನು ನಿಂದಿಸುವದು ಇನ್ನೊಂದನ್ನು ಹೊಗಳುವದಕ್ಕೆ' ಎಂಬ ಮೀಮಾಂಸಾನ್ಯಾಯವನ್ನು ಅನುಸರಿಸಿ ಹೇಳಿದ್ದಿದು– ಎಂದು ಸಮಾಧಾನವನ್ನು ಹೇಳುವದಕ್ಕೆ ಅಡ್ಡಿಯೇನೂ ಇಲ್ಲ. ವೇದಾಂತಿಗಳಾದ ಶಂಕರಭಗವತ್ಪಾದರವರೂ ಇದೇ ನ್ಯಾಯವನ್ನು ಅಲ್ಲಲ್ಲಿ ಉಪಯೋಗಿಸಿಕೊಂಡಿರುತ್ತಾರೆ. ಆದರೂ ತಮ್ಮ ಕಾಲದ ಪಾಂಚರಾತ್ರಸಿದ್ಧಾಂತದವರು ಕೆಲವರು ವೇದಕ್ಕಿಂತಲೂ ಪಾಂಚರಾತ್ರಾಗಮವೇ ಶ್ರೇಷ್ಠ ಎಂದು ಕೋಲಾಹಲವನ್ನು ಎಬ್ಬಿಸುತ್ತಿದ್ದದ್ದರಿಂದ ಆಚಾರ್ಯರು ಈ ವಿರೋಧೋಕ್ತಿಯ ದೋಷವನ್ನು ಭಾಗವತಮತಕ್ಕೆ ಅಂಟಿಸಿರಬೇಕೆಂದು ಕಲ್ಪಿಸಿದರೆ ಸಾಕಾಗಿರುತ್ತದೆ.

## ಪಾಂಚರಾತ್ರವೆಂದರೇನು ?

೧೪. ಭಾಗವತಮತಕ್ಕೆ ಪಾಂಚರಾತ್ರವೆಂದೂ ಹೆಸರಿದೆಯಷ್ಟೆ ? ಈ ಶಬ್ದದ ಅರ್ಥವೇನು? ಮೊದಲು ಇದಕ್ಕೆ ಈ ಹೆಸರನ್ನು ಯಾರು, ಏಕೆ ಇಟ್ಟರು? ಎಂಬುದನ್ನು ನಿಶ್ಚಯಿಸುವದು ಕಠಿನವಾಗಿರುತ್ತದೆ. ಭಾಷ್ಯಕಾರರು ಪಾಂಚರಾತ್ರಶಾಸ್ತ್ರವನ್ನು ಶಾಂಡಿಲ್ಯನು 'ಕಲಿತುಕೊಂಡನು' (ಅಧಿಗತವಾನ್; ಸೂ.ಭಾ.(II) ಪು. ೧೪೯) ಎಂಬ ಕಥೆಯನ್ನು ಉಲ್ಲೇಖಿಸಿರುತ್ತಾರಷ್ಟೆ? ಅವರ ಕಾಲದಲ್ಲಿ ಶಾಂಡಿಲ್ಯನ ಹೆಸರಿಗೆ ಈ ಶಾಸ್ತ್ರವನ್ನು ಜೋಡಿಸಿರುವ ಯಾವದೋ ಒಂದು ಗ್ರಂಥವಿದ್ದಿರಬೇಕೆಂಬದು ಇದರಿಂದ ನಿರ್ವಿವಾದವಾಗುತ್ತದೆ. ಈಗ ನಮಗೆ ದೊರಕಿರುವ ಶಾಂಡಿಲ್ಯಸಂಹಿತೆಯ (ಭಕ್ತಿಖಂಡದಲ್ಲಿ)[1] 'ಸಾಂಖ್ಯಾದಿಪಂಚಶಾಸ್ತ್ರಗಳು ಕೊಡುವ ಆತ್ಮಾನಂದವನ್ನು ಪೂರ್ಣವಾಗಿ ಕೊಡುವದರಿಂದ ಇದು ಪಂಚರಾತ್ರವು' ಎಂದಿದೆ.:

**ಪಞ್ಚಾನಾಮೀಪ್ಸಿತೋ ಯೋಽರ್ಥಃ ಸೋಽಯತ್ನಂ ಸ್ವಯಮಾಪ್ಯತೇ |**
**ಪರಮಾನನ್ದಮೇತೇನ ಪ್ರಾಪ್ನೋತಿ ಪರಮಾತ್ಮನಃ ||೭೬||**
**ಪ್ರಮಾಣಪಞ್ಚಕೈಃ ಪೂರ್ಣಂಪಞ್ಚಕಾರ್ಯೋಪದೇಶನಮ್ |**
**ಪ್ರಪಞ್ಚಾತೀತಸದ್ಧರ್ಮಂ ಪಞ್ಚರಾತ್ರಮುದಾಹೃತಮ್ ||೭೭||**

(ಅಂಶ.೧, ಅ.೪.೭೭)

**ಸಾಙ್ಖ್ಯಂ ಯೋಗಸ್ತಥಾ ಶೈವಂ ವೇದಾರಣ್ಯೇ ಚ ಪಞ್ಚಕಮ್ |**
**ಪರಮಾನನ್ದಮೇತೇನ ಪ್ರಾಪ್ನೋತಿ ಪರಮಾತ್ಮನಃ ||೭೮ ಪು.೨೦||**

ಆದರೆ ಈ ಸಂಹಿತೆಯಲ್ಲಿ ಶಂಕರಾಚಾರ್ಯರೇ ಮುಂತಾಗಿ ವಲ್ಲಭಾಚಾರ್ಯರವರೆಗಿನ ಆಚಾರ್ಯರುಗಳ ಹೆಸರುಗಳ ಉಲ್ಲೇಖವಿದೆ.[2] ಆದ್ದರಿಂದ ಈ ಸಂಹಿತೆಯೇ ಆಚಾರ್ಯರು ಪರಾಮರ್ಶಿಸಿರುವ ಪಂಚರಾತ್ರಶಾಸ್ತ್ರವೆಂಬುದಕ್ಕೆ ಸ್ವಲ್ಪ ಹಿಂಜರಿಯಬೇಕಾಗಿದೆ. ಈ ವಿಚಾರವನ್ನು ವಿಶಿಷ್ಟಾದ್ವೈತಿಗಳು ಒಪ್ಪಿರುವ ಪಾಂಚರಾತ್ರಗ್ರಂಥಗಳ ವಿಮರ್ಶೆಗೆ ಹೊರಟಾಗ ಮಾಡಬೇಕಾಗುವದರಿಂದ ಇಲ್ಲಿಗೆ ಇದನ್ನು ನಿಲ್ಲಿಸೋಣ. ನಾವು ಈವರೆಗೂ ಸರ್ವಸಂಮತಪ್ರಮಾಣವೆಂದು ಹಿಡಿದಿರುವ ನಾರಾಯಣೀಯದಲ್ಲಿ

**ಪಾಞ್ಚರಾತ್ರವಿದೋ ಮುಖ್ಯಾಸ್ತಸ್ಯ ಗೇಹೇ ಮಹಾತ್ಮನಃ |**
**ಪ್ರಾಯಣಂ ಭಗವತ್ಪ್ರೋಕ್ತಂ ಭುಞ್ಜತೇ ವಾಗ್ರಭೋಜನಮ್ ||**

ಮೋ. ಧ. ೩೩೫–೨೫

1. "ಸರಸ್ವತೀಭವನ ಗ್ರಂಥಾವಳಿ"ಯಲ್ಲಿ ಕಾಶಿಯಲ್ಲಿ 1936ರಲ್ಲಿ ಅಚ್ಚಾದದ್ದು.
2. ಈ ಸಂಹಿತೆಯ ೧೪ನೆಯ ಅಧ್ಯಾಯವನ್ನು ನೋಡಿರಿ.

**'ಉಪರಿಚರವಸು'** ವೆಂಬ ರಾಜನ ಮನೆಯಲ್ಲಿ **'ಪಾಂಚರಾತ್ರವನ್ನು'** ಬಲ್ಲ ಮಹಾತ್ಮರು ಉಪಾಹಾರವನ್ನು ತೆಗೆದುಕೊಳ್ಳುತ್ತಿದ್ದರು, ಅಥವಾ ಅಗ್ರಭೋಜನವನ್ನು ಮಾಡುತ್ತಿದ್ದರು– ಎಂದು ಬರೆದಿದೆ. ಇನ್ನೊಂದು ಕಡೆಯಲ್ಲಿ

**ಇದಂ ಮಹೋಪನಿಷದಂ ಚತುರ್ವೇದಸಮನ್ವಿತಮ್ |**
**ಸಾಙ್ಖ್ಯಯೋಗಕೃತಂ ತೇನ ಪಞ್ಚರಾತ್ರಾನುಶಬ್ದಿತಮ್ ||**
**ನಾರಾಯಣಮುಖೋದ್ಗೀತಂ ನಾರದೋऽಶ್ರಾವಯತ್ ಪುನಃ |**
**ಬ್ರಹ್ಮಣಃ ಸದನೇ ತಾತ ಯಥಾದೃಷ್ಟಂ ಯಥಾಶ್ರುತಮ್ ||**

ಮೋ. ಧ. ೩೩೯–೧೧೧,೧೧೨

'ಈ ಮಹಾವಿದ್ಯೆಯು ನಾಲ್ಕು ವೇದಗಳಿಂದೊಡಗೂಡಿ ಸಾಂಖ್ಯಯೋಗದಿಂದಲೂ ಕೂಡಿರುವದರಿಂದ ಇದಕ್ಕೆ **ಪಂಚರಾತ್ರ**ವೆಂಬ ಹೆಸರು ಬಂದಿದೆ.ನಾರಾಯಣನ ಮುಖದಿಂದಲೇ ಹೊರಟುಬಂದ ಇದನ್ನು ನಾರದನು ಬ್ರಹ್ಮನ ಬಳಿಯಲ್ಲಿ ಮತ್ತೆ ಹೇಳಿದನು. **ಅಂತೂ ನಾಲ್ಕು ವೇದಗಳು, ಸಾಂಖ್ಯಯೋಗಗಳ ಸಂಯೋಗದಿಂದಾದ ದರ್ಶನ-ಇವುಗಳಷ್ಟೂ ಇರುವದೇ ಪಂಚರಾತ್ರ, ಇದನ್ನು ಅನುಸರಿಸುವವರೇ ಪಾಂಚರಾತ್ರರು** ಎಂದಂತೆ ಆಯಿತು. ನಾರಾಯಣನ ಬಾಯಿಂದ ಬಂದಂತೆ ನಾರದರು ಇದನ್ನು ತಿಳಿದುಕೊಂಡರು; ಆದ್ದರಿಂದ ಇದನ್ನು ಸಂಗ್ರಹಿಸಿದ ಗ್ರಂಥಕ್ಕೆ **'ನಾರದಪಾಞ್ಚರಾತ್ರ'** ಎಂಬ ಹೆಸರು ಬಂದಿರುತ್ತದೆ.

ಇದೇ 'ಪಂಚರಾತ್ರ' ಶಬ್ದಕ್ಕೆ 'ಪಂಚಾಯುಧಗಳ ಅಂಶದಿಂದ ಅವತರಿಸಿದ ಶಾಂಡಿಲ್ಯಾದಿಗಳಿಗೆ ವಾಸುದೇವಭಗವಂತನು ಐದು ದಿನಗಳು ಅಖಂಡವಾಗಿ ಉಪದೇಶಿಸಿದ್ದರಿಂದ ಇದು **ಪಂಚರಾತ್ರವು'** (ಈ.ಸಂ. ೨೧); 'ಸಾಂಖ್ಯವೇ ಮುಂತಾದ ಉಳಿದ ಐದುಶಾಸ್ತ್ರಗಳು ಇದರ ಬೆಳಕಿನ ಮುಂದೆ ಮಂಕಾಗಿ ರಾತ್ರೆಯಂತೆ ಇರುತ್ತವೆಯಾದ್ದರಿಂದ ಇದು ಪಂಚರಾತ್ರವು,'[1] (ಪಾದ್ಮಸಂಹಿತೆ ಅ.೨೧) 'ಶಬ್ದಾದಿವಿಷಯಾತ್ಮಕವಾದ, ಅಥವಾ ಮಹಾಭೂತಾತ್ಮಕವಾದ ಐದು ವಿಷಯಗಳೇ ರಾತ್ರೆಗಳು, ಪರಮತೇಜಸ್ಸನ್ನು ಕಂಡರೆ ನಾಶವಾಗುವವು, ಆದ್ದರಿಂದ ಪಂಚರಾತ್ರವು (ವಿಷ್ಣುಸಂಹಿತೆ). ರಾತ್ರಶಬ್ದಕ್ಕೆ ಜ್ಞಾನವೆಂದು ಅರ್ಥ. ಜ್ಞಾನವು ಐದು ವಿಧವಾದ್ದರಿಂದ ಇದು ಪಂಚರಾತ್ರ' (ಜ್ಯೇಷ್ಠಾರಾಮಮುಕುಂದಜಿಯವರು ಅಚ್ಚುಮಾಡಿಸಿದ **ನಾರದಪಾಂಚರಾತ್ರ)** (೧–೧). ಶತಪಥಬ್ರಾಹ್ಮಣದಲ್ಲಿ (೧೩–೬೧) ಪಂಚರಾತ್ರವೆಂಬ ಒಂದು ಸತ್ರವಿದೆ. ಅದರಲ್ಲಿ ವಿಷ್ಣುವನ್ನು ಕುರಿತು ಯಜ್ಞವನ್ನು ಮಾಡುತ್ತಾರೆ, ಆದ್ದರಿಂದ ಇದು ಪಂಚರಾತ್ರವು, ಎಂದು ಕೆಲವರು. ನಾವು ಇಲ್ಲಿ ಕೊಟ್ಟಿರುವ ವಿವರವನ್ನು

1. "ನಾರದಪಾಂಚರಾತ್ರ"ವೆಂಬ ಹೆಸರಿನಿಂದ ಬೇರೆಬೇರೆಯ ವೈಷ್ಣವಪಂಥದವರು ಬೇರೆಬೇರೆಯ ಗ್ರಂಥಗಳನ್ನು ಪ್ರಮಾಣವಾಗಿ ಆದರಿಸುತ್ತಿದಾರೆ. ಅವುಗಳಲ್ಲಿ ಒಂದೂ ನಮಗೆ ಈವರೆಗೆ ಸಿಕ್ಕಿರುವದಿಲ್ಲ.

**ಶಾಂಡಿಲ್ಯಸಂಹಿತೆಯ (ಎರಡನೆಯ ಭಾಗದ) ಭೂಮಿಕೆಯಲ್ಲಿ ಅನಂತಶಾಸ್ತ್ರಿ ಫಡಕೆ, ವ್ಯಾಕರಣಾಚಾರ್ಯ**– ಎಂಬವರು ಬರೆದಿರುತ್ತಾರೆ.

ಪಾಂಚರಾತ್ರವು ಬಹುಪುರಾತನವಾದ್ದರಿಂದ ಇದರ ಹೆಸರಿನ ವ್ಯುತ್ಪತ್ತಿಯೂ ಕಾಲಕ್ರಮದಿಂದ ಜನರಿಗೆ ಮರೆತುಹೋಯಿತು. ಸಂಪ್ರದಾಯಪರಂಪರೆಯು ವಿಚ್ಛಿನ್ನವಾದ್ದರಿಂದ ಅವರವರು ತಮತಮಗೆ ತೋಚಿದಂತೆ ವ್ಯುತ್ಪತ್ತಿಯನ್ನು ಹೇಳುವದಕ್ಕೆ ಹೊರಟಿರುತ್ತಾರೆ. ಪ್ರಕೃತದಲ್ಲಿ ನಾವು ಉದಾಹರಿಸಿರುವ ಶಾಂಡಿಲ್ಯಸಂಹಿತೆಯಲ್ಲಿಯೇ (೧–೪–೭೬) ಈ ಶ್ಲೋಕವಿದೆ.:

**ಪಞ್ಚರಾತ್ರಂ ಬಹುವಿಧಂ ಬಹುಧಾ ಭಾಷಿತಂ ಪರೈಃ ।**
**ಪ್ರಮಾಣಾನಾಂ ವಿರೋಧೇನ ತದ್ಯಥಾರ್ಥಂ ನ ಚೇದೃಶಮ್ ॥**

ಎಂಬ ಶ್ಲೋಕದಲ್ಲಿ ಪಂಚರಾತ್ರವು ಬಹುವಿಧವಾಗಿದೆ ಎಂಬ ಅಭಿಪ್ರಾಯವಿದೆ.

ಇದರಿಂದ ಭಾಗವತಸಂಪ್ರದಾಯವು ಬಹು ಪುರಾತನವೆಂಬುದು ನಿಶ್ಚಿತವಾಗಿ ಅದರ ಮಹತ್ವವೇ ಪ್ರಕಾಶಿತವಾಗುತ್ತದೆ. ಹೇಗೇ ಇರಲಿ, ಸರ್ವಸಮ್ಮತವಾದ ಮಹಾಭಾರತದ ಪ್ರಾಮಾಣ್ಯದಿಂದ ಪಾಂಚರಾತ್ರವೆಂಬ ಈ ಆಗಮವು ವೇದಸಮ್ಮತವೂ ಪುರಾತನವಾದ ಸಾಂಖ್ಯಯೋಗದರ್ಶನಗಳ ಬೆಂಬಲವುಳ್ಳದ್ದೂ ಆಗಿದೆ ಎಂದು ಎಲ್ಲರೂ ಒಪ್ಪಬಹುದಾಗಿದೆ.

## ಸಾತ್ವತವೆಂದರೇನು?

೧೫. ಉಪರಿಚರವಸುವು ನಾರಾಯಣನು ಕೊಟ್ಟ ವರದಿಂದ ಸಾಮ್ರಾಜ್ಯವನ್ನು ಪಡೆದುಕೊಂಡು-

**ಸಾತ್ವತಂ ವಿಧಿಮಾಸ್ಥಾಯ ಪ್ರಾಕ್ ಸೂರ್ಯಮುಖನಿಃಸೃತಮ್ ।**
**ಪೂಜಯಾಮಾಸ ದೇವೇಶಂ ತಚ್ಛೇಷೇಣ ಪಿತಾಮಹಾನ್ ॥೧೯॥**
**ಪಿತೃಶೇಷೇಣ ವಿಪ್ರಾಂಶ್ಚ ಸಂವಿಭಜ್ಯಾಶ್ರಿತಾಂಶ್ಚ ಸಃ ।**
**ಶೇಷಾನ್ನಭುಕ್ ಸತ್ಯಪರಃ ಸರ್ವಭೂತೇಷ್ವಹಿಂಸಕಃ ॥೨೦॥**
**ಸರ್ವಭಾವೇನ ಭಕ್ತಃ ಸ ದೇವದೇವಂ ಜನಾರ್ದನಮ್ ।**
**ಅನಾದಿಮಧ್ಯನಿಧನಂ ಲೋಕಕರ್ತಾರಮವ್ಯಯಮ್ ॥೨೧॥**
**ತಸ್ಯ ನಾರಾಯಣೇ ಭಕ್ತಿಂ ವಹತೋಽಮಿತ್ರಕರ್ಷಿಣಃ ।**
**ಏಕಶಯ್ಯಾಸನಂ ದೇವೋ ದತ್ತವಾನ್ ದೇವರಾಟ್ ಸ್ವಯಮ್ ॥೨೨॥**
**ಆತ್ಮರಾಜ್ಯಂ ಧನಂ ಚೈವ ಕಲತ್ರಂ ವಾಹನಂ ತಥಾ ।**
**ಯತ್ತದ್ಭಾಗವತಂ ಸರ್ವಮಿತಿ ತತ್ ಪ್ರೋಕ್ಷಿತಂ ಸದಾ ॥೨೩॥**

**ಕಾಮ್ಯನೈಮಿತ್ತಿಕಾ ರಾಜನ್ ಯಜ್ಞಿಯಾಃ ಪರಮಕ್ರಿಯಾಃ |**
**ಸರ್ವಾಃ ಸಾತ್ತ್ವತಮಾಸ್ಥಾಯ ವಿಧಿಂ ಚಕ್ರೇ ಸಮಾಹಿತಃ ||೨೪||**

ಮೋ. ಧ. ೩೩೫

'ಸಾತ್ವತ' ವಿಧಿಯನ್ನು ಅನುಸರಿಸಿಕೊಂಡೇ ನಡೆಯಿಸುತ್ತಿದ್ದನೆಂದು ಭೀಷ್ಮರು ವರ್ಣಿಸಿರುತ್ತಾರೆ. ಮೇಲೆ ಕೊಟ್ಟಿರುವ ಶ್ಲೋಕಗಳನ್ನು ನಾವು ಮತ್ತೊಮ್ಮೆ ವಿವರವಾಗಿ ಪರಿಶೀಲಿಸುವೆವು. ಸದ್ಯಕ್ಕೆ ನಾರಾಯಣನನ್ನೇ ನಿಯಮದಿಂದ ಆರಾಧಿಸುವದು, ತಾನು ತನ್ನದು– ಎಲ್ಲವೂ ಭಗವಂತನಿಗೇ ಸೇರಿದ್ದು(ಯತ್ತದ್ ಭಾಗವತಂ ಸರ್ವಮ್)ಎಂಬ ಭಾವನೆಯಿಂದ ಕೂಡಿರುವ ಆಚರಣೆಯನ್ನೇ ಜೀವನಸೂತ್ರವಾಗಿಟ್ಟುಕೊಂಡಿರುವದು 'ಭಾಗವತಮತದ ಸಾರ' ವೆಂದು ಇಲ್ಲಿ ನೆನಪಿಟ್ಟುಕೊಂಡಿದ್ದರೆ ಸಾಕಾಗಿದೆ. ಪ್ರಕೃತಕ್ಕೆ 'ಸಾತ್ವತ' ವೆಂದರೇನು?– ಎಂಬ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳುವದಕ್ಕೆ ಪ್ರಯತ್ನಿಸೋಣ. ಮೇಲೆ ಕೊಟ್ಟಿರುವ ನಾರಾಯಣೀಯಭಾಗದಲ್ಲಿ 'ಸಾತ್ವತಂ ವಿಧಿಮಾಸ್ಥಾಯ (೧೯), 'ಸಾತ್ವತಮಾಸ್ಥಾಯ ವಿಧಿಮ್' (೨೪) ಎಂದು ಎರಡುಸಲ ಬಂದಿರುತ್ತದೆ. ಇದು ನಾರಾಯಣಾರಾಧನೆಯಲ್ಲಿ ಅನುಸರಿಸಬೇಕಾದ ಪ್ರಕಾರವಿಶೇಷವೆಂದು 'ವಿಧಿಮ್' ಎಂಬ ಶಬ್ದದಿಂದ ನಿಶ್ಚಯಿಸಿಕೊಳ್ಳಬಹುದಾಗಿರುತ್ತದೆ.

ಹಿಂದೆ ಭಗವಾನ್ನಾರಾಯಣನು ನಾರದರಿಗೆ ಮಾಡಿದ ಉಪದೇಶದಲ್ಲಿ ತನ್ನ ಯಾವಯಾವ ಪ್ರಾದುರ್ಭಾವಗಳನ್ನು ಭಕ್ತನು ಚಿಂತಿಸಬಹುದೆಂಬುದನ್ನು ತಿಳಿಸುವದಕ್ಕೆ ಹೊರಟು ಕೃಷ್ಣಾವತಾರದಲ್ಲಿ ತಾನು ಮಾಡಿರುವ ಲೀಲೆಗಳನ್ನು ಹೇಳುತ್ತಾ–

**ಯುಧಿಷ್ಠಿರಂ ಸ್ಥಾಪಯಿಷ್ಯೇ ಸ್ವರಾಜ್ಯೇ ಭ್ರಾತೃಭಿಃ ಸಹ ||**
**ಏವಂ ಲೋಕಾ ವದಿಷ್ಯನ್ತಿ ನರನಾರಾಯಣಾವೃಷೀ |**
**ಉದ್ಯುಕ್ತೌ ದಹತಃ ಕ್ಷತ್ರಂ ಲೋಕಕಾರ್ಯಾರ್ಥಮೀಶ್ವರೌ ||**
**ಕೃತ್ವಾ ಭಾರಾವತರಣಂ ವಸುಧಾಯಾ ಯಥೇಪ್ಸಿತಮ್ |**
**ಸರ್ವಸಾತ್ವತಮುಖ್ಯಾನಾಂ ದ್ವಾರಕಾಯಾಶ್ಚ ಸತ್ತಮ ||**
**ಕರಿಷ್ಯೇ ಪ್ರಲಯಂ ಘೋರಮಾತ್ಮಜ್ಞಾತಿವಿನಾಶನಮ್ |**
**ಕರ್ಮಾಣ್ಯಪರಿಮೇಯಾಣಿ ಚತುರ್ಮೂರ್ತಿಧರೋ ಹ್ಯಹಮ್ ||**
**ಕೃತ್ವಾ ಲೋಕಾನ್ ಗಮಿಷ್ಯಾಮಿ ಸ್ವಾನಹಂ ಬ್ರಹ್ಮಸತ್ಕೃತಾನ್ |**

ಮೋ. ಧ. ೧೩೯–೯೯ ರಿಂದ ೧೦೩

'ನರನಾರಾಯಣರು ತನ್ನ ಮೂರ್ತಿಗಳೆಂದೂ ಶ್ರೀಕೃಷ್ಣಾರ್ಜುನರಾಗಿ ತಾನು ಅವತರಿಸಿ ಭೂಭಾರವನ್ನು ಇಳಿಸಿ ದ್ವಾರಕೆಯನ್ನು ಪ್ರಲಯಗೊಳಿಸಿ ಸರ್ವಸಾತ್ವತಮುಖ್ಯರಾದ ತನ್ನ ಜ್ಞಾತಿಗಳನ್ನು ನಾಶಗೊಳಿಸುವೆನೆಂದೂ' ಹೇಳಿಕೊಂಡಿ ರುತ್ತಾನೆ. ಶ್ರೀ ಕೃಷ್ಣನೇ ನಾರಾಯಣನ

ಅವತಾರವು, ಸಾತ್ವತರೆಂದರೆ ಅವನ ಜ್ಞಾತಿಗಳು- ಎಂದು ಇದರಿಂದ ತಿಳಿಯಬೇಕಾಗುತ್ತದೆ. ಇದರ ಆಧಾರದಿಂದ ಐತಿಹಾಸಿಕರು "ಶೂರಸೇನದೇಶದಲ್ಲಿ ವಾಸಮಾಡಿಕೊಂಡಿದ್ದ ಕ್ಷತ್ರಿಯರ ಪ್ರಭೇದದವರೇ 'ಸಾತ್ವತ' ರೆನಿಸಿಕೊಂಡಿದ್ದರು. ಇವರಲ್ಲಿ ವೈಷ್ಣವಮತವು ವಿಶೇಷ ಪ್ರಚಾರದಲ್ಲಿದ್ದಿತು; ಆದ್ದರಿಂದಲೇ ಇದಕ್ಕೆ 'ಸಾತ್ವತಮತ'ವೆಂಬ ಹೆಸರು ಬಂದಿತು. ಶ್ರೀಕೃಷ್ಣನು ಹುಟ್ಟಿದ ಯಾದವವಂಶದವರೂ ಸಾತ್ವತರೇ; ಜರಾಸಂಧನ ಆಕ್ರಮಣದ ನಿಮಿತ್ತದಿಂದ ಈ ಜನರು ಶೂರಸೇನದೇಶವನ್ನು ಬಿಟ್ಟು, ಪಶ್ಚಿಮಸಮುದ್ರದ ತೀರದ ಬಳಿಗೆ ಬಂದಿದ್ದರು"[1] ಎಂದು ಕಲ್ಪಿಸಿರುತ್ತಾರೆ. ಆದರೆ ನಾವು ಮೇಲೆ ಉದಾಹರಿಸಿರುವ ಮೋಕ್ಷಧರ್ಮವಾಕ್ಯದಂತೆ ಉಪರಿಚರವಸುವೆಂಬ ರಾಜನು ಕೃತುಯುಗದಲ್ಲಿಯೇ (ಮೋ.ಧ ೩೪೦) ಸಾತ್ವತವಿಧಾನದಿಂದ ನಾರಾಯಣಭಗವಂತನ ಆರಾಧನೆಯನ್ನು ಮಾಡುತ್ತಿದ್ದನೆಂದೂ ಆ ವಿಧಾನವು ಸೂರ್ಯಮುಖದಿಂದ ಹೊರಬಿದ್ದಿತೆಂದೂ (೩೩೫-೧೯) ಹೇಳಿರುತ್ತದೆ. ಶ್ರೀಕೃಷ್ಣನಿಂದಲಾಗಲಿ, ಅಥವಾ ಮತ್ತೆ ಯಾವ ಕ್ಷತ್ರಿಯರಿಂದಾಗಲೀ ಈ ವಿಧಾನವು ಪ್ರವೃತ್ತವಾಯಿತೆಂದು ಅಲ್ಲಿ ಬರೆದಿರುವದಿಲ್ಲ.

'ಸಾತ್ವತತಂತ್ರ' ವೆಂಬ ಒಂದು ಗ್ರಂಥವನ್ನು[2] ಈಚೆಗೆ ಹೊರಕ್ಕೆ ತರಲಾಗಿದೆ. ಅದರಲ್ಲಿ 'ವಕ್ಷ್ಯೇ ಸಾತ್ವತತಂತ್ರಾಖ್ಯಂ ಭಗವದ್ಭಕ್ತಿವರ್ಧನಮ್' ಎಂದೇ (೧-೯) ಇದೆ. ಸಾತ್ವತವೆಂಬ ಹೆಸರಿನ ವ್ಯುತ್ಪತ್ತಿಯೇನೂ ಅಲ್ಲಿಲ್ಲ.

**ಯದಾಸೀದೇಕಮವ್ಯಕ್ತಂ ನಿತ್ಯಂ ಚಿದ್ರೂಪಮವ್ಯಯಮ್ ।**
**ಬ್ರಹ್ಮೇತಿ ಯದ್ವಿದುರ್ವಿಜ್ಞಾ ಭಗವಾನಿತಿ ಸಾತ್ವತಾಃ ॥೧-೧೦॥**

ಎಂಬ ಶ್ಲೋಕದಲ್ಲಿ ಅದ್ವಿತೀಯವಾದ ಪರಮಾರ್ಥತತ್ತ್ವವನ್ನು ವಿಜ್ಞರು ಬ್ರಹ್ಮವೆಂದೂ ಸಾತ್ವತರು 'ಭಗವಾನ್' ಎಂದೂ ಕರೆಯುತ್ತಾರೆ ಎಂದಿದೆ; ಅಲ್ಲಿಯೂ ಸಾತ್ವತರಿಗೆ ಆ ಹೆಸರು ಏಕೆ ಬಂತೆಂಬುದನ್ನು ತಿಳಿಸಿರುವದಿಲ್ಲ. ಸಂಪಾದಕರು ತಮ್ಮ ಭೂಮಿಕೆಯಲ್ಲಿ-

> **"ಅಸ್ಯ ಸಾತ್ವತತನ್ತ್ರೇತಿ ನಾಮ, ಅನ್ವರ್ಥಮೇತನ್ನಾಮ-ಸತ್-ಸತ್ತ್ವಗುಣೋ ವಿದ್ಯತೇ ಯೇಷಾಂ ತೇ ಸತ್ವನ್ತಃ-ಭಕ್ತಾಃ, ಸತ್ವತಾಮಿದಂ ಸಾತ್ವತಮ್ ಭಕ್ತಾನುಷ್ಠೇಯಪದಾರ್ಥಶೋಧಕಂ ಶಾಸ್ತ್ರಮ್ ॥"**

---

1. ಡಾ॥ ಎಸ್. ಕೆ. ಅಯ್ಯಂಗಾರ್ಯರು (Proceedings of the Second Oriental Conference) ಸಾತ್ವತರ ವಿಷಯವಾಗಿ ಬರೆದಿರುವ ಲೇಖನದ ಆಧಾರದಿಂದ ಬಲದೇವ ಉಪಾಧ್ಯಾಯ, ಹಿಂದೂ ವಿಶ್ವವಿದ್ಯಾಲಯ, ಕಾಶೀ- ಇವರು 'ಭಾಗವತಸಂಪ್ರದಾಯ' ಎಂಬ ತಮ್ಮ ಹಿಂದೀ ಗ್ರಂಥದಲ್ಲಿ (ಪುಟ ೧೦೩) ಹೀಗೆಂದು ಉಲ್ಲೇಖಿಸಿರುತ್ತಾರೆ.
2. ಇದನ್ನು ಪಂಡಿತ ಅನಂತಶಾಸ್ತ್ರಿ ಫಡಕೆ, ವ್ಯಾಕಾರಣಾಚಾರ್ಯ, ಮೀಮಾಂಸಾತೀರ್ಥ- ಇವರು ಸಂಪಾದಿಸಿ ಚೌಖಂಬ ಸಂಸ್ಕೃತಗ್ರಂಥಾಲಯದ ಮೂಲಕ ಪ್ರಕಟಿಸಿರುತ್ತಾರೆ. (1934)

ಎಂದು ಬರೆದಿರುತ್ತಾರೆ. ಸತ್ ಎಂದರೆ ಸತ್ತ್ವಗುಣವು; ಅದು ಯಾರಲ್ಲಿರುವದೋ ಅವರು ಸತ್ವನ್ತರು, ಎಂದರೆ ಭಕ್ತರು. ಸತ್ವತರದ್ದು ಇದು, ಆದ್ದರಿಂದ ಇದಕ್ಕೆ ಸಾತ್ವತ- ಭಕ್ತರು ಅನುಷ್ಠಾನಮಾಡಬೇಕಾದದ್ದನ್ನು ಹೇಳುವ ಶಾಸ್ತ್ರವು- ಎಂದು ಹೆಸರು" ಎಂದು ಅವರ ಮತ. ಈ ಮತಕ್ಕೆ ಯಾವ ತಂತ್ರದಲ್ಲಿ ಅಥವಾ ಮತ್ತೆ ಯಾವ ಪ್ರಮಾಣಗ್ರಂಥದಲ್ಲಿ ಆಧಾರವಿದೆ ಎಂಬುದನ್ನು ಅವರೂ ಹೇಳಿರುವದಿಲ್ಲ.

ಈ ಸ್ಥಿತಿಯಲ್ಲಿ ನಾವು ಭಾರತದಲ್ಲಿರುವ ಸಾತ್ವತಪದ್ಧತಿಯ ಸಂಪ್ರದಾಯವನ್ನು ಕುರಿತ ಕಥೆಗೂ ಐತಿಹಾಸಿಕರ ಕಲ್ಪನೆಗೂ ಮೇಳವಾಗುವಂತೆ ಒಂದು ಕಲ್ಪನೆಯನ್ನು ಮುಂದಕ್ಕೆ ತರಬಹುದೆಂದು ನಮಗೆ ತೋರುತ್ತದೆ. ಶ್ರೀಕೃಷ್ಣನು ಹುಟ್ಟಿದ ಕುಲದ ಕ್ಷತ್ರಿಯರು- ಅಥವಾ ಅವರ ಪೂರ್ವಜರಾದ ಶೂರಸೇನದೇಶದ ಕ್ಷತ್ರಿಯರು-ಸಾತ್ವತರೆಂಬ ಹೆಸರನ್ನು ಪಡೆಯುವದಕ್ಕೆ ಅವರು ಸೂರ್ಯವಂಶಜರೆಂಬ ಕಾರಣವಿರಬಹುದು. ಇಂದಿಗೂ ಕೆಲವರು ತಾವು `ಸೂರ್ಯವಂಶಿ'ಗಳೆಂದೂ ಕ್ಷತ್ರಿಯರೆಂದೂ ಕರೆದುಕೊಳ್ಳುತ್ತಿರುತ್ತಾರೆ. ಸೂರ್ಯಮಂಡಲಮಧ್ಯದಲ್ಲಿ ನಾರಾಯಣಭಗವಂತನಿರುತ್ತಾನೆಂದೂ ಸೂರ್ಯನನ್ನು ಆರಾಧಿಸಿದರೆ ಆ ಮೂಲಕ ಭಗವಂತನಿಗೆ ಪ್ರೀತಿಯಾಗುವದೆಂದೂ ಹೇಳುವದು ವೈದಿಕಕಾಲದಿಂದಲೂ ಹಬ್ಬಿಬಂದಿರುವ ಒಂದು ನಂಬಿಕೆಯಾಗಿರುತ್ತದೆ. ಆದ್ದರಿಂದ ಅವರು ತಮ್ಮನ್ನು `ಸಾತ್ವತ'ರೆಂದು ಕರೆದುಕೊಂಡು ಭಾಗವತಮತದ ಪ್ರಚಾರಕ್ಕೆ ಸೊಂಟಕಟ್ಟಿ ಕೊಂಡಿರಬಹುದು. ಇದು ನಿಜವಾದರೆ ಶ್ರೀಕೃಷ್ಣಭಗವಂತನ ಅವತಾರಕ್ಕಿಂತಲೂ ಮುಂಚೆಯೇ ಭಾಗವತಮತದ ಉದ್ಗಮವಾಗಿತ್ತೆಂಬ ಪೌರಾಣಿಕೋಪದೇಶವೂ ಸ್ಥಿರವಾಗಿ ಉಳಿಯುತ್ತದೆ. ಇದೇ ನಾರಾಯಣೀಯದಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ತನ್ನ ನಾಮಗಳ ನಿರ್ವಚನವನ್ನು ಮಾಡುವಾಗ–

**ಸತ್ತ್ವಾನ್ನ ಚ್ಯುತಪೂರ್ವೋಽಹಂ ಸತ್ತ್ವಂ ವೈ ವಿದ್ಧಿ ಮತ್ಕೃತಮ್ ।**
**ಜನ್ಮನೀಹ ಭವೇತ್ ಸತ್ತ್ವಂ ಪೌರ್ವಿಕಂ ಮೇ ಧನಞ್ಜಯ ॥** ॥೩೪೨-೭೭॥
**ನಿರಾಶೀಃ ಕರ್ಮಸಂಯುಕ್ತಃ ಸತ್ತ್ವತಶ್ಚಾಪ್ಯಕಲ್ಮಷಃ ।**
**ಸಾತ್ತ್ವತಜ್ಞಾನದೃಷ್ಟೋಽಹಂ ಸತ್ತ್ವತಾಮಿತಿ ಸಾತ್ವತಃ** ॥೭೮॥

ಎಂದಿರುತ್ತಾನೆ. ನೀಲಕಂಠೀಯವ್ಯಾಖ್ಯಾನದಲ್ಲಿ ಹೀಗೆ ಬರೆದಿದೆ :

**ಸತ್ತ್ವೇನ[1] ತ್ರಾಯತೇ ಪಾಲಯತೇ ವಾ, ಸತ್ತ್ವಂ ತನೋತಿ ವಿಸ್ತಾರಯತಿ ವಾ, ಸತ್ವತ। ಸತ್ತ್ವಮಸ್ತಿ ಅಸ್ಮಿನ್ನಿತಿ ಸತ್ವತಃ, ಸತ್ತ್ವ ಪೂರ್ವಕಮೇವ ಸರ್ವಂ ಕರ್ಮ ಆಚರತೀತಿ**

1. 'ಸತ್ತ್ವ' ಎಂದರೆ ಸತ್ತ್ವಗುಣ ಎಂಬರ್ಥವಿರುವಾಗ ದ್ವಿತ್ವವನ್ನು ಹಾಕಿಕೊಂಡಿರುತ್ತೇವೆ: ಮಿಕ್ಕ ಕಡೆಯಲ್ಲೆಲ್ಲ `ಸತ್ವ'ಎಂದೇ ಬರೆದುಕೊಂಡಿದೇವೆ. ಇಲ್ಲಿ ವೈಯಾಕರಣರಿಂದ ಅಕ್ಷರಸಂಯೋಜನೆಯನ್ನು ನಿರ್ಣಯಿಸಿಕೊಳ್ಳಬೇಕಾಗಿದೆ.

ಸತ್ವತಃ । ಸತ್ವತ ಏವ ಸಾತ್ವತಃ। ತಾಯ್ಯ-ಸಂತಾನಪಾಲನಯೋಃ ತನುವಿಸ್ತಾರೇ, ಆಭ್ಯಾಂ ಸತ್ತ್ವ ಶಬ್ದ ಪೂರ್ವಾಭ್ಯಾಂ ಡಃ।`ತಪ್ಪರ್ವ ಮರುದ್ಭ್ಯಾಮ್' (ವಾ) ಇತ್ಯತ್ರ ಶ್ರುತೋ ಮತ್ವರ್ಥೀಯಸ್ತ್ತಪ್ರತ್ಯಯಃ, ಬಾಹುಲಕಾತ್ ಸತ್ತ್ವಶಬ್ದಾದಪಿ ಅನ್ತೇ ತದ್ಧಿತಾನ್ತಾನುಕರಣಮೇವ ಪ್ರಾತಿಪದಿಕಮ್ । ಸದ್ ಬ್ರಹ್ಮ, ತದ್ವನ್ತಃ ಸತ್ವನ್ತಃ। ಆರ್ಷಂ ಭತ್ವವಮ್। ತೇಷಾಮಿದಂ ತನ್ತ್ರಂ ಸಾತ್ವತಂ ಪಾಞ್ಚರಾತ್ರಾದಿ । ತಜ್ಜನ್ಯಜ್ಞಾನೇನ ದೃಷ್ಟೋಽಹಂ ಸಾತ್ವತೋ ವಾ ಇತ್ಯಭಿಪ್ರೇತ್ಯ ಆಹ ಸತ್ತ್ವಾದಿತಿ । ನಿರಾಶೀಃ ಕರ್ಮ ನಿಷ್ಕಾಮಕರ್ಮ ॥

ಈ ವ್ಯಾಖ್ಯಾನದಂತೆ ಸತ್ತ್ವಗುಣವೇ ನಾರಾಯಣನ ಲೀಲೆಗೆ ಮುಖ್ಯಹೇತುವೆಂದು ಹೇಳಿದೆ. ಸಾತ್ವತಜ್ಞಾನದಿಂದ ಅವನು ಭಕ್ತರಿಗೆ ಕಾಣಿಸಿಕೊಳ್ಳುತ್ತಾನೆ. ಆದ್ದರಿಂದ ಸಾತ್ವತನೆಂದು ಶ್ರೀಕೃಷ್ಣನಿಗೆ ಹೆಸರು ಎಂದಂತೆ ಆಗುತ್ತದೆ. ಆದ್ದರಿಂದಲೂ ಸಾತ್ವತರೆಂಬ ಹೆಸರು ಆ ಕುಲದವರಿಗೂ ಸಾತ್ವತಜ್ಞಾನದ ನಿಮಿತ್ತದಿಂದಲೇ ಮೊದಲು ಬಂದಿತೆಂದು ಕಲ್ಪಿಸುವದು ಯುಕ್ತವಾಗುತ್ತದೆ. ಇದನ್ನು ಪುರಾತತ್ತ್ವಶೋಧಕರು ಇನ್ನಷ್ಟು ವಿಚಾರಮಾಡಿ ನಿರ್ಣಯಿಸಬೇಕೆಂದು ತೋರುತ್ತದೆ.

## ವಾಸುದೇವತತ್ತ್ವ

೧೬. ಈಗ ಇನ್ನೊಂದು ವಿಚಾರಣೀಯವಾದ ವಿಷಯವು ಮುಂದಕ್ಕೆ ಬರುತ್ತದೆ. ಭಾಗವತಮತದಲ್ಲಿ ಆರಾಧ್ಯವೆಂದು ಹೇಳಿರುವ ವಾಸುದೇವತತ್ತ್ವವು ಯಾವದು? ಅದಕ್ಕೆ ವಾಸುದೇವನೆಂಬ ಹೆಸರು ಯಾವಾಗ, ಹೇಗೆ ಬಂದಿತು? ಶ್ರೀಕೃಷ್ಣನು ವಸುದೇವನ ಮಗನಾದ್ದರಿಂದ ಅವನಿಗೆ ವಾಸುದೇವನೆಂಬ ಹೆಸರು ಬಂದಿತೆಂಬುದು ಪುರಾಣ ಪ್ರಸಿದ್ಧವಾಗಿದೆ. ಇದೇ ನಿಜವಾದರೆ ಶ್ರೀ ಕೃಷ್ಣನ ಅವತಾರವಾದಬಳಿಕವೇ-ಎಂದರೆ ದ್ವಾಪರಯುಗವನ್ನಾರಂಭಿಸಿಯೇ ಭಾಗವತಮತವು ಪ್ರಾರಂಭವಾಯಿತೆಂದು ಹೇಳಬೇಕಾಗುತ್ತದೆ. ಶ್ರೀಕೃಷ್ಣನ ಹೆಸರು `ವಾಸುದೇವ'ನೆಂದಾದರೆ, `ಸಂಕರ್ಷಣ'ನೆಂಬುದು ಬಲರಾಮನ ಹೆಸರು : ಪ್ರದ್ಯುಮ್ನನೆಂಬುದು ಕೃಷ್ಣನ ಮಗನ ಹೆಸರು; ಅನಿರುದ್ಧನೆಂಬುದು ಅವನ ಮೊಮ್ಮಗನ ಹೆಸರು. ಇದನ್ನುನೋಡಿದರೆ ಚತುರ್ವ್ಯೂಹವಾದವು ಶ್ರೀಕೃಷ್ಣನು ಪರಂಧಾಮಕ್ಕೆ ಹೋದಮೇಲೆ ಹುಟ್ಟಿರಬೇಕು-ಎಂದು ಐತಿಹಾಸಿಕರು ಕಲ್ಪಿಸಬಹುದು. ಇದಲ್ಲದೆ ಭಗವದ್ಗೀತೆಯಲ್ಲಿ ನಾಲ್ಕು ವ್ಯೂಹಗಳ ವಾದವೇ ಇಲ್ಲ. ಆದ್ದರಿಂದ ಶ್ರೀಕೃಷ್ಣನು ಭೂಮಿಯ ಮೇಲೆ ಇದ್ದಾಗ ಭಾಗವತಮತವಿದ್ದಿತೆ ?- ಎಂಬ ಸಂಶಯವನ್ನು ತೆಗೆಯಬಹುದಾಗುತ್ತದೆ. ಆದ್ದರಿಂದ ಇದರ ತತ್ತ್ವವೇನು?- ಎಂಬುದನ್ನು ಈಗ ನಾವು ವಿಚಾರಮಾಡಬೇಕಾಗಿದೆ.

ಈ ವಿಷಯದಲ್ಲಿ ಮಹಾಭಾರತದ ಶಾಂತಿಪರ್ವದಲ್ಲಿರುವ ನಾರಾಯಣೀಯವನ್ನೇ ಪ್ರಮಾಣವನ್ನಾಗಿ ಹಿಡಿಯುವವರಿಗೆ ಯಾವ ಸಂಶಯಕ್ಕೂ ಕಾರಣವೇ ಇಲ್ಲ. ಏಕೆಂದರೆ ನಾವು ಹಿಂದೆ ಹೇಳಿರುವಂತೆ `ಉಪರಿಚರವಸು'ವೆಂಬ ರಾಜನು ಕೃತುಯುಗದಲ್ಲಿ ಭಾಗವತೋತ್ತಮನಾಗಿದ್ದನು-ಎಂದು ಅಲ್ಲಿ ಸ್ಪಷ್ಟವಾಗಿ ಹೇಳಿದೆ; ಆದರೆ ವಿಚಾರಕರು `ವಾಸುದೇವ'ಎಂಬ ಹೆಸರನ್ನು ವಸುದೇವನ ಪುತ್ರನೆಂಬ ಅರ್ಥದಲ್ಲಿಯೇ ಹಿಡಿಯಬೇಕೆಂಬ ಆಗ್ರಹವನ್ನು ತೊಟ್ಟದ್ದರಿಂದ ಚತುರ್ವ್ಯೂಹವಾದವು ಕೃಷ್ಣನ ತರುವಾಯ ಹೊರಹೊಮ್ಮಿರಬೇಕೆಂಬ ಸಂಶಯವು ತಲೆಯೆತ್ತುವದಕ್ಕೆ ಕಾರಣವಾಗಿರುತ್ತದೆ. ಈ ವಿಷಯದಲ್ಲಿ ಬಾಲಗಂಗಾಧರತಿಲಕರು ಬರೆದಿರುವ ಗೀತಾರಹಸ್ಯದಲ್ಲಿಯೂ ಈಚೆಗೆ ಪಂಡಿತ ಬಲದೇವಉಪಾಧ್ಯಾಯರು ರಚಿಸಿ ಪ್ರಕಟಿಸಿರುವ `ಭಾಗವತ ಸಂಪ್ರದಾಯ'ವೆಂಬ ಗ್ರಂಥದಲ್ಲಿಯೂ ಉದಾಹರಿಸಿರುವ ಪಾಣಿನೀಯಸೂತ್ರವು ವಿಮರ್ಶಕದೃಷ್ಟಿಯ ಆಧುನಿಕರಿಗೂ ಸ್ವಲ್ಪ ಸಮಾಧಾನವನ್ನು ಕೊಡುವಂತೆ ಇದೆ. ಪಾಣಿನೀಯಸೂತ್ರದಲ್ಲಿ `ವಾಸುದೇವಾರ್ಜುನಾಭ್ಯಾಂ ವುನ್' (ಪಾ. ೪-೩-೯೮) ಎಂದಿದೆ. ಅಲ್ಲಿ ವಾಸುದೇವನಲ್ಲಿ ಭಕ್ತಿಯಳ್ಳವನು `ವಾಸುದೇವಕನು,'ಅರ್ಜುನನಲ್ಲಿ ಭಕ್ತಿಯುಳ್ಳವನು `ಅರ್ಜುನಕನು'ಎಂಬ ಅರ್ಥವು ತೋರುವದಕ್ಕಾಗಿ ವುನ್ ಎಂಬ ಪ್ರತ್ಯಯವನ್ನು ವಿಧಾನಮಾಡಿರುತ್ತದೆ. ಈ ವಿಷಯಕ್ಕೆ ವ್ಯಾಕರಣಭಾಷ್ಯವೇನೆಂದರೆ:

> **ಕಿಮರ್ಥಂ ವಾಸುದೇವಶಬ್ದಾತ್ ವುನ್ ವಿಧೀಯತೇ । `ಗೋತ್ರ ಕ್ಷತ್ರಿಯಾಖ್ಯೇಭ್ಯೋ ಬಹುಲಂ ವುಞ್'(೪-೩-೯೯)ಇತ್ಯೇವ ಸಿದ್ಧಮ್? ನ ಹ್ಯಸ್ತಿ ವಿಶೇಷೋ ವಾಸುದೇವಶಬ್ದಾದ್ ವುನೋ ವಾ ವುಞೋ ವಾ । ತದೇವ ರೂಪಂ ಸ ಏವ ಸ್ವರಃ ।।**

ಇಲ್ಲಿ ವಾಸುದೇವಶಬ್ದಕ್ಕೆ ವುನ್‌ಪ್ರತ್ಯಯುವನ್ನು ಹೇಳುವದೇಕೆ? 'ಗೋತ್ರ ಕ್ಷತ್ರಿಯಾಖ್ಯೇಭ್ಯೋ ಬಹುಲಂ ವುಞ್'ಎಂಬ (ಪಾ. ೪-೩-೯೯)ಮುಂದಿನ ಸೂತ್ರದಲ್ಲಿ ವಿಧಿಸಿರುವ ವುಞ್ ಪ್ರತ್ಯಯದಿಂದಲೂ ಅದೇ ರೂಪವೂ ಅದೇ ಸ್ವರವೂ ಸಿದ್ಧಿಸುವದಿಲ್ಲವೆ? -ಎಂಬ ಆಕ್ಷೇಪವನ್ನು ಇಲ್ಲಿ ಒಡ್ಡಿದೆ. ಇದಕ್ಕೆ ಸಮಾಧಾನವು ಹೀಗಿದೆ:

> **"ಇದಂ ತರ್ಹಿ ಪ್ರಯೋಜನಮ್..... ವಾಸುದೇವಶಬ್ದಸ್ಯ ಪೂರ್ವ ನಿಪಾತಂ ವಕ್ಷ್ಯಾಮೀತಿ। ಅಥವಾ ನೈಷಾ ಕ್ಷತ್ರಿಯಾಖ್ಯಾ। ಸಂಜ್ಞೈ ಷಾ ತತ್ರಭವತಃ ।। "**

ಇದಕ್ಕೆ ಪ್ರಯೋಜನವೇನೆಂದರೆ, `ವಾಸುದೇವಶಬ್ದಕ್ಕೆ ಪೂರ್ವನಿಪಾತವನ್ನು ಹೇಳುವದೇ'ಎಂಬುದೊಂದು. ಇದಕ್ಕೆ ಕೈಯಟನು ತನ್ನ `ಪ್ರದೀಪ'ವ್ಯಾಖ್ಯಾನದಲ್ಲಿ ಬರೆದಿರುವದೇನೆಂದರೆ `ಅಭ್ಯರ್ಹಿತಂ ಪೂರ್ವಮ್',`ಹೆಚ್ಚಿನ ಯೋಗ್ಯತೆಯುಳ್ಳದ್ದರ

ಹೆಸರನ್ನು ದ್ವಂದ್ವಸಮಾಸದಲ್ಲಿ ಮೊದಲು ಇಡಬೇಕು'ಎಂಬುದನ್ನು ತಿಳಿಯಪಡಿಸುವದೇ ಪ್ರಯೋಜನವು ಎಂದರ್ಥ. ಇನ್ನೊಂದು ಪ್ರಯೋಜನವೇನೆಂದರೆ ಇದು ಕ್ಷತ್ರಿಯವಾಚಕವೇ ಅಲ್ಲ:ಇದು ಭಗವಂತನ ಹೆಸರು. ಈ ಭಾಷ್ಯದಲ್ಲಿ ವಾಸುದೇವನೆಂಬುದು ಭಗವಂತನ ಹೆಸರು, ಕ್ಷತ್ರಿಯನಾದ ವಸುದೇವನ ಮಗನ ಹೆಸರಲ್ಲ;`ನಿತ್ಯಃ ಪರಮಾತ್ಮಾ ದೇವತಾವಿಶೇಷಃ ಇಹ ವಾಸುದೇವೋ ಗೃಹ್ಯತ ಇತ್ಯರ್ಥಃ'ಎಂದರೆ ನಿತ್ಯನಾಗಿರುವ ದೇವತಾವಿಶೇಷನಾದ ಪರಮಾತ್ಮನೇ ವಾಸುದೇವನೆಂದು ಗ್ರಹಿಸಲಾಗಿದೆ ಎಂದು`ಕೈಯಟನು' ಬರೆದಿರುತ್ತಾನೆ. ಅಂತೂ ಇಲ್ಲಿ ಶ್ರೀ ಕೃಷ್ಣನಿಗಿಂತ ಬೇರೆಯಾಗಿರುವ ಭಗವಂತನನ್ನೇ `ವಾಸುದೇವ'ನೆಂದು ಕರೆದಿದೆ ಎಂಬುದು ಭಾಷ್ಯಕಾರರಾದ ಪತಂಜಲಿಗಳ ಮತವೆಂದಾಯಿತು. ಇನ್ನೊಂದು ಇದಕ್ಕಿಂತ ಪ್ರಬಲವಾದ ಪ್ರಮಾಣವನ್ನು ಬಲದೇವ ಉಪಾಧ್ಯಾಯರು ಬರೆದಿರುತ್ತಾರೆ:

"नारायणाय विद्महे वासुदेवाय धीमहि। तन्नो विष्णुः प्रचोदयात्"

(ತೈ. ಆ. ೧೦ನೆಯ ಪ್ರಪಾಠಕ)

ಈ ವಿಷ್ಣುಗಾಯತ್ರಿಯಲ್ಲಿ ನಾರಾಯಣ, ವಾಸುದೇವ, ವಿಷ್ಣು -ಈ ಮೂರೂ ಭಗವಂತನ ನಾಮಗಳೆಂದು ಶ್ರುತಿಯಲ್ಲಿ ಹೇಳಿರುತ್ತದೆ. ಆದ್ದರಿಂದ ವಾಸುದೇವನೆಂಬ ಹೆಸರಿದ್ದಮಾತ್ರದಿಂದ ಶ್ರೀಕೃಷ್ಣನಿಂದ ಈಚೆಗೇ ಭಾಗವತಸಂಪ್ರದಾಯವು ಹೊರಟಿರಬೇಕು-ಎಂಬ ಯುಕ್ತಿಯು ಸರಿಯಲ್ಲವೆಂದಾಯಿತು.

ಇನ್ನು ಭಗವದ್ಗೀತೆಯಲ್ಲಿ ನಾಲ್ಕು ವ್ಯೂಹಗಳ ವಿಚಾರವಿಲ್ಲವಲ್ಲ!-ಎಂಬ ಶಂಕೆಯೊಂದು ಉಳಿಯಿತಷ್ಟೆ? ಇದಕ್ಕೆ ಸಮಾಧಾನವನ್ನು ನಾರಾಯಣೀಯದ ಆಧಾರದಿಂದಲೇ ಹೀಗೆ ಹೇಳಬಹುದು. ಸಾತ್ವತಧರ್ಮೋಪದೇಶದ ಗುರುಪರಂಪರೆಯನ್ನು ಜನಮೇಜಯನಿಗೆ ವೈಶಂಪಾಯನನು ಹೇಳಿದ್ದರಲ್ಲಿ ಈ ಧರ್ಮವನ್ನು ನಾರಾಯಣನು ಮತ್ತೆಮತ್ತೆ ಉಪದೇಶಿಸುವದು, ಕಾಲಕ್ರಮದಲ್ಲಿ ಅದು ಲುಪ್ತವಾಗುವದು- ಹೀಗೆ ಆಗುತ್ತಾ-

ಯದಿದಂ ಸಪ್ತಮಂ ಜನ್ಮ ಪದ್ಮಜಂ ಬ್ರಹ್ಮಣೋ ನೃಪ ।
ತತ್ರೈಷ ಧರ್ಮಃ ಕಥಿತಃ ಸ್ವಯಂ ನಾರಾಯಣೇನ ಹಿ ॥

ಮೋ. ಧ. ೩೪೮-೪೮

ಪಿತಾಮಹಾಯ ಶುದ್ಧಾಯ ಯುಗಾದೌ ಲೋಕಧಾರಿಣೇ ।
ಪಿತಾಮಹಶ್ಚ ದಕ್ಷಾಯ ಧರ್ಮಮೇತಂ ಪುರಾ ದದೌ ॥೪೯॥
ತತೋ ಜ್ಯೇಷ್ಠೇ ತು ದೌಹಿತ್ರೇ ಪ್ರಾದಾದ್ ದಕ್ಷೋ ನೃಪೋತ್ತಮ ।
ಆದಿತ್ಯೇ ಸವಿತುರ್ಜ್ಯೇಷ್ಠೇ ವಿವಸ್ವಾನ್ ಜಗೃಹೇ ತತಃ ॥೫೦॥
ತ್ರೇತಾಯುಗಾದೌ ಚ ತತೋ ವಿವಸ್ವಾನ್ ಮನವೇ ದದೌ ।
ಮನುಶ್ಚ ಲೋಕಭೂತ್ಯರ್ಥಂ ಸುತಾಯೇಕ್ಷ್ವಾಕವೇ ದದೌ ॥೫೧॥

**ಇಕ್ಷ್ವಾಕುಣಾ ಚ ಕಥಿತೋ ವ್ಯಾಪ್ಯ ಲೋಕಾನವಸ್ಥಿತಃ।**
**ಗಮಿಷ್ಯತಿ ಕ್ಷಯಾನ್ತೇ ಚ ಪುನರ್ನಾರಾಯಣಂ ನೃಪಃ ||೫೨||**
**ಯತೀನಾಂ ಚಾಪಿ ಯೋ ಧರ್ಮಃ ಸ ತೇ ಪೂರ್ವಂ ನೃಪೋತ್ತಮ।**
**ಕಥಿತೋ ಹರಿಗೀತಾಸು ಸಮಾಸವಿಧಿಕಲ್ಪಿತಃ[1]||** ಮೋ.ಧ.೩೪೮-೫೩

"ಬ್ರಹ್ಮನು ಕಮಲದಿಂದ ಜನಿಸಿದ ಏಳನೆಯ ಜನ್ಮದಲ್ಲಿ ನಾರಾಯಣನು ಬ್ರಹ್ಮನಿಗೆ, ಬ್ರಹ್ಮನಿಂದ ದಕ್ಷನಿಗೆ, ದಕ್ಷನಿಂದ ಅವನ ಮೊಮ್ಮಗನಿಗೆ, ಅವನಿಂದ ವಿವಸ್ವಂತನಿಗೆ, ತ್ರೇತಾಯುಗದ ಆದಿಯಲ್ಲಿ `ವಿವಸ್ವಂತನಿಂದ ಅವನ ಮಗನಾದ ಮನುವಿಗೆ-ಹೀಗೆ ಪರಂಪರೆಯಿಂದ ಬಂದಿತು. ಇಕ್ಷ್ವಾಕುವು ಉಪದೇಶಮಾಡಿದ ಧರ್ಮವು ಪ್ರಲಯಕಾಲದಲ್ಲಿ ಮತ್ತೆ ನಾರಾಯಣನನ್ನು ಸೇರುವದು. ಯತಿಗಳ ಧರ್ಮವನ್ನು ನಾನು ಭಗವದ್ಗೀತೆಯಲ್ಲಿ ಸಂಕ್ಷೇಪವಾಗಿ ನಿನಗೆ ತಿಳಿಸಿರುತ್ತೇನೆ"-ಎಂದು ವೈಶಂಪಾಯನನು ಹೇಳಿರುತ್ತಾನೆ.

ಇಲ್ಲಿ ತ್ರೇತಾಯುಗದಲ್ಲಿ ಹೇಳಿದ ಗುರುಪರಂಪರೆಯು ಭಗವದ್ಗೀತೆಯಲ್ಲಿ (ಗೀ.೪-೧,೨ ರಲ್ಲಿ) ಹೇಳಿರುವ ಪರಂಪರೆಯನ್ನು ಸ್ವಲ್ಪಹೆಚ್ಚು ಕಡಿಮೆಯಾಗಿ ಸರಿಹೋಲುತ್ತಿರುವದರಿಂದ **ಬಾಲಗಂಗಾಧರತಿಲಕರು** ಭಗವದ್ಗೀತೆಯಲ್ಲಿ ಭಾಗವತಧರ್ಮವೇ ಉಕ್ತವಾಗಿದೆ ಎಂದು ಕಲ್ಪಿಸಿರುತ್ತಾರೆ. ಇನ್ನೊಂದು ವಿಚಾರ:ಏಕಾಂತಿ ಧರ್ಮವೆಂದೂ ಕರೆಯಿಸಿಕೊಳ್ಳುವ ಈ ಸಾತ್ವತ(ಅಥವಾ)ಭಾಗವತಮತವನ್ನು ಕುರಿತು ಜನಮೇಜಯನು `ಇದು ಯಾವಾಗ ಉತ್ಪನ್ನವಾಯಿತು?'ಎಂದು ಕೇಳಿದ್ದಕ್ಕೆ ಉತ್ತರವನ್ನು ಹೇಳುವದಕ್ಕೆ ಹೊರಟ ವೈಶಂಪಾಯನನು ಮೊದಲು

**ಸಮುಪೋಢೇಷ್ವನೀಕೇಷು ಕುರುಪಾಣ್ಡವಯೋರ್ಮೃಧೇ।**
**ಅರ್ಜುನೇ ವಿಮನಸ್ಕೇ ಚ ಗೀತಾ ಭಗವತಾ ಸ್ವಯಮ್||** [illegible]

ಎಂದು ಭಗವದ್ಗೀತೆಯ ವಿಷಯವನ್ನೇ ಪ್ರಾರಂಭಿಸಿರುತ್ತಾನೆ. ಬಳಿಕ

**ಏವಮೇಷ ಮಹಾನ್ ಧರ್ಮ ಆದ್ಯೋ ರಾಜನ್ ಸನಾತನಃ।**
**ದುರ್ವಿಜ್ಞೇಯೋ ದುಷ್ಕರಶ್ಚ ಸಾತ್ವತೈರ್ಧಾರ್ಯತೇ ಸದಾ ||೫೫||**

ಈ ದುರ್ವಿಜ್ಞೇಯವೂ ದುಷ್ಕರವೂ ಆದ ಧರ್ಮವನ್ನು ಸಾತ್ವತರು ಯಾವಾಗಲೂ ಧರಿಸಿರುತ್ತಾರೆ ಎಂದು ಹೇಳಿರುವದಲ್ಲದೆ -

**ಏಕವ್ಯೂಹವಿಭಾಗೋ ವಾ ಕ್ವಚಿದ್ದ್ವಿವ್ಯೂಹಸಂಜ್ಞಿತಃ।**
**ತ್ರಿವ್ಯೂಹಶ್ಚಾಪಿ ಸಂಖ್ಯಾತಶ್ಚತುರ್ವ್ಯೂಹಶ್ಚ ಕಥ್ಯತೇ||**

---

1. **'ಕಲ್ಪತಃ' ಪಾ||**

**ಹರಿರೇವ ಹಿ ಕ್ಷೇತ್ರಜ್ಞೋ ನಿರ್ಮಮೋ ನಿಷ್ಕಲಸ್ತಥಾ।**
**ಜೀವಶ್ಚ ಸರ್ವಭೂತೇಷು ಪಞ್ಚಭೂತಗುಣಾತಿಗಃ॥**
**ಮನಶ್ಚ ಪ್ರಥಿತಂ ರಾಜನ್ ಪಞ್ಚೇನ್ದ್ರಿಯಸಮೀರಣಮ್।**
**ಏಷ ಲೋಕವಿಧಿರ್ಧೀಮಾನೇಷ ಲೋಕವಿಸರ್ಗಕೃತ್॥**
**ಅಕರ್ತಾ ಚೈವ ಕರ್ತಾ ಚ ಕಾರ್ಯಂ ಕಾರಣಮೇವ ಚ।**
**ಯಥೇಚ್ಛತಿ ತಥಾ ರಾಜನ್ ಕ್ರೀಡತೇ ಪುರುಷೋಽವ್ಯಯಃ॥**

ಮೋ. ಧ .೩೪೮-೫೭ ರಿಂದ ೬೦

'ಈತನು ಒಂದೇ ವ್ಯೂಹವಿಭಾಗವುಳ್ಳವನಾಗಿ, ಕೆಲವು ಕಡೆಗಳಲ್ಲಿ ಎರಡು ವ್ಯೂಹಗಳುಳ್ಳವನಾಗಿ ಮೂರು ವ್ಯೂಹಗಳುಳ್ಳವನೆಂದೂ ಎಣಿಸಲ್ಪಟ್ಟಿರುತ್ತಾನೆ. ಚತುರ್ವ್ಯೂಹನೆಂದೂ ಇವನನ್ನೇ ಹೇಳುವರು. ರಾಜನೆ, ಹರಿಯೇ ನಿರ್ಮಮನೂ ನಿಷ್ಕಲನೂ ಆದ ಕ್ಷೇತ್ರಜ್ಞನು. ಸರ್ವಭೂತಗಳ ಗುಣಗಳನ್ನೂ ಮೀರಿರುವ, ಸರ್ವಭೂತಗಳಲ್ಲಿರುವ ಜೀವನೂ ಇವನೇ. ಐದು ಇಂದ್ರಿಯುಗಳನ್ನು ಪ್ರೇರಿಸುವ ಮನಸ್ಸೆಂದು ಪ್ರಸಿದ್ಧನಾಗಿರುವಾತನೂ ಈತನೇ. ಈತನೇ ಲೋಕಗಳ ವಿಧಾತನು, ಈತನೇ ಲೋಕಗಳ ಸ್ರಷ್ಟೃವು. ಅಕರ್ತೃವೂ ಕರ್ತೃವೂ ಈತನೇ, ಕಾರ್ಯವೂ ಈತನೇ, ಕಾರಣವೂ ಈತನೇ. ತನಗೆ ಹೇಗೆ ಇಚ್ಛೆಯಾಗುವದೋ ಹಾಗೆ ಅವ್ಯಯನಾದ ಈ ಪುರುಷನು ಕ್ರೀಡಿಸುತ್ತಿರುವನು"ಎಂದು ಹೇಳಿರುವಂತೆ ಒಂದು, ಎರಡು, ಮೂರು ಅಥವಾ ನಾಲ್ಕು ವ್ಯೂಹಗಳುಳ್ಳವನೆಂದಿರುವದೂ ಈತನನ್ನೇ. ಕರ್ತೃವೂ ಈತನೇ ಅಕರ್ತೃವೂ ಈತನೇ, ಕಾರ್ಯವೂ ಈತನೇ ಕಾರಣವೂ ಈತನೇ"- ಎಂದಿರುವದು ವ್ಯೂಹಚತುಷ್ಟಯದಲ್ಲಾಗಲಿ, ಸೃಷ್ಟಿಸ್ಥಿತಿಗಳಲ್ಲಾಗಲಿ ಈ ಮತಕ್ಕೆ ನಿರ್ಭರವಿಲ್ಲವೆಂದೇ ತಿಳಿಸುತ್ತಿದೆ. ಎಲ್ಲವೂ ಈತನ ಕ್ರೀಡೆಯೇ ಎಂಬುದು ಇಲ್ಲಿ ಮುಖ್ಯವಾಗಿ ತಿಳಿಯತಕ್ಕದ್ದು. ಹೀಗಿರುವದರಿಂದ-

**ಬಹೂನಾಂ ಜನ್ಮನಾಮನ್ತೇ ಜ್ಞಾನವಾನ್ ಮಾಂ ಪ್ರಪದ್ಯತೇ।**
**ವಾಸುದೇವಃ ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ॥** ಗೀ.೭-೧೯

ಎಂಬ ಗೀತಾವಚನಕ್ಕೆ ಇದು ಹೇಗೂ ವಿರುದ್ಧವಲ್ಲವೆಂದೇ ಏರ್ಪಡುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಗೀತೆಯು `ಏಕವ್ಯೂಹ'ವುಳ್ಳ ವಾಸುದೇವನನ್ನು ಪ್ರತಿಪಾದಿಸುವ ಭಾಗವತಮತಗ್ರಂಥವೆಂದೂ ಏರ್ಪಡುತ್ತದೆ.

# ಏಕಾಂತಿಧರ್ಮ

೧೭. ಈ ಸಾತ್ವತಮತಕ್ಕೆ ಏಕಾಂತಿಗಳ ಧರ್ಮವೆಂದೂ ಹೆಸರುಂಟು. ಏಕಾಂತಿಧರ್ಮವೆಂದರೆ ಯಾವದು ? - ಎಂಬ ಪ್ರಶ್ನೆಗೆ ಈಗ ಉತ್ತರವನ್ನು ಕಂಡುಕೊಳ್ಳಬಹುದು :

ಈ ಹಿಂದೆ ನಾವು ಉದಾಹರಿಸಿರುವ ಅಧ್ಯಾಯದ ಪ್ರಾರಂಭದಲ್ಲಿ ಜನಮೇಜಯನು ಪ್ರಯೋಗಿಸಿರುವ ವಾಕ್ಯಗಳಿವು :

**ಆಹೋ ಹ್ಯೇಕಾನ್ತಿನಃ ಸರ್ವಾನ್ ಪ್ರೀಣಾತಿ ಭಗವಾನ್ ಹರಿಃ।**
**ವಿಧಿಪ್ರಯುಕ್ತಾಂ ಪೂಜಾಂ ಚ ಗೃಹ್ಣಾತಿ ಭಗವಾನ್ ಸ್ವಯಮ್ ॥೧॥**
**ಯೇ ತು ದಗ್ಧೇನ್ಧನಾ ಲೋಕೇ ಪುಣ್ಯಪಾಪವಿವರ್ಜಿತಾಃ।**
**ತೇಷಾಂ ತ್ವಯಾಭಿನಿರ್ದಿಷ್ಟಾ ಪಾರಮ್ಪರ್ಯಾಗತಾ ಗತಿಃ ॥೨॥**
**ಚತುರ್ಥ್ಯಾಂ ಚೈವ ತೇ ಗತ್ಯಾಂ ಗಚ್ಛನ್ತಿ ಪುರುಷೋತ್ತಮಮ್।**
**ಏಕಾನ್ತಿನಸ್ತು ಪುರುಷಾ ಗಚ್ಛನ್ತಿ ಪರಮಂ ಪದಮ್ ॥೩॥**
**ನೂನಮೇಕಾನ್ತ ಧರ್ಮೋಽಯಂ ಶ್ರೇಷ್ಠೋ ನಾರಾಯಣಪ್ರಿಯಃ।**
**ಅಗತ್ವಾ ಗತಯಸ್ತಿಸ್ರೋ ಯದ್ಗಚ್ಛನ್ತ್ಯವ್ಯಯಂ ಹರಿಮ್ ॥೪॥**
**ಸಹೋಪನಿಷದಾನ್ ವೇದಾನ್ ಯೇ ವಿಪ್ರಾಃ ಸಮ್ಯಗಾಸ್ಥಿತಾಃ।**
**ಪಠನ್ತಿ ವಿಧಿಮಾಸ್ಥಾಯ ಯೇ ಚಾಪಿ ಯತಿಧರ್ಮಿಣಃ ॥೫॥**
**ತೇಭ್ಯೋ ವಿಶಿಷ್ಟಾಂ ಜಾನಾಮಿ ಗತಿಮೇಕಾನ್ತಿನಾಂ ನೃಣಾಮ್।**

ಮೋ.ಧ.೩೪೮-೧ ರಿಂದ ೬

"ಆಹಾ! ಏಕಾಂತಿಗಳೆಲ್ಲರನ್ನೂ ಭಗವಂತನಾದ ಹರಿಯು ಪ್ರೀತಿಸುವನು. ವಿಧಿವತ್ತಾಗಿ ಮಾಡಿದ ಅವರ ಪೂಜೆಯನ್ನು ಆ ಭಗವಂತನು ತಾನೇ ಸ್ವೀಕರಿಸುತ್ತಾನೆ. ಯಾರು ಸಕಲಕರ್ಮವಾಸನೆಗಳನ್ನೂ ಸುಟ್ಟುಹಾಕಿ ಪುಣ್ಯಪಾಪಗಳಿಲ್ಲದವರಾಗಿರುತ್ತಾರೋ, ಅವರಿಗೆ ಗುರುಪರಂಪರೆಯಿಂದ ಉಕ್ತವಾಗಿರುವ ಗತಿಯೇ ಆಗುವದೆಂದು ನೀನು ತಿಳಿಸಿದ್ದೀಯೆ. ಅವರು ನಾಲ್ಕನೆಯ ಗತಿಯಿಂದಲೇ ಪುರುಷೋತ್ತಮನನ್ನು ಸೇರಿಕೊಳ್ಳುತ್ತಾರೆ. ಏಕಾಂತಿಗಳಾದ ಜನರೂ, ಎಂದರೆ ಪರಮಪದವನ್ನೇ ಸೇರುತ್ತಾರೆ. ನಿಜವಾಗಿಯೂ ಈ ಏಕಾಂತಧರ್ಮವೇ ಶ್ರೇಷ್ಠವಾದದ್ದು, ನಾರಾಯಣನಿಗೆ ಪ್ರಿಯವಾದದ್ದು; ಏಕೆಂದರೆ ಉಳಿದ ಮೂರು ಗತಿಗಳನ್ನು ಸೇರದೆ[1] ಅವ್ಯಯನಾದ ಹರಿಯನ್ನೇ ಅವರು ಸೇರುತ್ತಾರಷ್ಟೆ? ಉಪನಿಷತ್ಸಹಿತವಾಗಿರುವ ವೇದಗಳನ್ನು ಯಾರು ಚೆನ್ನಾಗಿ ಆಶ್ರಯಿಸಿ ವಿಧಿವತ್ತಾಗಿ ಪಠಿಸುವರೋ, ಮತ್ತು ಯಾರು ಯತಿಧರ್ಮವನ್ನು ಆಚರಿಸುತ್ತಾರೋ, ಅವರಿಗಿಂತಲೂ ಹೆಚ್ಚಿನ ಗತಿಯೇ ಏಕಾಂತಿಗಳಿಗಾಗುವದೆಂದು ನಾನು ತಿಳಿಯುತ್ತೇನೆ" ಎಂಬುದು ಈ ಶ್ಲೋಕಗಳ ಅರ್ಥ.

---

1. ಅನಿರುದ್ಧಾದಿಗಳನ್ನು ಸೇರದೆ

ಮೇಲೆ ಅನುವಾದಮಾಡಿಕೊಂಡಿರುವ ಜನಮೇಜಯನು ಹೇಳಿರುವ ನಾಲ್ಕನೆಯ ಗತಿ ಯಾವದೆಂಬುದನ್ನು ಈ ಕೆಳಗಿನ ಶ್ಲೋಕಗಳಿಂದ ಗೊತ್ತುಪಡಿಸಬಹುದಾಗಿದೆ. ಶ್ವೇತದ್ವೀಪದಲ್ಲಿ ಭಗವಾನ್ನಾರಾಯಣನನ್ನು ಕಂಡು ಹಿಂತಿರುಗಿದ ನಾರದನಿಗೆ ನರನಾರಾಯಣರು ಹೇಳಿದ ವಿವರದಲ್ಲಿ ಇದು ಸೇರಿರುತ್ತದೆ:

ಯೇ ಹಿ ನಿಷ್ಕಲುಷಾ ಲೋಕೇ ಪುಣ್ಯಪಾಪವಿವರ್ಜಿತಾಃ ।
ತೇಷಾಂ ವೈ ಕ್ಷೇಮಮಧ್ವಾನಂ ಗಚ್ಛತಾಂ ದ್ವಿಜಸತ್ತಮ॥
ಸರ್ವಲೋಕತಮೋಹನ್ತಾ ಆದಿತ್ಯೋ ದ್ವಾರಮುಚ್ಯತೇ।
ಆದಿತ್ಯದಗ್ಧಸರ್ವಾಙ್ಗಾ ಅದೃಶ್ಯಾಃ ಕೇನಚಿತ್ ಕ್ವಚಿತ್ ॥
ಪರಮಾಣುಭೂತಾ ಭೂತ್ವಾ ತು ತಂ ದೇವಂ ಪ್ರವಿಶನ್ತ್ಯುತ ।
ತಸ್ಮಾದಪಿ ಚ ನಿರ್ಮುಕ್ತಾ ಅನಿರುದ್ಧತನೌ ಸ್ಥಿತಾಃ ॥
ಮನೋಭೂತಾಸ್ತತೋ ಭೂತ್ವಾ ಪ್ರದ್ಯುಮ್ನಂ ಪ್ರವಿಶನ್ತ್ಯುತ ।
ಪ್ರದ್ಯುಮ್ನಾಚ್ಚಾಪಿ ನಿರ್ಮುಕ್ತಾ ಜೀವಂ ಸಂಕರ್ಷಣಂ ತತಃ ॥
ವಿಶನ್ತಿ ವಿಪ್ರಪ್ರವರಾ ಸಾಙ್ಖ್ಯಾ ಭಾಗವತೈಃ ಸಹ ।
ತತಸ್ತ್ರೈಗುಣ್ಯಹೀನಾಸ್ತೇ ಪರಮಾತ್ಮಾನಮಞ್ಜಸಾ॥
ಪ್ರವಿಶನ್ತಿ ದ್ವಿಜಶ್ರೇಷ್ಠಾ ಕ್ಷೇತ್ರಜ್ಞಂ ನಿರ್ಗುಣಾತ್ಮಕಮ್ ।
ಸರ್ವಾವಾಸಂ ವಾಸುದೇವಂ ಕ್ಷೇತ್ರಜ್ಞಂ ವಿದ್ಧಿ ತತ್ತ್ವತಃ ॥
ಸಮಾಹಿತಮನಸ್ಕಾಶ್ಚ ನಿಯತಾಃ ಸಂಯತೇನ್ದ್ರಿಯಾಃ ।
ಏಕಾನ್ತಭಾವೋಪಗತಾಃ ವಾಸುದೇವಂ ವಿಶನ್ತಿ ತೇ ॥

- ಮೋ. ಧ. ೩೪೩-೧೩ ರಿಂದ ೧೯

ಇಲ್ಲಿ ಆದಿತ್ಯ, ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ನಿರ್ಗುಣನಾದ ವಾಸುದೇವ[1] - ಈ ಕ್ರಮದಿಂದ ಮುಕ್ತರಿಗೆ ಭಗವಂತನ ಸಾಯುಜ್ಯವಾಗುವದು, ಏಕಾಂತಭಕ್ತರಿಗೆ - ವಾಸುದೇವನನ್ನೇ ಸಮಾಹಿತಚಿತ್ತರಾಗಿ ಭಜಿಸುವವರಿಗೆ ನೇರಾಗಿಯೇ ವಾಸುದೇವಸಾಯುಜ್ಯವಾಗುವದು - ಎಂದು ಹೇಳಿರುತ್ತದೆ.[2]

ವೈಶಂಪಾಯನನು ಈ ಧರ್ಮದ ಗುರುಪರಂಪರೆಯನ್ನು ವಿವರಿಸಿದ ಬಳಿಕ ಹೇಳಿರುವದೇನೆಂದರೆ:

ಧರ್ಮಜ್ಞಾನೇನ ಚೈತೇನ ಸುಪ್ರಯುಕ್ತೇನ ಕರ್ಮಣಾ।
ಅಹಿಂಸಾಧರ್ಮಯುಕ್ತೇನ ಪ್ರೀಯತೇ ಹರಿರೀಶ್ವರಃ ॥ ೩೪೮-೫೬

1. ವ್ಯೂಹಗಳೆಲ್ಲವೂ ಪರಮಾತ್ಮನೇ ಎಂಬುದು ಇಲ್ಲಿ ಸುಸ್ಫುಟವಾಗಿರುವದನ್ನು ಲಕ್ಷಿಸಬೇಕು.

2. ಅನಿರುದ್ಧಾದಿಗಳನ್ನು ಸೇರದೆ.

"ಈ ಧರ್ಮದ ಜ್ಞಾನ, ಸರಿಯಾಗಿ ಅನುಷ್ಠಾನಮಾಡಿದ ಕರ್ಮ - ಇವು ಅಹಿಂಸಾಧರ್ಮದಿಂದ ಕೂಡಿದ್ದರೆ ಈಶ್ವರನಾದ ಹರಿಯು ಪ್ರೀತನಾಗುತ್ತಾನೆ." (ಅಹಿಂಸೆಯ ವಿಷಯದಲ್ಲಿ ಇಷ್ಟರಲ್ಲಿಯೇ ವಿಚಾರಮಾಡಬೇಕಾಗಿದೆ).

**ಏಷ ಏಕಾನ್ತಧರ್ಮಸ್ತೇ ಕೀರ್ತಿತೋ ನೃಪಸತ್ತಮ।**
**ಮಯಾ ಗುರುಪ್ರಸಾದೇನ ದುರ್ವಿಜ್ಞೇಯೋಽಕೃತಾತ್ಮಭಿಃ ॥**
**ಏಕಾನ್ತಿನೋ ಹಿ ಪುರುಷಾ ದುರ್ಲಭಾ ಬಹವೋ ನೃಪ ।**
**ಯದ್ಯೇಕಾನ್ತಿಭಿರಾಕೀರ್ಣಂ ಜಗತ್ ಸ್ಯಾತ್ ಕುರುನನ್ದನ ॥**
**ಅಹಿಂಸಕೈರಾತ್ಮವಿದ್ಭಿಃ ಸರ್ವಭೂತಹಿತೇ ರತೈಃ ।**
**ಭವೇತ್ ಕೃತಯುಗಪ್ರಾಪ್ತಿರಾಶೀಃಕರ್ಮವಿವರ್ಜಿತಾ ॥** ೩೪೮-೬೧ ರಿಂದ ೬೩

"ಎಲೈ ರಾಜನೆ, ಇದೇ ಏಕಾಂತಧರ್ಮವು, ಇದನ್ನು ಗುರುವಿನ ಅನುಗ್ರಹದಿಂದ ನಿನಗೆ ಹೇಳಿರುತ್ತೇನೆ. ಏಕಾಂತಿಗಳಾದ ಜನರು ಬಹಳಮಂದಿ ಸಿಕ್ಕುವದು ಕಷ್ಟ. ಈ ಜಗತ್ತು ಏಕಾಂತಿಗಳಿಂದಲೇ ತುಂಬಿರುತ್ತಿದ್ದರೆ- ಎಲೈ ಕುರುನಂದನನೆ, ಅಹಿಂಸಕರೂ ಆತ್ಮಜ್ಞಾನಿಗಳೂ ಸರ್ವಭೂತಗಳಿಗೂ ಹಿತವನ್ನೇ ಮಾಡುವದರಲ್ಲಿ ನಿರತರೂ ಆಗಿರುವ ಏಕಾಂತಿಗಳಿಂದ ತುಂಬಿರುತ್ತಿದ್ದರೆ -ಕಾಮ್ಯಕರ್ಮವಿಲ್ಲದ ಕೃತಯುಗವೇ ಪ್ರಾಪ್ತವಾಗುತ್ತಿತ್ತು." ಈ ವರ್ಣನೆಯಿಂದ ನಿಷ್ಕಾಮರಾಗಿ ಸರ್ವಾತ್ಮನಾದ ಭಗವಂತನನ್ನೇ ನಿಯಮದಿಂದ ಭಜಿಸುತ್ತಿರುವವರು `**ಏಕಾಂತಿಗಳು**' ಎಂದಂತೆ ಆಯಿತು. `**ಏಕಭಕ್ತಿರ್ವಿಶಿಷ್ಯತೇ**' (ಗೀ. ೭-೧೭) ಎಂದು `ಗೀತೆಯಲ್ಲಿ ವರ್ಣಿಸಿರುವ ಜ್ಞಾನಿಭಕ್ತನೇ, ಹನ್ನೆರಡನೆಯ ಅಧ್ಯಾಯದಲ್ಲಿ ವರ್ಣಿಸಿರುವ ಅಕ್ಷರೋಪಾಸಕನೇ, ಏಕಾಂತಿ' ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

## ಏಕಾಂತಿಯಾಗುವದಕ್ಕೆ ಸಹಕಾರಿ

೧೮. ಜನಮೇಜಯನು ``ಹೀಗೆ ತಿಳಿದವರು ಈ ಧರ್ಮವನ್ನು ಅನುಷ್ಠಾನ ಮಾಡುತ್ತಿದ್ದರೂ ಉಳಿದವರೇಕೆ ಇದನ್ನು ಅನುಸರಿಸುವದಿಲ್ಲ? ಬೇರೆಬೇರೆಯ ನಿಯಮಗಳನ್ನೇಕೆ ಅನುಸರಿಸುತ್ತಿರುವರು?'' ಎಂದು ಕೇಳಿದ್ದಕ್ಕೆ ವೈಶಂಪಾಯನನು ``ಜನರ ಪ್ರಕೃತಿಯು ಸಾತ್ತ್ವಿಕ, ರಾಜಸ, ತಾಮಸ-ಎಂದು ಮೂರು ಬಗೆಯಾಗಿರುವದು; ಇವರಲ್ಲಿ ಸಾತ್ತ್ವಿಕನೇ ಮೋಕ್ಷಕ್ಕೆ ಅಧಿಕಾರಿ. ಅವನೇ ಬ್ರಹ್ಮಜ್ಞಾನಿಯಾದವನನ್ನು ಕಂಡು ತತ್ತ್ವವನ್ನು ಅರಿತು ಮೋಕ್ಷಫಲವನ್ನೇ ಪಡೆಯುವೆನೆಂದು ನಿಶ್ಚಯಿಸಿಕೊಳ್ಳುತ್ತಾನೆ. ಪುರುಷೋತ್ತಮನಾದ ಭಗವಂತನನ್ನೇ ಧ್ಯಾನಿಸುತ್ತಾ ಇಷ್ಟಾರ್ಥವನ್ನು ಪಡೆದುಕೊಳ್ಳುತ್ತಾನೆ; ಅವನೇ ಏಕಾಂತಭಕ್ತಿಯುಳ್ಳವನಾಗಿ ನಾರಾಯಣನಲ್ಲಿ ತತ್ಪರನಾಗುವನು" ಎಂದು ಹೇಳಿರುತ್ತಾನೆ.

**ಮನೀಷಿಣೋ ಹಿ ಯೇ ಕೇಚಿದ್ ಯತಯೋ ಮೋಕ್ಷಧರ್ಮಿಣಃ ।**
**ತೇಷಾಂ ವಿಚ್ಛಿನ್ನತೃಷ್ಣಾನಾಂ ಯೋಗಕ್ಷೇಮವಹೋ ಹರಿಃ ।**
**ಜಾಯಮಾನಂ ಹಿ ಪುರುಷಂ ಯಂ ಪಶ್ಯೇನ್ಮಧುಸೂದನಃ ।**
**ಸಾತ್ತ್ವಿಕಸ್ತು ಸ ವಿಜ್ಞೇಯೋ ಭವೇನ್ಮೋಕ್ಷೇ ಚ ನಿಶ್ಚಿತಃ ।**
**ಸಾಂಖ್ಯಯೋಗೇನ ತುಲ್ಯೋ ಹಿ ಧರ್ಮ ಏಕಾನ್ತ (ನ್ತಿ?) ಸೇವಿತಃ ।**
**ನಾರಾಯಣಾತ್ಮಕೇ ಮೋಕ್ಷೇ ತತೋ ಯಾನ್ತಿ ಪರಾಂ ಗತಿಮ್ ॥**
**ನಾರಾಯಣೇನ ದೃಷ್ಟಸ್ತು ಪ್ರತಿಬುದ್ಧೋ ಭವೇತ್ ಪುಮಾನ್ ।**
**ಏವಮಾತ್ಮೇಚ್ಛಯಾ ರಾಜನ್ ಪ್ರತಿಬುದ್ಧೋ ನ ಜಾಯತೇ ॥**

ಮೋ. ೩೪೮-೭೨, ೭೫

"ಯಾವ ವಿವೇಕಿಗಳಾದ ಯತಿಗಳು ಮೋಕ್ಷಧರ್ಮವನ್ನೇ ಅನುಷ್ಠಾನ ಮಾಡುತ್ತಿರುವರೋ ತೃಷ್ಣೆಯನ್ನು ಕತ್ತರಿಸಿಕೊಂಡಿರುವ ಅವರ ಯೋಗಕ್ಷೇಮವನ್ನು ಹರಿಯು ವಹಿಸುವನು. ಮಧುಸೂದನನು ಯಾವ ಮನುಷ್ಯನನ್ನು ಹುಟ್ಟುವಾಗ ನೋಡುವನೋ ಅವನು ಸಾತ್ತ್ವಿಕನಾಗಿ ಮೋಕ್ಷಕ್ಕಾಗಿ ಮನಸ್ಸು ಮಾಡುತ್ತಾನೆ; ಏಕಾಂತಿಗಳು ಸೇವಿಸುವ ಧರ್ಮವು ಸಾಂಖ್ಯಯೋಗಕ್ಕೆ ಸಮಾನವಾಗಿರುತ್ತದೆ. ನಾರಾಯಣನು ದೃಷ್ಟಿಸಿದವನು ಜ್ಞಾನಿಯಾಗುವನು, ಹೀಗೆ ಸ್ವಪ್ರಯತ್ನದಿಂದಲೇ ಜ್ಞಾನಿಯಾಗಲಾರನು." ಸಾತ್ತ್ವಿಕನಾಗಿ ನಾರಾಯಣನನ್ನೇ ಭಜಿಸುತ್ತಿರುವದೇ ಏಕಾಂತಭಕ್ತಿಯೆಂದೂ ಆ ಭಗವಂತನ ಅನುಗ್ರಹಕ್ಕೆ ಪಾತ್ರರಾದವರಿಗೇ ಮೋಕ್ಷಧರ್ಮವು ಸುಲಭವಾಗಿ ಅಳವಡುವದೆಂದೂ ಇಲ್ಲಿ ಹೇಳಿದೆ. `ಪ್ರವೃತ್ತಿಧರ್ಮಕ್ಕೆ ಅರ್ಹನಾದವನನ್ನು ಹರಿಯು ನೋಡುವದಿಲ್ಲ; ಅವನನ್ನು ಬ್ರಹ್ಮನು ನೋಡುತ್ತಾನೆ. **'ಪಶ್ಯತ್ಯೇನಂ ಜಾಯಮಾನಂ ಬ್ರಹ್ಮಾಲೋಕಪಿತಾಮಹಃ'** (೭೭) ಎಂದು ಬರೆದಿದೆ.

ಇದರ ಜೊತೆಗೆ ಈ ಧರ್ಮದಲ್ಲಿ ಸಾಂಖ್ಯ , ಯೋಗ, ವೇದದ ಆರಣ್ಯಕ-ಈ ಮೂರೂ ಒಂದಕ್ಕೊಂದು ಸೇರಿಕೊಂಡು ಸಾಧಕನಿಗೆ ಪ್ರಯೋಜನಕಾರಿಗಳಾಗಿರುವವೆಂದು ಸ್ಪಷ್ಟವಾಗಿ ಹೇಳಿರುವದೊಂದು ವಿಶೇಷ.

**ಏವಮೇಕಂ ಸಾಙ್ಖ್ಯಯೋಗಂ ವೇದಾರಣ್ಯಕಮೇವ ಚ ।**
**ಪರಸ್ಪರಾಙ್ಗಾನ್ಯೇತಾನಿ ಪಾಞ್ಚರಾತ್ರಂ ಚ ಕಥ್ಯತೇ ।**
**ಏಷ ಏಕಾನ್ತಿನಾಂ ಧರ್ಮೋ ನಾರಾಯಣಪರಾತ್ಮಕಃ ।'** ೩೪೮-೮೨

# ಏಕಾಂತಧರ್ಮವು ಪ್ರವೃತ್ತಿಪರವೆ?

೧೯. ಏಕಾಂತಧರ್ಮವೆಂದರೆ ಭಾಗವತಧರ್ಮದಲ್ಲಿ ಅತ್ಯಂತಮೇಲಿನ ಅಂತಸ್ತಿನ ಆಚರಣೆ. ಇದು ನಿವೃತ್ತಿಧರ್ಮವೇ ಎಂಬುದು ನಾವು ಮೇಲೆ ಉದಾಹರಿಸಿರುವ **'ಮನೀಷಿಣೋ ಹಿ ಯೇ ಕೇಚಿದ್ಯತಯೋ ಮೋಕ್ಷಧರ್ಮಿಣಃ। ತೇಷಾಂ ವಿಚ್ಛಿನ್ನತೃಷ್ಣಾನಾಂ ಯೋಗಕ್ಷೇಮವಹೋ ಹರಿಃ ॥'** ಎಂಬುದೇ ಮುಂತಾದ ಶ್ಲೋಕಗಳ ಅರ್ಥವನ್ನು ಮನನಮಾಡುವದರಿಂದ ಮನದಟ್ಟಾಗುವದು. ಆದರೆ **'ಏಕಾಂತಿಕ ಅಂದರೆ ಪ್ರವೃತ್ತಿಪರ ಭಾಗವತಧರ್ಮ'** ಎಂದು ಸಾಧಿಸುವದಕ್ಕೆ ಹೊರಟಿರುವವರೂ ಕೆಲವರುಂಟು[1]; **'ಪ್ರವೃತ್ತಿಲಕ್ಷಣಂ ಧರ್ಮಂ ಋಷಿರ್ನಾರಾಯಣೋಽಬ್ರವೀತ್ ॥'** (ಮೋ.ಧ. ೨೧೭-೨) ಎಂಬ ವಾಕ್ಯವನ್ನೂ ಅವರು ಉದಾಹರಿಸುವದುಂಟು. ತತ್ತ್ವವನ್ನು ಅರಿಯಬೇಕೆನ್ನುವ ಮುಮುಕ್ಷುಗಳಿಗೆ ಉಪಯೋಗವಾಗಲೆಂದು ಇಲ್ಲಿ ನಾರಾಯಣೀಯದ ಕೆಲವು ವಾಕ್ಯಗಳನ್ನೂ ಅವುಗಳ ಸಂಧರ್ಭಗಳನ್ನೂ ವಿವೇಚನೆಮಾಡಲಾಗುವದು.

**'ಪ್ರವೃತ್ತಿಲಕ್ಷಣಂ ಧರ್ಮಂ ಋಷಿರ್ನಾರಾಯಣೋಽಬ್ರವೀತ್'** ಎಂಬ ವಾಕ್ಯವು ನಾರಾಯಣೀಯಕ್ಕೆ ಸೇರಿದ್ದಲ್ಲ; ಅದು ಮೋಕ್ಷಧರ್ಮದ (೨೧೭ನೆಯ ಅಧ್ಯಾಯದಲ್ಲಿ ಹೇಳಿರುವ) ವಾರ್ಷ್ಣೇಯಾಧ್ಯಾತ್ಮಕಥನಕ್ಕೆ ಸೇರಿದ್ದು. ಆ ವಾಕ್ಯವು ಬಂದಿರುವ ಸಂದರ್ಭವನ್ನು ಪೂರ ತಿಳಿಯುವದಕ್ಕೆ ಅನುಕೂಲಿಸಲೆಂದು ಆ ಭಾಗದ ಶ್ಲೋಕಗಳನ್ನು ಇಲ್ಲಿ ಕೊಟ್ಟಿರುತ್ತದೆ:

**ನ ಸ ವೇದ ಪರಂ ಬ್ರಹ್ಮ[1] ಯೋ ನ ವೇದ ಚತುಷ್ಟಯಮ್।**
**ವ್ಯಕ್ತಾವ್ಯಕ್ತಂ ಚ ಯತ್ತತ್ತ್ವಂ ಸಂಪ್ರೋಕ್ತಂ ಪರಮರ್ಷಿಣಾ॥**
**ವ್ಯಕ್ತಂ ಮೃತ್ಯುಮುಖಂ ವಿದ್ಯಾದವ್ಯಕ್ತಮಮೃತಂ ಪದಮ್।**
**ಪ್ರವೃತ್ತಿಲಕ್ಷಣಂ ಧರ್ಮಮೃಷಿರ್ನಾರಾಯಣೋಽಬ್ರವೀತ್॥**
**ತತ್ರೈವಾವಸ್ಥಿತಂ ಸರ್ವಂ ತ್ರೈಲೋಕ್ಯಂ ಸಚರಾಚರಮ್।**
**ನಿವೃತ್ತಿಲಕ್ಷಣಂ ಧರ್ಮಮವ್ಯಕ್ತಂ ಬ್ರಹ್ಮ ಶಾಶ್ವತಮ್॥**

1. ಬಾಲಗಂಗಾಧರತಿಲಕರವರ 'ಗೀತಾರಹಸ್ಯ' ಎಂಬ ಗ್ರಂಥದಲ್ಲಿ ಈ ವಾದವನ್ನು ವಿಸ್ತಾರವಾಗಿ ಪ್ರತಿಪಾದಿಸಿದೆ. (ಗೀ.ರ. ಕನ್ನಡದ ಅನುವಾದದ ಪು. ೩೬೩, ೪೩೬ ನೋಡಿರಿ). ರಾಜಕೀಯದ ಚಳುವಳಿಯ ಕಾಲಧಲ್ಲಿ ಸೋಮಾರಿಗಳಾಗಿರುವವರಿಗೆ ಎಚ್ಚರಿಕೆಯನ್ನು ಕೊಡುವದಕ್ಕೆ ಅಂಥ ವಾದಗ್ರಂಥವು ಬೇಕಾಗಿದ್ದಿರಬಹುದಾದರೂ ನಿಷ್ಪಕ್ಷಪಾತದೃಷ್ಟಿಯಿಂದ ತತ್ತ್ವವನ್ನು ನಿರ್ಧರಿಸಿಕೊಳ್ಳಬೇಕೆನ್ನುವವರಿಗೆ ಮೂಲ ಪ್ರಮಾಣವಾಕ್ಯಗಳ ತಾತ್ಪರ್ಯವನ್ನು ನಿರ್ಣಯಿಸುವದು ಅತ್ಯವಶ್ಯವಾಗುವದು ಅನಿವಾರ್ಯವಾಗಿದೆ. ಗೀತಾರಹಸ್ಯವನ್ನಾಗಲಿ ಮತ್ತೆ ಯಾವ ಗ್ರಂಥವನ್ನಾಗಲಿ ಖಂಡಿಸುವದು ಪ್ರಕೃತವಿಚಾರಕ್ಕೆ ಬೇಕಿಲ್ಲವಾದ್ದರಿಂದ ವಿಷಯವನ್ನು ಪರಿಶೀಲಿಸುವಷ್ಟುಮಟ್ಟಿನ ವಿಚಾರವನ್ನು ಇಲ್ಲಿ ಸಂಗ್ರಹವಾಗಿ ಮಾಡಿರುತ್ತೇವೆ.

2. 'ಧರ್ಮಂ' ಎಂದೂ ಪಾಠವಿದೆಯೆಂದು ನೀಲಕಂಠೀಯವ್ಯಾಖ್ಯಾನ.

**ಪ್ರವೃತ್ತಿಲಕ್ಷಣಂ ಧರ್ಮಂ ಪ್ರಜಾಪತಿರಥಾಬ್ರವೀತ್।**
**ಪ್ರವೃತ್ತಿಃ ಪುನರಾವೃತ್ತಿರ್ನಿವೃತ್ತಿಃ ಪರಮಾ ಗತಿಃ॥**
**ತಾಂ ಗತಿಂ ಪರಮಾಮೇತಿ ನಿವೃತ್ತಿಪರಮೋ ಮುನಿಃ।**
**ಜ್ಞಾನತತ್ತ್ವಪರೋ ನಿತ್ಯಂ ಶುಭಾಶುಭನಿದರ್ಶಕಃ ॥**

ಮೋ.ಧ. ೨೧೭-೧ ರಿಂದ ೫

ಈ ಪ್ರಕರಣದಲ್ಲಿ 'ಪ್ರವೃತ್ತಿಲಕ್ಷಣಂ ಧರ್ಮಮೃಷಿರ್ನಾರಾಯಣೋಽಬ್ರವೀತ್' ಎಂಬ ಪಾಠವು ಸಾಧುವೆ? ಎಂಬುದೇ ಮೊದಲು ನಿರ್ಣಯವಾಗಬೇಕೆಂದು ತೋರುತ್ತದೆ. ಏಕೆಂದರೆ 'ನಾರಾಯಣಋಷಿಯೂ ಪ್ರವೃತ್ತಿಧರ್ಮವನ್ನು ಹೇಳಿರುತ್ತಾನೆ; ಪ್ರಜಾಪತಿಯೂ ಪ್ರವೃತ್ತಿಧರ್ಮವನ್ನು ಹೇಳಿರುತ್ತಾನೆ' ಎಂಬ ಪುನರುಕ್ತಿ ಇಲ್ಲಿದೆ. ನಮ್ಮ ಮತದಲ್ಲಿ 'ನಿವೃತ್ತಿಲಕ್ಷಣಂ ಧರ್ಮಮ್' ಎಂದೇ ಇಲ್ಲಿರಬೇಕು; ಹಾಗಾದರೆ ಪ್ರವೃತ್ತಿ, ನಿವೃತ್ತಿ-ಎರಡನ್ನೂ ಬಿಡಿಸಿ ಹೇಳಿದಂತೆ ಆಗುತ್ತದೆ. ಪ್ರಜಾಪತಿಬ್ರಹ್ಮನು ಪ್ರವೃತ್ತಿಯನ್ನು ಹೇಳಿದನು ಎಂಬ ಅರ್ಥವು ಹೊಂದಿಕೊಳ್ಳುತ್ತದೆ. ಇದು ಹೇಗಾದರೂ ಇರಲಿ, ಈ ಪ್ರಕರಣವು **'ನಿವೃತ್ತಿಃ ಪರಮಾ ಗತಿಃ'** ಎಂದು ನಿವೃತ್ತಿಧರ್ಮವನ್ನೇ ಹೊಗಳುವದಕ್ಕೆ ಬಂದಿರುತ್ತದೆ ಎಂಬುದಂತೂ ನಿಶ್ಚಿತ. ಅಧ್ಯಾಯದ ಉಪಸಂಹಾರದಲ್ಲಿರುವ ವಾಕ್ಯಗಳನ್ನು ನೋಡಿದರೆ ಈ ನಮ್ಮ ಕಲ್ಪನೆಗೇ ಪುಷ್ಟಿಯು ದೊರಕುತ್ತದೆ. ಏಕೆಂದರೆ ವೈರಾಗ್ಯದಿಂದ ಮೋಕ್ಷವು ಸಿಕ್ಕುತ್ತದೆ ಎಂಬುದನ್ನು ಇಲ್ಲಿ ಮತ್ತೆಮತ್ತೆ ವರ್ಣಿಸಿರುತ್ತದೆ:

**ಕಷಾಯವರ್ಜಿತಂ ಜ್ಞಾನಂ ಯೇಷಾಮುತ್ಪದ್ಯತೇ ಚಲಮ್।**
**ಯಾನ್ತಿ ತೇಽಪಿ ಪರಾಲ್ಲೋಕಾನ್ ವಿಮುಚ್ಯನ್ತೇ ಯಥಾಬಲಮ್ ॥೩೧॥**
**ಭಗವನ್ತಮಜಂ ದಿವ್ಯಂ ವಿಷ್ಣುಮವ್ಯಕ್ತಸಂಜ್ಞಿತಮ್।**
**ಭಾವೇನ ಯಾನ್ತಿ ಶುದ್ಧಾ ಯೇ ಜ್ಞಾನತೃಪ್ತಾ ನಿರಾಶಿಷಃ ॥೩೨॥**
**ಜ್ಞಾತ್ವಾಽಽತ್ಮಸ್ಥಂ ಹರಿಂ ಚೈವ ನ ನಿವರ್ತನ್ತಿ ತೇಽವ್ಯಯಾಃ।**
**ಪ್ರಾಪ್ಯ ತತ್ಪರಮಂ ಸ್ಥಾನಂ ಮೋದನ್ತೇಽಕ್ಷರಮವ್ಯಯಮ್ ॥೩೩॥**

ಈ ಶ್ಲೋಕಗಳಲ್ಲಿ ಮಿಕ್ಕವರೆಲ್ಲರಿಗಿಂತಲೂ ವಿರಕ್ತರಾದ ಹರಿಯ ಭಕ್ತರು ಪುನರಾವೃತ್ತಿರಹಿತವಾದ ಪರಮಪದವನ್ನೇ ಸೇರುವರು-ಎಂದು ಸ್ಪಷ್ಟವಾಗಿ ಹೇಳಿದೆ:

**ವಿಕಾರಂ ಪ್ರಕೃತಿಂ ಚೈವ ಪುರುಷಂ ಚ ಸನಾತನಮ್।**
**ಯೋ ಯಥಾವದ್ ವಿಜಾನಾತಿ ಸ ವಿತೃಷ್ಣೋ ವಿಮುಚ್ಯತೇ ॥೩೭॥**
**ಪ್ರಕಾಶಂ ಭಗವಾನೇತದೃಷಿರ್ನಾರಾಯಣೋಽಬ್ರವೀತ್ ।**
**ಭೂತಾನಾಮನುಕಮ್ಪಾರ್ಥಂ ಜಗಾದ ಜಗತೋ ಗತಿಃ ॥೩೮॥**

ಇಲ್ಲಿ ಉಪಕ್ರಮದಲ್ಲಿ 'ಅವ್ಯಕ್ತಮಮೃತಮ್', 'ಅವ್ಯಕ್ತಂ ಬ್ರಹ್ಮ ಶಾಶ್ವತಮ್' ಎಂದೂ 'ನಿವೃತ್ತಿಃ ಪರಮಾ ಗತಿಃ' ಎಂದೂ ನಿವೃತ್ತಿಯಿಂದ ಮೋಕ್ಷವಾಗುವದೆಂದು ಸ್ಪಷ್ಟವಾಗಿ ಹೇಳಿ ಉಪಸಂಹಾರದಲ್ಲಿ 'ವಿತೃಷ್ಣೋ ವಿಮುಚ್ಯತೇ' 'ಭಗವಾನೇತದೃಷಿರ್ನಾರಾಯಣೋಽಮೃತಮ್ ಜಗಾದ' ಭಗವಂತನಾದ ನಾರಾಯಣಋಷಿಯು ಅಮೃತವನ್ನು ಹೇಳಿರುತ್ತಾನೆ- ಎಂತ ಬರೆದಿರುವದನ್ನು ನೋಡಿದರೆ ನಾರಾಯಣಋಷಿಪ್ರೋಕ್ತವಾದದ್ದು ನಿವೃತ್ತಿಧರ್ಮವೆಂದೇ ಸ್ಪಷ್ಟವಾಗುವದಿಲ್ಲವೆ?

ಈಗ ನಾರಾಯಣೀಯದ ದೃಷ್ಟಿಯಿಂದಲೇ ಈ ವಿಚಾರವನ್ನು ಮತ್ತೊಮ್ಮೆ ನೋಡೋಣ. (೧) ನಾರಾಯಣೀಯದ ಉಪಕ್ರಮದಲ್ಲಿ-

**ಗೃಹಸ್ಥೋ ಬ್ರಹ್ಮಚಾರೀ ವಾ ವಾನಪ್ರಸ್ಥೋಽಥ ಭಿಕ್ಷುಕಃ।**
**ಯ ಇಚ್ಛೇತ್ ಸಿದ್ಧಿಮಾಸ್ಥಾತುಂ ದೇವತಾಂ ಕಾಂ ಯಜೇತ ಸಃ ॥** ೩೩೪–೧

ಎಂದಿರುವದರಿಂದ ಈ ಧರ್ಮವು ನಾಲ್ಕು ಆಶ್ರಮದವರಿಗೂ ಉಂಟು-ಎಂದಾಗುತ್ತದೆ. ನರನಾರಾಯಣರು ಘೋರವಾದ ತಪಸ್ಸನ್ನು ಮಾಡುತ್ತಿರುವಾಗ ಮಾಡುತ್ತಿದ್ದ ದೈವಪಿತ್ರ್ಯಕರ್ಮಗಳಿಗೆ ನಾರಾಯಣಭಗವಂತನೇ ಉದ್ದಿಷ್ಟನಾಗಿರುತ್ತಾನೆ; ಅವನಿಗಿಂತ ಹೆಚ್ಚಿನ ದೇವತೆಯಾಗಲಿ, ಪಿತೃವಾಗಲಿ ಇಲ್ಲ-ಎಂದು (೩೩೪–೩೩)ಹೇಳಿರುವದರಿಂದ ಪ್ರವೃತ್ತಿಕರ್ಮವನ್ನು ಕೂಡ ನಿವೃತ್ತಿಧರ್ಮವಾಗಿ ನಾರಾಯಣಋಷಿಯು ಎಣಿಸಿದ್ದನೆಂದು ಹೇಳಬೇಕಾಗುತ್ತದೆ.

(೨) ನಾರದನಿಗೆ ದರ್ಶನವನ್ನು ಕೊಟ್ಟ ಭಗವಂತನು ಅವನಿಗೆ ಮಾಡಿದ ಉಪದೇಶದಲ್ಲಿ ಈ ವಾಕ್ಯವೂ ಇದೆ:'ಯಜ್ಞದಿಂದ ಸುಪ್ರೀತನಾಗಿ ಬ್ರಹ್ಮನಿಗೆ ವರಗಳನ್ನು ಕೊಟ್ಟಬಳಿಕ ನಾನು ನಿವೃತ್ತನಿಷ್ಠನಾದೆನು'(ನಿವೃತ್ತಿಪರಮೋಽಭವಮ್ ಮೋ. ಧ.೩೩೯ ೬೬)ಎಂದು ಹೇಳಿ ಅದಕ್ಕೆ ಕಾರಣವನ್ನು ಹೀಗೆ ಹೇಳಿರುತ್ತಾನೆ:

**ನಿರ್ವಾಣಂ ಸರ್ವಧರ್ಮಾಣಾಂ ನಿವೃತ್ತಿಃ ಪರಮಾ ಸ್ಮೃತಾ।**
**ತಸ್ಮಾನ್ನಿವೃತ್ತಿಮಾಪನ್ನಶ್ಚರೇತ್ ಸರ್ವಾಙ್ಗನಿರ್ವೃತಃ॥** ೩೩೯–೬೭

ಇಲ್ಲಿ ನಿವೃತ್ತಿಧರ್ಮವು ಮೋಕ್ಷಕಾರಣವಾದ್ದರಿಂದ ನಿವೃತ್ತಿಯನ್ನೇ ಆಚರಿಸಬೇಕು-ಎಂದು ಭಗವಂತನು ಆಡಿತೋರಿಸಿರುತ್ತಾನೆ.

(೩) ಬ್ರಹ್ಮನ ಮಾನಸಪುತ್ರರಾದ ಏಕತ, ದ್ವಿತ, ತ್ರಿತ-ಮುಂತಾದವರು ಸಾವಿರ ವರ್ಷಗಳವರೆಗೆ ತಪಸ್ಸುಮಾಡಿದರೂ ಭಗವಂತನು ಅವರಿಗೆ ದರ್ಶನವನ್ನು ಕೊಡಲಿಲ್ಲ.

**ಕ್ಷೀರೋದಧೇರುತ್ತರತಃ ಶ್ವೇತದ್ವೀಪೋ ಮಹಾಪ್ರಭಃ ।**
**ತತ್ರ ನಾರಾಯಣಪರಾ ಮಾನವಾಶ್ಚನ್ದ್ರವರ್ಚಸಃ ।**
**ಏಕಾನ್ತಭಾವೋಪಗತಾಸ್ತೇ ಭಕ್ತಾಃ ಪುರುಷೋತ್ತಮಮ್ ॥**
**ತೇ ಸಹಸ್ರಾರ್ಚಿಷಂ ದೇವಂ ಪ್ರವಿಶನ್ತಿ ಸನಾತನಮ್ ।**
**ಅನಿನ್ದ್ರಿಯಾ ನಿರಾಹಾರಾ ಅನಿಷ್ಪನ್ದಾಃ ಸುಗನ್ಧಿನಃ ॥**
**ಏಕಾನ್ತಿನಸ್ತೇ ಪುರುಷಾಃ ಶ್ವೇತದ್ವೀಪನಿವಾಸಿನಃ ॥** ೩೩೬–೨೮ ರಿಂದ ೩೦

ಶ್ವೇತದ್ವೀಪದಲ್ಲಿ ನಾರಾಯಣಪರರಾದ, ಚಂದ್ರಪ್ರಕಾಶರಾದ ಅನಿಂದ್ರಿಯರೂ ನಿರಾಹಾರರೂ ಆಗಿರುವ ಪುರುಷರು ಇರುತ್ತಾರೆ. ಅವರು ಏಕಾಂತಭಾವವುಳ್ಳವರು. ಅವರು ಭಗವಂತನಲ್ಲಿ ಪ್ರವಿಷ್ಟರಾಗುತ್ತಾರೆ-ಎಂದು ಅಶರೀರವಾಣಿಯಾಯಿತು-ಎಂದಿದೆ. ಆದ್ದರಿಂದಲೂ ಏಕಾಂತಭಕ್ತರು ಎಂದರೆ ನಿವೃತ್ತಿಪರರು ಎಂದೇ ಆಯಿತು.

(೪) ಭಗವಂತನು ನಾರದನಿಗೆ ದರ್ಶನವನ್ನು ಕೊಟ್ಟಾಗ

**ನ ಹ್ಯೇತದ್ ಬ್ರಹ್ಮಣಾ ಪ್ರಾಪ್ತಮೀದೃಶಂ ಮಮ ದರ್ಶನಮ್।**
**ಯತ್ ತ್ವಯಾ ಪ್ರಾಪ್ತಮದ್ಯೇಹ ಏಕಾನ್ತಗತಬುದ್ಧಿನಾ॥**

೩೩೯–೧೦೭, ೧೦೮

'ಈ ನನ್ನ ದರ್ಶನವು ಬ್ರಹ್ಮನಿಗೂ ಲಭಿಸಲಿಲ್ಲ; ಏಕಾಂತಭಕ್ತನಾದ್ದರಿಂದ ನಿನಗೆ ದೊರಕಿತು' ಎಂದಿರುತ್ತಾನೆ. ಆದ್ದರಿಂದ ಮಹಾತಪಸ್ವಿಗಳಿಗಿಂತಲೂ ಏಕಾಂತಭಕ್ತರು ಹೆಚ್ಚಿನವರು ಎಂದಾಯಿತು.

(೫) ಇದೇ ನಾರಾಯಣೀಯದಲ್ಲಿ ಶೌನಕನು ಸೂತಪುತ್ರನನ್ನು ಕುರಿತು ಹೀಗೆಂದಿರುತ್ತಾನೆ:

**ಸರ್ವಾಶ್ರಮಾಭಿಗಮನಂ ಸರ್ವತೀರ್ಥಾವಗಾಹನಮ್।**

**ನ ತಥಾ ಫಲದಂ ಸೌತೇ ನಾರಾಯಣಕಥಾ ಯಥಾ॥** ೩೪೩–೨

"ಎಲ್ಲಾ ಆಶ್ರಮಗಳನ್ನೂ ಹೊಂದಿ ಅವುಗಳ ಧರ್ಮಗಳನ್ನು ಮಾಡುವದೂ ಸರ್ವತೀರ್ಥಗಳಲ್ಲಿಯೂ ಅವಗಾಹನಸ್ನಾನಮಾಡುವದೂ ನಾರಾಯಣಕಥಾಶ್ರವಣದಷ್ಟು ಫಲವಾಗಿರುವದಿಲ್ಲ." ಇಲ್ಲಿ ಕರ್ಮಾಚರಣೆಗಿಂತಲೂ ಭಗವತ್ಕಥಾಶ್ರವಣವೇ ಮುಂತಾದ ಭಕ್ತಿಯನ್ನೇ ಹೆಚ್ಚೆಂದಿದೆ. ಏಕಾಂತಭಕ್ತರು ಎಲ್ಲರಿಗಿಂತಲೂ ಹೆಚ್ಚಿನ ಭಾಗವತರೆಂದು ಇದರಿಂದಲೂ ಸಿದ್ಧವಾಗುತ್ತದೆ.

**ಯಾಃ ಕ್ರಿಯಾಃ ಸಂಪ್ರಯುಕ್ತಾಶ್ಚ ಏಕಾನ್ತಗತಬುದ್ಧಿಭಿಃ।**
**ತಾಃ ಸರ್ವಾಃ ಶಿರಸಾ ದೇವಃ ಪ್ರತಿಗೃಹ್ಣಾತಿ ವೈ ಸ್ವಯಮ್ ॥**
**ನ ತಸ್ಯಾನ್ಯಃ ಪ್ರಿಯತರಃ ಪ್ರತಿಬುದ್ಧೈರ್ಮಹಾತ್ಮಭಿಃ।**
**ವಿದ್ಯತೇ ತ್ರಿಷು ಲೋಕೇಷು ತತೋಽಸ್ಮ್ಯೈಕಾನ್ತಿಕಂ ಗತಃ ॥** ೩೪೩–೬೪, ೬೫

ಶ್ವೇತದ್ವೀಪಕ್ಕೆ ಹೋಗಿ ನರನಾರಾಯಣರನ್ನು ಕುರಿತು ನಾರದರು ಆಡಿದ ಮಾತಿದು. ಅವರು ಏಕಾಂತಭಕ್ತರು ಯಾವ ಕರ್ಮಗಳನ್ನು ಮಾಡಿದರೂ ಅವುಗಳನ್ನೆಲ್ಲ ಆ ದೇವನು ತಾನೇ ತಲೆಯಮೇಲೆ ಇಟ್ಟುಕೊಳ್ಳುತ್ತಾನೆ. ಜ್ಞಾನಿಗಳಾದ ಮಹಾತ್ಮರುಗಳಿಗಿಂತ ಅವನಿಗೆ ಪ್ರಿಯನಾದವನು ಇನ್ನು ಯಾವನೂ ಇರುವದಿಲ್ಲ. ಆದ್ದರಿಂದ ನಾನು ಏಕಾಂತಭಕ್ತನಾಗಿರುತ್ತೇನೆ- ಎಂದಿರುತ್ತಾರೆ. ಇದರಿಂದಲೂ ಕರ್ಮಾದಿಗಳಿಗಿಂತಲೂ ಭಕ್ತಿಯು ಹೆಚ್ಚಿನದೆಂದಾಯಿತು. ಏಕಾಂತಧರ್ಮವೇ ಹೆಚ್ಚಿನ ಭಾಗವತಧರ್ಮವೆಂದೂ ಆಯಿತು.

## ಭಾಗವತಧರ್ಮವು ವೇದವಿರುದ್ಧವೆ?

೨೦. 'ವಿಪ್ರತಿಷೇಧಾಚ್ಚ' (ವೇ.ಸೂ. ೨–೨–೪೫) ಎಂಬ ಸೂತ್ರದ ಭಾಷ್ಯದಲ್ಲಿ ಶಂಕರಾಚಾರ್ಯರು **'ವಿಪ್ರತಿಷೇಧಶ್ಚ ಅಸ್ಮಿನ್ ಶಾಸ್ತ್ರೇ ಬಹುವಿಧ ಉಪಲಭ್ಯತೇ ಗುಣಗುಣಿತ್ವಕಲ್ಪನಾದಿಲಕ್ಷಣಃ....। ವೇದವಿಪ್ರತಿಷೇಧಶ್ಚ ಭವತಿ। ಚತುರ್ಷು ವೇದೇಷು ಪರಂ ಶ್ರೇಯೋಽಲಬ್ಧ್ವಾ ಶಾಣ್ಡಿಲ್ಯ ಇದಂ ಶಾಸ್ತ್ರಮ್ ಅಧಿಗತವಾನ್- ಇತ್ಯಾದಿವೇದನಿನ್ದಾದರ್ಶನಾತ್॥'** ಎಂಬ ವಾಕ್ಯದ ವಿಚಾರವನ್ನುಹಿಂದೆ (೩೪) ಮಾಡಿದ್ದಾಗಿದೆ. ಗುಣಗುಣಿತ್ವಕಲ್ಪನೆಯು ನಿಜವಾಗಿ ಮೂಲಗ್ರಂಥಗಳಲ್ಲಿಲ್ಲದೆ ಇದ್ದು ಆಚಾರ್ಯರ ಕಾಲಕ್ಕೆ ಯಾರೋ ಕೆಲವರು ಪಾಂಚರಾತ್ರವಾದಿಗಳು ಮಾತ್ರ ಇಟ್ಟುಕೊಂಡಿದ್ದ ವಾದವಾಗಿರಬೇಕೆಂದೂ ಭಗಶಬ್ದವಾಚ್ಯವಾದ ಗುಣಗಳಿಗೂ ಭಗವಂತನಿಗೂ ಯಾವ ತಾರತಮ್ಯವನ್ನೂ ಈ ದರ್ಶನದಲ್ಲಿ ಒಪ್ಪಿಲ್ಲವೆಂದೂ ಇದು ಆಚಾರ್ಯರಿಗೂ ಸಮ್ಮತವೆಂದೂ ಅಲ್ಲಿ ತೋರಿಸಿಕೊಟ್ಟದ್ದಾಗಿದೆ. ಹೀಗೆಯೇ ವೇದನಿಂದೆಯ ತಪ್ಪನ್ನು ಭಾಗವತದಮೇಲೆ ಹೊರಿಸುವದಕ್ಕೂ ಯಾವ ಆಧಾರವಿಲ್ಲವೆಂದೂ ಅದೂ ಏಕದೇಶಿಗಳ ಅಭಿಪ್ರಾಯವಾಗಿರಬೇಕೆಂದೂ ತಿಳಿಸಿಕೊಟ್ಟಿದ್ದೇವೆ. ಸರಿಯಾಗಿ ನೋಡಿದರೆ ಶಂಕರಾಚಾರ್ಯರು ಒಪ್ಪಿರುವ ತತ್ತ್ವಗಳನ್ನೇ ಭಾಗವತಮತದಲ್ಲಿಯೂ ಒಪ್ಪಿರುತ್ತದೆ- ಎಂದೂ ನಾರಾಯಣೀಯದ ಆಧಾರದಿಂದ ಪ್ರತಿಪಾದಿಸುತ್ತಾಬಂದಿರುತ್ತೇವೆ. ಆದ್ದರಿಂದ ಪ್ರಕೃತವಾದ ವೇದವಿಸಂವಾದವಿಷಯದಲ್ಲಿಯೂ ಮೊದಲು ನಾರಾಯಣೀಯದ ಪ್ರಾಮಾಣ್ಯವನ್ನನುಸರಿಸಿಯೇ ನಿರ್ಣಯಿಸುವದು ಯುಕ್ತವಾಗಿರುತ್ತದೆ.

(೧) ಸುಸೂಕ್ಷ್ಮಂ ತತ್ತ್ವ[1]ಸಂಯುಕ್ತಂ ಸಂಯುಕ್ತಂ ತ್ರಿಭಿರಕ್ಷರೈಃ ।
ಪುರುಷಃ ಪುರುಷಂ ಗಚ್ಛೇನ್ನಿಷ್ಕ್ರಿಯಃ ಪಞ್ಚವಿಂಶಕಃ ॥
ಏವಮೇಕಂ ಸಾಙ್ಖ್ಯಯೋಗಂ ವೇದಾರಣ್ಯಕಮೇವ ಚ ।
ಪರಸ್ಪರಾಙ್ಗಾನ್ಯೇತಾನಿ ಪಾಞ್ಚರಾತ್ರಂ ಚ ಕಥ್ಯತೇ ।
ಏಷ ಏಕಾನ್ತಿನಾಂ ಧರ್ಮೋ ನಾರಾಯಣಪರಾತ್ಮಕಃ ॥
ಯಥಾ ಸಮುದ್ರಾತ್ ಪ್ರಸೃತಾ ಜಲೌಘಾ-
ಸ್ತಮೇವ ರಾಜನ್ ಪುನರಾವಿಶನ್ತಿ ।
ಇಮೇ ತಥಾ ಜ್ಞಾನಮಹಾಜಲೌಘಾ-
ನಾರಾಯಣಂ ವೈ ಪುನರಾವಿಶನ್ತಿ ॥ ೩೪೮–೮೦ ರಿಂದ ೮೩

ವೈಕಾರಿಕ(ಅಹಂಕಾರರೂಪನಾದ) ಪುರುಷನು ಪುರುಷೋತ್ತಮನಾದ ನಾರಾಯಣನನ್ನು ಹೇಗೆ ಸೇರುತ್ತಾನೆ?-ಎಂಬ ಪ್ರಶ್ನೆಗೆ ವೈಶಂಪಾಯನನು ಹೇಳಿದ ಉತ್ತರವಿದು.

"ಎಲ್ಲಕ್ಕಿಂತಲೂ ಸೂಕ್ಷ್ಮನಾಗಿ; ಎಲ್ಲಕ್ಕೂ ಪರಮಾರ್ಥತತ್ತ್ವವಾದ ಸ್ವರೂಪವುಳ್ಳ, (ಅಕಾರ, ಉಕಾರ, ಮಕಾರಗಳೆಂಬ) ಮೂರಕ್ಷರಗಳ ಸಂಯೋಗದಿಂದ ನಿರ್ಧರಿಸಬೇಕಾಗಿರುವ ಪುರುಷನನ್ನು (ಜೀವರೂಪನಾದ) ನಿಷ್ಕ್ರಿಯನಾದ ಇಪ್ಪತ್ತೈದನೆಯವನಾದ ಪುರುಷನು ಸೇರುವನು. ಹೀಗೆ ಸಾಂಖ್ಯಯೋಗವೂ ವೇದಾರಣ್ಯಕವೂ ಒಂದಕ್ಕೊಂದು ಅಂಗವಾಗಿ ಪಾಂಚರಾತ್ರವೆನಿಸುವದು. ನಾರಾಯಣಪರರೂಪವುಳ್ಳ ಇದೇ ಏಕಾಂತಿಗಳ ಧರ್ಮವು. ಕಡಲಿನಿಂದ ಹುಟ್ಟಿದ ಜಲರಾಶಿಗಳು ಹೇಗೆ ಮತ್ತೆ ಅದನ್ನೇ ಸೇರಿಕೊಳ್ಳುವವೋ, ಇದರಂತೆಯೇ, ಎಲೈ ರಾಜನೆ, ಈ ಜ್ಞಾನಗಳೆಂಬ ಮಹಾಜಲರಾಶಿಗಳು ನಾರಾಯಣನನ್ನೇ ಮತ್ತೇ ಸೇರಿಕೊಳ್ಳುವವು".

ಈ ವಾಕ್ಯದಲ್ಲಿ 'ಜೀವನು ನಿಜವಾಗಿ ಪರಮಾತ್ಮಸ್ವರೂಪನೇ ಆಗಿರುತ್ತಾನೆ. ಆದ್ದರಿಂದ ಅವನು ಜ್ಞಾನಯೋಗಗಳ ಅಭ್ಯಾಸದಿಂದ ಮತ್ತೆ ಆ ಪರಮಪುರುಷನನ್ನೇ ಸೇರಿಕೊಳ್ಳುತ್ತಾನೆ' ಎಂದು ಹೇಳಿ, ಈ ವಿಷಯಕ್ಕೆ ಸಾಂಖ್ಯ, ಯೋಗ, ವೇದಾರಣ್ಯಕ - ಇವು ಒಂದಕ್ಕೊಂದು ಸೇರಿ ಪಾಂಚರಾತ್ರವೆನಿಸುತ್ತದೆ -ಎಂದಿದೆ.

(೨) ಜನಮೇಜಯನು "ಸಾಂಖ್ಯ, ಯೋಗ, ಪಾಂಚರಾತ್ರ, ವೇದಾರಣ್ಯಕ-ಈ ಜ್ಞಾನಗಳು ಲೋಕದಲ್ಲಿ ಪ್ರಚುರವಾಗಿರುವವಷ್ಟೆ? ಇವೆಲ್ಲಕ್ಕೂ ಒಂದರಲ್ಲಿಯೇ ತಾತ್ಪರ್ಯವೊ, ಅಥವಾ ಬೇರೆಬೇರೆಯ ತತ್ತ್ವದಲ್ಲಿ ತಾತ್ಪರ್ಯವೊ? ಎಂದು (ಮೋ. ಧ. ೩೪೯- ೧,೨) ಕೇಳಿದ್ದಕ್ಕೆ-

1. ಬೊಂಬಾಯಿ, ಕುಂಭಕೋಣ- ಈ ಪಾಠಗಳನ್ನನುಸರಿಸಿ 'ತತ್ತ್ವ' ಎಂಬ ಪಾಠವನ್ನೇ ಇಲ್ಲಿ ಒಪ್ಪಿರುತ್ತದೆ.)

ಸಾಂಖ್ಯಂ ಯೋಗಃ ಪಾಞ್ಚರಾತ್ರಂ ವೇದಾಃ ಪಾಶುಪತಂ ತಥಾ ।
ಜ್ಞಾನಾನ್ಯೇತಾನಿ ರಾಜರ್ಷೇ ವಿದ್ಧಿ ನಾನಾಮತಾನಿ ವೈ ॥
ಸಾಂಖ್ಯಸ್ಯ ವಕ್ತಾ ಕಪಿಲಃ ಪರಮರ್ಷಿಃ ಸ ಉಚ್ಯತೇ ।
ಹಿರಣ್ಯಗರ್ಭೋ ಯೋಗಸ್ಯ ವೇತ್ತಾ ನಾನ್ಯಃ ಪುರಾತನಃ ॥
ಅಪಾನ್ತರತಮಾಶ್ಚೈವ ವೇದಾಚಾರ್ಯಃ ಸ ಉಚ್ಯತೇ ।
ಪ್ರಾಚೀನಗರ್ಭಂ ತಮೃಷಿಂ ಪ್ರವದನ್ತೀಹ ಕೇಚನ ॥
ಉಮಾಪತಿರ್ಭೂತಪತಿಃ ಶ್ರೀಕಣ್ಠೋ ಬ್ರಹ್ಮಣಃ ಸುತಃ ।
ಉಕ್ತವಾನಿದಮವ್ಯಗ್ರೋ ಜ್ಞಾನಂ ಪಾಶುಪತಂ ಶಿವಃ ॥
ಪಾಞ್ಚರಾತ್ರಸ್ಯ ಕೃತ್ಸ್ನಸ್ಯ ವೇತ್ತಾ ತು ಭಗವಾನ್ ಸ್ವಯಮ್ ।
ಸರ್ವೇಷು ಚ ನೃಪಶ್ರೇಷ್ಠ ಜ್ಞಾನೇಷ್ವೇತೇಷು ದೃಶ್ಯತೇ ॥
ಯಥಾಗಮಂ ಯಥಾಜ್ಞಾನಂ ನಿಷ್ಠಾ ನಾರಾಯಣಃ ಪ್ರಭುಃ ।
ನ ಚೈನಮೇವಂ ಜಾನನ್ತಿ ತಮೋಭೂತಾ ವಿಶಾಂ ಪತೇ ॥

ಮೋ.ಧ. ೩೪೯–೬೪ ರಿಂದ ೬೯

ಇಲ್ಲಿ ಕಪಿಲರ ಸಾಂಖ್ಯ, ಹಿರಣ್ಯಗರ್ಭನ ಯೋಗ, ವ್ಯಾಸರು ವಿಂಗಡಿಸಿದ ವೇದ, ಶಿವನ ಪಾಶುಪತ, ಸ್ವಯಂಭಗವಂತನೇ ಹೇಳಿರುವ ಪಾಂಚರಾತ್ರ–ಇವೆಲ್ಲಕ್ಕೂ ಕೊನೆಯಲ್ಲಿ ಪ್ರಭುವಾದ ನಾರಾಯಣನಲ್ಲಿಯೇ ತಾತ್ಪರ್ಯ- ಎಂದಿರುತ್ತದೆ. ವೇದವನ್ನೂ ಪಾಂಚರಾತ್ರವನ್ನೂ ಕೂಡಿಸಿ ಇಲ್ಲಿ ಹೇಳಿದೆ ಎಂಬುದನ್ನು ಲಕ್ಷಿಸಬೇಕು.

(೩) ಜನಮೇಜಯನು "ಪುರುಷರು ಅನೇಕರೊ, ಅಥವಾ ಒಬ್ಬನೇಯೊ? ಪುರುಷಶ್ರೇಷ್ಠನು ಯಾರು? ಅಥವಾ ಇಲ್ಲಿ ಎಲ್ಲರಿಗೂ ಕಾರಣನು ಯಾರು?"ಎಂದು ಮಾಡಿದ ಪ್ರಶ್ನೆಗೆ ವೈಶಂಪಾಯನರು ಉತ್ತರವಾಗಿ ಹೇಳಿರುವ ಬ್ರಹ್ಮರುದ್ರರ ಸಂವಾದದಲ್ಲಿ ಈ ಶ್ಲೋಕಗಳಿವೆ:

(ಅ) ಬಹವಃ ಪುರುಷಾಃ ಪುತ್ರ ತ್ವಯಾ ಯೇ ಸಮುದಾಹೃತಾಃ ॥
ಏವಮೇತದತಿಕ್ರಾನ್ತಂ ದ್ರಷ್ಟವ್ಯಂ ನೈವಮಿತ್ಯಪಿ ॥
ಆಧಾರಂ ತು ಪ್ರವಕ್ಷ್ಯಾಮಿ ಏಕಸ್ಯ ಪುರುಷಸ್ಯ ತೇ ।
ಬಹೂನಾಂ ಪುರುಷಾಣಾಂ ಸ ಯಥೈಕಾ ಯೋನಿರುಚ್ಯತೇ ॥
ತಥಾ ತಂ ಪುರುಷಂ ವಿಶ್ವಂ ಪರಮಂ ಸುಮಹತ್ತಮಮ್ ।
ನಿರ್ಗುಣಂ ನಿರ್ಗುಣಾ ಭೂತ್ವಾ ಪ್ರವಿಶನ್ತಿ ಸನಾತನಮ್ ॥

ಮೋ.ಧ. ೩೫೦ - ೨೫ ರಿಂದ ೨೭

ಈ ಗ್ರಂಥಭಾಗದಲ್ಲಿ 'ಒಂದು ದೃಷ್ಟಿಯಿಂದ ಪುರುಷರು ಅನೇಕರಾದರೂ ಎಲ್ಲರಿಗೂ ಯೋನಿಯಾಗಿರುವ ಮಹಾಪುರುಷನೊಬ್ಬನುಂಟು. ಅವನು ನಿರ್ಗುಣನು; ಸನಾತನನಾಗಿರುವ ಅವನನ್ನು ನಿರ್ಗುಣರಾಗಿಯೇ ಸೇರಿಕೊಳ್ಳುತ್ತಾರೆ' ಎಂದಿದೆ. ಇದು ಉಪನಿಷತ್ತುಗಳಲ್ಲಿ ಪ್ರತಿಪಾದ್ಯವಾಗಿರುವ ಪುರುಷಸಂಜ್ಞಕನಾದ ಪರಮಾತ್ಮನ ವರ್ಣನೆಯೇ ಆಗಿದೆ ಎಂಬುದನ್ನು ಬೇರೆಯಾಗಿ ಹೇಳಬೇಕಾಗಿಲ್ಲವಷ್ಟೆ? ಈ ಶ್ಲೋಕಗಳನ್ನು ಶಂಕರಾಚಾರ್ಯರೂ (ಸೂ.ಭಾ. ೨-೧-೧) ಉದಾಹರಿಸಿಕೊಂಡಿರುತ್ತಾರೆ. ಮುಂದಿನ ಅಧ್ಯಾಯದಲ್ಲಿಯೇ ನಾರಾಯಣೀಯಸಮಾಪ್ತಿಯಾಗಿದೆ. ಅಲ್ಲಿ ಹೇಳಿರುವದನ್ನು ನೋಡಿದರೆ ಶಂಕರಾಚಾರ್ಯರ ವೇದಾಂತಸಿದ್ಧಾಂತಕ್ಕೂ ಪಾಂಚರಾತ್ರಸಿದ್ಧಾಂತಕ್ಕೂ ಸ್ವಲ್ಪವೂ ಭೇದವಿಲ್ಲವೆಂಬುದು ಸ್ಪಷ್ಟವಾಗುತ್ತದೆ.

(ಆ) ಮಮಾನ್ತರಾತ್ಮಾ ತವ ಚ ಯೇ ಚಾನ್ಯೇ ದೇಹಿಸಂಜ್ಞಿತಾಃ[1] ।
ಸರ್ವೇಷಾಂ ಸಾಕ್ಷಿಭೂತೋಽಸೌ ನ ಗ್ರಾಹ್ಯಃ ಕೇನಚಿತ್ ಕ್ವಚಿತ್ ೩೫೧-೪
ವಿಶ್ವಮೂರ್ಧಾ ವಿಶ್ವಭುಜೋ ವಿಶ್ವಪಾದಾಕ್ಷಿನಾಸಿಕಃ।
ಏಕಶ್ಚರತಿ ಕ್ಷೇತ್ರೇಷು ಸ್ವೈರಚಾರೀ ಯಥಾಸುಖಮ್ ॥೫॥
ಕ್ಷೇತ್ರಾಣಿ ಹಿ ಶರೀರಾಣಿ ಬೀಜಂ ಚಾಪಿ ಶುಭಾಶುಭಮ್।
ತಾನಿ ವೇತ್ತಿ ಸ ಯೋಗಾತ್ಮಾ ತತಃ ಕ್ಷೇತ್ರಜ್ಞ ಉಚ್ಯತೇ ॥೬॥
ನಾಗತಿರ್ನ ಗತಿಸ್ತಸ್ಯ ಜ್ಞೇಯಾ ಭೂತೇಷು ಕೇನಚಿತ್ ।
ಸಾಂಖ್ಯೇನ ವಿಧಿನಾ ಚೈವ ಯೋಗೇನ ಚ ಯಥಾಕ್ರಮಮ್ ॥೭॥
ಚಿನ್ತಯಾಮಿ ಗತಿಂ ಚಾಸ್ಯ ನ ಗತಿಂ ವೇದ್ಮಿ ಚೋತ್ತರಾಮ್।
ಯಥಾಜ್ಞಾನಂ ತು ವಕ್ಷ್ಯಾಮಿ ಪುರುಷಂ ತು ಸನಾತನಮ್ ॥೮॥
ತಸ್ಯೈಕತ್ವಂ ಮಹತ್ತ್ವಂ ಚ ಸ ಚೈಕಃ ಪುರುಷಃ ಸ್ಮೃತಃ।
ಮಹಾಪುರುಷಶಬ್ದಂ ಸ ಬಿಭರ್ತ್ಯೇಕಃ ಸನಾತನಃ ॥೯॥
ಏಕೋ ಹುತಾಶೋ ಬಹುಧಾ ಸಮಿಧ್ಯತೇ-
ಏಕಃ ಸೂರ್ಯಸ್ತಪಸೋ ಯೋನಿರೇಕಾ।
ಏಕೋ ವಾಯುರ್ಬಹುಧಾ ವಾತಿ ಲೋಕೇ
ಮಹೋದಧಿಶ್ಚಾಮ್ಭಸಾಂ ಯೋನಿರೇಕಃ।
ಪುರುಷಶ್ಚೈಕೋ ನಿರ್ಗುಣೋ ವಿಶ್ವರೂಪಂ
ತಂ ನಿರ್ಗುಣಂ ಪುರುಷಂ ಚಾವಿಶನ್ತಿ ॥೧೦॥

1. ಶಂಕರಾಚಾರ್ಯರು ಮೊದಲನೆಯ ಮೂರು ಶ್ಲೋಕಗಳನ್ನು (ಸೂ.ಭಾ. ೨-೧-೧ ರಲ್ಲಿ) ಉದಾಹರಿಸಿರುತ್ತಾರೆ. 'ದೇಹಸಂಸ್ಥಿತಾಃ' ಎಂದು ಅವರ ಪಾಠ.

ಹಿತ್ವಾ ಗುಣಮಯಂ ಸರ್ವಂ ಕರ್ಮ ಹಿತ್ವಾ ಶುಭಾಶುಭಮ್।
ಉಭೇ ಸತ್ಯಾನೃತೇ ತ್ಯಕ್ತ್ವಾ ಏವಂ ಭವತಿ ನಿರ್ಗುಣಃ ॥೧೧॥

ಈ ಅಧ್ಯಾಯವೆಲ್ಲವೂ ಪೂರ್ಣವಾಗಿ ಮನನೀಯವಾಗಿರುತ್ತದೆ. ಏಕೆಂದರೆ ಇಲ್ಲಿ ಪುರುಷನು ಒಬ್ಬನೇ; ಅವನು ನಿರ್ಗುಣ, ಸರ್ವರಿಗೂ ಅಂತರಾತ್ಮನು; ಅವನನ್ನು ನಿರ್ಗುಣರಾದವರೇ ಸೇರಿ ಮುಕ್ತರಾಗುತ್ತಾರೆ - ಎಂದಿದೆ.

(೯) ಈ ಕೆಳಗಿನ ಶ್ಲೋಕಗಳಲ್ಲಿ ನಾಲ್ಕು ವ್ಯೂಹಗಳಿಂದ ವಿಭಕ್ತನಾಗಿರುವ ಭಗವಂತನೇ ಗ್ರಾಹ್ಯಗ್ರಾಹಕರೂಪದಿಂದ ತೋರಿಕೊಳ್ಳುತ್ತಿರುವನೆಂದು ಹೇಳಿರುತ್ತದೆ:

ತತ್ರ ಯಃ ಪರಮಾತ್ಮಾ ಹಿ ಸ ನಿತ್ಯೋ ನಿರ್ಗುಣಃ ಸ್ಮೃತಃ ।
ಸ ಹಿ ನಾರಾಯಣೋ ಜ್ಞೇಯಃ ಸರ್ವಾತ್ಮಾ ಪುರುಷೋ ಹಿ ಸಃ ॥ ೩೫೧–೧೪
ಯತ್ ತತ್ ಕೃತ್ಸ್ನಂ ಲೋಕತನ್ತ್ರಸ್ಯ ಧಾಮ
ವೇದ್ಯಂ ಪರಂ ಬೋಧನೀಯಂ ಸ ಬೋದ್ಧಾ ।
ಮನ್ತಾ ಮನ್ತವ್ಯಂ ಪ್ರಾಶಿತಾ ಪ್ರಾಶನೀಯಂ
ಘ್ರಾತಾ ಘ್ರೇಯಂ ಸ್ಪರ್ಶಿತಾ ಸ್ಪರ್ಶನೀಯಮ್ ॥೧೭॥
ದ್ರಷ್ಟಾ ದ್ರಷ್ಟವ್ಯಂ ಶ್ರಾವಿತಾ ಶ್ರಾವಣೀಯಂ
ಜ್ಞಾತಾ ಜ್ಞೇಯಂ ಸಗುಣಂ ನಿರ್ಗುಣಂ ಚ।
ಯದ್ವೈ ಪ್ರೋಕ್ತಂ ತಾತ ಸಮ್ಯಕ್ ಪ್ರಧಾನಂ
ನಿತ್ಯಂ ಚೈತಚ್ಛಾಶ್ವತಂ ಚಾವ್ಯಯಂ ಚ ॥೧೮॥
ಚತುರ್ವಿಭಕ್ತಃ ಪುರುಷಃ ಸ ಕ್ರೀಡತಿ ಯಥೇಚ್ಛತಿ।
ಏವಂ ಸ ಭಗವಾನ್ ಸ್ವೇನ ಜ್ಞಾನೇನ ಪ್ರತಿಬೋಧಿತಃ ॥೨೨॥

ಉಪನಿಷತ್ತುಗಳಲ್ಲಿ ಹೇಳಿರುವದೆಂದು ಶಂಕರಾಚಾರ್ಯರು ವರ್ಣಿಸಿರುವ ಪರಮಾತ್ಮಸ್ವರೂಪವೇ ಇದು.

## ಭಾಗವತಮತವೂ ಅಹಿಂಸಾಪ್ರಧಾನ

೨೧. ವೇದದಲ್ಲಿ ವಿಧಿಸಿರುವ ಪಶುಹಿಂಸೆಯನ್ನು ಪಾಂಚರಾತ್ರಪದ್ಧತಿಯವರು ಒಪ್ಪುವದಿಲ್ಲವೆಂದು ಕೆಲವರು ಹೇಳುತ್ತಾರೆ. ಈ ವಿಷಯಕ್ಕೆ ಭಾರತದಲ್ಲಿರುವ ಉಪರಿಚರವಸುವಿನ ಕಥೆಯನ್ನು ಅವರು ಉದಾಹರಿಸುತ್ತಾರೆ. ಆದರೆ ಆ ಆಖ್ಯಾನವನ್ನು ಇನ್ನೂ ಸ್ವಲ್ಪ ಒಳಹೊಕ್ಕು ವಿಚಾರಮಾಡತಕ್ಕದ್ದಿದೆ ಎಂದು ನಮಗೆ ತೋರುತ್ತದೆ.

ಹಿಂದೆಯೇ ಹೇಳಿರುವಂತೆ ಉಪರಿಚರವಸುವಿಗೆ ಶ್ರೀಮನ್ನಾರಾಯಣನ ವರದಿಂದ ಸಾಮ್ರಾಜ್ಯವೂ ದೊರೆತಿತ್ತು (ಮೋ.ಧ.೩೩೫-೧೮) ಅವನು ಸಾತ್ವತವಿಧಿಯನ್ನನುಸರಿಸಿ

ಭಗವಂತನನ್ನು ಆರಾಧಿಸುತ್ತಿದ್ದನು. ಮರೀಚಿ, ಅತ್ರಿ, ಅಂಗಿರಸ, ಪುಲಸ್ತ್ಯ, ಪುಲಹ, ಕ್ರತು, ವಸಿಷ್ಠ-ಎಂಬ **ಚಿತ್ರಶಿಖಂಡಿಗಳು**, ಸ್ವಾಯಂಭುವ-ಇವರುಎಂಟುಮಂದಿ ಈ ಪಾಂಚರಾತ್ರಶಾಸ್ತ್ರವನ್ನು ರಚಿಸಿದರು(ಮೋ.ಧ. ೩೩೫-೨೮ ರಿಂದ ೩೭). ಭಗವಂತನು "ಈ ಶಾಸ್ತ್ರವು ಶತಸಹಸ್ರ ಶ್ಲೋಕಪರಿಮಿತವಾಗಿರುತ್ತದೆ. ಪ್ರವೃತ್ತಿನಿವೃತ್ತಿಗಳೆರಡಕ್ಕೂ ಇದು ಬರುವದು. ಇದು ಚತುರ್ವೇದಗಳಿಗೆ ಅನುಗುಣವಾಗಿದೆ.(ಯಜುರ್ಋಕ್ಸಾಮಭಿರ್ಜುಷ್ಟಮಥರ್ವಾಙ್ಗಿರಸೈಸ್ತಥಾ ೩೩೫-೪೦) ಇದು ಮುಂದೆ ಪ್ರಮಾಣಗ್ರಂಥವಾಗಲೆಂಬುದು ನನ್ನ ಅನುಶಾಸನವು. (ಶ್ಲೋ. ೪೩-೪೪) ಇನ್ನು ಮುಂದೆ ಇದನ್ನು ಬೃಹಸ್ಪತಿಯು ವಸುವಿಗೆ ಹೇಳುವನು; ಅವನು ನನ್ನ ಭಕ್ತನಾಗಿ ಎಲ್ಲಾ ಕ್ರಿಯೆಗಳನ್ನೂ ಮಾಡುವನು"(ಶ್ಲೋ. ೪೭)ಎಂದು ಹರಸಿದನು.

"ಉಪರಿಚರವಸುವು ಅಶ್ವಮೇಧವನ್ನು ಆರಂಭಿಸಿದನು. ಆಗ ಬೃಹಸ್ಪತಿಯು ಹೋತೃವಾದನು. ಪ್ರಜಾಪತಿಯ ಮಕ್ಕಳು ಸದಸ್ಯರಾಗಿದ್ದರು. (ಮೋ.ಧ.೩೩೬–೯) ಆ ಯಾಗದಲ್ಲಿ ಪಶುಘಾತವಿರಲಿಲ್ಲ. ಅರಣ್ಯದಲ್ಲಿ ಬೆಳೆದ ಧಾನ್ಯಗಳನ್ನೇ ಅರ್ಪಿಸಲಾಯಿತು. ಅದರಿಂದ ಪ್ರೀತನಾದ ಭಗವಂತನು ಮತ್ತೊಬ್ಬರಿಗೆ ಕಾಣಿಸದೆ ಆ ಅಹಿಂಸ್ರನೂ ಶುಚಿಯೂ ಅಕ್ಷುದ್ರನೂ ನಿಷ್ಕಾಮ ಕರ್ಮದಕ್ಷನೂ ಆದ ಆ ರಾಜನಿಗೆ ದರ್ಶನವನ್ನು ಕೊಟ್ಟನು"(ಶ್ಲೋ. ೧೦ ರಿಂದ ೧೩) ಬೃಹಸ್ಪತಿಯು 'ನಾನು ಕೊಟ್ಟ ಭಾಗವನ್ನೇಕೆ ತೆಗೆದುಕೊಳ್ಳುವದಿಲ್ಲವೊ!' ಎಂದು ಸಿಟ್ಟಿನಿಂದ ಸ್ರುಕ್ಕುಗಳನ್ನು ಎಸೆದು ಕಣ್ಣೀರಿಟ್ಟನು (ಶ್ಲೋ. ೧೩ ರಿಂದ ೧೪). ಆಗ ವಸುವು ಅವನನ್ನು ಸಮಾಧಾನಗೊಳಿಸಿದನು; ಸದಸ್ಯರೂ 'ಇದು ಕ್ರತುಯುಗವು, ಕೋಪಮಾಡತಕ್ಕದ್ದಲ್ಲ; ಭಗವಂತನು ಯಾರಲ್ಲಿ ಪ್ರಸನ್ನನಾಗುವನೋ ಅವರಿಗೆ ಮಾತ್ರ ದರ್ಶನವನ್ನು ಕೊಡುವನು' ಎಂದು ಸಮಾಧಾನಗೊಳಿಸಿದ ಬಳಿಕ ಬೃಹಸ್ಪತಿಯು ಯಜ್ಞವನ್ನು ಪರಿಸಮಾಪ್ತಿಗೊಳಿಸಿದನು(ಶ್ಲೋ. ೧೮ ರಿಂದ ೬೧). ಇಷ್ಟು ೩೩೬ನೆಯ ಅಧ್ಯಾಯದ ಸಾರವು; ಇದರಲ್ಲಿ **ರಾಜನು ಪಶುಘಾತವಿಲ್ಲದೆ ಯಜ್ಞವನ್ನು ಮಾಡಿದ್ದರಿಂದಲೇ ಭಗವಂತನು ತೃಪ್ತನಾದನು ಎಂದಿದೆ.**

ಇನ್ನು ಮುಂದಿನ ಅಧ್ಯಾಯದಲ್ಲಿರುವದು ಇಷ್ಟು: ಹಿಂದಕ್ಕೆ ಋಷಿಗಳಿಗೂ ದೇವತೆಗಳಿಗೂ ಯಾಗದ ವಿಷಯಕ್ಕೆ ಸಂವಾದವಾಯಿತು. 'ಅಜವನ್ನು (ಮೇಕೆಯನ್ನು) ಯಾಗಕ್ಕೆ ಉಪಯೋಗಿಸಬೇಕು' ಎಂದು ದೇವತೆಗಳು, 'ಅಜವೆಂದರೆ ಬೀಜಗಳು, ಪಶುಗಳಲ್ಲ; ಇದು ಕ್ರತುಯುಗವಾಗಿರುವಲ್ಲಿ ಪಶುಬಂಧವನ್ನು ಮಾಡುವದು ಹೇಗೆ?' ಎಂದು ಋಷಿಗಳು ವಾದಿಸಿದರು.(ಶ್ಲೋ. ೨–೫) ಉಪರಿಚರವಸುವು ಬಂದದ್ದರಿಂದ "ಈತನು ಯಜ್ಞವನ್ನು ಮಾಡಿದನು, ದಾನವನ್ನು ಮಾಡಿದನು, ಸರ್ವಭೂತಗಳ ಹಿತದಲ್ಲಿಯೂ ರತನಾದವನು; ಇವನು ನಮ್ಮಿಬ್ಬರ ವಿವಾದವನ್ನು ತೀರ್ಮಾನಮಾಡಲಿ!'

ಎಂದು ದೇವತೆಗಳೂ ಋಷಿಗಳೂ ಒಪ್ಪಿದರು (ಶ್ಲೋ. ೬–೯). ವಸುವು ನಿಜವನ್ನು ತಿಳಿದವನಾದರೂ ದೇವತೆಗಳ ಪಕ್ಷವನ್ನು ವಹಿಸಿ 'ಇಲ್ಲಿ ಮೇಕೆಯನ್ನೇ ಯಾಗಕ್ಕೆ ಉಪಯೋಗಿಸಬೇಕು'-ಎಂದನು. ಆಗ ಋಷಿಗಳು ಕೋಪದಿಂದ 'ಪಕ್ಷಪಾತದಿಂದ ಹೀಗೆ ನುಡಿದಿರುವೆಯಾದ್ದರಿಂದ ಇನ್ನುಮೇಲೆ ಅಂತರಿಕ್ಷಸಂಚಾರವು ಲಭಿಸದೆ ಇರಲಿ; ಭೂಮಿಯನ್ನು ಸೀಳಿಕೊಂಡು, ನೆಲದೊಳಗೆ ಬಿಲದಲ್ಲಿ ಇರು!' ಎಂದು ಶಪಿಸಿದರು (ಶ್ಲೋ. ೧೩–೧೬). ದೇವತೆಗಳು ನಮಗಾಗಿ ರಾಜನು ಈ ದುರ್ಗತಿಯನ್ನು ಪಡೆದನಲ್ಲ!-ಎಂದು ಕನಿಕರದಿಂದ 'ನೀನು ಈಶ್ವರನ ಭಕ್ತನು, ಆ ಭಗವಂತನೇ ನಿನ್ನನ್ನು ಕಾಪಾಡುವನು. ಶಾಪವನ್ನನುಭವಿಸುತ್ತಾ ಬಿಲದಲ್ಲಿರುವವರೆಗೆ ನಿನಗೆ ಯಾವ ಗ್ಲಾನಿಯೂ ಆಗದಿರಲಿ, ಯಜ್ಞದಲ್ಲಿ ಕೊಡುವ 'ವಸೋರ್ಧಾರೆ'ಯು ನಿನಗೆ ಪ್ರಾಪ್ತವಾಗುತ್ತಿರಲಿ! ಎಂದು ವರವನ್ನು ಕೊಟ್ಟರು (ಶ್ಲೋ. ೧೯–೨೭). ಅಲ್ಲಿಂದ ಮುಂದಕ್ಕೆ ಉಪರಿಚರವಸುವು ಭಗವಂತನ ಪೂಜೆಯನ್ನು ಮಾಡುತ್ತಲೂ ನಾರಾಯಣನೇ ಹೇಳಿಕೊಟ್ಟ ಮಂತ್ರವನ್ನು ಜಪಿಸುತ್ತಲೂ ಇದ್ದನು. ಅದರಿಂದ ತುಷ್ಟನಾದ ಭಗವಂತನಾದ ನಾರಾಯಣನು ಗರುಡನಿಗೆ ಆಜ್ಞೆಯನ್ನು ಮಾಡಿ ರಾಜನನ್ನು ಮತ್ತೆ ಖೇಚರನಾಗುವಂತೆ ಮಾಡಿಸಿದನು. ಅಲ್ಲಿಂದ ರಾಜನು ಬ್ರಹ್ಮಲೋಕಕ್ಕೆ ಹೋದನು (ಶ್ಲೋ. ೨೯–೩೮).

ಮೇಲೆ ಕೊಟ್ಟಿರುವ ಉಪರಿಚರವಸುವಿನ ಕಥೆಯಿಂದ ಭಾಗವತಮತದವರು ಅಹಿಂಸಾಪ್ರಧಾನರೆಂದು ಆಗುವದೇ ಹೊರತು ಅವರು ಯಜ್ಞದಲ್ಲಿ ಪಶುಬಂಧವನ್ನು ಮಾಡಲೇಬಾರದೆಂದು ಆಗ್ರಹವನ್ನು ತಳೆದಿದ್ದಾರೆಂದು ಹೇಳಲಾಗುವದಿಲ್ಲ. 'ಕ್ರತುಯುಗದಲ್ಲಿ ಕೋಪವನ್ನು ಮಾಡಬಾರದು, ಆಗ ಯಜ್ಞಕ್ಕೆ ಪಶುಘಾತವನ್ನು ಮಾಡಕೂಡದು' ಎಂದಿಷ್ಟೇ ಈ ಕಥೆಯಲ್ಲಿ ಹೇಳಿರುತ್ತದೆ. ಭಗವಂತನು ಮರೀಚಿಯೇ ಮುಂತಾದ ಪ್ರಜಾಪತಿಗಳ ಮೂಲಕ ವೇದೋಕ್ತವಾದ ಪ್ರವೃತ್ತಿಧರ್ಮವನ್ನೂ ಸನ, ಸನತ್ಸುಜಾತ, ಸನಕ-ಮುಂತಾದ ಸಾಂಖ್ಯಜ್ಞಾನವಿಶಾರದರಾದವರ ಮೂಲಕ ನಿವೃತ್ತಿಧರ್ಮವನ್ನೂ ಬೋಧಿಸಿದನು-ಎಂದು (ಮೋ.ಧ. ೩೪೦)ಇದೇ ನಾರಾಯಣೀಯದಲ್ಲಿ (ಶ್ಲೋ. ೬೯–೭೪)[1] ಹೇಳಿರುತ್ತದೆ. ಆದ್ದರಿಂದ ಪಾಂಚರಾತ್ರವು ವೇದಧರ್ಮಕ್ಕೆ ವಿರುದ್ಧವೆನ್ನುವದಕ್ಕೆ ಬರುವಂತಿಲ್ಲ.

ಇನ್ನೊಂದು ವಿಷಯವೇನೆಂದರೆ: ಭಗವಾನ್ನಾರಾಯಣನು ನಾರದನಿಗೆ ದರ್ಶನವನ್ನು ಕೊಟ್ಟಾಗ– ಇದ್ದ ರೂಪದಲ್ಲಿ-

---

1. ಈ ಶ್ಲೋಕಗಳ ಅಭಿಪ್ರಾಯವನ್ನೇ ಶಂಕರಾಚಾರ್ಯರು ತಮ್ಮ ಗೀತಾಭಾಷ್ಯದ ಅವತರಣಿಕೆಯಲ್ಲಿ ಬರೆದುಕೊಂಡಿರುತ್ತಾರೆ. ವೇದೋಕ್ತಧರ್ಮವು ಪ್ರವೃತ್ತಿ ನಿವೃತ್ತಿಗಳೆರಡನ್ನೂ ತಿಳಿಸುತ್ತದೆಯೆಂಬುದು ಅವರ ಮತ.

**ಓಙ್ಕಾರಮುದ್ಗಿರನ್ ವಕ್ತ್ರಾತ್ ಸಾವಿತ್ರೀಂ ಚ ತದನ್ವಯಾಮ್।**
**ಶೇಷೇಭ್ಯಶ್ಚೈವ ವಕ್ತ್ರೇಭ್ಯಶ್ಚತುರ್ವೇದಾನ್ ಗಿರನ್ ಬಹೂನ್॥**
**ಆರಣ್ಯಕಂ ಜಗೌ ದೇವೋ ಹರಿರ್ನಾರಾಯಣೋ ವಶೀ।**
**ವೇದಿಂ ಕಮಣ್ಡಲುಂ ಶುಭ್ರಾನ್ ಮಣೀನುಪಾನಹೌ ಕುಶಾನ್॥**
**ಅಜಿನಂ ದಣ್ಡಕಾಷ್ಠಂ ಚ ಜ್ವಲಿತಂ ಚ ಹುತಾಶನಮ್।**
**ಧಾರಯಾಮಾಸ ದೇವೇಶೋ ಹಸ್ತೈರ್ಯಜ್ಞಪತಿಸ್ತದಾ॥** ೩೩೯-೭ ರಿಂದ ೧೦

"ಓಂಕಾರವನ್ನು ಬಾಯಿಂದ ಉಚ್ಚರಿಸುತ್ತಿದ್ದನು, ಓಂಕಾರಪೂರ್ವಕವಾದ ಸಾವಿತ್ರೀಮಂತ್ರವನ್ನು ಜಪಿಸುತ್ತಿದ್ದನು. ಉಳಿದ ಬಾಯಿಗಳಿಂದ ಅನೇಕ ವೇದಗಳನ್ನು ಪಠಿಸುತ್ತಿದ್ದನು, ಆರಣ್ಯಕವನ್ನು ಹೇಳುತ್ತಿದ್ದನು. ವೇದಿ, ಕಮಂಡಲು, ಶುಭ್ರಮಣಿಗಳು, ಪಾದುಕೆಗಳು, ಕುಶಗಳು, ಅಜಿನ, ದಂಡಕಾಷ್ಠ, ಉರಿಯುತ್ತಿರುವ ಅಗ್ನಿ - ಇವನ್ನು ಆ ಯಜ್ಞಪತಿಯು ಧರಿಸಿದ್ದನು" ಎಂದು ಹೇಳಿದೆ. ಉಪರಿಚರವಸುವು ಮಾಡುತ್ತಿದ್ದದ್ದು ವೇದವಿಹಿತವಾದ ಯಜ್ಞವೇ-ಎಂದೂ ಹಿಂದೆ ಹೇಳಿದೆ. ಹೀಗಿರುವದರಿಂದ ಪಾಂಚರಾತ್ರರಿಗೆ ವೇದದಲ್ಲಿ ಸಂಪೂರ್ಣಶ್ರದ್ಧೆಯಿದೆ ಎಂದಾಯಿತು. ಅದನ್ನು ವೇದವಿರುದ್ಧವೆಂದು ಶಂಕರಾಚಾರ್ಯರು ಹೇಳಿರುವದಿಲ್ಲ; ಅವರು ಖಂಡಿಸಿರುವದು ಏಕದೇಶಿಗಳ ಮತವೆಂದು ಆಗಲೆ ಗೊತ್ತುಪಡಿಸಿಕೊಂಡದ್ದಾಗಿದೆ. ಪಾಂಚರಾತ್ರಾನುಯಾಯಿಗಳು ಬೇರೆಬೇರೆಯ ಸಿದ್ಧಾಂತವನ್ನು ಅನುಸರಿಸುತ್ತಾಬಂದಿರುತ್ತಾರೆ. ಅವರೆಲ್ಲ ಅದ್ವೈತಿಗಳಾಗಿರುವದಿಲ್ಲ; ಆದರೂ ಅವರು ವಿಷ್ಣುದೇವತೆಯ ಭಕ್ತರೇ. ಯಜ್ಞಕರ್ಮವು ಅಶುದ್ಧವೇ; ಪಶುಹಿಂಸಾದಿಕರ್ಮಗಳು ಅದರಲ್ಲಿವೆಯಲ್ಲ!- ಎಂಬ ಆಕ್ಷೇಪಕ್ಕೆ **'ಅಶುದ್ಧಮಿತಿ ಚೇನ್ನ ಶಬ್ದಾತ್'** (ವೇ.ಸೂ.೩-೧-೧೫) ಎಂಬ ಬಾದರಾಯಣರಸೂತ್ರಕ್ಕೆ ಶಂಕರಾಚಾರ್ಯರು **'ಶಾಸ್ತ್ರಾಚ್ಚ ಹಿಂಸಾನುಗ್ರಹಾದ್ಯಾತ್ಮಕೋ ಜ್ಯೋತಿಷ್ಟೋಮೋ ಧರ್ಮ ಇತ್ಯವಧಾರಿತಃ ಸ ಕಥಮಶುದ್ಧ ಇತಿ ಶಕ್ಯತೇ ವಕ್ತುಮ್?** (ಶಾಸ್ತ್ರದಲ್ಲಿ ಹಿಂಸಾನುಗ್ರಹಾದಿರೂಪವಾದ ಜ್ಯೋತಿಷ್ಟೋಮವು ಧರ್ಮವೆಂದು ಅವಧಾರಣೆಮಾಡಿರುತ್ತದೆ; ಅದನ್ನು ಅಶುದ್ಧವೆಂದು ಹೇಳುವದು ಹೇಗಾದೀತು?) ಎಂದಿರುತ್ತಾರೆ.

ಅವರೇನೊ, ಪಾಂಚರಾತ್ರರನ್ನು ಖಂಡನೆಮಾಡಿರುವವರಾದ್ದರಿಂದ ಹಾಗೆ ಹೇಳಿರಬಹುದು ಎನ್ನೋಣವೆಂದರೆ, ಪಾಂಚರಾತ್ರಸಂಹಿತೆಗಳನ್ನು ಅನೇಕವಾಗಿ ಉದಾಹರಿಸಿ ಆ ಆಗಮವನ್ನು ಸರಿಯೆಂದು ಬಲವಾಗಿ ವಾದಿಸಿರುವ ಶ್ರೀರಾಮಾನುಜಾಚಾರ್ಯರು ತಮ್ಮ ಶ್ರೀಭಾಷ್ಯದಲ್ಲಿ **'ಅಗ್ನಿಷೋಮೀಯಾದೇಃ ಸಂಜ್ಞಪನಸ್ಯ ಸ್ವರ್ಗಲೋಕಪ್ರಾಪ್ತಿ ಹೇತುತಯಾ ಹಿಂಸಾತ್ವಾಭಾವಶಬ್ದಾತ್'** (ಅಗ್ನಿಷೋಮೀಯವೇ ಮುಂತಾದ ಕೊಲ್ಲುವದು ಸ್ವರ್ಗಲೋಕವನ್ನು ಪಡೆಯುವದಕ್ಕೆ ಕಾರಣವಾಗಿರುವದರಿಂದ ಹಿಂಸೆಯಲ್ಲ ಎಂದು

ಶಬ್ದಪ್ರಮಾಣವಿರುವದರಿಂದ ಈ ಕರ್ಮವು ಅಶುದ್ಧವಲ್ಲ; **'ಅತಿಶಯಿತಾಭ್ಯುದಯ ಸಾಧನಭೂತೋ ವ್ಯಾಪಾರೋಽಲ್ಪದುಃಖದೋಽಪಿ ನ ಹಿಂಸಾ, ಪ್ರತ್ಯುತ ರಕ್ಷಣಮೇವ (ಹೆಚ್ಚಿನ ಅಭ್ಯುದಯಕ್ಕೆ ಸಾಧನವಾಗಿರುವ ಕೆಲಸವು ಸ್ವಲ್ಪ ದುಃಖವನ್ನು ಕೊಟ್ಟರೂ** ಹಿಂಸೆಯಲ್ಲ, ಅದರ ಬದಲು ರಕ್ಷಣೆಯೇ); **ಚಿಕಿತ್ಸಕಂ ಚ ತಾತ್ಕಾಲಿಕಾಲ್ಪದುಃಖ ಕಾರಿಣಮಪಿ ರಕ್ಷಕಮೇವ ವದನ್ತಿ, ಪೂಜಯನ್ತಿ ಚ ತಜ್ಞಾಃ** (ತತ್ಕಾಲಕ್ಕೆ ಸ್ವಲ್ಪ ದುಃಖ ವನ್ನುಂಟುಮಾಡುವ ಚಿಕಿತ್ಸಕನನ್ನು ರಕ್ಷಕನೆಂದೇ ಬಲ್ಲವರು ಹೇಳುತ್ತಾರೆ, ಮತ್ತು ಗೌರವಿಸುತ್ತಾರೆ)- ಎಂದು ಪಶುಘಾತವು 'ಹಿಂಸೆಯೇ ಅಲ್ಲ'ವೆಂದು ವಾದಿಸುತ್ತಾರೆ.

ಇನ್ನು ಮಧ್ವಾಚಾರ್ಯರು ತಮ್ಮ ಸೂತ್ರಭಾಷ್ಯದಲ್ಲಿ ಬರೆದಿರುವದು ಹೀಗೆ: **"ಹಿಂಸಾರೂಪತ್ವಾತ್ ಪಾಪಸ್ಯಾಪಿ ಸಂಭವಾತ್ ದುಃಖಂ ಚ ಭವತು ಇತಿ ಚೇತ್ । ನ। ಶಬ್ದವಿಹಿತತ್ವಾತ್। 'ಹಿಂಸಾತ್ವವೈದಿಕೀ ಯಾ ತು ತಯಾನರ್ಥೋ ಧ್ರುವಂ ಭವೇತ್। ವೇದೋಕ್ತಯಾ ಹಿಂಸಯಾ ತು ನೈವಾನರ್ಥಃ ಕಥಞ್ಚನ' ಇತಿ ವಾರಾಹೇ।।"** (ಪಶುಘಾತವು ಹಿಂಸಾರೂಪವಾಗಿರುವದರಿಂದ ಅದರಿಂದ ಪಾಪವೂ ಬರಬಹುದಾದ್ದರಿಂದ ದುಃಖವೂ ಆಗಲಿ! - ಎಂದರೆ ಹಾಗಲ್ಲ. ಏಕೆಂದರೆ ಈ ಹಿಂಸೆಯು ಶಾಸ್ತ್ರವಿಹಿತವಾಗಿರುತ್ತದೆ. 'ಯಾವ ಹಿಂಸೆಯು ವೇದೋಕ್ತವಾದದ್ದಲ್ಲವೋ ಆದರಿಂದ ಅನರ್ಥವು ಅವಶ್ಯವಾಗಿ ಆಗಿಯೇತೀರುತ್ತದೆ. ಆದರೆ ವೇದೋಕ್ತವಾದ ಹಿಂಸೆಯಿಂದ ಅನರ್ಥವು ಹೇಗೂ ಆಗಲಾರದು-ಎಂದು ವರಾಹಪುರಾಣದಲ್ಲಿರುತ್ತದೆ" ಎಂಬುದು ಅವರ ಮತ.[1] ಅವರೂ ಪಾಂಚರಾತ್ರಾಗಮವನ್ನು ಪ್ರಮಾಣವೆಂದು ಹಿಡಿದವರೇ- ಎಂಬುದನ್ನು ನೆನಪಿನಲ್ಲಿಡಬೇಕು.

ಅಂತೂ ಒಟ್ಟಿನಲ್ಲಿ ಭಾಗವತಮತವು ಅಹಿಂಸಾಪ್ರಧಾನವಾದದ್ದು. ವಿಷ್ಣುಭಕ್ತನಾದ ಉಪರಿಚರವಸುರಾಜನು ನಾರಾಯಣನನ್ನೂ, ಪಿತೃಗಳನ್ನೂ, ಬ್ರಾಹ್ಮಣರನ್ನೂ ಆರಾಧನೆಮಾಡಿದಮೇಲೆ-

**ಶೇಷಾನ್ನಭುಕ್ ಸತ್ಯಪರಃ ಸರ್ವಭೂತೇಷ್ವಹಿಂಸಕಃ ।** ಮೋ.ಧ. ೩೩೫-೨೦

ಉಳಿದ ಅನ್ನವನ್ನು ಭುಂಜಿಸುತ್ತಿದ್ದನು, ಸತ್ಯಪರನಾಗಿದ್ದನು, ಯಾವ ಪ್ರಾಣಿಗಳನ್ನೂ ಹಿಂಸೆಮಾಡುತ್ತಿರಲಿಲ್ಲ.

---

**1.** ಈ ನಿಜವನ್ನರಿಯದೆ 'ಮಧ್ವಾಚಾರ್ಯರು ಪಶುಹಿಂಸೆಯನ್ನು ನಿವಾರಣೆ ಮಾಡಿ ಯಜ್ಞದಲ್ಲಿ ಪಿಷ್ಟಪಶುವನ್ನು ಬಳಸಬೇಕೆಂಬ ವಿಧಾನವನ್ನು ಮಾಡಿದರು' ಎಂದು ಕೆಲವರು ಹೇಳುತ್ತಿದಾರೆ. ನಾರಾಯಣೀಯದಲ್ಲಿ ಉಪರಿಚರವಸುವು ಮಾಡಿದ ಯಜ್ಞದಲ್ಲಾಗಲಿ ದೇವತೆಗಳಿಗೂ ಋಷಿಗಳಿಗೂ ವಿವಾದಗ್ರಸ್ತವಾದ ಯಜ್ಞದಲ್ಲಾಗಲಿ 'ಪಿಷ್ಟಪಶು'ವಿನ ವಿಚಾರವು ಬಂದಿಲ್ಲ; ಅಲ್ಲಿ 'ಅಜ'ವೆಂದರೆ ಬೀಜವೆಂದು ಮಾತ್ರ ಹೇಳಿದೆ ಎಂಬುದನ್ನು ಹಿಂದೆ ತಿಳಿಸಿರುತ್ತೇವೆ.

ಅವನು ಮಾಡುತ್ತಿದ್ದ ಕಾಮ್ಯಕರ್ಮಗಳೂ ನೈಮಿತ್ತಿಕಕರ್ಮಗಳೂ ಆದ ಯಜ್ಞಗಳನ್ನೆಲ್ಲ ಸಾತ್ವತವಿಧಿಯಿಂದಲೇ ಮಾಡುತ್ತಿದ್ದನು:-

**ಕಾಮ್ಯನೈಮಿತ್ತಿಕಾ ರಾಜನ್ ಯಜ್ಞಿಯಾಃ ಪರಮಕ್ರಿಯಾಃ ।**
**ಸರ್ವಾಃ ಸಾತ್ವತಮಾಸ್ಥಾಯ ವಿಧಿಂ ಚಕ್ರೇ ಸಮಾಹಿತಃ ॥** ಮೋ.ಧ. ೩೩೫-೨೪

ಅವನು ಮಾಡಿದ ಅಶ್ವಮೇಧದಲ್ಲಿ ಪಶುಘಾತವನ್ನು ಮಾಡಲಿಲ್ಲ. (**ನ ತತ್ರ ಪಶುಘಾತೋಽಭೂತ್।** ಮೋ.ಧ. ೩೩೬-ಶ್ಲೋ. ೧೦), '**ಅಜೇನಯಷ್ಟವ್ಯಮ್**' ಎಂಬ ವಾಕ್ಯಕ್ಕೆ ಧಾನ್ಯಬೀಜಗಳನ್ನು ಬಳಸಿ ಯಾಗವನ್ನು ಮಾಡಬೇಕು- ಎಂಬರ್ಥವನ್ನು ಕೃತಯುಗದ ಋಷಿಗಳು ಹೇಳುತ್ತಿದ್ದರು ( ಮೋ. ಧ. ೩೩೭-೪, ೫) ಸಾಕ್ಷಾನ್ನಾರಾಯಣನು ಪ್ರವೃತ್ತಿನಿವೃತ್ತಿಧರ್ಮಗಳನ್ನು ಬ್ರಹ್ಮಾದಿದೇವತೆಗಳಿಗೆ ತಿಳಿಸಿಕೊಟ್ಟು-

**ಇದಂ ಕೃತಯುಗಂ ನಾಮ ಕಾಲಃ ಶ್ರೇಷ್ಠ ಪ್ರವರ್ತಿತಃ ।**
**ಅಹಿಂಸ್ಯಾ ಯಜ್ಞಪಶವೋ ಯುಗೇಽಸ್ಮಿನ್ ನ ತದನ್ಯಥಾ ॥**
**ಚತುಷ್ಪಾತ್ ಸಕಲೋ ಧರ್ಮೋ ಭವಿಷ್ಯತ್ಯತ್ರ ವೈ ಸುರಾಃ ।**
**ತತಸ್ತ್ರೇತಾಯುಗಂ ನಾಮ ತ್ರಯೀ ಯತ್ರ ಭವಿಷ್ಯತಿ ॥**
**ಪ್ರೋಕ್ಷಿತಾ ಯತ್ರ ಪಶವೋ ವಧಂ ಪ್ರಾಪ್ಸ್ಯನ್ತಿ ವೈ ಮಖೇ ।**
**ಯತ್ರ ಪಾದಶ್ಚತುರ್ಥೋ ವೈ ಧರ್ಮಸ್ಯ ನ ಭವಿಷ್ಯತಿ ॥**

ಮೋ.ಧ. ೩೪೦-೮೨ ರಿಂದ ೮೪

ಎಂದು ಕೃತಯುಗದಲ್ಲಿ ಪಶುಹಿಂಸೆಕೂಡದೆಂದೂ ತ್ರೇತಾಯುಗದಲ್ಲಿ ಪ್ರೋಕ್ಷಣ ಮಾತ್ರದಿಂದಲೇ ಪಶುಗಳು ಸಾಯುವವೆಂದೂ ಹೇಳಿರುತ್ತಾನೆ. ಆದ್ದರಿಂದ ಯಜ್ಞದಲ್ಲಿ ಪಶುಘಾತವು ಆಗಲೇಕೂಡದೆಂದು ಭಗವಂತನೂ ಹೇಳಿರುವದಿಲ್ಲ. ಹೀಗಿದ್ದರೂ ಧರ್ಮವು ಒಂದೇ ಪಾದದಷ್ಟು ನಿಂತಿರುವ ಕಲಿಯುಗದಲ್ಲಿ ನಾವು ಹೇಗೆ ವರ್ತಿಸಬೇಕೆಂದು ದೇವತೆಗಳು ಕೇಳಿಕೊಂಡಾಗ ಭಗವಂತನು

**ಯತ್ರ ವೇದಾಶ್ಚ ಯಜ್ಞಾಶ್ಚ ತಪಃ ಸತ್ಯಂ ದಮಸ್ತಥಾ॥**
**ಅಹಿಂಸಾಧರ್ಮಸಂಯುಕ್ತಾಃ ಪ್ರಚರೇಯುಃ ಸುರೋತ್ತಮಾಃ।**
**ಸ ವೋ ದೇಶಃ ಸೇವಿತವ್ಯೋ ಮಾ ವೋಽಧರ್ಮಃ ಪದಾ ಸ್ಪೃಶೇತ್॥**

ಮೋ.ಧ. ೩೪೦ - ೮೮, ೮೯

ಎಲ್ಲಿ ವೇದಗಳೂ ಯಜ್ಞಗಳೂ ತಪಸ್ಸೂ ಸತ್ಯವೂ ದಮ, ಅಹಿಂಸಾಧರ್ಮ- ಇವುಗಳು ಪ್ರಚಾರದಲ್ಲಿರುವವೋ ಅಂಥ ಸ್ಥಲದಲ್ಲಿಯೇ ನೀವು ಇರಿ- ಎಂದು ಹೇಳಿರುವದರಿಂದ ವೈದಿಕಕರ್ಮಗಳಿಗೆ ಅವಿರುದ್ಧವಾದ ಅಹಿಂಸಾಪ್ರಧಾನಧರ್ಮವೇ ಭಾಗವತಮತಕ್ಕೆ ಒಪ್ಪೆಂದು ಸಿದ್ಧವಾಗುತ್ತದೆ.

# ಭಾಗವತಪುರಾಣವೂ ಭಾಗವತಮತವೂ

೨೨. ಈಗ ಭಾಗವತಮತನಿಶ್ಚಯಕ್ಕೆ ಭಾಗವತಪುರಾಣವು ಎಷ್ಟರಮಟ್ಟಿಗೆ ಉಪಕಾರಕವಾಗಿದೆ ಎಂಬುದನ್ನು ಸ್ವಲ್ಪಮಟ್ಟಿಗೆ ವಿಮರ್ಶೆಗೆ ಇಟ್ಟುಕೊಳ್ಳಬಹುದಾಗಿದೆ. ವಿಷ್ಣುಪುರಾಣದಂತೆಯೇ ಇದು ವೈಷ್ಣವರೆಲ್ಲರಿಗೂ ಮಾನ್ಯವಾಗಿರುತ್ತದೆ; ದಕ್ಷಿಣದೇಶದಲ್ಲಿ ದ್ವೈತಿಗಳು, ವಿಶಿಷ್ಟಾದ್ವೈತಿಗಳು, ಅದ್ವೈತಿಗಳು- ಎಲ್ಲರೂ ಇದನ್ನು ಮಾನ್ಯಸ್ಥಾನದಲ್ಲಿಟ್ಟಿರುತ್ತಾರೆ. ಈ ಗ್ರಂಥದ ಶೈಲಿಯು ಮಿಕ್ಕ ಪುರಾಣಗಳಿಗಿಂತ ಸ್ವಲ್ಪ ಭಿನ್ನವಾಗಿರುವದರಿಂದಲೂ ಶಂಕರಾಚಾರ್ಯರೇ ಮೊದಲಾದ ಹಿಂದಿನ ಆಚಾರ್ಯರುಗಳು ಈ ಪುರಾಣದಿಂದ ಪ್ರಮಾಣವಾಕ್ಯಗಳನ್ನು ಉದಾಹರಿಸಿರುವದು ಕಂಡುಬಾರದೆ ಇರುವದರಿಂದಲೂ ಇದನ್ನು ಬೋಪದೇವನೆಂಬಾತನು ರಚಿಸಿರಬೇಕೆಂದು ಕೆಲವರು ತರ್ಕಿಸಿರುತ್ತಾರೆ; ಅದನ್ನು ಮತ್ತೆ ಕೆಲವರು ಖಂಡಿಸಿರುತ್ತಾರೆ. ಈ ವಾದವಾಗಲಿ, ದೇವೀಭಾಗವತ, ಶ್ರೀಮದ್ಭಾಗವತ-ಈ ಎರಡರಲ್ಲಿ ಯಾವದು ಮಹಾಪುರಾಣ, ಯಾವದು ಉಪಪುರಾಣ- ಎಂಬ ಜಗಳವಾಗಲಿ ನಮಗೆ ಪ್ರಕೃತವಲ್ಲ. ಏಕೆಂದರೆ ಈಗ ದಕ್ಷಿಣದೇಶದಲ್ಲಿ ಮೂರು ಸಿದ್ಧಾಂತದವರೂ ಭಾಗವತವನ್ನು ಪ್ರಮಾಣವೆಂದೇ ಒಪ್ಪಿರುತ್ತಾರೆ. ಈ ಮತವು ಭಾಗವತಸಂಪ್ರದಾಯಕ್ಕೆ ಎಷ್ಟರಮಟ್ಟಿಗೆ ಹತ್ತಿರವಿದೆ?-ಎಂಬುದನ್ನು ಮಾತ್ರ ಇಲ್ಲಿ ವಿಚಾರಿಸೋಣ:–

(೧) ಉದ್ಧವನಿಗೆ ಶ್ರೀಕೃಷ್ಣಭಗವಂತನು ಭಕ್ತಿಯ ಸಾಧನಗಳನ್ನು ಹೇಳುವಾಗ

**'ವೈದಿಕೀ ತಾನ್ತ್ರಿಕೀ ದೀಕ್ಷಾ ಮದೀಯವ್ರತಧಾರಣಮ್'॥** ಭಾಗ. ೧೧-೧೧-೩೭

ಎಂದು ವೈದಿಕದೀಕ್ಷೆಯನ್ನೂ ತಾಂತ್ರಿಕದೀಕ್ಷೆಯನ್ನೂ ಕೈಕೊಂಡು ವೈಷ್ಣವವ್ರತವನ್ನು ಅನುಸರಿಸುವದು ಭಕ್ತಿಗೆ ಸಾಧನವೆಂದು ಹೇಳಿರುತ್ತಾನೆ.

ಭಾಗವತಸಂಪ್ರದಾಯವು ವೇದವನ್ನೂ ಪಾಂಚರಾತ್ರಾಗಮವನ್ನೂ ಸಮವಾಗಿಯೇ ಪ್ರಮಾಣವಾಗಿ ಇಟ್ಟುಕೊಂಡಿದೆ ಎಂಬುದನ್ನು ಆಗಲೆ ತಿಳಿಸಿಕೊಟ್ಟಿದ್ದೇವೆ.

(೨) (ಅ) ಚತುರ್ವ್ಯೂಹಗಳನ್ನು ಇಲ್ಲಿ ಮತ್ತೆ ಮತ್ತೆ ಉಲ್ಲೇಖಿಸಿದೆ:

**ನಮಸ್ತೇ ವಾಸುದೇವಾಯ ನಮಃ ಸಙ್ಕರ್ಷಣಾಯ ಚ ।**
**ಪ್ರದ್ಯುಮ್ನಾಯಾನಿರುದ್ಧಾಯ ಸಾತ್ವತಾಂ ಪತಯೇ ನಮಃ ॥**

ಭಾಗ. ೧೦-೪೦-೨೧

**(ಆ)** **ದ್ವಾಪರೇ ಭಗವಾನ್ ಶ್ಯಾಮಃ ಪೀತವಾಸಾ ನಿಜಾಯುಧಃ ।**
**ಶ್ರೀವತ್ಸಾದಿಭಿರಙ್ಕೈಶ್ಚ ಲಕ್ಷಣೈರುಪಲಕ್ಷಿತಃ ॥**

ತಂ ತದಾ ಪುರುಷಂ ಮರ್ತ್ಯಾ ಮಹಾರಾಜೋಪಲಕ್ಷಣಮ್ ।
ಯಜನ್ತಿ ವೇದತನ್ತ್ರಾಭ್ಯಾಂ ಪರಂ ಜಿಜ್ಞಾಸವೋ ನೃಪ ।

ಭಾಗ. ೧೧-೫-೨೭, ೨೮

ನಮಸ್ತೇ ವಾಸುದೇವಾಯ ನಮಃ ಸಙ್ಕರ್ಷಣಾಯ ಚ ।
ಪ್ರದ್ಯುಮ್ನಾಯಾನಿರುದ್ಧಾಯ ತುಭ್ಯಂ ಭಗವತೇ ನಮಃ ।
ನಾರಾಯಣಾಯ ಋಷಯೇ ಪುರುಷಾಯ ಮಹಾತ್ಮನೇ ।
ವಿಶ್ವೇಶ್ವರಾಯ ವಿಶ್ವಾಯ ಸರ್ವಭೂತಾತ್ಮನೇ ನಮಃ ॥

ಭಾಗ. ೧೧-೫-೨೮, ೩೦

(೩) ವಾಸುದೇವಃ ಸಂಕರ್ಷಣಃ ಪ್ರದ್ಯುಮ್ನಃ ಪುರುಷಃ ಸ್ವಯಮ್ ।
ಅನಿರುದ್ಧ ಇತಿ ಬ್ರಹ್ಮನ್ ಮೂರ್ತಿವ್ಯೂಹೋಽಭಿಧೀಯತೇ ॥
ಸ ವಿಶ್ವತೈಜಸಃಪ್ರಾಜ್ಞಸ್ತುರೀಯ ಇತಿ ವೃತ್ತಿಭಿಃ ।
ಅರ್ಥೇನ್ದ್ರಿಯಾಶ್ರಯಜ್ಞಾನೈರ್ಭಗವಾನ್ ಪರಿಭಾವ್ಯತೇ[1] ॥

ಭಾಗ. ೧೨-೧೧-೨೧,೨೨

## ವಿಷ್ಣುಪುರಾಣಕ್ಕೂ ಭಾಗವತಕ್ಕೂ ಹೋಲಿಕೆ

೨೩. ವಿಷ್ಣುಪುರಾಣದಲ್ಲಿ ಭಾಗವತಮತಕ್ಕೆ ಅನುಕೂಲವಾದ ವಿಚಾರಗಳಿರುವಂತೆಯೇ ಶಂಕರಾಚಾರ್ಯರಿಗೆ ಒಪ್ಪಾದ ಅದ್ವೈತಸಿದ್ಧಾಂತವನ್ನೂ ಅಲ್ಲಿ ಹೇಳಿದೆ ಎಂದು ತಿಳಿಸಿರುತ್ತೇವೆ. ಭಾಗವತದಲ್ಲಿಯೂ ಹಾಗೆಯೇ. ಉದಾಹರಣೆಗೆ-

(೧) ಭಗಶಬ್ದವು ಭಗವಂತನ ಗುಣಗಳನ್ನು ಹೇಳುತ್ತದೆಯೆಂದೂ ಆ ಗುಣಗಳಿಗೂ ಭಗವಂತನಿಗೂ ಭೇದವಿಲ್ಲವೆಂದೂ ತಿಳಿಸುವದಕ್ಕೆ ವಿಷ್ಣುಪುರಾಣದ ವಚನವನ್ನು ಹಿಂದೆ (ಪು.೧೧) ಕೊಟ್ಟಿರುತ್ತೇವಷ್ಟೆ? ಭಾಗವತದಲ್ಲಿ ಇದಕ್ಕೆ ಒಂದು ಉದಾಹರಣೆಯನ್ನು ಇಲ್ಲಿ ಕೊಡಬಹುದು:

ಭಗವಾನ್ ಭಗಶಬ್ದಾರ್ಥಂ ಲೀಲಾಕಮಲಮುದ್ವಹನ್।
ಧರ್ಮಂ ಯಶಶ್ಚ ಭಗವಾಂಶ್ಚಾಮರವ್ಯಜನೇಽಭಜತ್॥ ಭಾ.೧೨-೧೧-೧೮

[ಇಲ್ಲಿ `ಭಗವಚ್ಛಬ್ದಾರ್ಥಮ್'ಎಂಬ ಪಾಠಭೇದವೂ ಇದೆ.]

ವಿಷ್ಣುಪುರಾಣದಲ್ಲಿಯೂ ಭಾಗವತದಲ್ಲಿಯೂ ಮುಖ್ಯಭಕ್ತರಿಗೆ ಏಕಾಂತಿಗಳೆಂಬ ಹೆಸರನ್ನು ಕೊಟ್ಟಿದೆ:

1. 'ಪರಿಭಾಷ್ಯತೇ' ಪಾ॥

(೨) ಏಕಾನ್ತಿನಃ ಸದಾ ಬ್ರಹ್ಮಧ್ಯಾಯಿನೋ ಯೋಗಿನಶ್ಚ ಯೇ।
ತೇಷಾಂ ತು ಪರಮಂ ಸ್ಥಾನಂ ಯತ್ತತ್ಪಶ್ಯನ್ತಿ ಸೂರಯಃ॥

ವಿ. ಪು. ೧-೬-೩೬

ಏಕಾನ್ತಿನೋ ಯಸ್ಯ ನ ಕಞ್ಚನಾರ್ಥಂ
ವಾಞ್ಛನ್ತಿ ಯೇ ವೈ ಭಗವತ್ಪ್ರಪನ್ನಾಃ।
ಅತ್ಯದ್ಭುತಂ ತಚ್ಚರಿತಂ ಸುಮಙ್ಗಲಂ
ಗಾಯನ್ತ ಆನನ್ದಸಮುದ್ರಮಗ್ನಾಃ॥ ಭಾಗ.೮-೩-೨೦

(೩) ವಿಷ್ಣುಪುರಾಣದಲ್ಲಿ-
ಸರ್ವಗತ್ವಾದನನ್ತಸ್ಯ ಸ ಏವಾಹಮವಸ್ಥಿತಃ ।
ಮತ್ತಃ ಸರ್ವಮಹಂ ಸರ್ವಂ ಮಯಿ ಸರ್ವಂ ಸನಾತನೇ॥

ವಿ. ಪು. ೧-೧೯-೮೫

ಪರಮೇಶ್ವರನೇ ನಾನು ಎಂದಿರುತ್ತಾನೆ; ನನ್ನಿಂದಲೇ ಎಲ್ಲವೂ ಆಗಿವೆ ಎಲ್ಲವೂ ನಾನೇ-ಎಂದೂ ಪ್ರಹ್ಲಾದನು ಹೇಳಿರುತ್ತಾನೆ. ಇದರಂತೆ ಭಾಗವತದಲ್ಲಿಯೂ

ಅಹಂ ಬ್ರಹ್ಮ ಪರಂ ಧಾಮ ಬ್ರಹ್ಮಾಹಂ ಪರಮಂ ಧ್ರುವಮ್ ।
ಏವಂ ಸಮೀಕ್ಷನ್ನಾತ್ಮಾನಮಾತ್ಮನ್ಯಾಧಾಯ ನಿಷ್ಕಲೇ ॥
ದಶನ್ತಂ ತಕ್ಷಕಂ ಪಾದೇ ಲೇಲಿಹಾನಂ ವಿಷಾನನೈಃ ।
ನದ್ರಕ್ಷ್ಯಸಿ ಶರೀರಂ ಚ ವಿಶ್ವಂ ಚ ಪೃಥಗಾತ್ಮನಃ ॥ ಭಾ. ೧೨-೫-೧೧

`ನಾನು ಬ್ರಹ್ಮವು 'ಎಂಬ ಜ್ಞಾನವನ್ನು ತಂದುಕೊಂಡರೆ ನಿನ್ನ ಆತ್ಮನಿಗಿಂತ ವ್ಯತಿರಿಕ್ತವಾಗಿ ಯಾವ ಪ್ರಪಂಚವೂ ಕಾಣಿಸಲಾರದು- ಎಂದು ಶುಕರು ಪರೀಕ್ಷಿತನಿಗೆ ಬೋಧಿಸಿರುತ್ತಾರೆ. ಹೀಗೆಯೇ ಇನ್ನೂ ಬೇರೆಬೇರೆಯ ಉದಾಹರಣೆಗಳನ್ನು ಕೊಡಬಹುದು.

ಒಟ್ಟಿನಲ್ಲಿ ವಿಷ್ಣುಪುರಾಣದಂತೆಯೇ ಭಾಗವತವನ್ನು ನಾವು ಪ್ರಕೃತ ವಿಚಾರದ ವಿಷಯವಾದ ಭಾಗವತಸಂಪ್ರದಾಯದ ಸಿದ್ಧಾಂತಕ್ಕೂ ಸಾಧನಗಳಿಗೂ ಪ್ರಮಾಣವೆಂದು ಹಿಡಿಯುವದರಲ್ಲಿ ಯಾವ ಬಾಧಕವೂ ಇಲ್ಲವೆಂದು ನಂಬಬಹುದು.

## ಪಾಂಚರಾತ್ರದ ಸಂಹಿತೆಗಳು

೨೪. ಈವರೆಗೆ ನಾವು ದಕ್ಷಿಣದೇಶದ ದ್ವೈತ, ವಿಶಿಷ್ಟಾದ್ವೈತ ಮತ್ತು ಅದ್ವೈತ-ಈ ಮೂರು ಸಿದ್ಧಾಂತಗಳೂ ಪ್ರಮಾಣವೆಂದು ಒಪ್ಪಿರುವ ಗ್ರಂಥಗಳನ್ನೇ ಮುಖ್ಯವಾಗಿ ಹಿಡಿದು ವಿಚಾರ ಮಾಡಿರುತ್ತೇವೆ. ಇವಲ್ಲದೆ `ಸಂಹಿತೆ'ಗಳೆಂಬ ಹೆಸರಿನ ಕೆಲವು ಗ್ರಂಥಗಳು ಪ್ರಕಾಶಕ್ಕೆ ಬಂದಿರುತ್ತವೆ. ಆ ಗ್ರಂಥಗಳನ್ನು ಅದ್ವೈತಿಗಳಂತೂ ಎಲ್ಲಿಯೂ ಉದಾಹರಿಸಿರುವದಿಲ್ಲ. ಇವು ಬಲುಮಟ್ಟಿಗೆ ಭಾರತದ ಉತ್ತರಪ್ರಾಂತಗಳಲ್ಲಿ ಮಾತ್ರವೇ ರಚಿತವಾಗಿದ್ದು

ಅಲ್ಲಿಂದಲೇ ದಕ್ಷಿಣಕ್ಕೆ ಬಂದು ಪ್ರಚಾರದಲ್ಲಿವೆ ಎಂದು ಹೇಳುತ್ತಾರೆ. ಕಪಿಂಜಲ ಸಂಹಿತಾದಿಪ್ರಾಚೀನಗ್ರಂಥಗಳ ಪ್ರಕಾರ ಪಾಂಚರಾತ್ರಸಂಹಿತೆಗಳ ಸಂಖ್ಯೆಯು ಇನ್ನೂರಕ್ಕೂ ಹೆಚ್ಚಿಗೆ ಇರುತ್ತವೆಯೆಂದು ತಿಳಿದುಬಂದಿರುತ್ತದೆ. ಈವರೆಗೆ ಪ್ರಕಾಶಿತವಾಗಿರುವ ಸಂಹಿತೆಗಳ ಪಟ್ಟಿಯನ್ನು ಈ ಕೆಳಗೆ ಕೊಟ್ಟಿರುತ್ತೇವೆ[1]:-

(೧) ಅಹಿರ್ಬುಧ್ನ್ಯ ಸಂಹಿತಾ (ದೇವನಾಗರಿ)ಅಡಿಯಾರ್ ಲೈಬ್ರರಿ, ಮದ್ರಾಸ್, 1916(೩ ಖಂಡಗಳುಳ್ಳದ್ದು)

(೨) ಈಶ್ವರಸಂಹಿತಾ (ತೆಲುಗು) ಸದ್ವಿದ್ಯಾಪ್ರೆಸ್, ಮೈಸೂರು, 1890.
,, (ದೇವನಾಗರೀ) ಸುದರ್ಶನ ಪ್ರೆಸ್, ಕಾಂಚೀ 1932.

(೩) ಕಪಿಂಜಲಸಂಹಿತಾ (ತೆಲುಗು) ಮದ್ರಾಸ್.

(೪) ಜಯಾಖ್ಯಸಂಹಿತಾ (ದೇವನಾಗರೀ) ಗಾಯಕವಾಡ ಓರಿಯಂಟಲ್ ಸೀರೀಸ್, ಬರೋಡಾ, ನಂ.54,1931.

(೫) ಪರಮಸಂಹಿತಾ (ದೇವನಾಗರೀ) ಬರೋಡಾ,1940.

(೬) ಪಾರಾಶರಸಂಹಿತಾ (ತೆಲುಗು) ಬೆಂಗಳೂರು,1898.

(೭) ಪಾದ್ಮತಂತ್ರ (ತೆಲುಗು) ಮೈಸೂರು, 1924.

(೮) ಬೃಹದ್ಬ್ರಹ್ಮಸಂಹಿತಾ (ತೆಲುಗು) ತಿರುಪತಿ,1909 ;
,, ದೇವನಾಗರೀ ಆನಂದಾಶ್ರಮ, ಪೂನಾ,1926.

(೯) ಭಾರದ್ವಾಜಸಂಹಿತಾ (ತೆಲುಗು) ಮೈಸೂರು.

(೧೦) ಲಕ್ಷ್ಮೀತಂತ್ರ (ತೆಲುಗು) ಮೈಸೂರು, 1888.

(೧೧) ವಿಷ್ಣುತಿಲಕ ( ತೆಲುಗು) ಬೆಂಗಳೂರು, 1896.

(೧೨) ವಿಷ್ಣುಸಂಹಿತಾ (ದೇವನಾಗರೀ) ಅನಂತಶಯನಗ್ರಂಥಮಾಲೆ, ತ್ರಿವೇಂದ್ರಮ್,1926.

(೧೩) ಶಾಂಡಿಲ್ಯಸಂಹಿತಾ (ದೇವನಾಗರೀ) ಸರಸ್ವತೀಭವನ ಟೆಕ್ಸ್ಟ್ಸ್, ಕಾಶಿ.

(೧೪) ಶ್ರೀಪ್ರಶ್ನಸಂಹಿತಾ (ತೆಲುಗು) ಕುಂಭಕೋಣ,1904.

ಈ ಸಂಹಿತೆಗಳಲ್ಲದೆ (ಚೌಖಂಬಾಸಂಸ್ಕೃತ ಗ್ರಂಥಮಾಲೆಯಲ್ಲಿ ೮೫ನೆಯ ಸಂಖ್ಯೆಯ) ಒಂದು ಪುಸ್ತಕದಲ್ಲಿ ಶ್ರೀ ಪುರಾಣಸಂಹಿತಾ, ಆಳವಂದಾರ ಸಂಹಿತಾ, ಬೃಹತ್ಸದಾಶಿವಸಂಹಿತಾ, ಸನತ್ಕುಮಾರಸಂಹಿತಾ - ಎಂಬ ನಾಲ್ಕು ಸಂಹಿತೆಗಳಿರುವದನ್ನು ನಾವು ನೋಡಿರುತ್ತೇವೆ.

1. ಈ ಖಂಡದಲ್ಲಿ ನಾವು ಕೊಟ್ಟಿರುವ ವಿಷಯಕ್ಕೆಲ್ಲ ಪಂಡಿತ ಬಲದೇವ ಉಪಾಧ್ಯಾಯರು ಪ್ರಕಟಿಸಿರುವ 'ಭಾಗವತ ಸಂಪ್ರದಾಯ' ಎಂಬ ಗ್ರಂಥವೇ ಆಧಾರ. ಆ ಪುಸ್ತಕದ ೧೧೫ನೆಯ ಪುಟದಲ್ಲಿರುವ ಪಟ್ಟಿಯನ್ನು ನೋಡಿರಿ. ಉಪಾಧ್ಯಾಯರು 'ನಾಗರೀ' ಎಂದು ಬರೆದಿರುವದನ್ನು ದೇವನಾಗರೀ ಎಂದು ನಾವು ಬರೆದುಕೊಂಡಿದೇವೆ; ಏಕೆಂದರೆ 'ನಾಗರೀ' ಎಂಬ ಹೆಸರಿನಿಂದ ಬೇರೊಂದು ಲಿಪಿ ಈ ದೇಶದಲ್ಲಿ ಪ್ರಚಾರದಲ್ಲಿದೆ. **X** ಈ ಗುರುತುಹಾಕಿದ ಗ್ರಂಥಗಳನ್ನು ನಾವು ನೋಡಿರುತ್ತೇವೆ.

(೧೫) ***ಸಾತ್ವತಸಂಹಿತಾ** (ದೇವನಾಗರೀ) ಸುದರ್ಶನ ಪ್ರೆಸ್, ಕಾಂಚಿ 1902.[1]

(೧೬) **ನಾರದಪಾಂಚರಾತ್ರ** (ದೇವನಾಗರೀ) ಕಲಕತ್ತಾ,1890.[2]

ಇಲ್ಲಿ ಹೇಳಿರುವ ಸಂಹಿತೆಗಳಿಂದ ಶ್ರೀವೈಷ್ಣವಮತದ ಆಚಾರ್ಯರುಗಳು ತಮ್ಮಗ್ರಂಥಗಳಲ್ಲಿ ಪ್ರಮಾಣವಾಕ್ಯಗಳನ್ನು ಉದಾಹರಿಸಿಕೊಂಡಿರುತ್ತಾರೆ. ಕಾಶ್ಮೀರದ `ಉತ್ಪಲವೈಷ್ಣವ'ನೆಂಬಾತನೂ ಕೆಲವು ಸಂಹಿತೆಗಳನ್ನು ಪರಾಮರ್ಶೆಮಾಡಿರುತ್ತಾನೆಂದು ತಿಳಿದುಬಂದಿದೆ. ಆದರೆ ಶಂಕರಾಚಾರ್ಯರಾಗಲಿ ಅವರ ಅನುಯಾಯಿಗಳಾಗಲಿ ಈ ಸಂಹಿತೆಗಳ ಹೆಸರನ್ನೆತ್ತಿಲ್ಲ; ಶಂಕರಾಚಾರ್ಯರು ವಿಶಿಷ್ಟಾದ್ವೈತಮತದ ಪರಾಮರ್ಶೆವನ್ನು ಕೂಡ ಮಾಡಿಲ್ಲ. ಈ ಕಾರಣಗಳಿಂದ ನಾವುಸಂಹಿತೆಗಳ ವಿಷಯವನ್ನು ಈ ಚಿಕ್ಕಪುಸ್ತಕದಲ್ಲಿ ಪರಿಶೀಲನೆಗೆ ತೆಗೆದುಕೊಂಡಿರುವದಿಲ್ಲ. ಈ ಗ್ರಂಥದಲ್ಲಿ ಸಾಧನಗಳ ಮತ್ತು ಆಚರಣೆಗಳ ವಿಚಾರವನ್ನು ಚರ್ಚಿಸುವಾಗ ಇವುಗಳ ವಿಷಯಕ್ಕೆ ಏನಾದರೂ ಬರೆದರೂ ಅವುಗಳ ಪ್ರಾಮಾಣ್ಯದ ವಿಷಯಕ್ಕೆ ನಮ್ಮ ಸ್ವಂತ ಅಭಿಪ್ರಾಯವನ್ನುಇಲ್ಲಿಏನೂ ಕೊಡದೆ ತಟಸ್ಥರಾಗಿ ಬರೆದಿದೇವೆಂದು ವಾಚಕರು ಭಾವಿಸಬೇಕು ಪಾಂಚರಾತ್ರಾದ್ಯಾಗಮಗಳನ್ನು ವೈಖಾನಸಾಗಮವೇ ಮುಂತಾದವುಗಳೊಡನೆ ಹೋಲಿಸಿ ಚರ್ಚೆಮಾಡುವಾಗ, ಈ ಆಗಮದ ವಿಷಯಕ್ಕೆ ಬೇರೆಬೇರೆಯ ಆಚಾರ್ಯರುಗಳ ಮತಭೇದವನ್ನು ಕುರಿತು ಚರ್ಚಿಸಬೇಕಾಗುತ್ತದೆ. ಪಾಂಚರಾತ್ರಾದ್ಯಾಗಮಗಳ ವಿಚಾರದ ಇತಿಹಾಸವೇನೂ ಈಗ ನಮಗೆ ಪ್ರಕೃತವಲ್ಲವಾದ್ದರಿಂದ ಇಲ್ಲಿಗೆ ಸಂಹಿತೆಗಳ ವಿಚಾರವನ್ನು ನಿಲ್ಲಿಸುವೆವು.

## ಆಗಮಗಳು ಅಥವಾ ತಂತ್ರಗಳು

೨೫. ಇಲ್ಲಿ ಆಗಮಗಳ ಸಾಮಾನ್ಯಪರಿಚಯವನ್ನು ಸಂಕ್ಷೇಪವಾಗಿ ಕೊಡುವದು ಲಾಭಕರವಾಗಿರುತ್ತದೆ ಎಂದು ತೋರಿದ್ದರಿಂದ ಆ ವಿಷಯಕ್ಕೆ ಕೆಲವು ವಾಕ್ಯಗಳನ್ನುಬರೆಯುವೆವು. **ಆಗಮಗಳು ಶೈವ, ವೈಖಾನಸ, ಪಾಂಚರಾತ್ರ**-ಎಂದು ಮುಖ್ಯವಾಗಿ ಮೂರುವಿಧ. ಶೈವಾಗಮಗಳು ಕಾಮಿಕಾಗಮವನ್ನು ಹಿಡಿದು ವಾತೂಲಾಗಮದವರೆಗೆ ಇಪ್ಪತ್ತೆಂಟು. ವಿಷ್ಣುಪರತ್ವವನ್ನು ಬೋಧಿಸುವ ಆಗಮಗಳು `ವೈಖಾನಸ'.`ಪಾಂಚರಾತ್ರ'-ಎಂದು ಎರಡು ವಿಧಗಳಿವೆ ; ಪಾಂಚರಾತ್ರಾಗಮವನ್ನನುಸರಿಸಿ

---

1. ನಮ್ಮಲ್ಲಿರುವದು ಸಾತ್ವತತಂತ್ರ, ಚೌಖಂಬ ಸಂಸ್ಕೃತಗ್ರಂಥಮಾಲೆ, ಕಾಶೀ,1934 ; ಇದು 'ಸಾತ್ವತಸಂಹಿತೆ'ಯಲ್ಲವೆಂದು ಭೂಮಿಕೆಯಲ್ಲಿದೆ. ಇದು ಪಾಂಚರಾತ್ರಾಗಮತಂತ್ರವಲ್ಲವೆಂದೂ ಸಂಪಾದಕರ ಮತ.

2. ವಲ್ಲಭಸಂಪ್ರದಾಯದಂತೆ 'ನಾರದಪಾಂಚರಾತ್ರ' ಎಂಬ ಗ್ರಂಥವು ಬೊಂಬಾಯಿಯ ಗುಜರಾತಿಪ್ರೆಸ್ಸಿನಲ್ಲಿ ಅಚ್ಚಾಗಿತ್ತೆಂದು ಅದರ ಪ್ರಕಟನೆಯಿಂದ ತಿಳಿದುಬಂದಿದೆ. ವೆಂಕಟೇಶ್ವರ ಪ್ರೆಸ್ಸಿನಲ್ಲಿ ವಿಶಿಷ್ಟಾದ್ವೈತಿಗಳಿಗೆ ಸಂಮತವಾದದ್ದು ಅಚ್ಚಾಗಿತ್ತು. ಅದೂಈಗ ಸಿಕ್ಕುವದಿಲ್ಲ.

ದೇವಾಲಯಗಳಲ್ಲಿ ಅರ್ಚನಾದಿಗಳನ್ನು ಮಾಡುವವರಂತೆ ವೈಖಾನಸಾಗಮಾನುಸಾರಿಗಳೂ ನಮ್ಮ ದೇಶದಲ್ಲಿರುತ್ತಾರೆ. ವೈಖಾನಸಾಗಮದವರು ಪಾಂಚರಾತ್ರರಿಗಿಂತಲೂ ಹಿಂದಿನವರು ಎಂದು ಕೆಲವರ ಮತ; ಆದರೆ ಶ್ರೀಶಂಕರಾಚಾರ್ಯರ ಭಾಷ್ಯಗಳಲ್ಲಿ ಪಾಂಚರಾತ್ರದ ಪರಾಮರ್ಶವಿರುವಂತೆ ವೈಖನಸಾಗಮದ ಪರಾಮರ್ಶವು ಕಾಣುವದಿಲ್ಲವೆಂಬುದು ಈ ಕಲ್ಪನೆಗೆ ಒಂದು ಅಡ್ಡಿಯಾಗಿರುತ್ತದೆ.

ಪಾಂಚರಾತ್ರಾಗಮವನ್ನು ಒಪ್ಪಿರುವವರಲ್ಲಿ ಅದ್ವೈತಿಗಳು, ವಿಶಿಷ್ಟಾದ್ವೈತಿಗಳು, ದ್ವೈತಿಗಳು- ಮುಂತಾದ ಪ್ರಭೇದದವರಿದ್ದಾರೆ. ಅದ್ವೈತಿಗಳಲ್ಲಿ ಈಗ ಯಾರೂ ಪಾಂಚರಾತ್ರದ ಸಂಹಿತೆಗಳನ್ನಾಗಲಿ, ಅಥವಾ ಮತ್ತೆ ಯಾವ ಗ್ರಂಥಗಳನ್ನಾಗಲಿ ಪ್ರಮಾಣವೆಂದು ಹಿಡಿದಂತೆ ಕಾಣುವದಿಲ್ಲ. ಕೆಲವು ವೈಷ್ಣವಾಚಾರಗಳು- ಅದರಲ್ಲಿಯೂ ಮುಖ್ಯವಾಗಿ ಏಕಾದಶೀ, ಗೋಕುಲಾಷ್ಟಮೀ ಮುಂತಾದ ಕೆಲವು ವ್ರತಗಳ ಆಚರಣೆ-ಇಷ್ಟು ಮಾತ್ರವೇ ಈ ಭಾಗವತ ಶಾಖೆಯವರ ವೈಶಿಷ್ಟ್ಯವಾಗಿರುತ್ತದೆ. ಮಿಕ್ಕ ವಿಷಯದಲ್ಲಿ ಇವರೆಲ್ಲರೂ ಶ್ರೀಶಂಕರಭಗವತ್ಪಾದರು ಪ್ರತಿಪಾದಿಸಿರುವ ಅದ್ವೈತಸಿದ್ಧಾಂತವನ್ನೇ ಅನುಸರಿಸುತ್ತಾ ಬಂದಿರುತ್ತಾರೆ. ಆದ್ದರಿಂದ ಪಾಂಚರಾತ್ರಾಗಮವು ಪ್ರಮಾಣವೆ,ಅಲ್ಲವೆ?-ಎಂಬ ಚರ್ಚೆಯು ಇವರಲ್ಲಿ ಎದ್ದುಕೊಂಡಿರುವದು ಕಂಡುಬರುವದಿಲ್ಲ. **ಪತ್ಯಧಿಕರಣಭಾಷ್ಯ**ದಲ್ಲಿ ಶ್ರೀಶಂಕರಾಚಾರ್ಯರವರು ಆಗಮಪ್ರಾಮಾಣ್ಯದ ವಿಷಯಕ್ಕೆ ಬರೆದಿರುವದು ಹೀಗಿದೆ: `**ಅಪಿ ಚಾಗಮಬಲೇನ ಬ್ರಹ್ಮವಾದೀ ಕಾರಣಾದಿಸ್ವರೂಪಂ ನಿರೂಪಯತೀತಿ ನಾವಶ್ಯಂ ತಸ್ಯ ಯಥಾದೃಷ್ಟಮೇವ ಸರ್ವಮಭ್ಯುಪಗನ್ತವ್ಯಮಿತಿ ನಿಯಮೋಽಸ್ತಿ;ಪರಸ್ಯ ತು ದೃಷ್ಟಾನ್ತಬಲೇನ ಕಾರಣಾದಿಸ್ವರೂಪಂ ನಿರೂಪಯತಃ, ಯಥಾದೃಷ್ಟಮೇವ ಸರ್ವಮಭ್ಯುಪಗನ್ತವ್ಯಮಿತ್ಯಯಮಸ್ತ್ಯತಿಶಯಃ**' ವೇದಾಂತಿಯಾದ ಬ್ರಹ್ಮವಾದಿಯು ಆಗಮಬಲದಿಂದಲೇ ಕಾರಣಸ್ವರೂಪವೇ ಮುಂತಾದದ್ದನ್ನು ನಿರ್ಣಯಿಸುತ್ತಾನೆ;ಆದ್ದರಿಂದ ಅವನಿಗೆ ದೃಷ್ಟಾಂತದ ಆಧಾರವೇನೂ ಬೇಕಿಲ್ಲ, ಆಗಮವಾದಿಗೆ ಹಾಗಿಲ್ಲ-ಎಂದು ಇಲ್ಲಿ ಆಕ್ಷೇಪಮಾಡಿದೆ . ಇದರ ಮುಂದಕ್ಕೆ ಬರೆದಿರುವ ಭಾಷ್ಯವು ಹೇಗಿದೆಯೆಂದರೆ:`**ಪರಸ್ಯಾಪಿ ಸರ್ವಜ್ಞಪ್ರಣೀತಾಗಮಸದ್ಭಾವಾತ್ ಸಮಾನಮಾಗಮಬಲಮ್ ಇತಿ ಚೇತ್, ನ;ಇತರೇತರಾಶ್ರಯತ್ವಪ್ರಸಙ್ಗಾತ್। ಆಗಮಪ್ರತ್ಯಯಾತ್ ಸರ್ವಜ್ಞತ್ವಸಿದ್ಧಿಃ ಸರ್ವಜ್ಞ ಪ್ರತ್ಯಯಾಚ್ಚಾಗಮಸಿದ್ಧಿರಿತಿ॥**' (ಸೂ.ಭಾ.೨-೨-೩೮, ಪು. ೨೫೭)- ನಮಗೂ ಸರ್ವಜ್ಞ ಪ್ರಣೀತವಾದ ಆಗಮದ ಬಲವಿದೆಯಲ್ಲವೆ?- ಎಂದು ಆಗಮವಾದಿಯು ಶಂಕಿಸಿದ್ದಕ್ಕೆ `ಹಾಗಲ್ಲ; ಏಕೆಂದರೆ ಆಗಮವು ಪ್ರಮಾಣವೆಂದು ಒಪ್ಪಿದರೆ ಈಶ್ವರನು ಸರ್ವಜ್ಞನೆಂದೂ ಈಶ್ವರನು ಸರ್ವಜ್ಞನೆಂದು ನಂಬಿದರೆ ಆಗಮವು ಪ್ರಮಾಣವೆಂದೂ ಸಿದ್ಧಿಸಬೇಕಾಗಿರುದರಿಂದ ಆಗಮವಾದಿಗಳ ಮತದಲ್ಲಿ ಅನ್ಯೋನ್ಯಾಶ್ರಯತ್ವವು ಗಂಟುಬೀಳುವದು-ಎಂದು ಆಚಾರ್ಯರು ಬರೆದಿರುತ್ತಾರೆ. ಆದ್ದರಿಂದ ವೇದಾವಿರುದ್ಧವಾದ

ವಿಷಯದಲ್ಲಿ ಮಟ್ಟಿಗೇ ಪಾಂಚರಾತ್ರಾಗಮವನ್ನು ಪ್ರಮಾಣವೆಂದು ನಂಬಬಹುದು-ಎಂದು ಸ್ಮೃತ್ಯಧಿಕರಣನ್ಯಾಯವನ್ನೇ ಆಚಾರ್ಯರು ಒಪ್ಪಿದಂತೆ ಆಗಿರುತ್ತದೆ. ಅವರ ಅನುಯಾಯಿಗಳಾಗಿರುವ ಭಾಗವತಸಂಪ್ರದಾಯದವರೂ ಇದನ್ನೇ ಒಪ್ಪಿರುತ್ತಾರೆಂದು ಅವರು ಶಾಂಕರಸಿದ್ಧಾಂತವನ್ನು ಒಪ್ಪಿರುವದರಿಂದಲೇ ಹೇಳಬೇಕಾಗಿದೆ.

ವಿಶಿಷ್ಟಾದ್ವೈತಿಗಳಲ್ಲಿ ಈ ವಿಷಯಕ್ಕೆ ಸಿದ್ಧಾಂತವು ಹೇಗಿದೆಯೆಂಬುದನ್ನು ತಿಳಿಯುವದಕ್ಕೆ ಯಾಮುನಾಚಾರ್ಯರ ಆಗಮಪ್ರಾಮಾಣ್ಯ, ವೇದಾಂತದೇಶಿಕರ ಪಾಂಚರಾತ್ರರಕ್ಷಾ-ಇವನ್ನು ನೋಡಬೇಕು. ಇಲ್ಲಿ **ಆಗಮಪ್ರಾಮಾಣ್ಯ** ವೆಂಬ ಗ್ರಂಥದ ಸಾರವನ್ನು ಸಂಕ್ಷೇಪವಾಗಿ ತಿಳಿಯಿಸುವೆವು. ಯಾಮುನಾಚಾರ್ಯರು ರಾಮಾನುಜಾಚಾರ್ಯರ ಪರಮಗುರುಗಳು. ಅವರ ಕಾಲದಲ್ಲಿಯೇ ಪಾಂಚರಾತ್ರವನ್ನು ಪ್ರಮಾಣವೆಂದು ಹೇಳುವ ಭಾಗವತಮತದ ವಿಷಯಕ್ಕೆ ಹಲವು ಆಕ್ಷೇಪಗಳಿದ್ದವೆಂದು ತೋರುತ್ತದೆ. (೧) ಪಾಂಚರಾತ್ರವನ್ನು ಶಿಷ್ಟರು ಅನುಸರಿಸುತ್ತಿಲ್ಲ; (೨) ಭಾಗವತರನ್ನು ಬ್ರಾಹ್ಮಣರೆಂದು ಎಲ್ಲರೂ ಒಪ್ಪಿಲ್ಲ; (೩) `**ಸಾತ್ವತ**' ರೆಂಬ ಹೆಸರನ್ನು ವೈಶ್ಯವ್ರಾತ್ಯವಂಶದ ಕುತ್ಸಿತಜಾತಿಯವರಿಗೆ ಬಳಸುತ್ತಿದ್ದಾರೆ; (೪) `ಭಾಗವತ' ಶಬ್ದವನ್ನು ಜೀವನವೃತ್ತಿಯಾಗಿ ದೇವಾಲಯದಲ್ಲಿ ವಿಷ್ಣುಪೂಜೆಯನ್ನು ಮಾಡುವವರಿಗೆ ಬಳಸುತ್ತಿದಾರೆ; ಆ ಭಾಗವತರ ಆಚಾರಗಳೂ ಶಿಷ್ಟಸಮ್ಮತವಾಗಿಲ್ಲ; (೫) ನಾಲ್ಕು ವೇದಗಳಲ್ಲಿಯೂ ಶ್ರೇಯಸ್ಸನ್ನು ಕಾಣದೆ **ಶಾಂಡಿಲ್ಯ**ನು ಈ ಶಾಸ್ತ್ರವನ್ನು ಸಂಪಾದಿಸಿಕೊಂಡನು- ಎಂದು ಈ ವರ್ಗದವರೇ ಹೇಳಿಕೊಳ್ಳುತ್ತಿದ್ದಾರೆ; ಆದ್ದರಿಂದ ವೇದನಿಂದಕರಿವರು; (೬) ವೈದಿಕವಾದ ಸಂಸ್ಕಾರಗಳನ್ನು ಪಡೆದವರಿಗೂ ಭಗವಂತನನ್ನು ಆರಾಧನೆಮಾಡುವದಕ್ಕೆ ಅಧಿಕಾರವು ಸಿದ್ಧವಾಗಲೆಂದು ದೀಕ್ಷಾದಿಗಳನ್ನು ಇವರು ಏರ್ಪಡಿಸಿಕೊಂಡಿರುತ್ತಾರೆ; (೭) ಆದ್ದರಿಂದಲೇ ಬಾದರಾಯಣ ಸೂತ್ರದಲ್ಲಿ ಇವರ ಮತವನ್ನು ಖಂಡಿಸಿರುವಂತೆಯೇ ಪಾಂಚರಾತ್ರತಂತ್ರವನ್ನೂ ಖಂಡಿಸಿದೆ. ಹೀಗೆ ಪೂರ್ವಪಕ್ಷಿಗಳ `ಯುಕ್ತಿಗಳನ್ನು ಮೊದಲು ತಿಳಿಸಿದ ಬಳಿಕ ಯಾಮುನಾಚಾರ್ಯರು ತಮ್ಮ ಸಿದ್ಧಾಂತವನ್ನು (ಪು. ೨೩ರಿಂದ) ಬರೆದಿರುತ್ತಾರೆ. ಅವರು ಬರೆದಿರುವದರಲ್ಲಿ ಜ್ಯೋತಿಷ್ಟೋಮಾದಿವಾಕ್ಯಗಳಂತೆ ಈ ತಂತ್ರವೂ `ನಿರ್ದೋಷ' ಜ್ಞಾನಜನ್ಯವಾಗಿರುವದರಿಂದ ಪ್ರಮಾಣವು. ಶ್ರುತಿ ಸ್ಮೃತಿಗಳಲ್ಲಿ ಪ್ರಸಿದ್ಧನಾಗಿರುವ ನಾರಾಯಣನನ್ನು ಹೇಳಿದ್ದರಿಂದಲೇ ಅದು ಪ್ರಮಾಣ- ಎಂಬುದು (ಪು. ೪೬) ಅವರ ಮತ.

ಯಾಮುನಾಚಾರ್ಯರು ಪೂರ್ವಪಕ್ಷಯುಕ್ತಿಗಳಿಗೆ ಯಾವ ಪ್ರತಿಯುಕ್ತಿಗಳನ್ನು ಹೇಳಿದ್ದಾರೆಂಬುದು ಇಲ್ಲಿ ಪ್ರಕೃತವಲ್ಲ. ಅವರ ಕಾಲಕ್ಕೆ `ಭಾಗವತ' ರೆಂದು ಕರೆಯಿಸಿಕೊಳ್ಳುವವರು ನಾನಾವಿಧವಾಗಿ ವಿಂಗಡವಾಗಿದ್ದರು, ಅವರ ಮೇಲೆ ದಕ್ಷಿಣದೇಶದವರು ಅನೇಕ ದೋಷಗಳನ್ನು ಹೊರಿಸುತ್ತಿದ್ದರು- ಎಂಬುದು ಮಾತ್ರ ನಿರ್ವಿವಾದವಾಗಿ ಇಲ್ಲಿ ಸಿದ್ಧವಾಗುತ್ತದೆ. ಆದ್ದರಿಂದ ಶಂಕರಾಚಾರ್ಯರ ಕಾಲಕ್ಕೆ

ಪ್ರಚಾರದಲ್ಲಿದ್ದ ಪಾಂಚರಾತ್ರಮತವನ್ನು ಯಾಮುನಾಚಾರ್ಯರ ಕಾಲದಲ್ಲಿದ್ದ ಆ ಮತದ ವಿಚಾರಗಳ ಆಧಾರದಿಂದ ನಾವು ನಿರ್ಣಯಿಸುವದಕ್ಕೆ ಆಗುವದಿಲ್ಲವೆಂದು ಧಾರಾಳವಾಗಿ ನಂಬಬಹುದು. ಆದ್ದರಿಂದ ಇಲ್ಲಿ ಯಾಮುನಾಚಾರ್ಯರೂ ಅವರ ಪ್ರಶಿಷ್ಯರಾದ ರಾಮಾನುಜಾಚಾರ್ಯರೂ ಉದಾಹರಿಸಿರುವ ಸಂಹಿತೆಗಳ ವಿಷಯಕ್ಕೆ ಕೆಲವು ವಾಕ್ಯಗಳನ್ನು ಬರೆದು ಇಲ್ಲಿಗೆ ವಿರಮಿಸಿರುವೆವು.

ಭಾಗವತಧರ್ಮಕ್ಕೆ ಪ್ರಮಾಣಗಳು ಯಾವುವು? ಎಂಬ ವಿಷಯಕ್ಕೆ ಬರೆಯುವಾಗ **ಬಾಲಗಂಗಾಧರ ತಿಲಕರವರು** ತಮ್ಮ **ಗೀತಾರಹಸ್ಯ** (ಪರಿಶಿಷ್ಟ ಪು. ೫೩೬) ದಲ್ಲಿ ಹೀಗೆಂದು ಬರೆದಿರುತ್ತಾರೆ: "ಗೀತೆಯು ಹೊರತಾಗಿ ಭಾಗವತಧರ್ಮದ ಮೇಲಿನ ಈಗ ಉಪಲಬ್ಧವಿರುವ ಗ್ರಂಥಗಳೆಂದರೆ: ಮಹಾಭಾರತಾಂತರ್ಗತಶಾಂತಿಪರ್ವದ ಕೊನೆಯಲ್ಲಿ ೧೮ನೆಯ ಅಧ್ಯಾಯದಲ್ಲಿ ನಿರೂಪಿತವಾದ ನಾರಾಯಣೀಯೋಪಾಖ್ಯಾನ (ಮ.ಭಾ.ಶಾಂ. ೩೩೪-೩೫೧) ಶಾಂಡಿಲ್ಯಸೂತ್ರ, ಭಾಗವತಪುರಾಣ, ನಾರದಪಾಂಚರಾತ್ರ, ನಾರದಸೂತ್ರ, ರಾಮಾನುಜಾಚಾರ್ಯರೇ ಮೊದಲಾದವರ ಗ್ರಂಥಗಳು - ಇವಿಷ್ಟೇ ಸರಿ. ಅವುಗಳೊಳಗೆ ರಾಮಾನುಜಾಚಾರ್ಯರ ಗ್ರಂಥಗಳಂತೂ ಹೇಳಿಕೇಳಿ ಸಾಂಪ್ರದಾಯಕದೃಷ್ಟಿಯಿಂದ ಅಂದರೆ ಭಾಗವತಧರ್ಮವನ್ನು ವಿಶಿಷ್ಟಾದ್ವೈತವೇದಾಂತಕ್ಕೆ ಕೂಡಿಸುವದಕ್ಕೋಸ್ಕರ ಶಾಲಿವಾಹನಶಕದ ೧೨ನೆಯ ಶತಕದ ಸುಮಾರಿಗೆ ಬರೆದ ಗ್ರಂಥಗಳು. ಆದಕಾರಣ ಭಾಗವತಧರ್ಮದ ಮೂಲಸ್ವರೂಪವನ್ನು ನಿಶ್ಚಯಿಸುವದಕ್ಕೆ ಈ ಗ್ರಂಥಗಳ ಮೇಲೆ ಅವಲಂಬಿಸಿ ಉಪಯೋಗವಿಲ್ಲ. ಮಧ್ವಾದಿ ಉಳಿದ ವೈಷ್ಣವಸಂಪ್ರಾದಯದ ಗ್ರಂಥದ ಸಂಬಂಧದಿಂದಲೂ ಹೀಗೇ ಹೇಳಬಹುದು." ಈ ಅಭಿಪ್ರಾಯದಲ್ಲಿ ಅವ್ಯಾಪ್ತಿ, ಅತಿವ್ಯಾಪ್ತಿ-ಎರಡೂ ದೋಷಗಳಿವೆ. ನಾವು ಈವರೆಗೆ ತೋರಿಸಿಕೊಟ್ಟಿರುವಂತೆ ಶಂಕರಾಚಾರ್ಯರು ನೇರಾಗಿ ನಾರಾಯಣೀಯದಿಂದಲೇ ವಾಕ್ಯಗಳನ್ನು ಉದಾಹರಿಸಿಕೊಂಡಿರುತ್ತಾರೆ. ಅವರು ಭಕ್ತಿಪಂಥದವರಲ್ಲವೆಂಬುದಕ್ಕೆ ಜ್ಞಾನವೇ ಮೋಕ್ಷಕ್ಕೆ ಕಾರಣವೆಂದು ಬರೆದಿರುವದನ್ನು ಹೇತುವಾಗಿ ಒಡ್ಡುವದಕ್ಕೆ ಬರುವದಿಲ್ಲ. ಏಕೆಂದರೆ `ಜ್ಞಾನನಿಷ್ಠೆ' ಎಂಬುದೇ **ಪರಾಭಕ್ತಿ** ಎಂಬುದು ಶಂಕರಾಚಾರ್ಯರ ಮತ. ಆದ್ದರಿಂದ ಅವರ ಗ್ರಂಥವನ್ನು ಸೇರಿಸದೆ ಇರುವದು ಅವ್ಯಾಪ್ತಿ. ಇನ್ನು `ಪಾಂಚರಾತ್ರ'ವೆಂಬುದು ಯಾವದೆಂಬುದು ಈವರೆಗೂ ನಿರ್ಣಯವಾಗಿಲ್ಲವಾದ್ದರಿಂದ ಅದನ್ನು ಇಲ್ಲಿ ಸೇರಿಸಿಕೊಂಡಿರುವದು ಅತಿವ್ಯಾಪ್ತಿಯಾಗಿದೆ.

ಇನ್ನು ಸಂಹಿತೆಗಳ ವಿಷಯಕ್ಕೆ ನಾವು ಹೇಳಬೇಕಾದದ್ದನ್ನು ಕಲಕತ್ತೆಯ Ramakrishna Mission Institute of Culture ಇವರು ಪ್ರಕಟಿಸಿರುವ Cultural Heritage of India' ಎಂಬ ಬೃಹದ್ಗ್ರಂಥದ ನಾಲ್ಕನೆಯ ಸಂಪುಟದಲ್ಲಿ ಒಂದನೆಯ ಭಾಗದಲ್ಲಿ ಶ್ರೀ॥ ವಿ. ರಂಗಾಚಾರ್ಯರು (ತ್ರಿವೇಂಡ್ರಂ ಕಾಲೇಜಿನಲ್ಲಿ ಪ್ರೊಫೆಸರಾಗಿ

ನಿವೃತ್ತರಾದವರು) ಬರೆದಿರುವ ಲೇಖನದ ಕೆಲವು ವಾಕ್ಯಗಳ ಆಧಾರದಿಂದ ಇಲ್ಲಿ ತಿಳಿಸಬೇಕಾಗುತ್ತದೆ. ಅವರು ಆ ಸಂಪುಟದ 165ನೆಯ ಪುಟದಲ್ಲಿ `Growth of Pancharatra Literature (ಪಾಂಚರಾತ್ರದ ವಿಷಯದ ವಾಙ್ಮಯದ ಬೆಳೆವಣಿಗೆ) ಎಂಬ ಶೀರ್ಷಕದ ಕೆಳಗೆ ಬರೆದಿರುವದರ ಸರಳಾನುವಾದವಿದು:

"ಭಕ್ತಿಯ ವಾಙ್ಮಯದಲ್ಲಿ ಸಾಮಾನ್ಯ ಮತ್ತು ಪಾರಿಭಾಷಿಕಗಳೆಂಬ ಎರಡು ಶಾಖೆಗಳಲ್ಲಿಯೂ ಬರುಬರುತ್ತಾ ಹೊಸಹೊಸದಾಗಿ ಗ್ರಂಥಗಳು ಬೆಳೆಯುತ್ತಲೇ ಬಂದವು. ಮೊದಲಿನ(ಸಾಮಾನ್ಯಭಕ್ತಿಯ)ಶಾಖೆಯಲ್ಲಿಪುರಾಣಗಳೂ ಉಪಪುರಾಣಗಳೂ ಅಲ್ಲದೆ ಸ್ಥಲಪುರಾಣಗಳುಕೂಡ ಬೃಹತ್ಪ್ರಮಾಣದಲ್ಲಿ ರಚಿತವಾದವು. ವಿಷ್ಣುಪುರಾಣವೂ ಭಾಗವತವೂ ಈ ಸಂಬಂಧದಲ್ಲಿ ಅತ್ಯಂತಪ್ರಖ್ಯಾತವಾದವುಗಳು-ಎನ್ನಬಹುದು. ಅವು ಮಹಾಭಾರತದ ಮತ್ತು ನಾರಾಯಣೀಯದ ಭಾಗ-ಇವುಗಳಲ್ಲಿರುವ ಉಪದೇಶಗಳ ಹೆಚ್ಚುಗಾರಿಕೆಯ ಪರಾಕಾಷ್ಠೆಯನ್ನು ಮುಟ್ಟಿಸಿದವು. ಪಾರಿಭಾಷಿಕವಾಙ್ಮಯ ಗ್ರಂಥಗಳು `**ಪಾಂಚರಾತ್ರಿಕಗಳು**' ಎಂದು ಪ್ರಖ್ಯಾತವಾಗಿದ್ದವು;ಕೆಲವು ವೇಳೆ ಅವುಗಳನ್ನು `ತಂತ್ರ'ಗಳೆಂದೂ `ಕಾಂಡ'ಗಳೆಂದೂ ಕರೆಯುತ್ತಿದ್ದರು. ಅವುಗಳ ವಿಚಾರವೂ ಹೀಗೆಯೇ ಆಯಿತು.ಈ ಪಾಂಚರಾತ್ರ`**ಸಂಹಿತೆಗಳು**' ೧೦೮ ಗ್ರಂಥಗಳಾಗಿ ಬೆಳೆದುಕೊಂಡವೆಂದು ಸಾಂಪ್ರದಾಯಿಕರ ನಂಬಿಕೆ. ಆದರೆ ನಿಜವಾಗಿ ಅವು ಕನಿಷ್ಠಪಕ್ಷಕ್ಕೆ ೨೧೫ ಗ್ರಂಥಗಳಷ್ಟಿವೆ.[1] ಈ ಗ್ರಂಥಮಾಲಿಕೆಯಲ್ಲಿ ಮೊದಲು ಬಂದವುಗಳೆಂದರೆ ಪ್ರಾಯಶಃ **ಪೌಷ್ಕರ, ವಾರಾಹ, ಬ್ರಾಹ್ಮ** ಇವುಗಳಾದ ಬಳಿಕ **ಸಾತ್ವತ, ಜಯ, ಅಹಿರ್ಬುಧ್ನ್ಯ**-ಸಂಹಿತೆಗಳು.

ಭಾಗವತಮತದ ಸಿದ್ಧಾಂತವೇನೆಂಬುದರ ಬಗ್ಗೆ ಈವರೆಗೆ ನಾವು ಮಾಡಿರುವ ವಿಚಾರಗಳನ್ನು ಇಲ್ಲಿಗೆ ಉಪಸಂಹಾರಮಾಡಿ ಮುಂದಿನಭಾಗದಲ್ಲಿ ಸಾಧನವಿಚಾರವನ್ನು ಮಾಡುವೆವು.

---

**1. ಇದರ ಅಡಿಟಿಪ್ಪಣಿಯಲ್ಲಿ ಹೀಗಿದೆ :**

**"ಡಾಕ್ಟರ್ ಒಟ್ಟೋ ಶ್ರೇಡರ್ (Otto Schrader)ಎಂಬುವರು 'ಅಹಿರ್ಬುಧ್ನ್ಯಸಂಹಿತೆ' ಎಂಬ ಗ್ರಂಥಕ್ಕೆ ಬರದಿರುವ ಅಮೂಲ್ಯವಾದ ಪೀಠಿಕೆಯಲ್ಲಿ ೨೨೪ ರಷ್ಟು ಗ್ರಂಥಗಳ ಪರಾಮರ್ಶವನ್ನು ಮಾಡಿರುತ್ತಾರೆ. 'ನಾರದೀಯ ಪಾಂಚರಾತ್ರ' ಬಂಗಾಳದಲ್ಲಿ ಏಷಿಯಾಟಿಕ್ ಸೊಸೈಟಿಯಲ್ಲಿ ಮೊಟ್ಟಮೊದಲು ಪ್ರಕಟಿತವಾದದ್ದು; ಅದನ್ನು ವಿದ್ವಾಂಸರುಗಳು ಈ ವಿಷಯಕ್ಕೆ ಇದೊಂದೇ ನಿಜವಾದ ಪ್ರಮಾಣ ಎಂದು ನಂಬಿದ್ದರು: ಆದರೆ ನಮ್ಮ ದೌರ್ಭಾಗ್ಯದಿಂದ ಅದು ಕೃತಕವಾಗಿತ್ತು. ಡಾ|| ಶ್ರೇಡರ್‌ರವರು ಇನ್ನೂ ಹೆಚ್ಚಿನ (ಸಂಹಿತಾ) ಗ್ರಂಥಗಳಿರಬಹುದೆಂದು ನಂಬಿರುತ್ತಾರೆ. ಪಾಂಚರಾತ್ರ ವಾಙ್ಮಯವು ಸಾರ್ಧಕೋಟಿಗ್ರಂಥಗಳ ಪರಿಮಿತವಾಗಿದೆ ಎಂದು ಹೇಳಿದೆ. ಡಾ|| ಶ್ರೇಡರವರೇರ್ ಸಾರ್ಧದಲಕ್ಷವಿರಬಹುದೆಂದು ಎಣಿಸಿರುತ್ತಾರೆ. ಪಾಂಚರಾತ್ರಕ್ಕೂ ಅಹಿರ್ಬುಧ್ನ್ಯಸಂಹಿತೆಗೂ ಅವರು ಬರೆದಿರುವ ಪೀಠಿಕೆಯನ್ನು ನೋಡಿರಿ. ರಾಯಲ್ ಏಷಿಯಾಟಿಕ್ ಸೊಸೈಟಿಯವರ ಪತ್ರಿಕೆಯ 1911ನೆಯ ಅಕ್ಟೋಬರ್ ಸಂಚಿಕೆಯನ್ನುನೋಡಿರಿ. ಅಲ್ಲಿ ಶ್ರೀಗೋವಿಂದಾಚಾರ್ಯರು ಪಾದ್ಮತಂತ್ರ, ಭಾರದ್ವಾಜಸಂಹಿತೆ, ಶಾಂಡಿಲ್ಯಸಂಹಿತೆ, ವೃದ್ಧಹಾರೀತ-ಮುಂತಾದ ಗ್ರಂಥಗಳನ್ನು ಉದಾಹರಿಸಿ ಕೊಂಡಿರುತ್ತಾರೆ."**

ಓಂ ನಮೋ ಭಗವತೇ ವಾಸುದೇವಾಯ

# ಭಾಗವತಮತ - ಸಾಧನಾದಿವಿಚಾರ

## ಶಾಂಕರಭಾಷ್ಯದಲ್ಲಿ ಒಪ್ಪಿರುವ ಪಾಂಚರಾತ್ರಾಭ್ಯುಪಗಮಗಳು

೨೬. ಶಂಕರಾಚಾರ್ಯರು ತಮ್ಮ ಸೂತ್ರಭಾಷ್ಯದಲ್ಲಿ ಖಂಡಿಸಿರುವರೆಂಬ ಪಾಂಚರಾತ್ರಸಿದ್ಧಾಂತವನ್ನು ಈವರೆಗೆ ವಿಚಾರಮಾಡಿದ್ದರಲ್ಲಿ ನಮಗೆ ಇಷ್ಟು ವಿಷಯಗಳು ತಿಳಿಯಬಂದಿವೆ:

(೧) ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ - ಎಂಬ ವ್ಯೂಹ ಚತುಷ್ಟಯವನ್ನು ಮಹಾಭಾರತದ ನಾರಾಯಣೀಯಾಖ್ಯಾನದಲ್ಲಿ ಹೇಳಿದೆ. ಅವನ್ನು ಶಂಕರಾಚಾರ್ಯರು ಖಂಡಿಸಿರುವದಿಲ್ಲ. ಅದಕ್ಕೆ ಬದಲು ತಾವೂ ಅವನ್ನು ಒಪ್ಪಿರುತ್ತಾರೆ. (೨) ವಾಸುದೇವಾದಿವ್ಯೂಹಗಳೆಲ್ಲವೂ ನಿರ್ವಿಶೇಷನಾದ ಪರಮಾತ್ಮನೇ - ಎಂದು ಭಾಗವತಮತದವರು ಹೇಳಿರುವದನ್ನು ತಾವೂ ಒಪ್ಪಿರುತ್ತಾರೆ. (೩) ನಿರ್ವಿಶೇಷನಾದ ಭಗವಂತನಿಂದಲೇ ಅವ್ಯಕ್ತವು ಉತ್ಪನ್ನವಾಯಿತೆಂದು ಭಾಗವತರು ಹೇಳುವ ವಾದವನ್ನೂ ಅವರು ಒಪ್ಪಿ ನಾರಾಯಣೀಯಾಖ್ಯಾನದಲ್ಲಿ ಅದಕ್ಕೆ ಆಧಾರವಾಗಿರುವ ವಾಕ್ಯಗಳನ್ನೇ ಸೂತ್ರಭಾಷ್ಯದಲ್ಲಿ ಉದಾಹರಿಸಿಕೊಂಡಿರುತ್ತಾರೆ. (೪) ಭಗವಂತನಿಂದಲೇ ಜಗತ್ತೆಲ್ಲವೂ ಹುಟ್ಟಿ ಅವನಲ್ಲಿಯೇ ಲಯವಾಗುವದೆಂಬ ಸಿದ್ಧಾಂತವು ಆಚಾರ್ಯರು ಒಪ್ಪಿರುವ ಸಿದ್ಧಾಂತಕ್ಕೆ ಒಪ್ಪಾಗಿಯೇ ಇದೆ.

ಆದರೆ ವಾಸುದೇವನೆಂಬ ಪರಪ್ರಕೃತಿಯಿಂದ ಮುಂದಿನ ಮೂರು ಪ್ರಕೃತಿಗಳು ಹುಟ್ಟಿರುತ್ತವೆ; ವಾಸುದೇವಪರಮಾತ್ಮನಿಂದ ಸಂಕರ್ಷಣನೆಂಬ ಜೀವನು, ಸಂಕರ್ಷಣನಿದ ಪ್ರದ್ಯುಮ್ನನೆಂಬ ಮನಸ್ಸು, ಅದರಿಂದ ಅನಿರುದ್ಧನೆಂಬ ಅಹಂಕಾರವು ಹುಟ್ಟುತ್ತದೆ- ಎಂಬೀ ವಾದವನ್ನು ಮಾತ್ರ ಅವರು ಖಂಡಿಸಿರುತ್ತಾರೆ. ಇದು ನಾರಾಯಣೀಯದಲ್ಲಿಲ್ಲ. ಆದ್ದರಿಂದ ಆಚಾರ್ಯರು ಸೂತ್ರ ಭಾಷ್ಯದಲ್ಲಿ ಖಂಡಿಸಿರುವ ಪಾಂಚರಾತ್ರಸಿದ್ಧಾಂತದ ಈ ಪ್ರಮೇಯ ಭಾಗವು ಆ ಕಾಲಕ್ಕೆ ಹಾಗೆಂದು ವಾದಿಸುತ್ತಿದ್ದ ಏಕದೇಶಿಗಳ ಮತವಾಗಿರಬೇಕು- ಎಂದು ತೀರ್ಮಾನಮಾಡಿಕೊಂಡದ್ದಾಗಿದೆ. ಮಿಕ್ಕ ವಿಷಯಗಳಲ್ಲಿ ಆಚಾರ್ಯರೂ ಭಾಗವಂತರಂತೆಯೇ ವಾಸುದೇವತತ್ತ್ವವನ್ನು ಒಪ್ಪಿರುತ್ತಾರೆಂದೂ ಗೊತ್ತುಮಾಡಿದ್ದಾಗಿದೆ.

ಈಗ `ತಮಿತ್ಥಂಭೂತಂ ಭಗವನ್ತಂ ಪರಮೇಶ್ವರಂ ಅಭಿಗಮ-ನೋಪಾದಾನೇಜ್ಯಾಸ್ವಾಧ್ಯಾಯಯೋಗೈರ್ವರ್ಷಶತಮಿಷ್ಟ್ವಾ ಕ್ಷೀಣಕ್ಲೇಶೋ ಭಗವನ್ತಮೇವ ಪ್ರತಿಪದ್ಯತೇ" ಎಂದು ಆಚಾರ್ಯರು (ಸೂ. ಭಾ. ೨-೨-೪೨ ರಲ್ಲಿ) ಅನುವಾದಮಾಡಿಕೊಂಡಿರುವದನ್ನು ವಿಸ್ತಾರವಾಗಿ ವಿಚಾರಮಾಡಬೇಕಾಗಿರುತ್ತದೆ. ಏಕೆಂದರೆ ಭಾಗವತಮತದ ಮುಮುಕ್ಷುಗಳು ಅನುಸರಿಸಬೇಕಾಗಿದ ಸಾಧನವು ಇದೇ - ಎಂದು ಭಾಷ್ಯಪ್ರಮಾಣದಿಂದ ಏರ್ಪಡುತ್ತದೆ. ``ಯದಪಿ ತಸ್ಯ ಭಗವತಃ, ಅಭಿಗಮನಾದಿಲಕ್ಷಣಮ್ ಆರಾಧನಮ್ ಅಜಸ್ರಮ್ ಅನನ್ಯಚಿತ್ತತಯಾ ಅಭಿಪ್ರೇಯತೇ ತದಪಿ ನ ಪ್ರತಿಷಿಧ್ಯತೇ । ಶ್ರುತಿಸ್ಮೃತ್ಯೋರೀಶ್ವರಪ್ರಣಿಧಾನಸ್ಯ ಪ್ರಸಿದ್ಧತ್ವಾತ್" ಎಂದು ಭಾಷ್ಯಕಾರರು ಈ ಸಾಧನಕ್ಕೆ ಶ್ರುತಿಸ್ಮೃತಿಗಳ ಆಧಾರವಿದೆ- ಎಂದು ಸ್ಪಷ್ಟವಾಗಿ ಬರೆದಿರುತ್ತಾರೆ. ಈ ಅಭಿಗಮನಾದಿಗಳ ಸ್ವರೂಪವೇನೆಂಬುದನ್ನು ವಿಚಾರಮಾಡುವದಕ್ಕೆ ಇನ್ನು ನಾವು ಹೊರಡಬಹುದಾಗಿದೆ.

## ಅಭಿಗಮನಾದಿಸಾಧನಗಳು

೨೭. ಅಭಿಗಮನಾದಿಸಾಧನಗಳ ವಿಚಾರವನ್ನು ಸೂತ್ರಭಾಷ್ಯದಲ್ಲಾಗಲಿ ಮಿಕ್ಕ ಶಾಂಕರಭಾಷ್ಯಗಳಲ್ಲಾಗಲಿ ವಿವರಿಸಿರುವದು ಕಂಡುಬಂದಿರುವದಿಲ್ಲ. ಸಂಹಿತೆಗಳಲ್ಲಿಯೂ ಶಾಂಕರಭಾಷ್ಯದ ಅನುಕ್ರಮವನ್ನು ಅನುಸರಿಸಿ ಸಾಧನಗಳನ್ನು ವಿವರಿಸಿರುವಂತೆ ತೋರುವದಿಲ್ಲ. ಸಂಹಿತೆಗಳ ವಿಷಯವನ್ನು ಬರೆದಿರುವ ಬಲದೇವಉಪಾಧ್ಯಾಯರು `ಶರಣಾಗತಿ' ಎಂಬ ಸಾಧನವನ್ನು ಕುರಿತೇ ಬರೆದಿರುತ್ತಾರೆಯೇ ಹೊರತು ಅಭಿಗಮನಾದಿಗಳ ವಿಷಯವನ್ನು ಕುರಿತು ವಿಮರ್ಶೆಮಾಡಿರುವದಿಲ್ಲ. ಆದ್ದರಿಂದ ನಾವು ಮೊದಲು ಶಾಂಕರಭಾಷ್ಯದ ವ್ಯಾಖ್ಯಾನಕಾರರು ಈ ವಿಷಯದಲ್ಲಿ ಏನು ಬರೆದಿರುತ್ತಾರೆಂಬುದನ್ನು ಇಲ್ಲಿ ವಿಚಾರಕ್ಕೆ ತೆಗೆದುಕೊಳ್ಳುವೆವು.

`ಆನಂದಗಿರಿ' ಗಳೆಂದು ಪ್ರಖ್ಯಾತರಾಗಿರುವ ಶುದ್ಧಾನಂದರ ಶಿಷ್ಯರಾದ ಆನಂದಜ್ಞಾನರು ಬರೆದಿರುವ ವಿವರಣೆ, ವ್ಯಾಖ್ಯಾನಕರ್ತೃಗಳಾದ ಅಪ್ಪಯ್ಯದೀಕ್ಷಿತರು ಬರೆದಿರುವ ``ಕಲ್ಪತರುಪರಿಮಳ"ವೆಂಬ ವಿವರಣೆ - ಈ ಎರಡು ಮಾತ್ರ ನಮಗೆ ಸಿಕ್ಕಿರುತ್ತವೆ. ಇವುಗಳೊಳಗೆ ಆನಂದಜ್ಞಾನರ ವ್ಯಾಖ್ಯಾನವು ಹೆಚ್ಚು ಪುರಾತನವಾಗಿರುತ್ತದೆ; ಅದರಲ್ಲಿ ವಿಶಿಷ್ಟಾದ್ವೈತಾದಿವೇದಾಂತಪ್ರಭೇದಗಳ ಪರಾಮರ್ಶೆಯಿರುವದಿಲ್ಲ. ಕಲ್ಪತರು ಪರಿಮಳದಲ್ಲಿ ಮಾತ್ರ ಈಚಿನ ಪಾಂಚರಾತ್ರರ ಪರಾಮರ್ಶವೂ ಇದೆ. ಇನ್ನೊಂದು ವಿಶೇಷವಿಷಯದ ಪರಾಮರ್ಶಕವಾಕ್ಯವೂ ಅದರಲ್ಲಿದೆ. ``ಆಗಮಸಿದ್ಧಾನ್ತ- ದಿವ್ಯಸಿದ್ಧಾನ್ತ- ತನ್ತ್ರಸಿದ್ಧಾನ್ತ- ತನ್ತ್ರಾನ್ತರಸಿದ್ಧಾನ್ತರೂಪೇ ಚತುರ್ವಿಧೇ ಪಾಞ್ಚರಾತ್ರೇ ಪರಸ್ಪರ ಪ್ರತಿಷೇಧೋ ಮಾ ಭೂತ್, ವೇದನಿನ್ದಕಪರಿಗ್ರಹಪ್ರವೈದಿಕಸಂಸ್ಕಾರ

**ವರ್ಜನಾವೈದಿಕಸಂಸ್ಕಾರವಿಧಾನ - ಕ್ಷುದ್ರವಿದ್ಯಾಬಾಹುಲ್ಯಾದಿಭಿರ್ವೇದ ವಿಪ್ರತಿಷೇಧೋಽಪಿ ಭೂಯಾನ್"** (ಕ. ಪ. ೨-೨-೪೫ ಪು. ೫೭೫, ೫೭೬) **ಆಗಮಸಿದ್ಧಾಂತ, ದಿವ್ಯಸಿದ್ಧಾಂತ, ತಂತ್ರಸಿದ್ಧಾಂತ, ತಂತ್ರಾಂತರಸಿದ್ಧಾಂತ** - ಎಂಬ ನಾಲ್ಕು ವಿಧವಾದ ಪಾಂಚರಾತ್ರದಲ್ಲಿ ಪರಸ್ಪರವಿರೋಧವು ಇಲ್ಲದಿದ್ದರೆ ಹೋಗಲಿ, ವೇದನಿಂದಕರನ್ನು ಪರಿಗ್ರಹಿಸುವದು, ವೈದಿಕಸಂಸ್ಕಾರಗಳನ್ನು ಬಿಟ್ಟಿರುವದು, ಅವೈದಿಕಸಂಸ್ಕಾರಗಳನ್ನು ವಿಧಿಸಿರುವದು, ಕ್ಷುದ್ರವಿದ್ಯೆಗಳನ್ನು ಬಹಳವಾಗಿ ಅಂಗೀಕರಿಸಿರುವದು - ಇವೇ ಮುಂತಾದ ರೀತಿಗಳಿಂದ ವೇದವಿಪ್ರತಿಷೇಧವೂ ಹೆಚ್ಚಾಗಿರುತ್ತದೆ-ಎಂದು ಬರೆದಿದೆ. ಇದನ್ನು ಮನಸ್ಸಿಗೆ ತಂದುಕೊಂಡರೆ ಅಪ್ಪಯ್ಯದೀಕ್ಷಿತರ ಕಾಲದಲ್ಲಿ ಪಾಂಚರಾತ್ರಸಿದ್ಧಾಂತಗಳಲ್ಲಿಯೂ ಸಾಧನಗಳಲ್ಲಿಯೂ ಅನೇಕ ಸುಧಾರಣೆಗಳಾಗಿದ್ದವೆಂದು ತಿಳಿಯಬೇಕಾಗುತ್ತದೆ. ಏಕೆಂದರೆ ಯಾಮುನಾಚಾರ್ಯರ ಆಗಮಪ್ರಾಮಾಣ್ಯದ ಪೂರ್ವಪಕ್ಷದಲ್ಲಿ ಈ ದೋಷಾರೋಪವು ಕಾಣಿಸುವದಿಲ್ಲ. ಶಂಕರಾಚಾರ್ಯರ ಕಾಲಕ್ಕೆ ಮತ್ತು ಅದಕ್ಕೆ ಪೂರ್ವದಲ್ಲಿ ಇದ್ದ ಶುದ್ಧಭಾಗವತಸಂಪ್ರದಾಯದ ಸಿದ್ಧಾಂತಸಾಧಗಳ ತತ್ತ್ವವನ್ನು ನಿರ್ಣಯಿಸುವದಕ್ಕೆ ಈ ಸುಧಾರಣೆಯ ವಿಚಾರವು ನಮಗೆ ಉಪಯೋಗಕ್ಕೆ ಬರುವಂತಿಲ್ಲವಾದ್ದರಿಂದ ಈ ಚರ್ಚೆಯನ್ನು ಪಾಂಚರಾತ್ರವಿಚಾರದ ಪೂರ್ಣ ಇತಿಹಾಸಕ್ಕೆ ಮೀಸಲಾಗಿಡಬೇಕಾಗಿರುತ್ತದೆ. ಆದ್ದರಿಂದ ಕಲ್ಪತರುಪರಿಮಳಕ್ಕಿಂತಲೂ ನಮಗೆ ಆನಂದಜ್ಞಾನರ ವಿವರಣೆಯು ಹೆಚ್ಚಿನ ಆಧಾರಗ್ರಂಥವೆಂದು ನಂಬಬೇಕಾಗಿದೆ. ಈ ಕಾರಣದಿಂದ ನಾವು ಮೊದಲು ಆನಂದಜ್ಞಾನರ ವ್ಯಾಖ್ಯಾನದಂತೆಯೇ ವಿವರವನ್ನು, ಕೊಟ್ಟು, ಕಲ್ಪತರುಪರಿಮಳದ ವಿವರಣೆಯನ್ನೂ ಅದರ ಮುಂದೆ ಕೊಡುವೆವು. ಶ್ರೀರಾಮಾನುಜಾಚಾರ್ಯರು ಬರೆದಿರುವ **ವೇದಾರ್ಥಸಂಗ್ರಹ**ದಲ್ಲಾಗಲಿ, **ಶ್ರೀಭಾಷ್ಯ**ದಲ್ಲಾಗಲಿ- ಈ ಅಭಿಗಮನಾದಿಗಳ ಪರಾಮರ್ಶವು ಕಾಣುವದಿಲ್ಲ. ಆದ್ದರಿಂದ ಈಗ್ಗೆ ನಾವು ಶಂಕರಾಚಾರ್ಯರ ಭಾಷ್ಯದಲ್ಲಿಯೂ ಆನಂದ ಜ್ಞಾನರ ವಿವರಣೆಯಲ್ಲಿಯೂ ದೊರಕುವಷ್ಟು ವಿಷಯಸಂಗ್ರಹದಿಂದಲೇ ತೃಪ್ತರಾಗಬೇಕಾಗಿದೆ. ಆದ್ದರಿಂದ ಈಗ ವ್ಯಾಖ್ಯಾನಕಾರರು ಕೊಟ್ಟಿರುವ ಈ ಸಾಧನಗಳ ವಿವರವನ್ನು ಪರಿಶೀಲಿಸೋಣ.

೧. ಅಭಿಗಮನ : **ವಾಕ್ಕಾಯಚೇತಸಾಮ್ ಅವಧಾನಪೂರ್ವಕಂ ದೇವತಾಗೃಹಗಮನಮ್ ಅಭಿಗಮನಮ್;** ಮನೋವಾಕ್ಕಾಯಗಳನ್ನು ಅವಧಾನದಲ್ಲಿಟ್ಟುಕೊಂಡು **ದೇವತಾಗೃಹ**ಕ್ಕೆ ಹೋಗುವದು ಅಭಿಗಮನವು - ಎಂದು **ಆನಂದಗಿರಿ: `ಅಭಿಗಮನಂ ಪ್ರಾತರ್ಭಗವನ್ಮಂತ್ರಜಪಸ್ತುತಿನಮಸ್ಕಾರಾದಿಕಮ್'** ಅಭಿಗಮನವೆಂದರೆ ಬೆಳಗಿನ ವೇಳೆಯಲ್ಲಿ ಭಗವನ್ಮಂತ್ರಜಪ, ಸ್ತುತಿ, ನಮಸ್ಕಾರ-ಮುಂತಾದದ್ದು- ಎಂದು **ಕಲ್ಪತರುಪರಿಮಳ.**

೨. ಉಪಾದಾನ : `ಪೂಜಾದ್ರವ್ಯಾಣಾಮಾವರ್ಜನಮ್ ಉಪಾದಾನಮ್' ಪೂಜಾದ್ರವ್ಯಗಳನ್ನು ಸಂಪಾದಿಸಿಕೊಳ್ಳುವದು ಉಪಾದಾನವು- ಎಂದು ಆನಂದಗಿರಿ; ``ಪೂಜಾರ್ಥಂ ಪುಷ್ಪಾದಿಸಂಪಾದನಮ್ ಉಪಾದಾನಮ್" ಎಂದು ಕಲ್ಪತರು ಇಬ್ಬರ ಮತದಲ್ಲಿಯೂ ಒಂದೇ ಅಭಿಪ್ರಾಯವಿದೆ.

೩. ಇಜ್ಯಾ: ಇಜ್ಯಾ ಪೂಜಾ- ಇಜ್ಯೆ ಎಂದರೆ ಪೂಜೆ ಎಂದು ಆನಂದಗಿರಿ; ``ತತಃ ಪೂಜನಮ್ ಇಜ್ಯಾ" ಎಂದು ಪರಿಮಳ. ಇಲ್ಲಿಯೂ ಮತಭೇದವಿಲ್ಲ.

೪. ಸ್ವಾಧ್ಯಾಯ : `ಸ್ವಾಧ್ಯಾಯೋ ಜಪಃ' ಸ್ವಾಧ್ಯಾಯವೆಂದರೆ ಜಪ ಎಂದು ಗಿರಿ. `` ಭಗವಚ್ಛಾಸ್ತ್ರ ತದನುಗುಣಪುರಾಣಾಗಮಶ್ರವಣಚಿನ್ತನಾದಿಕಮ್ ಸ್ವಾಧ್ಯಾಯಃ'' - ಭಗವಚ್ಛಾಸ್ತ್ರವನ್ನೂ ಅದಕ್ಕನುಗುಣವಾದ ಪುರಾಣ, ಆಗಮ- ಇವುಗಳನ್ನೂ ಶ್ರವಣಮಾಡುವದು, ಚಿಂತಿಸುವದು, ಸ್ವಾಧ್ಯಾಯ- ಎಂದು ಪರಿಮಳ. ಇಲ್ಲಿ ಪರಿಮಳದಲ್ಲಿರುವ ಹೆಚ್ಚಿನ ವಿವರಕ್ಕೆ ಆನಂದಗಿರಿಯವರ ಅನುಮತಿಯೂ ಉಂಟೆಂದು ನಾವು ನಂಬಬಹುದಾಗಿದೆ.

೫. ಯೋಗ : ``ಯೋಗೋ ಧ್ಯಾನಮ್' ಯೋಗವೆಂದರೆ ಧ್ಯಾನ ಎಂದು ಗಿರಿ. ``ಸಾಯುಂಸನ್ಧ್ಯಾನನ್ತರಂ ಭಗವತಿ ಚಿತ್ತಸಮಾಧಾನಮ್ ಯೋಗಃ'' ಸಾಯಂಸಂಧ್ಯೆಯಾದಬಳಿಕ ಭಗವಂತನಲ್ಲಿ ಚಿತ್ತವನ್ನು ನೆಲೆ ನಿಲ್ಲಿಸಿಕೊಳ್ಳುವದು ಯೋಗವು ಎಂದು ಪರಿಮಳ.

ಒಟ್ಟಿನಲ್ಲಿ ಎರಡು ವ್ಯಾಖ್ಯಾನಗಳಲ್ಲಿಯೂ ಹೇಳಬಹುದಾದ ಮತಭೇದವೇನೂ ಇಲ್ಲವೆನ್ನಬಹುದು.

## ತಂತ್ರಗ್ರಂಥಗಳಲ್ಲಿ ಸಾಧನಗಳು

೨೮. ಪಾಂಚರಾತ್ರಶಾಸ್ತ್ರದಲ್ಲಿ ಸಾಧನಮಾರ್ಗವು ಹೇಗಿದೆ- ಎಂಬುದನ್ನು ನಿರ್ಣಯಿಸಿ ಹೇಳುವದು ಕಷ್ಟ. ಅನೇಕ ಪಾಂಚರಾತ್ರಸಂಹಿತೆಗಳನ್ನು ನೋಡಿರುವ ಬಲದೇವ ಉಪಾಧ್ಯಾಯರು ಆ ಗ್ರಂಥಗಳಲ್ಲಿ ಯೋಗ, ಕ್ರಿಯಾ, ಚರ್ಯಾ- ಎಂಬ ಮೂರು ಸಾಧನವಿಷಯಗಳು ಪ್ರತಿಪಾದಿತವಾಗಿವೆ ಎಂದು (ಭಾ. ಸಂ. ಪುಟ ೧೧೮ ರಲ್ಲಿ) ಬರೆದಿರುತ್ತಾರೆ. ಅವರು ಉದಾಹರಿಸಿರುವ ಜಯಾಖ್ಯಸಂಹಿತೆಯು ನಮ್ಮಲ್ಲಿಲ್ಲ; (ಪಟಲ ೨೨, ಶ್ಲೋಕ ೬೫-೭೫ ಇವುಗಳಲ್ಲಿ ಅಭಿಗಮನ, ಉಪಾದಾನ, ಇಜ್ಯಾ, ಅಧ್ಯಯನ, ಯೋಗ- ಎಂಬ ಸಾಧನಗಳ ವಿವರವೂ ಇದೆ ಎಂದು ಬರೆದಿರುತ್ತಾರೆ.) ಕ್ರಿಯಾಸತ್ತಾರೂಪ (ಯಮನಿಯಮ) ಜ್ಞಾನಗಳ ಫಲವಾಗಿ ಅದ್ವಯಜ್ಞಾನವುಂಟಾಗುವದೆಂಬುದಕ್ಕೆ ಅವರು ಈ ಶ್ಲೋಕವನ್ನು ಉದಾಹರಿಸಿರುತ್ತಾರೆ:

ಏವಂ ಕ್ರಿಯಾಖ್ಯಾತ್ ಸತ್ತಾಖ್ಯಂ ಜ್ಞಾನಂ ಪ್ರಾಪ್ನೋತಿ ಮಾನವಃ।
ಬ್ರಹ್ಮಣ್ಯಭಿನ್ನಂ ಸತ್ತಾಖ್ಯಾತ್ ಜ್ಞಾನಾತ್ ಜ್ಞಾನಂ ತತೋ ಭವೇತ್
ಬ್ರಹ್ಮಾಭಿನ್ನಾತ್ತತೋ ಜ್ಞಾನಾತ್ ಬ್ರಹ್ಮ ಸಂಯುಜ್ಯತೇ ಪರಮ್ ॥

ಜಯಾಖ್ಯ ೪-೫೦ (ಭಾ. ಸಂ. ಪುಟ ೧೩೫)

ಆದರೂ ``ಮುಕ್ತದಶೆಯಲ್ಲಿ ಜೀವನು ಬ್ರಹ್ಮದೊಡನೆ ಸಂಪೂರ್ಣ ಏಕಾಕಾರವಾಗುವದಿಲ್ಲ, ಮತ್ತೇನೆಂದರೆ ಒಂದೇ ರೂಪದಲ್ಲಿ ಸಂಶ್ಲಿಷ್ಟನಾಗಿ ಪ್ರತೀತನಾಗುತ್ತಾನೆ (ಸಂಶ್ಲೇಷಾದೇಕಮಿವ ಸ್ಥಿತೌ). ಹೀಗೆ ಪಾಂಚರಾತ್ರ ಆಗಮವು ಜೀವಬ್ರಹ್ಮೈಕ್ಯವನ್ನೇ ಪ್ರತಿಪಾದಿಸುವದಾದರೂ ಪರಿಣಾಮವಾದದ ಪಕ್ಷಪಾತಿಯಾಗಿರುತ್ತದೆ. ವಿವರ್ತವಾದದ ಪಕ್ಷಪಾತಿಯಲ್ಲ" ಎಂದು (ಭಾ. ಸಂ. ಪುಟ ೧೩೫ರಲ್ಲಿ) ಸುಸ್ಫುಟವಾಗಿ ಬರೆದಿರುವದರಿಂದ ಅವರು ನೋಡಿರುವ ಯಾವ ಸಂಹಿತೆಯಲ್ಲಿಯೂ ನಿರುಪಚರಿತಜೀವಬ್ರಹ್ಮೈಕ್ಯರೂಪವಾದ`ಮುಕ್ತಿಯನ್ನು ಹೇಳಿಲ್ಲವೆಂದು ನಾವು ನಂಬಬಹುದಾಗಿದೆ.[1] ಈ ಸಂಹಿತೆಗಳ ವಿಷಯವನ್ನು ವಿಶಿಷ್ಟಾದ್ವೈತಿಗಳೇ ಮುಂತಾದವರು ಒಪ್ಪಿರುವ ಪಾಂಚರಾತ್ರಪ್ರಭೇದಗಳ ವಿಚಾರವನ್ನು ಮಾಡುವಾಗ ಪರಿಶೀಲನೆಗೆ ತೆಗೆದುಕೊಳ್ಳಬೇಕಾಗುವದರಿಂದ ಇಷ್ಟಕ್ಕೆ ಇಲ್ಲಿ ನಿಲ್ಲಿಸಿರುತ್ತೇವೆ.

## ಶಾಂಡಿಲ್ಯಸಂಹಿತೆ

೨೯. ನಮ್ಮಲ್ಲಿ `ಶಾಂಡಿಲ್ಯಸಂಹಿತೆ', `ಸಾತ್ವತತಂತ್ರ'- ಎಂಬ ಎರಡು ತಂತ್ರಗ್ರಂಥಗಳಿವೆ. ಇವೆರಡನ್ನೂ ಶ್ರೀ ॥ **ಅನಂತಶಾಸ್ತ್ರಿ ಫಡಕೆ** ಎಂಬುವರೇ ಶೋಧಿಸಿ ಪ್ರಕಾಶಪಡಿಸಿರುತ್ತಾರೆ; ಇವುಗಳೊಳಗೆ ಸಾತ್ವತತಂತ್ರವು ವೈಷ್ಣವತಂತ್ರಗಳೊಳಗೇ ಸೇರಿರುವದಾದರೂ ಇದು ಸಾತ್ವತಸಂಹಿತೆಯಲ್ಲ. ಪಾಂಚರಾತ್ರಾಗಮತಂತ್ರವಲ್ಲ- ಎಂದೇ (ಸಾ. ತಂ. ಭೂಮಿಕೆ. ಪುಟ ೨) ಅವರು ಅಭಿಪ್ರಾಯಪಟ್ಟಿರುವದರಿಂದ ಅದನ್ನು ಕೈಬಿಟ್ಟು ಶಾಂಡಿಲ್ಯಸಂಹಿತೆಯ ವಿಷಯಕ್ಕೇ ಇಲ್ಲಿ ಸ್ವಲ್ಪ ವಿಶೇಷವಿಚಾರವನ್ನು ಮಾಡುವೆವು. ಸಂಹಿತೆಗಳನ್ನೆಲ್ಲ `ಆಗಮ' ವೆಂದೇ ಕರೆಯುತ್ತಾರಂತೆ. ಅವುಗಳೊಳಗೆ ಆಗಮಸಿದ್ಧಾಂತ, ಮಂತ್ರ, ತಂತ್ರ, ತಂತ್ರಾಂತರ- ಎಂದು ನಾಲ್ಕು ಭೇದಗಳಿವೆಯಂತೆ. ನಮ್ಮಲ್ಲಿರುವದು ಶಾಂಡಿಲ್ಯಸಂಹಿತೆಯ ಐದು ಖಂಡಗಳೊಳಗೆ ಐದನೆಯದಾದ ಹರಿಭಕ್ತಿಖಂಡವು. ಸಂಹಿತೆಯನ್ನು ರಚಿಸಿದ ಮಹರ್ಷಿಯು ಗಾರ್ಧಭಿಶಾಂಡಿಲ್ಯನು. ಶತಪಥಬ್ರಾಹ್ಮಣದಲ್ಲಿರುವ ಅಗ್ನಿರಹಸ್ಯದಲ್ಲಿಯೂ ಛಾಂದೋಗ್ಯದಲ್ಲಿಯೂ ಹೇಳಿರುವ ಶಾಂಡಿಲ್ಯವಿದ್ಯೆಯ ದ್ರಷ್ಟೃವಾದ ಋಷಿಯು ಬ್ರಹ್ಮಶಾಂಡಿಲ್ಯನು; ಅವನು ಮಂತ್ರಾಭಿಮಾನಿದೇವತೆಯಂತೆ ಮಂತ್ರಾತ್ಮಕನಾದವನು; ಬೃಹದಾರಣ್ಯಕದ ನಾಲ್ಕನೆಯ

---

1. ಬೆಂಗಳೂರು ಬುಕ್ ಡಿಪೋ ಮುದ್ರಾಕ್ಷರಶಾಲೆಯಲ್ಲಿ ಅಚ್ಚಾದ ಖಗೇಶ್ವರಸಂಹಿತೆ ವಿಷ್ಣುತಿಲಕದಲ್ಲಿ ಜೀವನು ಮಾಯಾತಿರೋಹಿತನಾಗಿದ್ದು ಪರಬ್ರಹ್ಮಾರಾಧನೆಯಿಂದ ದೇಹಪಾತಾನನ್ತರದಲ್ಲಿ ಬ್ರಹ್ಮದಲ್ಲಿ ಲಯವಾಗುತ್ತಾನೆ ಎಂದಿರುವದು ಕಂಡುಬಂದಿದೆ.

ಅಧ್ಯಾಯದ ಐದನೆಯ ವಂಶಾಧ್ಯಾಯದಲ್ಲಿ ಹೇಳಿರುವ ಋಷಿಯು ವೇದಶಾಂಡಿಲ್ಯನು; ಈ ಇಬ್ಬರಿಗಿಂತ ಭಿನ್ನನಾದವನು **ಗಾರ್ದಭಿಶಾಂಡಿಲ್ಯನು.** ಈತನು ವಿಷ್ಣುವಿನ ಅನುಗ್ರಹದಿಂದ ವೀರವೈಷ್ಣವಶಾಸ್ತ್ರವನ್ನು ರಚಿಸಿದನು- ಎಂದು ಈ ಸಂಹಿತೆ (ಅಂಶ. ೪ ಅ. ೬ ಶ್ಲೋ. ೨೮-೩೪) ಯಲ್ಲಿದೆ. ಶ್ರೀ ಶಂಕರಾಚಾರ್ಯರವರು ಉತ್ಪತ್ತ್ಯಧಿಕರಣಭಾಷ್ಯದಲ್ಲಿ ಬರೆದಿರುವಂತೆ `ಈತನು ನಾಲ್ಕು ವೇದಗಳಲ್ಲಿಯೂ ಪರಮಶ್ರೇಯಸ್ಸನ್ನು ಪಡೆಯದೆ ಇದ್ದದ್ದರಿಂದ ಈ ಶಾಸ್ತ್ರವನ್ನು ಸಂಪಾದಿಸಿಕೊಂಡನು'- ಎಂದೇನೂ ಇಲ್ಲಿ ಹೇಳಿಲ್ಲ. `ಶಿಖಾಸೂತ್ರಗಳನ್ನೂ ವರ್ಣಾಶ್ರಮಗಳನ್ನೂ ವಿಧಿನಿಷೇಧಗಳನ್ನೂ ಬಿಟ್ಟು ಹರಿಯೊಬ್ಬನನ್ನೇ ಗಟ್ಟಿಯಾಗಿ ಆಶ್ರಯಿಸಿ ನರಕಕ್ಕೆ ಬಿದ್ದು ಬಳಿಕ ಜನ್ಮಾಂತರದಲ್ಲಿ ವಿಷ್ಣುಪ್ರಸಾದಾನ್ನವನ್ನು ಸ್ವೀಕರಿಸಿ ವೈದಿಕವೈಷ್ಣವನಾದನು' ಎಂದೇ ಇಲ್ಲಿ ಬರೆದಿರುವದರಿಂದ ಆಚಾರ್ಯರು ಪರಾಮರ್ಶಿಸಿರುವ ಶಾಂಡಿಲ್ಯನು ಯಾರೆಂಬುದು ಈವರೆಗೂ ನಿರ್ಣಯವಾಗಿಲ್ಲವೆಂದೇ ಹೇಳಬೇಕಾಗಿದೆ.

ಈ ಸಂಹಿತೆಯಲ್ಲಿ ಅಭಿಗಮನಾದಿಗಳನ್ನು ಭಾಷ್ಯದಲ್ಲಿ ಹೇಳಿರುವ ಅನುಕ್ರಮದಿಂದ ಎಲ್ಲಿಯೂ ತಿಳಿಸಿರುವಂತೆ ಕಾಣುವದಿಲ್ಲ. ಬಲದೇವ ಉಪಾಧ್ಯಾಯರು ಸಂಹಿತೆಗಳಲ್ಲಿ ಜ್ಞಾನ, ಯೋಗ, ಕ್ರಿಯೆ, ಚರ್ಯೆ- ಎಂಬ ನಾಲ್ಕು ವಿಷಯಗಳಿರುತ್ತವೆ ಎಂದು (ಭಾ. ಸಂ. ಪು. ೧೧೮) ಬರೆದಿರುತ್ತಾರೆ. ಶಾಂಡಿಲ್ಯ ಸಂಹಿತೆಯಲ್ಲಿಯೂ ಈ ನಾಲ್ಕು ವಿಷಯಗಳು ಇರುತ್ತವೆ. ಬಲದೇವ ಉಪಾಧ್ಯಾಯರು ಬರೆದಿರುವಂತೆ ಇಲ್ಲಿಯೂ **ಚರ್ಯಾವಿಚಾರವು** ಬಹಳವಾಗಿರುತ್ತದೆ. ಈಗ ನಾವು ಭಾಗವತಸಂಪ್ರದಾಯದ ಸಾಧನವಿಭಾಗವನ್ನು ಕುರಿತೇ ಮಾತನಾಡುತ್ತಿರುವದರಿಂದ ಅದರ ಸಾರವನ್ನು ಇಲ್ಲಿ ಸಂಗ್ರಹಿಸುವದರಿಂದ ಪ್ರಯೋಜನವುಂಟು.

ಈ ಗ್ರಂಥದಲ್ಲಿ ಭಕ್ತಿಗೇ ಹೆಚ್ಚಿನ ಪ್ರಾಧಾನ್ಯವನ್ನು ಕೊಟ್ಟಿರುವದು ಸ್ವಾಭಾವಿಕವಾಗಿಯೇ ಇದೆ. ಈಗ ಪ್ರಕಾಶಿತವಾಗಿರುವದು ಐದನೆಯದಾದ **ಹರಿಭಕ್ತಿಖಂಡವೆಂದೂ** ಇದರ ಹಿಂದೆ ಧರ್ಮ, ಅರ್ಥ, ಕಾಮ, ಮೋಕ್ಷ- ಎಂಬ ಹೆಸರಿನ ನಾಲ್ಕು ಖಂಡಗಳು ಇದ್ದವೆಂದೂ ತಿಳಿಯಬರುತ್ತದೆ. ಈ ಖಂಡದಲ್ಲಿರುವ ಉಪದೇಶದ ಸಾರವೇನೆಂದರೆ : ಆತ್ಯಂತಿಕಪುರುಷಾರ್ಥವು ಸರ್ವಜೀವರಿಗೂ ಆತ್ಮನಾಗಿರುವ ಹರಿಯ ಭಕ್ತಿಯಿಂದಲೇ ಆಗುವದು (೧-೧-೯)[1]. ನಾಲ್ಕು ಬಗೆಯ ಮೋಕ್ಷಗಳನ್ನೂ ಒಲ್ಲದೆ ಶುಕಾದಿಮಹಾತ್ಮರು ಆತನನ್ನೇ ಭಜಿಸುತ್ತಾರೆ. (೧೮) **`ಸರ್ವಾತ್ಮನಾಽನಿಮಿತ್ತೇನ ಸ್ನೇಹ ಧಾರಾನುಕಾರಿಣೀ। ವೃತ್ತಿಃ ಪ್ರೇಮಪರಿಷ್ಕೃತಾ ಭಕ್ತಿರ್ಮಾಹಾತ್ಮ್ಯ ಬೋಧಜಾ ॥'**

---

1. ಅಂಶ, ಅಧ್ಯಾಯ, ಶ್ಲೋಕ - ಈ ಕ್ರಮದಲ್ಲಿ ಸಂಖ್ಯೆಗಳನ್ನು ಕೊಟ್ಟಿದೆ. ಒಂದೇ ಅಧ್ಯಾಯಕ್ಕೆ ಸೇರಿದ್ದರೆ ಶ್ಲೋಕಸಂಖ್ಯೆಯನ್ನು ಕೊಟ್ಟಿದೆ.

ಯಾವದೊಂದು ನಿಮಿತ್ತವಿಲ್ಲದೆ ಭಗವಂತನ ಮಾಹಾತ್ಮ್ಯಜ್ಞಾನದಿಂದುಂಟಾಗಿರುವ, ತೈಲಧಾರೆಯಂತೆ ಇರುವ ಪ್ರೇಮಸಂಬದ್ಧವಾದ ವೃತ್ತಿಯೇ **ಭಕ್ತಿಯು.** ಕೂಟಸ್ಥನೂ, ಅಧಿಷ್ಠಾತೃವೂ, ನಿರ್ಗುಣನೂ, ಪರಮಾತ್ಮನೂ ಅನಂತನೂ ಸ್ವತಂತ್ರನೂ ಆಗಿರುವ ಆ ಭಗವಂತನು ದ್ವೈವಿಧ್ಯದಿಂದ ಕ್ರೀಡಿಸಬೇಕೆಂದು ಬಗೆದು ಸೃಷ್ಟಿಯನ್ನು ಮಾಡುತ್ತಾನೆ; ಲೀಲಾಸೃಷ್ಟಿ, ಕ್ವಾಚಿತ್ಕ, ಮಾಯಾಮಯಿ - ಎಂದು ಮೂರು ಬಗೆಯಾದ ಸೃಷ್ಟಿಗಳಲ್ಲಿ ಲೀಲಾಸೃಷ್ಟಿಯೇ ಉತ್ತಮವಾದದ್ದು (೨೭-೩೦). ಉತ್ತಮಪುರುಷನೂ ಪೂರ್ಣನೂ ಭಕ್ತವತ್ಸಲನೂ ಆದ ಭಗವಂತನು ಆನಂದಚಿದ್ಘನಾಕಾರನೂ ಶ್ರೀಪತಿಯೂ, ಪರಮನೂ ಆಗಿರುವ ಆ ಶ್ರೀಹರಿಯು ಬ್ರಹ್ಮಾನಂದಮಯವಾದ ಲೋಕದಲ್ಲಿ ಲೀಲಾಸೃಷ್ಟಿಯಲ್ಲಿ ವಿರಾಜಿಸುತ್ತಿರುವನು (೩೩-೩೪). ಆತ್ಮನ ಅಂಶಭೂತರಾಗಿರುವ ಜೀವರುಗಳು (೩೪) ಆತನ ಅನುಗ್ರಹಕ್ಕೆ ಪಾತ್ರರಾಗಿ ಆತನನ್ನೇ ಶರಣುಹೊಂದುವರು; ಅವನಿಂದ ಅನೇಕವಿಧವಾದ ಭಕ್ತಿಮಾರ್ಗವು ಪ್ರಚಾರಕ್ಕೆ ಬಂದಿರುತ್ತದೆ (೩೭-೩೮). ಅಕ್ಷರರೂಪನಾದ ಭಗವಂತನಿಂದ ಸೃಷ್ಟರಾದ ಆತನ ಕಲಾರೂಪರಾಗಿರುವ ವಿಷ್ಣುಬ್ರಹ್ಮಮಹೇಶ್ವರರ ಪ್ರಕೃತಿಸ್ವರೂಪಳಾದ ಮಹಾಲಕ್ಷ್ಮೀಯೇ ಮುಂತಾದ ಪ್ರಕೃತಿಗಳ ಮೂಲಕ ಸ್ವಾತ್ಮರೂಪವಾದ ವಿಶ್ವವನ್ನೇ ನಿರ್ಗುಣನೂ ಅಜನೂ ಆದ ಆ ಭಗವಂತನು ಸೃಷ್ಟಿಸಿರುತ್ತಾನೆ (೨-೧ ರಿಂದ ೩ ). ಸರ್ವವನ್ನೂ ವ್ಯಾಪಿಸಿಕೊಂಡು ಸರ್ವಾತ್ಮನಾಗಿರುವ ಆ ಹರಿಯನ್ನು ಆಚಾರ್ಯ, ಆದೇಶಿಕ, ತೀರ್ಥ, ಗುರು- ಎಂಬ ನಾಲ್ಕು ಬಗೆಯ ಗುರುಗಳೊಳಗೆ ಒಬ್ಬನಿಂದ (೪-೧-೫೧, ೫೭) ದೀಕ್ಷೆ, ಉಪದೇಶ, ಪ್ರಪತ್ತಿ - ಇವುಗಳೊಳಗೆ ಒಂದನ್ನು ಪಡೆದುಕೊಂಡು ವೈಷ್ಣವಧರ್ಮವನ್ನಾಚರಿಸುತ್ತಾ (೪-೨-೯), ಜನ್ಮ, ವಿದ್ಯೆ, ತಪಸ್ಸು, ಹರಿಸೇವೆ, ಸತ್ಸಂಗ - ಎಂಬ ಐದು ಪ್ರಕಾರದ ಶುದ್ಧಿಯನ್ನು ಸಂಪಾದಿಸಿಕೊಂಡು (೧-೩-೨೧, ೨೨), ಅರ್ಚನ, ಮಂತ್ರ, ಪಠನ, ಯಾಗ, ಯೋಗ, ನಾಮಸಂಕೀರ್ತನ, ಸೇವಾ, ಚಿಹ್ನಧಾರಣಮ್, ತದೀಯಾರಾಧನ - ಎಂಬ ಒಂಬತ್ತು ಪ್ರಕಾರದಿಂದ ಸತತವಾಗಿ ಚರ್ಯೆಯನ್ನು (೧-೩-೨೦, ೨೧) ಮಾಡಬೇಕು. ಅವರವರ ಅಂತಸ್ತಿನ ಭಕ್ತಿಗೆ ತಕ್ಕಂತೆ **`ಸಾತ್ತ್ವಿಕಾಸ್ತು ಸಸಾರೂಪ್ಯಸಾರ್ಷ್ಟಿಸಾಯುಜ್ಯಭಾಗಿನಃ । ಸಾಲೋಕ್ಯಂ ರಾಜಸಾದೀನಾಮೇಕತ್ವಂ ನಿರ್ಗುಣಾತ್ಮನಾಮ್'** (೧-೬-೨೪) ಸಾರೂಪ್ಯಾದಿಮುಕ್ತಿಗಳು ಫಲಿಸುವವು; ನಿರ್ಗುಣಭಕ್ತರಿಗೆ ಏಕತ್ವವೇ ಲಭಿಸುವದು; ಶ್ರವಣ, ಕೀರ್ತನ, ಧ್ಯಾನ, ಮಹಾಪುರುಷಸೇವೆ- ಇವುಗಳಿಂದ ದೀಪಜ್ವಾಲೆಯಂತೆ- ಅವಿಚ್ಛಿನ್ನವಾದ ಮನೋವೃತ್ತಿಯು - ಅನೇಕ ಜನ್ಮಗಳವರೆಗೆ ಅನುಸರಿಸಿದ ಅನಿಮಿತ್ತನಿಮಿತ್ತವಾದ ವೈಷ್ಣವಧರ್ಮಸೇವನೆಯಿಂದ ಭಗವಂತನ ಅನುಗ್ರಹದಿಂದಲೇ ನಿರ್ಗುಣಭಕ್ತಿಯು ಲಭಿಸುವದು. **`ಸರ್ವತ್ರ ಸರ್ವದಾ ಸರ್ವಂ ತದರ್ಥೇ ಶುಭಚೇಷ್ಟಿತಮ್ । ಸರ್ವವಸ್ತ್ವಭಿಯೋಗಶ್ಚ ನಿರ್ಗುಣಸ್ಯ ಉದಾಹೃತಃ ॥'** (೧-೬-೧೯) ಎಲ್ಲೆಲ್ಲಿಯೂ ಯಾವಾಗಲೂ ಎಲ್ಲವನ್ನೂ ಆತನಿಗಾಗಿಯೇ

ಮಾಡುತ್ತಾ ಸರ್ವವನ್ನೂ ಆತನಿಗೆ ಅರ್ಪಿಸಿರುವದು ನಿರ್ಗುಣಭಕ್ತಿಯು. ಅಂಥವರಿಗೆ ಆ ಭಗವಂತನ ಸೇವೆಯೊಂದು ಹೊರತು ಮೋಕ್ಷವು ಕೂಡ ಬೇಕಾಗಿಸುವದಿಲ್ಲ (೨೦).

## ಸ್ಮೃತಿಗಳಲ್ಲಿ ಸಾಧನವಿಚಾರ

೩೦. ಶಾಂಡಿಲ್ಯಸಂಹಿತೆಯಲ್ಲಿ ಪ್ರಾಯಶಃ ವೇದಾವಿರುದ್ಧವಾಗಿಯೇ ಭಗವಧಾರಾಧನೆಯನ್ನು ಬರೆದಿರುತ್ತದೆ. ಪಾಂಚರಾತ್ರವು ವೇದಾನುಗುಣವಾಗಿಯೇ ಇತ್ತೆಂಬ ವಿಚಾರದಲ್ಲಿ ಹಿಂದೆಯೂ (ಪು. ೬೮)ನಾವು ಹೇಳಿರುತ್ತೇವೆ. ಪಾಂಚರಾತ್ರಸಂಹಿತೆಗಳೆಲ್ಲವೂ ವೇದಕ್ಕೆ ಸಂಮತವಾಗಿಯೇ ಇರುವವೆಂಬುದನ್ನು ಸಿದ್ಧಪಡಿಸುವದಕ್ಕೆ ಈಚಿನ ವೈಷ್ಣವಾಚಾರ್ಯರೆಲ್ಲರೂ ಹೆಚ್ಚಿನ ಪ್ರಯತ್ನವನ್ನು ಮಾಡಿರುತ್ತಾರೆ. ಇದೆಂತಿರಲಿ. ಪ್ರಕೃತವಾದ ಶಾಂಡಿಲ್ಯಸಂಹಿತೆಯಲ್ಲಿ ಒಂದನೆಯ ಅಂಶದ `ದೀಕ್ಷಾಪ್ರಾಪ್ತಿನಿರೂಪಣ'ವೆಂಬ ಹತ್ತನೆಯ ಅಧ್ಯಾಯದಲ್ಲಿ ಈ ಸ್ಪಷ್ಟೋಕ್ತಿಯು ಕಾಣಬರುತ್ತದೆ :

**ವೈದಿಕಂ ತಾನ್ತ್ರಿಕಂ ಸ್ಮಾರ್ತಂ ಮಿಶ್ರಂ ಪೌರಾಣಿಕಂ ತಥಾ ।**
**ಭಕ್ತಿಶಾಸ್ತ್ರೋದಿತಂ ಚಾಪಿ ಷಡ್ವಿಧಂ ನಿತ್ಯಪೂಜನಮ್ ॥೩೩॥**
**ವೈದಿಕಂ ಪೌರುಷೈರ್ಮನ್ತ್ರೈಸ್ತಥಾ ನಾರಾಯಣಾದಿಭಿಃ ।**
**ಪ್ರಣವೇನಾಪಿ ಮೂಲಾರ್ಣೈರ್ಯತಿನೋ ಬ್ರಾಹ್ಮಣಸ್ಯ ಚ ॥೩೪॥**
**ವೈಖಾನಸಂ ಪಞ್ಚರಾತ್ರಂ ಬ್ರಹ್ಮೋಕ್ತಂ ನಾರದೋದಿತಮ್ ।**
**ತಾನ್ತ್ರಿಕಂ ತು ದ್ವಿಜಾತೀನಾಂ ದೀಕ್ಷಿತಾನಾಂ ಪ್ರಶಸ್ಯತೇ ॥೩೫॥**
**ಸ್ಮಾರ್ತಂ ಬೌಧಾಯನಪ್ರೋಕ್ತಂ ಮಿಶ್ರಂ ವೇದೇನ ಮಿಶ್ರಿತಮ್ ।**
**ಪೌರಾಣಿಕೈರ್ನಾಮಭಿಃಸ್ಸ್ಯಾದ್ಭವೇತ್ತಚ್ಛೂದ್ರಧರ್ಮಿಣಃ ॥೩೬॥**
**ಭಕ್ತೈಃ ಪರಮ್ಪರಾಚೀರ್ಣಂ ಪ್ರೇಮ್ಣೈಕವಿಧಿಗೋಚರಮ್।**
**ಅಹರ್ನಿಶಂ ಭವತಿ ಯತ್ ತದ್ಭಕ್ತ್ಯಾರ್ಚನಮಿಷ್ಯತೇ ॥೩೭॥**

ಪುರುಷಸೂಕ್ತನಾರಾಯಣಾದಿಗಳಿಂದ ಮಾಡುವ, ಪ್ರಣವಮೂಲಮಂತ್ರಗಳಿಂದ ಯತಿಗಳೂ ಬ್ರಾಹ್ಮಣರೂ ಮಾಡುವದು ವೈದಿಕ ; ವೈಖಾನಸ, ಪಂಚರಾತ್ರ -ಇವುಗಳ ಕ್ರಮದಲ್ಲಿ ದೀಕ್ಷಿತರಾದ ದ್ವಿಜರು ಮಾಡುವದು ತಾಂತ್ರಿಕ; ಬೋಧಾಯನ ಪ್ರೋಕ್ತವಾದದ್ದು ಸ್ಮಾರ್ತ; ವೇದಮಿಶ್ರಿತವಾದರೆ ಮಿಶ್ರ; ಪುರಾಣಪ್ರೋಕ್ತವಾದ ನಾಮಾದಿಗಳಿಂದ ಕೂಡಿದ ಶೂದ್ರರಿಗೆ ಹೇಳಿರುವ ಪೂಜೆಯು ಪೌರಾಣಿಕ; ಭಕ್ತರು ಪರಂಪರೆಯಿಂದ ಮಾಡಿಕೊಂಡುಬಂದಿರುವದು ಭಕ್ತಿಶಾಸ್ತ್ರೋಕ್ತಪೂಜೆ. ಹೀಗೆ ನಿತ್ಯಪೂಜೆಯು ಆರು ವಿಧವಾಗಿದೆ -ಎಂಬುದು ಶ್ಲೋಕಗಳ ಅರ್ಥ. ಈ ಆರು ವಿಧವಾದ ಪೂಜಾಕ್ರಮವೂ ಈಗ ಬೇರೆಬೇರೆಯವರಲ್ಲಿ ಆಚರಣೆಯಲ್ಲಿರುವದು ಕಂಡುಬಂದಿರುತ್ತದೆ.

# ಬೋಧಾಯನಸ್ಮೃತಿ

೩೧. ಬೋಧಾಯನಪ್ರೋಕ್ತವಾದದ್ದು ಸ್ಮಾರ್ತಪೂಜೆ ಎಂದು ಇಲ್ಲಿ ಹೇಳಿದೆಯಷ್ಟೆ? **ಬೋಧಾಯನಗೃಹ್ಯಶೇಷದ**[1] **ದ್ವಿತೀಯಪ್ರಶ್ನದ** ಹದಿನಾಲ್ಕನೆಯ ಅಧ್ಯಾಯದಲ್ಲಿ **`ಮಹಾಪುರುಷಸ್ಯ ಅಹರಹಃ ಪರಿಚರ್ಯಾವಿಧಿಃ'** ಎಂಬ ಒಂದು ಪೂಜಾಕ್ರಮ, **ತೃತೀಯಪ್ರಶ್ನದ ಸಪ್ತಮಾಧ್ಯಾಯದಲ್ಲಿರುವ `ವಿಷ್ಣುಕಲ್ಪ':** ಎಂಬ ಕ್ರಮವೊಂದು-ಹೀಗೆ ಎರಡು ಪೂಜಾಕ್ರಮಗಳು ಕಂಡುಬರುತ್ತವೆ. ಇದರಲ್ಲಿ ವೈದಿಕಮಂತ್ರಗಳ ವಿನಿಯೋಗ ಪೂರ್ವಕವಾಗಿ ಅನುಕ್ರಮದಿಂದ ಉಪಚಾರಗಳು, ಆಜ್ಯಾಹುತಿಗಳು, ತರ್ಪಣ, ಪ್ರದಕ್ಷಿಣ, ನಮಸ್ಕಾರ, ಅವಭೃಥ-ಇವೆಲ್ಲವನ್ನೂ ವಿಸ್ತರಿಸಿದೆ. ಚರುಪ್ರಾಶನದ ಕೊನೆಯಲ್ಲಿ **`ಏವಂ ಘೋಷಯೇತ್'- `ಯೋ ವೈಷ್ಣವ ಇತ್ಯಾಹ', `ವೈಷ್ಣವೋಽಸ್ಮಿ' ಇತಿ ಯಃ ಪ್ರತಿಬ್ರೂಯಾತ್ ತಸ್ಮೈ ಶೇಷಂ ದದ್ಯಾತ್', `ಏತೈರೇವ ಮನ್ತ್ರೈಃ ಪ್ರಾಶ್ನಾತಿ '**-ಎಂದಿದೆ. ಇದರಿಂದ ಈ ಪೂಜಾಕಲ್ಪವು ವೈಷ್ಣವ (ಭಾಗವತ)ಸಂಪ್ರದಾಯದವರಿಗಾಗಿಯೇ ಬರೆದದ್ದೆಂದು ಸ್ಪಷ್ಟವಾಗುತ್ತದೆ. ತೀರ ಕೊನೆಯಲ್ಲಿ **`ಪ್ರಾಶ್ಯ, ಅಪ ಆಚಮ್ಯ, ಓಂ ನಮೋ ಭಗವತೇ ವಾಸುದೇವಾಯ' ಇತಿ ದ್ವಾದಶಾಕ್ಷರಂ ಜಪಿತ್ವಾ ಅಶ್ವಮೇಧಫಲಮ್ ಆಪ್ನೋತಿ ಸಕೃದಿಷ್ಟ್ವಾ ಸನಾತನಮ್'** ಎಂದು ಬರೆದಿದೆ. ಇದು ವಾಸುದೇವಭಗವಂತನನ್ನು ಆರಾಧನೆಮಾಡುವವರಿಗಾಗಿಯೇ ಬರೆದಿದೆ-ಎಂಬುದು ಸ್ಪಷ್ಟ.

ನಾವು ಈ ವೊದಲೇ ಉದಾಹರಿಸಿರುವ ಶಾಂಡಿಲ್ಯಸಂಹಿತೆಯ ಹತ್ತನೆಯ ಅಧ್ಯಾಯದಲ್ಲಿ **`ಭಕ್ತಿಶಾಸ್ತ್ರೋಪದೇಶಸ್ತು ಪುರಾ ಪ್ರೋಕ್ತೋ ಯಥಾ ವಿಧಿ। ಆಘಾರಾನ್ತಂ ಸ್ವಗೃಹ್ಯೋಕ್ತಂ ವೈದಿಕಂ ತತ್ರ ಜಾಯತೇ॥'** (೩೮) ಎಂದಿರುವದರಿಂದ ಬೋಧಾಯನೋಕ್ತವೆಂದು ಹೇಳಿರುವ ಸ್ಮಾರ್ತಪೂಜಾಕ್ರಮವೂ, ಮಿಶ್ರಪೂಜಾಕ್ರಮವೂ ಇದೇ ಎಂದು ತೋರುತ್ತದೆ.

# ಆಪಸ್ತಂಬಧರ್ಮಸೂತ್ರ

೩೨. ಬೋಧಾಯನಸ್ಮೃತಿಯಲ್ಲದೆ **ಆಪಸ್ತಂಬಧರ್ಮಸೂತ್ರದಲ್ಲಿಯೂ** ಆಧ್ಯಾತ್ಮಸಾಧನದ ಪರಾಮರ್ಶಗಳಿವೆ. ಪಾತಿತ್ಯವನ್ನುಂಟುಮಾಡುವ ಕರ್ಮಗಳಿಗೆ ಪ್ರಾಯಶ್ಚಿತ್ತವನ್ನು ಹೇಳುವ ಸಂದರ್ಭದಲ್ಲಿರುವ ಕೆಲವು ಸೂತ್ರಗಳನ್ನು ಅಭಿಪ್ರಾಯಸಹಿತವಾಗಿ ಇಲ್ಲಿ ಉದಾಹರಿಸಿರುವೆವು:-

---

1. ಮೈಸೂರು (Government Oriental Library Series) ಓರಿಯೆಂಟಲ್ ಲೈಬ್ರರಿಯಲ್ಲಿ 1904ರಲ್ಲಿ ಪ್ರಕಟಿತವಾದದ್ದು. (Bibliothica Sanskrita) ಎಂಬ ಉಪಮಾಲಿಕೆ. ಸಂಖ್ಯೆ ೩೨.

**ಆ.ಧ.ಸೂ. ೧ ನೆಯ ಪ್ರಶ್ನ, ೨೨ನೆಯ ಖಂಡ-**

**(೧) ಆಧ್ಯಾತ್ಮಿಕಾನ್ ಯೋಗಾನನುತಿಷ್ಠೇನ್ನ್ಯಾಯಸಗ್ಂಹಿತಾನ್ ಆನೈಶ್ಚಾರಿಕಾನ್ ॥**

`ಚಿತ್ತವಿಕ್ಷೇಪಕ್ಕೆ ಪ್ರತಿಪಕ್ಷಭೂತವಾಗಿರುವ ಆಧ್ಯಾತ್ಮಿಕಯೋಗಗಳನ್ನು ಅನುಷ್ಠಾನಮಾಡಬೇಕು'.

**(೨) ಪೂಃ ಪ್ರಾಣಿನಃ ಸರ್ವ ಏವ ಗುಹಾಶಯಸ್ಯ ಅಹನ್ಯಮಾನಸ್ಯ ವಿಕಲ್ಮಷಸ್ಯ । ಅಚಲಂ ಚಲನಿಕೇತಂ ಯೇಽನುತಿಷ್ಠನ್ತಿ ತೇಽಮೃತಾ ಭವನ್ತಿ ॥೪॥**

`ಪ್ರಾಣಿಗಳೆಲ್ಲವೂ ಗುಹಾಶಯನಾದ ಕೊಲ್ಲುವುದಕ್ಕಾಗದ, ನಿಷ್ಕಲ್ಮಷನಾದ ಆತ್ಮನಿಗೆ `ಪುರ'ವಾಗಿರುತ್ತವೆ. ಅಚಲನೂ ಚಲವಾದ ಶರೀರದಲ್ಲಿರುವಾತನೂ ಆಗಿರುವ ಆತನನ್ನು ಉಪಾಸನೆ ಮಾಡುವವರು ಅಮೃತರಾಗುವರು.

**(೩) ಆತ್ಮನ್ ಪಶ್ಯನ್ ಸರ್ವಭೂತಾನಿ ನ ಮುಹ್ಯೇಚ್ಚಿನ್ತಯನ್ ಕವಿಃ । ಆತ್ಮಾನಂ ಚೈವ ಸರ್ವತ್ರ ಯಃ ಪಶ್ಯೇತ್ ಸ ವೈ ಬ್ರಹ್ಮಾ ನಾಕಪೃಷ್ಠೇ ವಿರಾಜತೇ ॥** ಆ. ಧ. ೧-೨೩-೧.

`ಸರ್ವಭೂತಗಳನ್ನೂ ಆತ್ಮನಲ್ಲಿ ಕಾಣುತ್ತಾ ಯಾರು ಮೋಹವಿಲ್ಲದವನಾಗಿರುವನೋ ಆತ್ಮನನ್ನು ಎಲ್ಲೆಲ್ಲಿಯೂ ಕಾಣುವನೋ ಆತನೇ ಬ್ರಾಹ್ಮಣನು, ಅವನು ನಾಕಪೃಷ್ಠದಲ್ಲಿ ವಿರಾಜಿಸುತ್ತಿರುವನು.

**(೪) ನಿಪುಣೋಽಣೀಯಾನ್ ಬಿಸೋರ್ಣಾಯಾ ಯಃ ಸರ್ವಮಾವೃತ್ಯ ತಿಷ್ಠತಿ । ವರ್ಷೀಯಾಂಶ್ಚ ಪೃಥಿವ್ಯಾ ಧ್ರುವಃ ಸರ್ವಮಾರಭ್ಯ ತಿಷ್ಠತಿ । ಸ ಇನ್ದ್ರಿಯೈರ್ಜಗತೋಽಸ್ಯ ಜ್ಞಾನಾದನ್ಯೋಽನನ್ಯಸ್ಯ ಜ್ಞೇಯಾತ್ ಪರಮೇಷ್ಠೀ ವಿಭಾಜಃ । ತಸ್ಮಾತ್ ಕಾಯಾಃ ಪ್ರಭವನ್ತಿ ಸರ್ವೇ ಸ ಮೂಲಂ ಶಾಶ್ವತಿಕಃ ಸ ನಿತ್ಯಃ ॥೨॥**

`ಯಾವನು ಜ್ಞಾನಸ್ವರೂಪನೋ ಕಮಲನಾಳದ ನೂಲಿಗಿಂತಲೂ ಸೂಕ್ಷ್ಮವಾಗಿ ಎಲ್ಲವನ್ನೂ ವ್ಯಾಪಿಸಿಕೊಂಡಿರುವನೋ ಪೃಥಿವಿಗಿಂತಲೂ ದೊಡ್ಡವನೋ ಎಲ್ಲವನ್ನೂ ಹಿಡಿದೆತ್ತಿಕೊಂಡಿರುವನೋ, ಏಕರೂಪನಾಗಿರುವನೋ, ಯಾವನು ಜ್ಞೇಯಜ್ಞಾನಕ್ಕಿಂತಲೂ ಬೇರೆಯಾಗಿರುವನೋ , ಯಾವನು ಪರಮಸ್ವರೂಪದಲ್ಲಿದ್ದುಕೊಂಡಿರುವನೋ, ನಾನಾರೂಪವಾಗಿ ವಿಂಗಡಿಸಿಕೊಂಡು ತೋರುತ್ತಿರುವನೋ, ಆತನಿಂದ ಎಲ್ಲಾ ಶರೀರಗಳೂ ಉಂಟಾಗುತ್ತಿರುವವು. ಅವನೇ ಮೂಲವು, ಶಾಶ್ವತನು, ಅವನೇ ನಿತ್ಯನು.

**(೫) ಅಥ ಭೂತದಾಹೀಯಾನ್ ದೋಷಾನುದಾಹರಿಷ್ಯಾಮಃ । ಕ್ರೋಧೋ ಹರ್ಷೋ ರೋಷೋ ಲೋಭೋ ಮೋಹೋ ದಮ್ಭೋ ದ್ರೋಹೋ ಮೃಷೋದ್ಯಮತ್ಯಾ– ಶಾಪರೀವಾದಾವಸೂಯಾ ಕಾಮಮನ್ಯೂ ಅನಾತ್ಮ್ಯಮಯೋಗಸ್ತೇಷಾಂ ಯೋಗಮೂಲೋ ನಿರ್ಘಾತಃ ॥೫॥**

`ಭೂತದಾಹೀಯ (ಪ್ರಾಣಿಗಳನ್ನು ಸುಡುವ) ದೋಷಗಳನ್ನು ಹೇಳುವೆವು. ಕ್ರೋಧ, ಹರ್ಷ, ರೋಷ, ಲೋಭ, ಮೋಹ, ದಂಭ, ದ್ರೋಹ, ಮೃಷೋದ್ಯ (ಸುಳ್ಳಾಡುವದು), ಅತ್ಯಾಹಾರ, ಪರನಿಂದೆ, ಅಸೂಯೆ, ಕಾಮ, ಮನ್ಯು, (ಗೂಢವಾದ ದ್ವೇಷ) ಅಜಿತೇಂದ್ರಿಯತ್ವ - ಇವು ಅಯೋಗ ; ಇವುಗಳನ್ನು ಯೋಗದಿಂದ ನಾಶಮಾಡಿಕೊಳ್ಳಬೇಕು.'

**(೬) ಅಕ್ರೋಧೋಽಹರ್ಷೋಽರೋಷೋಽಲೋಭೋಽ ಮೋಹೋಽದಮ್ಭೋಽ– ದ್ರೋಹಃ ಸತ್ಯವಚನಮನತ್ಯಾಶೋಽಪೈಶುನಮನಸೂಯಾ ಸಂವಿಭಾಗಸ್ತ್ಯಾಗ ಆರ್ಜವಂ ಮಾರ್ದವಗ್ಂ ಶಮೋದಮಃ ಸರ್ವಭೂತೈರವಿರೋಧೋ ಯೋಗೋಽರ್ಯ ಮಾನೃಶಗ್ಂ ಸಂ ತುಷ್ಟಿರಿತಿ ಸರ್ವಾಶ್ರಮಾಣಾಗ್ಂ ಸಮಯಪದಾನಿ ತಾನ್ಯನುತಿಷ್ಠನ್ ವಿಧಿನಾ ಸಾರ್ವಗಾಮೀ ಭವತಿ ॥೬॥**

`ಅಕ್ರೋಧ, ಅಹರ್ಷ, ಅರೋಷ, ಅಲೋಭ, ಅಮೋಹ, ಅದಂಭ, ಅದ್ರೋಹ, ಸತ್ಯವನ್ನು ಹೇಳುವದು, ಅತ್ಯಾಹಾರವನ್ನು ಸೇವಿಸದಿರುವದು, ಚಾಡಿಹೇಳದಿರುವದು, ಅಸೂಯೆಯಿಲ್ಲದಿರುವದು, ದಾನ, ತ್ಯಾಗ, ಋಜುಭಾವ, ಮೃದುತ್ವ, ಶಮ, ದಮ, ಸರ್ವಭೂತಗಳಲ್ಲಿಯೂ ವಿರೋಧವಿಲ್ಲದಿರುವದು, ಯೋಗ, ಆರ್ಯಧರ್ಮ, ನೈಷ್ಠುರ್ಯವಿಲ್ಲದಿರುವದು, ತುಷ್ಟಿ-ಇವು ಎಲ್ಲಾ ಆಶ್ರಮಗಳಲ್ಲಿಯೂ ಸಮಾನವಾಗಿ ಅನುಷ್ಠಾನಮಾಡತಕ್ಕವು. ಇವುಗಳನ್ನು ಆಚರಿಸುವದರಿಂದ ಸರ್ವಾತ್ಮನನ್ನು ಸೇರುತ್ತಾನೆ.'

ಇಲ್ಲಿ ಆತ್ಮಜ್ಞಾನವನ್ನೂ ಯೋಗವನ್ನೂ ಪ್ರಾಯಶ್ಚಿತ್ತಪ್ರಕರಣದಲ್ಲಿ ಹೇಳಿರುತ್ತದೆಯಾದರೂ ಸರ್ವಾತ್ಮನಾದ ಭಗವಂತನನ್ನು ಸೇರುವದಕ್ಕೆ ಇವೇ ಸಾಧನವೆಂದಿದೆ. ಬೋಧಾಯನಸೂತ್ರದಲ್ಲಿರುವಂತೆ ಇಲ್ಲಿ ಅರ್ಚನಾದಿಗಳನ್ನು ಹೇಳಿಲ್ಲವಾದ್ದರಿಂದ ಇವನ್ನು ಭಾಗವತಮತಕ್ಕೆ ಅಸಾಧಾರಣವೆಂದು ಭಾವಿಸುವದಕ್ಕೆ ಬರುವದಿಲ್ಲವಾದರೂ ಪಾಂಚರಾತ್ರರು ಒಪ್ಪಿರುವ ಐದುಬಗೆಯ ಸಾಧನಗಳ ಪೈಕಿ `ಯೋಗ'ವೆಂಬ ಐದನೆಯ ಸಾಧನದಲ್ಲಿ ಇವು ಅಡಕವಾಗಿವೆ ಎಂದು ಭಾವಿಸಬಹುದು. 'ಭಕ್ತಿ'– ಎಂಬ ಹೆಸರನ್ನು ಇಲ್ಲಿ ಎತ್ತಿ ಉಚ್ಚರಿಸದೆ ಇದ್ದರೂ "**ಯೇಽನುತಿಷ್ಠನ್ತಿ ತೇಽಮೃತಾಃ**" (೧-೮-೨೨-೪)ಎಂಬ ಸೂತ್ರಭಾಗದಲ್ಲಿಯೂ "**ಸಾರ್ವಗಾಮೀ ಭವತಿ**"ಎಂಬ (೧-೮-೨೩-೬)ಸೂತ್ರಭಾಗದಲ್ಲಿಯೂ ಇವು ಅಮೃತತ್ವಕ್ಕೆ ಅಥವಾ ಭಗವತ್ಪ್ರಾಪ್ತಿಗೆ ಸಾಧನವೆಂದು ಹೇಳಿರುವದರಿಂದ ಇವನ್ನು ಇಲ್ಲಿ ಉದಾಹರಿಸಿರುತ್ತದೆ.

# ಶ್ಲೋಕರೂಪದಲ್ಲಿರುವ ಸ್ಮೃತಿಗಳು

೩೩. ಸೂತ್ರರೂಪದಲ್ಲಿರುವ ಸ್ಮೃತಿಗಳಲ್ಲದೆ ಶ್ಲೋಕರೂಪದಲ್ಲಿ ರಚಿತವಾಗಿರುವ ಹಲವು ಸ್ಮೃತಿಗಳಿವೆ. ಅವುಗಳೊಳಗೆ ಮನು, ಯಾಜ್ಞವಲ್ಕ್ಯ- ಇವನ್ನು ಈ ಖಂಡದ ಕೊನೆಯಲ್ಲಿ ಉದಾಹರಿಸುವೆವು. ಮೊದಲು ಪುಣ್ಯಪತ್ತನದ (ಪೂನಾ) ಆನಂದಾಶ್ರಮ ಮುದ್ರಣಾಲಯದಲ್ಲಿ ಅಚ್ಚಾಗಿರುವ ಸ್ಮೃತಿಸಮುಚ್ಚಯಗ್ರಂಥದ ಕೆಲವು ಸ್ಮೃತಿಗಳಲ್ಲಿರುವ ಕೆಲವು ವಚನಗಳನ್ನು ಇಲ್ಲಿ ಉದಾಹರಿಸುವೆವು. ಸ್ಮೃತಿಗಳಲ್ಲಿ ಬಹುಮಟ್ಟಿಗೆ ಪ್ರಾಯಶ್ಚಿತ್ತಾದಿವಿಚಾರಗಳೇ ಇವೆ. ಅಧ್ಯಾತ್ಮಸಾಧನಕ್ಕೆ ಸಂಬಂಧಪಟ್ಟ ವಾಕ್ಯಗಳನ್ನು ಮಾತ್ರ ಇಲ್ಲಿ ಉದಾಹರಿಸಿದೆ :

**(1) ಅತ್ರಿಸ್ಮೃತಿ**-(ಪುಟ ೩೪)

**ಆತ್ಮಾ ಧ್ಯಾತಾ ಮನೋ ಧ್ಯಾನಂ ಧ್ಯೇಯಃ ಸೂಕ್ಷ್ಮೋ ಮಹೇಶ್ವರಃ ।**
**ಯತ್ ಪರಾಪರಮೈಶ್ವರ್ಯಮೇತದ್ ಧ್ಯಾನಪ್ರಯೋಜನಮ್ ॥೨॥**

(೨) ಆತ್ಮನೇ ಧ್ಯಾತೃ, ಮನಸ್ಸೇ ಧ್ಯಾನಸಾಧನವು, ಸೂಕ್ಷ್ಮನಾದ ಮಹೇಶ್ವರನೇ ಧ್ಯೇಯನು, ಪರಾಪರೈಶ್ವರ್ಯವೇ ಧ್ಯಾನದ ಪ್ರಯೋಜನವು.

**ವಿದಿತ್ವಾ ಸರ್ವಸೂಕ್ಷ್ಮಾಣಿ ಷಡಙ್ಗಂ ಚ ಮಹೇಶ್ವರಮ್ ।**
**ಪ್ರಧಾನಗುಣತತ್ತ್ವಜ್ಞಃ ಪರಂ ಬ್ರಹ್ಮಾಧಿಗಚ್ಛತಿ ॥೩॥**

(೩) ಸರ್ವಸೂಕ್ಷ್ಮಗಳನ್ನೂ ಅರಿತುಕೊಂಡು ಷಡಂಗಗಳನ್ನು (ಅಥವಾ ಷಡಂಗಗಳುಳ್ಳ)ಮಹೇಶ್ವರನನ್ನೂ ಪ್ರಧಾನಗುಣಗಳ ತತ್ತ್ವವನ್ನೂ ಅರಿತು ಕೊಂಡಿರುವವನು ಪರಬ್ರಹ್ಮವನ್ನು ಸೇರುತ್ತಾನೆ.

**ವಿದ್ವೇಷಾದಪಿ ಗೋವಿನ್ದಂ ಧಮಘೋಷಾತ್ಮಜಃ ಸ್ಮರನ್ ।**
**ಶಿಶುಪಾಲೋ ಗತಃ ಸ್ವರ್ಗಂ ಕಿಂ ಪುನಸ್ತತ್ಪರಾಯಣಃ ॥೪॥**

(೪) ದಮಘೋಷನ ಮಗನಾದ ಶಿಶುಪಾಲನು ದ್ವೇಷದಿಂದ ಗೋವಿಂದನನ್ನು ಸ್ಮರಿಸಿಕೊಂಡಿದ್ದರಿಂದಲೇ ಸ್ವರ್ಗವನ್ನು ಪಡೆದನು. ತತ್ಪರಾಯಣನಾಗಿ ಸ್ಮರಣೆಮಾಡಿದವನಿಗೆ ಆಗುವ ಸದ್ಗತಿಯನ್ನು ಹೇಳುವದೇನಿದೆ ?

**(2) ದಕ್ಷಸ್ಮೃತಿ** -(ಪುಟ ೮೨ )

**ಪ್ರಾಣಾಯಾಮಸ್ತಥಾ ಧ್ಯಾನಂ ಪ್ರತ್ಯಾಹಾರೋಽಥ ಧಾರಣಾ।**
**ತರ್ಕಶ್ಚೈವ ಸಮಾಧಿಶ್ಚ ಷಡಙ್ಗೋ ಯೋಗ ಉಚ್ಯತೇ ॥೩॥**

[ಇದೇ ಅರ್ಥದ ಶ್ಲೋಕವು (ಪುಟ ೩೪)ಅತ್ರಿಸ್ಮೃತಿಯಲ್ಲಿದೆ; ಯೋಗಕ್ಕೆ ಇಲ್ಲಿ ಅದೇ ಅಂಗಗಳನ್ನು ಹೇಳಿದೆ.]

**ಅತಃ ಪರಂ ಪ್ರವಕ್ಷ್ಯಾಮಿ ಯೋಗಸ್ಯ ವಿಧಿಮುತ್ತಮಮ್ ।**
**ಲೋಕೋ ವಶೀಕೃತೋ ಯೈಸ್ತು ಯೈರಾತ್ಮಾ ಚ ವಶೀಕೃತಃ ॥೭-೧॥**

[ಇಲ್ಲಿ ಯೋಗದಿಂದ ಜನರನ್ನು ವಶಗೊಳಿಸಿಕೊಳ್ಳಬಹುದು ಎಂದು ಹೇಳಿರುವದಲ್ಲದೆ, ಪರಮಾತ್ಮನನ್ನೂ ವಶಗೊಳಿಸಿಕೊಳ್ಳಬಹುದೆಂದಿದೆ.]

**ನಾರಣ್ಯ ಸೇವನಾದ್ಯೋಗೋ ನಾನೇಕಗ್ರನ್ಥಚಿನ್ತನಾತ್ ।**
**ವ್ರತೈರ್ಯಜ್ಞೈಸ್ತಪೋಭಿರ್ವಾ ನ ಯೋಗಃ ಕಸ್ಯಚಿದ್ಭವೇತ್॥**
**ನ ಚ ಪದ್ಮಾಸನಾದ್ಯೋಗೋ ನ ನಾಸಾಗ್ರನಿರೀಕ್ಷಣಾತ್।**
**ನ ಚ ಶಾಸ್ತ್ರಾತಿರಿಕ್ತೇನ ಶೌಚೇನ ಭವತಿ ಕ್ವಚಿತ್ ॥**

"ಅರಣ್ಯವಾಸದಿಂದಲಾಗಲಿ, ಗ್ರಂಥಚಿಂತನೆಯಿಂದಲಾಗಲಿ, ವ್ರತಯಜ್ಞ ತಪಸ್ಸುಗಳಿಂದಾಗಲಿ, ಪದ್ಮಾಸನ, ನಾಸಾಗ್ರನಿರೀಕ್ಷಣ, ಶಾಸ್ತ್ರಾತಿರಿಕ್ತಶೌಚ - ಇವುಗಳಿಂದಲಾಗಲಿ ಯೋಗವೆನಿಸಲಾರದು"(೭-೪,೫,೬).

**ಅಭಿಯೋಗಾತ್ ತಥಾಽಭ್ಯಾಸಾತ್ತಸ್ಮಿನ್ನೇವ ಸುನಿಶ್ಚಯಾತ್।**
**ಪುನಃ ಪುನಶ್ಚ ನಿರ್ವೇದಾತ್ ಯೋಗಃ ಸಿಧ್ಯತಿ ನಾನ್ಯಥಾ ॥೭॥**
**ಯಶ್ಚಾತ್ಮಮಿಥುನೋ ನಿತ್ಯಮಾತ್ಮಕ್ರೀಡಸ್ತಥೈವ ಚ ।**
**ಆತ್ಮಾನನ್ದಶ್ಚ ಸತತಮಾತ್ಮನ್ಯೇವ ಸಮಾಹಿತಃ ॥೮॥**
**ಅಸ್ಮಿನ್ನೇವ ಸುತೃಪ್ತಶ್ಚ ಸಂತುಷ್ಟೋ ನಾನ್ಯಮಾನಸಃ ।**
**ಆತ್ಮನ್ಯೇವ ಸುವೃತ್ತಸ್ಯ ಯೋಗೋ ಭವತಿ ನಾನ್ಯಥಾ ॥೯॥**
**ಸ್ವಪ್ನೇಽಪಿ ಯೋಽಭಿಯುಕ್ತಶ್ಚ ಜಾಗ್ರಚ್ಚೈವ ವಿಶೇಷತಃ ।**
**ಈದೃಕ್ಚೇಷ್ಟಃ ಸ್ಮೃತಃ ಶ್ರೇಷ್ಠೋ ವರಿಷ್ಠೋ ಬ್ರಹ್ಮವಾದಿನಾಮ್ ॥೧೦॥**
**ಯಸ್ತ್ವಾತ್ಮವ್ಯತಿರೇಕೇಣ ದ್ವಿತೀಯಂ ನೈವ ಪಶ್ಯತಿ।**
**ಬ್ರಹ್ಮಭೂತಃ ಸ ವಿಜ್ಞೇಯೋ ದಕ್ಷಪಕ್ಷ ಉದಾಹೃತಃ ॥೧೧॥**
**ವೃತ್ತಿಹೀನಂ ಮನಃ ಕೃತ್ವಾ ಕ್ಷೇತ್ರಜ್ಞಂ ಪರಮಾತ್ಮನಿ ।**
**ಏಕೀಕೃತ್ಯ ವಿಮುಚ್ಯೇತ ಯೋಗೋಽಯಂ ಮುಖ್ಯ ಉಚ್ಯತೇ॥**

[ಆತ್ಮಪರಮಾತ್ಮರ ಏಕೀಭಾವವಾಗುವಂತೆ ಮನೋವೃತ್ತಿಯನ್ನು ನಿರೋಧ ಮಾಡುವದೇ ಯೋಗವು - ಎಂದಿದೆ.]

**ವೈಣವೇನ ತ್ರಿದಣ್ಡೇನ ನ ತ್ರಿದಣ್ಡೀತಿ ಕಥ್ಯತೇ ।**
**ಅಧ್ಯಾತ್ಮದಣ್ಡಯುಕ್ತೋ ಯಃ ಸ ತ್ರಿದಣ್ಡೀತಿ ಕಥ್ಯತೇ ॥೨೯॥**
**ವಾಗ್ದಣ್ಡೋಽಥ ಮನೋದಣ್ಡಃ ಕರ್ಮದಣ್ಡಶ್ಚ ತೇ ತ್ರಯಃ ।**
**ಯಸ್ಯೈ ತೇ ತು ತ್ರಯೋ ದಣ್ಡಾಃ ತ್ರಿದಣ್ಡೀತಿ ಸ ಕಥ್ಯತೇ ॥೩೦॥**

[ತ್ರಿದಂಡಸಂನ್ಯಾಸವನ್ನು ಒಪ್ಪಿ ಅದರ ಸಂಕೇತಾರ್ಥವು ತ್ರಿಕರಣಸಂಯಮವೇ ಎಂದಿದೆ.]

**ಅದ್ವೈತಂ ಚ ತಥಾ ದ್ವೈತಂ ದ್ವೈತಾದ್ವೈತಂ ತಥೈವ ಚ ।**
**ನ ದ್ವೈತಂ ನಾಪಿ ಚಾದ್ವೈತಮಿತ್ಯೇತತ್ ಪಾರಮಾರ್ಥಿಕಮ್ ॥೪೬॥**

[ಈ ಸ್ಮೃತಿಯಲ್ಲಿರುವ ಪರಮಾರ್ಥಯೋಗವೂ ಅತ್ರಿಸ್ಮೃತಿಯಲ್ಲಿರುವ ಯೋಗವೂ ಒಂದೇ ಎಂದಾದರೆ ಅಲ್ಲಿ ಹೇಳಿರುವ ಗೋವಿಂದಭಕ್ತರೂ ಅದ್ವೈತಿಗಳೆಂದೇ ಆಗುತ್ತದೆ. ಪರಮಾರ್ಥವು ದ್ವೈತಾದ್ವೈತಗಳನ್ನು ಮೀರಿರುತ್ತದೆ ಎಂಬುದು ಅದ್ವೈತಕ್ಕೇ ಹೊಂದುತ್ತದೆ.]

**(3) ಲಘ್ವಾಶ್ವಲಾಯನಸ್ಮೃತಿ** -(ಪುಟ ೧೪೨-೧೪೩)

**ಅತಃ ಪ್ರಾತಃ ಸಮುತ್ಥಾಯ ಚಿನ್ತಯೇದಾತ್ಮನೋ ಹಿತಮ್ ।**
**ನಿರ್ಗುಣಂ ನಿರಹಙ್ಕಾರಂ ನಾರಾಯಣಮನಾಮಯಮ್ ।**
**ಸಗುಣಂ ಚ ಶ್ರಿಯಾ ಯುಕ್ತಂ ದೇವಂ ದೇವೀಂ ಸರಸ್ವತೀಮ್ ॥**

[ಇಲ್ಲಿ ಬೆಳಗ್ಗೆ ಎದ್ದು ಸಗುಣನೂ ನಿರ್ಗುಣನೂ ಆದ ನಾರಾಯಣನನ್ನು ಸ್ಮರಣೆ ಮಾಡಬೇಕೆಂದು ವಿಧಿಸಿದೆ.]

**ಸಮಾಹಿತಮನಾ ಭೂತ್ವಾ ಬ್ರಾಹ್ಮಣಃ ಸರ್ವದಾಪಿ ಹಿ ।**
**ಸ್ಮರೇನ್ನಾರಾಯಣಂ ಶುದ್ಧೋ ಧಾರಯೇದಮ್ಬರಂ ಶುಚಿ ॥೨೭॥**

[ಇದು ಸ್ನಾನದಿಂದ ಶುದ್ಧನಾದಮೇಲೂ ನಾರಾಯಣಸ್ಮರಣೆಯಿಂದಲೇ ಪರಿಶುದ್ಧನಾಗುವನೆಂದಿದೆ.]

(4) ಪ್ರಜಾಪತಿಸ್ಮೃತಿ:– (ಪುಟ೯೮)

**ಅತಿಥಿಂ ಶ್ರಾದ್ಧರಕ್ಷಾರ್ಥಮನ್ತೇ ವಿಷ್ಣುಸ್ವರೂಪಿಣಮ್-**
**ನಿವೇಶಯೇದ್ವಿಷ್ಣುಸಮಂ ಬ್ರಾಹ್ಮಣಂ ವೇದಪಾರಗಮ್ ॥೧೯೫॥**
**ಸಾಕ್ಷಾದ್ವಿಷ್ಣುರ್ಧರ್ಮರಾಜಃ ಶ್ರಾದ್ಧದೇವಶ್ಚ ಕಥ್ಯತೇ**
**ವಿಶ್ವೇದೇವಾಃ ಪಿತೃತಿಥಿಃ ಸರ್ವಂ ವಿಷ್ಣುರಿತಿ ಸ್ಮೃತಮ್ ॥೧೯೭॥**

ಇದು ಶ್ರಾದ್ಧಸಂಬಂಧದಿಂದ ಬಂದಿರುವ ವಾಕ್ಯ. ದೈವಪಿತ್ರ್ಯಕರ್ಮಗಳಲ್ಲಿ ವಿಷ್ಣುವೇ ಆರಾಧ್ಯನೆಂದು ನಾರಾಯಣೀಯದಲ್ಲಿ ನಾರಾಯಣಋಷಿಯು ಹೇಳಿರುವದಕ್ಕೆ ಇದು ಅನುಗುಣವಾಗಿದೆ. ಅಲ್ಲಿ ವಾಕ್ಯವು ಹೀಗಿದೆಃ

**ತಾಂ ಯೋನಿಮಾವಯೋರ್ವಿದ್ಧಿ ಯೋಽಸೌ ಸದಸದಾತ್ಮಕಃ ।**
**ಆವಾಭ್ಯಾಂ ಪೂಜ್ಯತ್ಯೇಽಸೌ ಹಿ ದೈವೇ ಪಿತ್ರ್ಯೇ ಚ ಕಲ್ಪ್ಯತೇ ॥**
**ನಾಸ್ತಿ ತಸ್ಮಾತ್ ಪರೋಽನ್ಯೋ ಹಿ ಪಿತಾ ದೇವೋಽಥವಾ ದ್ವಿಜ ।**
**ಆತ್ಮಾ ಹಿ ನಃ ಸ ವಿಜ್ಞೇಯಸ್ತತಸ್ತಂ ಪೂಜಯಾವಹೇ ॥**

ಮೋ. ಧ. ೩೩೪-೩೨,೩೩

'ಎಲೈ ದ್ವಿಜನೆ ಆ ನಾರಾಯಣನೇ ನಮ್ಮಿಬ್ಬರಿಗೂ ಕಾರಣನೆಂದು ತಿಳಿ. ಆತನೇ ಸದಸದ್ರೂಪನಾಗಿರುವನು, ಅವನನ್ನೇ ದೈವಕರ್ಮದಲ್ಲಿಯೂ ಪಿತೃಕರ್ಮದಲ್ಲಿಯೂ ನಾವು ಭಾವಿಸಿಕೊಳ್ಳುತ್ತೇವೆ. ಆತನಿಗಿಂತ ಹೆಚ್ಚಿನ ಪಿತೃವಾಗಲಿ ದೇವನಾಗಲಿ ಮತ್ತೊಬ್ಬನಿಲ್ಲ. ನಮಗೆ ಆತನು ಆತ್ಮನೆಂದೇ ತಿಳಿಯಬೇಕು; ಆದ್ದರಿಂದ ಆತನನ್ನು ಪೂಜಿಸುತ್ತಿರುವೆವು' ಎಂದು ಶ್ಲೋಕಾರ್ಥ.

ಶಾಂಡಿಲ್ಯಸಂಹಿತೆಯಲ್ಲಿ ಕರ್ಮವನ್ನು ವಿಷ್ಣುಸ್ಮರಣಪೂರ್ವಕವಾಗಿ ಮಾಡಿದರೆ ಭಗವತ್ಪ್ರೀತಿಯಾಗುವದೆಂದು ಹೇಳಿದೆಃ

**ಮನ್ತ್ರಾಶ್ಚ ಬ್ರಾಹ್ಮಣಾಶ್ಚಾಪಿ ಋತ್ವಿಗಾಹುತಿದೇವತಾಃ ।**
**ಸರ್ವೇ ತದಾತ್ಮಕಂ ಜ್ಞಾತ್ವಾ ಕೃತಂ ಯತ್ತದ್ಧಿ ವೈಷ್ಣವಮ್ ॥**
**ಏವಂ ಹಿ ಕ್ರಿಯಮಾಣಾನಾಂ ಬ್ರಾಹ್ಮಣಾನಾಂ ಮಹಾತ್ಮನಾಮ್ ।**
**ಭಗವಾನ್ ಪ್ರೀಯತೇ ವಿಷ್ಣುಃ ಸರ್ವಂ ವಿಶ್ವಂ ತದಾತ್ಮಕಮ್ ॥**

ಶಾ.ಸಂ. ೧.–೨–೧೩,೧೪

'ಮಂತ್ರಗಳೂ, ಬ್ರಾಹ್ಮಣಗಳೂ, ಋತ್ವಿಜರೂ, ಆಹುತಿಗಳೂ, ದೇವತೆಗಳೂ– ಎಲ್ಲವೂ ವಿಷ್ಣ್ವಾತ್ಮಕವೆಂದೇ ತಿಳಿದುಕೊಂಡು ಮಾಡಿದರೆ ಅದು ವೈಷ್ಣವಕರ್ಮವಾಗುವುದು. ಹೀಗೆ ಮಾಡುವದಾದರೆ ಭಗವಂತನಾದ ವಿಷ್ಣುವು ಪ್ರೀತನಾಗುವನು, ಏಕೆಂದರೆ ವಿಶ್ವವೆಲ್ಲವೂ ವಿಷ್ಣ್ವಾತ್ಮಕವಾಗಿರುತ್ತದೆ.

**(5) ಶಙ್ಖಸ್ಮೃತಿ :-** (ಪು. ೩೭೯)

**ಹೃದಿಸ್ಥಾ ದೇವತಾ ಸರ್ವಾಃ ಹೃದಿ ಪ್ರಾಣಾಃ ಪ್ರತಿಷ್ಠಿತಾಃ ।**
**ಹೃದಿ ಜ್ಯೋತೀಂಷಿ ಸೂರ್ಯಶ್ಚ ಹೃದಿ ಸರ್ವಂ ಪ್ರತಿಷ್ಠಿತಮ್ ॥೧೬॥**

ಸ್ವದೇಹಮರಣಿಂ ಕೃತ್ವಾ ಪ್ರಣವಂ ಚೋತ್ತರಾರಣಿಮ್ ।
ಧ್ಯಾನನಿರ್ಮನ್ಥನಾಭ್ಯಾಸಾದ್ ವಿಷ್ಣುಂ ಪಶ್ಯೇತ್ ಹೃದಿ ಸ್ಥಿತಮ್ ॥
ಹೃದ್ಯರ್ಕಶ್ಚನ್ದ್ರಮಾಃ ಸೂರ್ಯಃ ಸೋಮೋ ಮಧ್ಯೇ ಹುತಾಶನಃ ।
ತೇಜೋಮಧ್ಯೇ ಸ್ಥಿತಂ ಸತ್ತ್ವಂ ಸತ್ತ್ವಮಧ್ಯೇ ಸ್ಥಿತೋಽಚ್ಯುತಃ ॥
ವಾಸುದೇವಸ್ತಮೋಽನ್ಧಾನಾಂ ಪ್ರತ್ಯಕ್ಷೋ ನೈವ ಜಾಯತೇ ।
ಅಜ್ಞಾನಪಟಸಂವೀತೈರಿನ್ದ್ರಿಯೈರ್ವಿಷಯೇಪ್ಸುಭಿಃ ॥೨೧॥
ಏಷ ವೈ ಪುರುಷೋ ವಿಷ್ಣುರ್ವ್ಯಕ್ತಾವ್ಯಕ್ತಃ ಸನಾತನಃ ।
ಏಷ ಧಾತಾ ವಿಧಾತಾ ಚ ಪುರಾಣೋ ನಿಷ್ಕಲಃ ಶಿವಃ ॥೨೨॥

[ಸಂನ್ಯಾಸಿಗೆ ಯೋಗವನ್ನು ಹೇಳುವ ಪ್ರಸಂಗದಿಂದ ಹೃದಯದಲ್ಲಿ ವಿಷ್ಣುವನ್ನು ಕಂಡುಕೊಳ್ಳುವ ಪ್ರಕಾರವನ್ನು ಇಲ್ಲಿ ಬೋಧಿಸಿದೆ.]

**(6) ಯಾಜ್ಞವಲ್ಕ್ಯಸ್ಮೃತಿ[1] –**

ಪ್ರಾಯಶ್ಚಿತ್ತಾಧಾನ, ಯತಿಧರ್ಮನಿರೂಪಣ (ಪು.೮೬೩)

ಯೋಗಶಾಸ್ತ್ರಂ ಚ ಮತ್ಪ್ರೋಕ್ತಂ ಜ್ಞೇಯಂ ಯೋಗಮಭೀಪ್ಸತಾ ।
ಅನನ್ಯವಿಷಯಂ ಕೃತ್ವಾ ಮನೋಬುದ್ಧಿಸ್ಮೃತೀನ್ದ್ರಿಯಮ್ ।
ಧ್ಯೇಯ ಆತ್ಮಾ ಸ್ಥಿತೋ ಯೋಽಸೌ ಹೃದಯೇ ದೀಪವತ್ ಪ್ರಭುಃ ॥
ಯಥಾವಿಧಾನೇನ ಪಠನ್ ಸಾಮಗಾನಮವಿಚ್ಯುತಮ್ ।
ಸಾವಧಾನಸ್ತದಭ್ಯಾಸಾತ್ ಪರಂ ಬ್ರಹ್ಮಾಧಿಗಚ್ಛತಿ ॥೧೧೨॥

[ಯೋಗಾಭ್ಯಾಸವೇ ಅಲ್ಲದೆ ಸಾಮಗಾನವೂ ಬ್ರಹ್ಮಪ್ರಾಪ್ತಿಗೆ ಸಾಧನ ಎಂದು ಇಲ್ಲಿ ಹೇಳಿದೆ.]

ಆಕಾಶಮೇಕಂ ಹಿ ಯಥಾ ಘಟಾದಿಷು ಪೃಥಗ್ ಭವೇತ್ ।
ತಥಾऽऽತ್ಮೈಕೋ ಹ್ಯನೇಕಶ್ಚ ಜಲಾಧಾರೇಷ್ವಿವಾಂಶುಮಾನ್ ॥೧೪೪॥

[ಇಲ್ಲಿ ಆತ್ಮನು ಒಬ್ಬನೇ ಆದರೂ ಉಪಾಧಿಗಳಿಂದ ಭಿನ್ನವಾಗಿರುವಂತೆ ತೋರುತ್ತಾನೆ– ಎಂದಿದೆ.]

(೫೬ರಿಂದ ೧೫೯ರವರೆಗೆ ಚಿತ್ತಶುದ್ಧಿಯ ಉಪಾಯಗಳನ್ನು ಹೇಳಿದೆ.)

---

1. ಇದು ಸ್ಮೃತಿಸಮುಚ್ಚಯದಲ್ಲಿಲ್ಲ. ಚೌಖಂಬಾಸಂಸ್ಕೃತಮಾಲೆ ಎಂಬ ಗ್ರಂಥಮಾಲೆಯಲ್ಲಿ ವಾರಾಣಸಿಯಲ್ಲಿ ಅಚ್ಚಾದ ಪುಸ್ತಕದಿಂದ ಶ್ಲೋಕಗಳನ್ನು ಆರಿಸಿದೇವೆ.

**(7) ಮನುಸ್ಮೃತಿ :–**

ಇದರಲ್ಲಿ ಯತಿಧರ್ಮಗಳನ್ನು ತಿಳಿಸುವ ಸಂದರ್ಭಗಳಲ್ಲಿ ಆರನೆಯ ಅಧ್ಯಾಯದಲ್ಲಿ ಈ ಶ್ಲೋಕಗಳಿವೆ.

**ಇಂದ್ರಿಯಾಣಾಂ ನಿರೋಧೇನ ರಾಗದ್ವೇಷಕ್ಷಯೇಣ ಚ ।**
**ಅಹಿಂಸಯಾ ಚ ಭೂತಾನಾಮಮೃತತ್ವಾಯ ಕಲ್ಪತೇ ॥೬೦॥**

[ಇಂದ್ರಿಯಗಳನ್ನು ಹಿಡಿದಿಟ್ಟುಕೊಳ್ಳುವದು, ರಾಗದ್ವೇಷಗಳನ್ನು ನೀಗುವದು, ಅಹಿಂಸೆ– ಇವುಗಳಿಂದ ಮುಕ್ತಿಗೆ ಯೋಗ್ಯತೆ ಬರುತ್ತದೆ.]

**ಪ್ರಾಣಾಯಾಮೈರ್ದಹೇದ್ದೋಷಾನ್ ಧಾರಣಾಭಿಶ್ಚ ಕಿಲ್ಬಿಷಮ್ ।**
**ಪ್ರತ್ಯಾಹಾರೇಣ ಸಂಸರ್ಗಾನ್ ಧ್ಯಾನೇನಾನೀಶ್ವರಾನ್ ಗುಣಾನ್ ॥**

[ಪ್ರಾಣಾಯಾಮದಿಂದ ರಾಗಾದಿದೋಷಗಳು ಹೋಗುವವು. ದೇಶವಿಶೇಷದಲ್ಲಿ ಚಿತ್ತಧಾರಣೆಮಾಡುವದರಿಂದ ಪಾಪಗಳನ್ನೂ ಇಂದ್ರಿಯಗಳನ್ನು ಹಿಂದಕ್ಕೆಳೆದುಕೊಳ್ಳುವದರಿಂದ ವಿಷಯಸಂಪರ್ಕವನ್ನೂ ಪರಮಾತ್ಮಧ್ಯಾನದಿಂದ ಈಶ್ವರತ್ವಕ್ಕೆ ಅಡ್ಡಿಯಾಗಿರುವ ಕ್ರೋಧಾದಿಗಳನ್ನೂ ತೊಲಗಿಸಬೇಕು.]

**ಸಮ್ಯಗ್ದರ್ಶನಸಂಪನ್ನಃ ಕರ್ಮಭಿರ್ನ ನಿಬಧ್ಯತೇ**
**ದರ್ಶನೇನ ವಿಹೀನಸ್ತು ಸಂಸಾರಂ ಪ್ರತಿಪದ್ಯತೇ ॥೭೪॥**

[ಆತ್ಮಾಜ್ಞಾನದಿಂದ ಬಂಧ, ಜ್ಞಾನದಿಂದ ಮುಕ್ತಿ.]

**ಅಹಿಂಸಯೇನ್ದ್ರಿಯಾಸಙ್ಗೈರ್ವೈದಿಕೈಶ್ಚೈವ ಕರ್ಮಭಿಃ**
**ತಪಸಶ್ಚರಣೈಶ್ಚೋಗ್ರೈಃ ಸಾಧಯನ್ತೀಹ ತತ್ಪದಮ್ ॥೭೫॥**

[ಅಹಿಂಸೆ, ವಿಷಯಾಸಕ್ತಿತ್ಯಾಗ, ವೈದಿಕಕರ್ಮಗಳು, ತಪಸ್ಸು– ಇವುಗಳು ಮೋಕ್ಷಕ್ಕೆ ಜ್ಞಾನಸಹಕಾರಿಸಾಧನಗಳು.]

**ಪ್ರಿಯೇಷು ಸ್ವೇಷು ಸುಕೃತಮಪ್ರಿಯೇಷು ಚ ದುಷ್ಕೃತಮ್**
**ವಿಸೃಜ್ಯ ಧ್ಯಾನಯೋಗೇನ ಬ್ರಹ್ಮಾಭ್ಯೇತಿ ಸನಾತನಮ್ ॥೭೯॥**

[ಜ್ಞಾನಿಯು ಧ್ಯಾನಯೋಗದಿಂದ ಬ್ರಹ್ಮದಲ್ಲಿ ಸೇರಿಹೋಗುವನು; ಅವನ ಹಿಂದಿನ ಪುಣ್ಯವು ಪ್ರಿಯರಾದವರಲ್ಲಿಯೂ ಪಾಪವು ಅಪ್ರಿಯರಾದವರಲ್ಲಿಯೂ ಸೇರಿಕೊಳ್ಳುವದು.]

**ಅನೇನ ವಿಧಿನಾ ಸರ್ವಾಂಸ್ತ್ಯಕ್ತ್ವಾ ಸಙ್ಗಾನ್ ಶನೈಃ ಶನೈಃ ।**
**ಸರ್ವದ್ವನ್ದ್ವವಿನಿರ್ಮುಕ್ತೋ ಬ್ರಹ್ಮಣ್ಯೇವಾವತಿಷ್ಠತೇ ॥೮೧॥**

ಧ್ಯಾನಿಕಂ ಸರ್ವಮೇವೈತದ್ ಯದೇತದಭಿಶಬ್ದಿತಮ್ ।
ನ ಹ್ಯನಧ್ಯಾತ್ಮವಿತ್ ಕಶ್ಚಿತ್ ಕ್ರಿಯಾಫಲಮುಪಾಶ್ನುತೇ ||೮೨||

[ಭಾರ್ಯಾಪುತ್ರಾದಿಗಳಲ್ಲಿ ಸಂಗವನ್ನು ಬಿಟ್ಟು ಮಾನಾಪಮಾನಾದಿದ್ವಂದ್ವಗಳಿಂದ ಮುಕ್ತನಾಗಿ ಧ್ಯಾನಯೋಗಕೃತವಾದ ಪರಮಾತ್ಮಜ್ಞಾನದಿಂದಲೇ ಮುಕ್ತಿಯನ್ನು ಪಡೆದುಕೊಳ್ಳುತ್ತಾನೆ.]

ಧೃತಿಃ ಕ್ಷಮಾ ದಮೋಽಸ್ತೇಯಂ ಶೌಚಮಿನ್ದ್ರಿಯನಿಗ್ರಹಃ ।
ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮಲಕ್ಷಣಮ್ ॥
ದಶ ಲಕ್ಷಣಾನಿ ಧರ್ಮಸ್ಯ ಯೇ ವಿಪ್ರಾಃ ಸಮಧೀಯತೇ ।
ಅಧೀತ್ಯ ಚಾನುವರ್ತನ್ತೇ ತೇ ಯಾನ್ತಿ ಪರಮಾಂ ಗತಿಮ್ ॥
ದಶಲಕ್ಷಣಕಂ ಧರ್ಮಮನುತಿಷ್ಠನ್ ಸಮಾಹಿತಃ ।
ವೇದಾನ್ತಂ ವಿಧಿವಚ್ಛ್ರುತ್ವಾ ಸಂನ್ಯಸೇದನೃಣೋ ದ್ವಿಜಃ ॥
ಸಂನ್ಯಸ್ಯ ಸರ್ವಕರ್ಮಾಣಿ ಕರ್ಮದೋಷಾನಪಾನುದನ್ ।
ನಿಯತೋ ವೇದಮಭ್ಯಸ್ಯ ಪುತ್ರೈಶ್ವರ್ಯೇ ಸುಖಂ ವಸೇತ್ ॥ ೬–೯೨ ರಿಂದ ೯೫

[ನಾಲ್ಕು ಆಶ್ರಮದವರಿಗೂ ದಶಧರ್ಮಗಳು ಇರಬೇಕು. ಸಂನ್ಯಾಸಿಯಾಗುವವನು ಇವನ್ನು ಅನುಷ್ಠಾನಮಾಡಿ ವೇದಾಂತವನ್ನು ಅಭ್ಯಾಸಮಾಡಿರಬೇಕು.]

ಹನ್ನೆರಡನೆಯ ಅಧ್ಯಾಯದಲ್ಲಿ :–

ವೇದಾಭ್ಯಾಸಸ್ತಪೋ ಜ್ಞಾನಮಿನ್ದ್ರಿಯಾಣಾಂ ಚ ಸಂಯಮಃ ।
ಅಹಿಂಸಾ ಗುರುಸೇವಾ ಚ ನಿಃಶ್ರೇಯಸಕರಂ ಪರಮ್ ||೮೩||
ಸರ್ವೇಷಾಮಪಿ ಚೈತೇಷಾಂ ಶುಭಾನಾಮಿಹ ಕರ್ಮಣಾಮ್ ।
ಕಿಞ್ಚಿಚ್ಛ್ರೇಯಸ್ಕರತರಂ ಕರ್ಮೋಕ್ತಂ ಪುರುಷಂ ಪ್ರತಿ ||೮೪||
ಸರ್ವೇಷಾಮಪಿ ಚೈತೇಷಾಮಾತ್ಮಜ್ಞಾನಂ ಪರಂ ಸ್ಮೃತಮ್ ।
ತದ್ಧ್ಯಗ್ರ್ಯಂ ಸರ್ವವಿದ್ಯಾನಾಂ ಪ್ರಾಪ್ಯತೇ ಹ್ಯಮೃತಂ ತತಃ ||೮೫||

[ಅಹಿಂಸಾದಿಗಳು ಮೋಕ್ಷಸಾಧನಗಳು; ಇವುಗಳೊಳಗೆ ಆತ್ಮಜ್ಞಾನವು ಹೆಚ್ಚಿನದು.]

ಸರ್ವಭೂತೇಷು ಚಾತ್ಮಾನಂ ಸರ್ವಭೂತಾನಿ ಚಾತ್ಮನಿ ।
ಸಮಂ ಪಶ್ಯನ್ನಾತ್ಮಯಾಜೀ ಸ್ವಾರಾಜ್ಯಮಧಿಗಚ್ಛತಿ ||೯೧||
ಯಥೋಕ್ತಾನ್ಯಪಿ ಕರ್ಮಾಣಿ ಪರಿಹಾಯ ದ್ವಿಜೋತ್ತಮಃ ।
ಆತ್ಮಜ್ಞಾನೇ ಶಮೇ ಚ ಸ್ಯಾದ್ವೇದಾಭ್ಯಾಸೇ ಚ ಯತ್ನವಾನ್ ||೯೨||
ಏತದ್ಧಿ ಜನ್ಮಸಾಫಲ್ಯಂ ಬ್ರಾಹ್ಮಣಸ್ಯ ವಿಶೇಷತಃ ।
ಪ್ರಾಪ್ಯೈತತ್ ಕೃತಕೃತ್ಯೋ ಹಿ ದ್ವಿಜೋ ಭವತಿ ನಾನ್ಯಥಾ ||೯೩||

[ಸರ್ವಕರ್ಮಸಂನ್ಯಾಸಪೂರ್ವಕವಾಗಿ ಆತ್ಮಜ್ಞಾನಶಮಗಳಲ್ಲಿಯೇ ಇರುವದೂ ಸರ್ವಭೂತಗಳಲ್ಲಿಯೂ ಏಕರೂಪನಾಗಿರುವ ಆತ್ಮನನ್ನು ಕಾಣುವದೂ ಮುಕ್ತಿಗೆ ಕಾರಣವೆಂದು ಇಲ್ಲಿ ಹೇಳಿದೆ.]

**ಪ್ರಶಾಸಿತಾರಂ ಸರ್ವೇಷಾಮಣೀಯಾಂಸಮಣೋರಪಿ ।**
**ರುಕ್ಮಾಭಂ ಸ್ವಪ್ನಧೀಗಮ್ಯಂ ವಿದ್ಯಾತ್ತಂ ಪುರುಷಂ ಪರಮ್ ॥೧೨೨॥**

[ಸೂಕ್ಷ್ಮತಮನಾಗಿರುವ ಪರಮಪುರುಷನನ್ನು ಅನುಭವದಿಂದ ಮಾತ್ರ ಕಾಣಬಹುದು.]

**ಏತಮೇಕೇ ವದನ್ತ್ಯಗ್ನಿಂ ಮನುಮನ್ಯೇ ಪ್ರಜಾಪತಿಮ್ ।**
**ಇನ್ದ್ರಮೇಕೇಽಪರೇ ಪ್ರಾಣಮಪರೇ ಬ್ರಹ್ಮ ಶಾಶ್ವತಮ್ ॥೧೨೩॥**
**ಏಷ ಸರ್ವಾಣಿ ಭೂತಾನಿ ಪಞ್ಚಭಿರ್ವ್ಯಾಪ್ಯ ಮೂರ್ತಿಭಿಃ ।**
**ಜನ್ಮವೃದ್ಧಿಕ್ಷಯೈರ್ನಿತ್ಯಂ ಸಂಸಾರಯತಿ ಚಕ್ರವತ್ ॥೧೨೪॥**

[ಅಗ್ನ್ಯಾದಿರೂಪಗಳಿಂದ ಈತನೊಬ್ಬನೇ ತೋರುತ್ತಿರುವವನು, ಸಕಲಭೂತಗಳ ಸಂಸಾರಫಲಗಳೂ ಈತನಿಂದಲೇ.]

**ಏವಂ ಯಃ ಸರ್ವಭೂತೇಷು ಪಶ್ಯತ್ಯಾತ್ಮಾನಮಾತ್ಮನಾ ।**
**ಸ ಸರ್ವಸಮತಾಮೇತ್ಯ ಬ್ರಹ್ಮಾಭ್ಯೇತಿ ಪರಂ ಪದಮ್ ॥೧೨೫॥**

[ಯಾವನು ಎಲ್ಲಾ ಜೀವರಿಗೂ ಆತ್ಮನಾಗಿರುವ ಪರಮಾತ್ಮನನ್ನು ಆತ್ಮಾನುಭವದಿಂದ ಅರಿತುಕೊಳ್ಳುವನೋ ಅವನು ಬ್ರಹ್ಮದಲ್ಲಿಯೇ ಪ್ರವೇಶಿಸುವನು.]

## ಸ್ಮೃತಿವಿಚಾರದ ಉಪಸಂಹಾರ

೩೪. ಈವರೆಗೆ ನಾವು ಪರಿಶೀಲಿಸಿರುವ ಸ್ಮೃತಿಗಳಲ್ಲಿ , ಮುಖ್ಯವಾಗಿ ವೈದಿಕಕರ್ಮಗಳ ವಿಚಾರ, ಪ್ರಾಯಶ್ಚಿತ್ತಾದಿಗಳು, ಕರ್ಮಸಂನ್ಯಾಸ, ಅಂತರಂಗಸಾಧನವಾಗಿರುವ ಧ್ಯಾನ–ಇವಿಷ್ಟನ್ನೇ ಪ್ರಧಾನವಾಗಿ ವಿವರಿಸಿರುತ್ತದೆ. ನೇರಾಗಿ ವೈಷ್ಣವಮತವಿಚಾರವನ್ನು ಮಾಡಿರುವ ಸ್ಮೃತಿಗಳು ಬಹುಕಡಿಮೆ. ಈ ನಿಯಮಕ್ಕೆ ಪ್ರತಿಷೇಧವಾಗಿರುವ ಒಂದೇಒಂದು ಸ್ಮೃತಿಯು ನಮಗೆ ಸಿಕ್ಕಿದೆ. ಅದೇ 'ಬೃಹದ್ ಹಾರೀತಸ್ಮೃತಿ'. ಪುರಾಣಾದಿಗಳ ವಿಚಾರವನ್ನು ಮುಗಿಸಿದ ಬಳಿಕ ಈ ಸ್ಮೃತಿಯನ್ನು ಪರಿಶೀಲನೆಗೆ ತೆಗೆದುಕೊಂಡು ಭಾಗವತ ಮತದವರು ಇಟ್ಟುಕೊಳ್ಳಬೇಕಾದ ಆಚರಣೆಗಳ ವಿಮರ್ಶೆಗೆ ಹೊರಡುವೆವು.

# ಪುರಾಣಗಳಲ್ಲಿ ಸಾಧನವಿಚಾರ

೩೫.'ಇತಿಹಾಸಪುರಾಣ'ಎಂಬ ಶಬ್ದಗಳು ವೇದದಲ್ಲಿಯೂ ಬರುತ್ತವೆ. ಆದರೆ ಅಲ್ಲಿರುವ ಆ ಶಬ್ದಗಳು ಬ್ರಾಹ್ಮಣಭಾಗಗಳನ್ನೇ ಹೇಳುತ್ತವೆ- ಎಂದು ಬೃಹದಾರಣ್ಯಕಭಾಷ್ಯ (೨-೪-೧೦) ದಲ್ಲಿದೆ; ಈಗ ಇರುವ ಇತಿಹಾಸಪುರಾಣಗಳು ಪೌರುಷೇಯವಾಗಿರುವದರಿಂದ ಇವುಗಳಿಗೆ ವೇದವೇ ಮೂಲ, ಅದಕ್ಕೆ ವಿರುದ್ಧವಾಗದಂತೆ ಇತಿಹಾಸಪುರಾಣಗಳಿಗೆ ಅಭಿಪ್ರಾಯವನ್ನು ಕಲ್ಪಿಸಬೇಕು ಎಂದು ಸೂತ್ರಭಾಷ್ಯದಲ್ಲಿ (೨-೧-೧.) ಹೇಳಿರುತ್ತದೆ.

ಶಂಕರಭಗವತ್ಪಾದರು ಪ್ರಧಾನವಾಗಿ ನಾರಾಯಣೀಯವನ್ನೇ ಪ್ರಮಾಣವಾಗಿ ಹಿಡಿದಿರುವದರಿಂದಲೂ ಅವರು ಪಾಂಚರಾತ್ರಶಾಸ್ತ್ರವನ್ನು ಶಾಂಡಿಲ್ಯರು ಮೊದಲು ಸಂಪಾದಿಸಿಕೊಂಡರೆಂದು ಭಾಗವತಮತಪರಾಮರ್ಶದಲ್ಲಿ ಹೇಳಿದ್ದರೂ ಆ ಪಾಂಚರಾತ್ರವು ಯಾವದೆಂಬುದು ನಿಶ್ಚಿತವಾಗಿಲ್ಲವಾದ್ದರಿಂದಲೂ ನಾವು ಮುಖ್ಯವಾಗಿ ನಾರಾಯಣೀಯವನ್ನೇ ಈ ಮತಕ್ಕೆ ಪರಮಮೂಲವಾಗಿ ಹಿಡಿದು ಈವರೆಗೆ ವಿಚಾರಮಾಡುತ್ತಾ ಬಂದಿರುತ್ತೇವೆ. ನಾರದರು ಭಗವಂತನನ್ನು ಯಾವಯಾವ ರೂಪದಿಂದ ಧ್ಯಾನಿಸಬೇಕೆಂದು ಕೇಳಿದ ಸಂದರ್ಭದಲ್ಲಿ ಭಗವಾನ್ನಾರಾಯಣನು- **ಶೃಣು ನಾರದ ತತ್ತ್ವೇನ ಪ್ರಾದುರ್ಭಾವಾನ್ ಮಹಾಮುನೇ । ಮತ್ಸ್ಯಃ ಕೂರ್ಮೋ ವರಾಹಶ್ಚ ನರಸಿಂಹಶ್ಚ ವಾಮನಃ । ರಾಮೋ ರಾಮಶ್ಚ ರಾಮಶ್ಚ ಕೃಷ್ಣಃ ಕಲ್ಕೀ ಚ ತೇ ದಶ** (ಮೋ.ಧ. ೩೩೫-೭) ಎಂದು ಸಂಕ್ಷೇಪವಾಗಿ ಹೇಳಿದಂತೆ ಒಂದು ಶ್ಲೋಕವಿದೆ. ಆ ಶ್ಲೋಕವು ಎಲ್ಲಾ ಭಾರತಪಾಠಗಳಲ್ಲಿಯೂ ಇಲ್ಲವಾದರೂ ಭಗವಂತನ ಶ್ರೀರಾಮ, ಕೃಷ್ಣ ಮುಂತಾದ ಅವತಾರಗಳನ್ನೆಲ್ಲ ಮುಂದೆ ವಿವರಿಸಿ, '**ಅತಿಕ್ರಾನ್ತಾಶ್ಚ ಬಹವಃ ಪ್ರಾದುರ್ಭಾವಾ ಮಮೋತ್ತಮಾಃ । ಲೋಕಕಾರ್ಯಾಣಿ ಕೃತ್ವಾ ಚ ಪುನಃ ಸ್ವಾಂ ಪ್ರಕೃತಿಂ ಗತಾಃ** (ಮೋ.ಧ.೩೩೫-೧೦೬, ೧೦೭) ಇನ್ನೂ ಕೆಲವು ಪ್ರಾದುರ್ಭಾವಗಳು ಹೀಗೆಯೇ ಲೋಕಕಾರ್ಯಗಳನ್ನು ಮಾಡಿ ತಮ್ಮ ಮೂಲವಾದ ಶ್ರೀಮನ್ನಾರಾಯಣನನ್ನು ಸೇರಿರುತ್ತವೆ- ಎಂದು ಬರೆದಿದೆಯಾದ್ದರಿಂದ ಭಾಗವತಸಂಪ್ರದಾಯದವರು ಅವಶ್ಯವಾಗಿ ಈ ಬಗೆಯ ವೈಷ್ಣವಪುರಾಣಗಳನ್ನು ಪಠನಮಾಡಿ ಅವುಗಳಿಗೆ ಪರಸ್ಪರವಾಗಿಯೂ ಮೂಲಶ್ರುತಿಗೂ ವಿರೋಧವಿಲ್ಲದಂತೆ ಏಕವಾಕ್ಯತೆಯನ್ನು ಕಲ್ಪಿಸಿಕೊಳ್ಳಬೇಕು. **ಪಂ. ಬಲದೇವ ಉಪಾಧ್ಯಾಯರು** ತಮ್ಮ **ಭಾಗವತಸಂಪ್ರದಾಯ** ಗ್ರಂಥದಲ್ಲಿ 'ನಾರದ, ಬ್ರಹ್ಮವೈವರ್ತ, ಪದ್ಮ, ವಿಷ್ಣು, ಶ್ರೀಮದ್ಭಾಗವತ- ಈ ಐದರಲ್ಲಿ ವಿಷ್ಣುವಿನ ಆಧ್ಯಾತ್ಮಿಕರೂಪವೂ ಮಹಿಮೆಯೂ ವ್ಯಾಪಕವಾಗಿಯೂ ಸರ್ವಾಂಗಸುಂದರವಾಗಿಯೂ ವರ್ಣಿತವಾಗಿವೆ; ಇವುಗಳೊಳಗೆ ಕೊನೆಯ ನಾಲ್ಕು ಪುರಾಣಗಳು ವೈಷ್ಣವಸಂಪ್ರದಾಯದ ವಿಕಾಸದ ಇತಿಹಾಸವನ್ನು ತಿಳಿದುಕೊಳ್ಳುವದಕ್ಕೆ ಉಪಯುಕ್ತವಾಗಿದ್ದು ಬಹುಮಹತ್ವವುಳ್ಳವುಗಳಾಗಿವೆ' ಎಂದು ಬರೆದಿರುತ್ತಾರೆ. ಆದರೆ ಅವರೂ ಬ್ರಹ್ಮವೈವರ್ತ,

ವಿಷ್ಣುಪುರಾಣ ಮತ್ತು ಭಾಗವತ– ಇವು ಮೂರನ್ನೇ ಪರಿಶೀಲನೆಗೆ ತೆಗೆದುಕೊಂಡಿರುತ್ತಾರೆ. ಇವುಗಳೊಳಗೆ ಬ್ರಹ್ಮವೈವರ್ತಪುರಾಣದಲ್ಲಿ ಮುಖ್ಯವಾಗಿ ಗೌಡೀಯವೈಷ್ಣವ, ವಲ್ಲಭ ಮತ್ತು ರಾಧಾವಲ್ಲಭ– ಎಂಬ ಮೂರು ಮತಗಳೊಳಗೆ ಈಗ ಪ್ರಚಾರದಲ್ಲಿರುವ ಸಾಧನಗಳ ರಹಸ್ಯವು ಕಾಣಬರುತ್ತದೆ. 'ರಾಧಾಕೃಷ್ಣ'ಲೀಲೆಗೆ ವಿಷ್ಣುಪುರಾಣದಲ್ಲಾಗಲಿ, ಭಾಗವತದಲ್ಲಾಗಲಿ ಪರಾಮರ್ಶವು ಸಿಕ್ಕುವದಿಲ್ಲ. ನಾರಾಯಣೀಯದಲ್ಲಿರುವ ಶ್ರೀಕೃಷ್ಣಾರ್ಜುನಸಂವಾದವೊಂದರಲ್ಲಿ ಶ್ರೀಕೃಷ್ಣಭಗವಂತನು "**ಏವಂ ಬಹುವಿಧೈಃ ರೂಪೈಶ್ಚರಾಮೀಹ ವಸುನ್ಧರಾಮ್ । ಬ್ರಹ್ಮಲೋಕಂ ಚ ಕೌನ್ತೇಯ ಗೋಲೋಕಂ ಚ ಸನಾತನಮ್** " (ಮೋ.ಧ. ೩೪೨...೧೩೮)ನಾನು ನಾನಾರೂಪಗಳಿಂದ ಭೂಮಿಯಮೇಲೂ ಬ್ರಹ್ಮಲೋಕದಲ್ಲಿಯೂ **ಗೋಲೋಕ**ದಲ್ಲಿಯೂ ಸಂಚರಿಸುತ್ತಿರುವೆನೆಂದು ಹೇಳಿಕೊಂಡಿರುತ್ತಾನೆ. ಗೋಲೋಕದಲ್ಲಿ ಶ್ರೀಕೃಷ್ಣನ ಹೃದಯೇಶ್ವರಿಯಾದ ರಾಧಾದೇವಿಯು ಇರುತ್ತಾಳೆಂದು ಬ್ರಹ್ಮವೈವರ್ತಪುರಾಣದಲ್ಲಿ ವರ್ಣಿಸಿರುವ ವಿಷಯವನ್ನು ಇಲ್ಲಿ ಹೇಳಿಲ್ಲ. ಆ ಪುರಾಣವು ನಮ್ಮ ದೇಶದಲ್ಲಿ ಅಷ್ಟಾಗಿ ಪ್ರಚಾರದಲ್ಲಿಯೂ ಇರುವದಿಲ್ಲ. ಆದ್ದರಿಂದ ನಾವು **ವಿಷ್ಣುಪುರಾಣ, ಭಾಗವತ**– ಇವೆರಡನ್ನೇ ಮುಖ್ಯವಾಗಿ ಪುರಾಣಗಳ ಪರಿಶೀಲನೆಯ ಸಂಗ್ರಹದಲ್ಲಿ ಇಲ್ಲಿ ಉಪಯೋಗಿಸಿಕೊಂಡಿರುತ್ತೇವೆ.

## (೧) ವಿಷ್ಣುಪುರಾಣ

ವಿಷ್ಣುಪುರಾಣವನ್ನು ಈ ಗ್ರಂಥದಲ್ಲಿ ಸಿದ್ಧಾಂತವಿಚಾರವನ್ನು ಮಾಡುವಾಗ ಆಗಲೆ ಪರಾಮರ್ಶಿಸಿರುತ್ತದೆ. ಇಲ್ಲಿ ಸಾಧನವಿಚಾರಕ್ಕೆ ಹೇಳಿರುವದನ್ನು ಸಂಕ್ಷಿಪ್ತವಾಗಿ ತಿಳಿಸುವೆವು.

(೧) **ಭಗವದಾರಾಧನ** – ಧ್ರುವೋಪಾಖ್ಯಾನದಲ್ಲಿ (ವಿ.ಪು. ೧–೧೧) ಋಷಿಗಳು ಧ್ರುವನಿಗೆ ಮಾಡಿದ ಉಪದೇಶದಲ್ಲಿ ಹೇಳಿರುವದರ ಸಾರವೇನೆಂದರೆ: ಹೊರಗಿನ ವಿಷಯಗಳಿಂದ ಚಿತ್ತವನ್ನು ಹಿಂತಿರುಗಿಸಿಕೊಂಡು ಭಗವಂತನಲ್ಲಿಯೇ ನಿಲ್ಲಿಸಿಕೊಂಡು **ತನ್ಮಯವಾದ ಏಕಾಗ್ರಚಿತ್ತದಿಂದ** ದ್ವಾದಶಾಕ್ಷರಿಯಾದ ವಾಸುದೇವಮಂತ್ರವನ್ನು ಜಪಿಸಬೇಕು. ಇದನ್ನು ಸ್ವಾಯಂಭುವಮನುವು ಜಪಿಸಿ ಭಗವಂತನನ್ನು ಒಲಿಸಿಕೊಂಡನು (ಶ್ಲೋ. ೫೩–೫೬). (೨) **ಕಂಡು** ವೆಂಬ ಋಷಿಯು **ಬ್ರಹ್ಮಪಾರವೆಂಬ ಸ್ತೋತ್ರ**ವನ್ನು ಜಪಿಸಿ ಭಗವತ್ಪ್ರಾಪ್ತಿಯನ್ನು ಮಾಡಿಕೊಂಡನು (ವಿ.ಪು. ೧–೧೫–೫೫ ರಿಂದ ೫೯) ಎಂದು ಹೇಳಿದೆ. (೩) **ಕೇಶಿಧ್ವಜನು ಖಾಂಡಿಕ್ಯನಿಗೆ ಹೇಳಿದ ಯೋಗಪ್ರಕಾರವು** (ವಿ.ಪು.೬–೭–೨೭ರಿಂದ ೯೭) ವಿಸ್ತಾರವಾಗಿದೆ. ಯಮನಿಯಮಾದಿಗಳನ್ನು ಅನುಷ್ಠಾನಮಾಡಿದಬಳಿಕ ಕರ್ಮಭಾವನೆ, ಬ್ರಹ್ಮಭಾವನೆ, ಉಭಯಾತ್ಮಕ ಭಾವನೆ– ಎಂಬ **ಮೂರು ಬಗೆಯ ಭಾವನೆಗಳನ್ನು** ವರ್ಣಿಸಿದೆ. ಬ್ರಹ್ಮದ ಪರರೂಪವನ್ನು ಚಿಂತಿಸುವದು ಕಷ್ಟವಾದ್ದರಿಂದ ಪರಮಾತ್ಮನ ಸ್ಥೂಲರೂಪವನ್ನು ಚಿಂತಿಸಬೇಕೆಂದು ತಿಳಿಸಿ **ವಿಷ್ಣುಶಕ್ತಿಯು** ವಿಶ್ವದಲ್ಲಿ ತಾರತಮ್ಯದಿಂದ ಇರುವ ಬಗೆಯನ್ನು ಮೊದಲು ತಿಳಿಸಿದೆ. ಕ್ಷೇತ್ರಜ್ಞಶಕ್ತಿಯು ಕರ್ಮವೆಂಬ ಅವಿದ್ಯಾಶಕ್ತಿಯಿಂದ ಮರೆಯಾಗಿರುವದರಿಂದ ತಾರತಮ್ಯವುಂಟಾಗಿರುತ್ತದೆ ಎಂದು ಹೇಳಿದೆ.

ಅಮೂರ್ತರೂಪವು ಯೋಗಿಗಳು ಚಿಂತಿಸತಕ್ಕದ್ದು; ಅದನ್ನು ಧ್ಯಾನಮಾಡುವದರಿಂದ ಸರ್ವಪಾಪಗಳೂ ನಾಶವಾಗುವವು. ಆದ್ದರಿಂದ ಸಮಸ್ತಶಕ್ತಿಗಳಿಗೂ ಆಧಾರನಾಗಿರುವ ವಿಷ್ಣುವನ್ನು ಚಿತ್ತದಲ್ಲಿರಿಸಬೇಕು, ಆತನೇ ಭಾವನಾತ್ರಯಗಳನ್ನು ಮೀರಿರುವ ಶುಭಾಶ್ರಯನು. ಮೂರ್ತರೂಪವನ್ನು ಧ್ಯಾನಮಾಡುವದರಿಂದ ಧಾರಣೆಯು ದೃಢವಾಗುವದು– ಎಂದು (ಶ್ಲೋ. ೮೦ರಿಂದ ೮೬)ಚಿಂತಿಸಬೇಕಾದ ವಿಷ್ಣುವಿನ ಅವಯವಗಳನ್ನು ವರ್ಣಿಸಿರುತ್ತದೆ; ಅದು ದೃಢವಾದ ಬಳಿಕ ಆಕಾರಗಳನ್ನು ಒಂದೊಂದಾಗಿ ಲಯಮಾಡಿಕೊಂಡು ಧ್ಯಾನಮಾಡುವ ಬಗೆಯನ್ನು ತಿಳಿಸಿ ನಿರ್ವಿಕಲ್ಪಕವಾದ ಸ್ವರೂಪವನ್ನು ಗ್ರಹಣಮಾಡುವ ವಿಧಾನವನ್ನು ಹೇಳಿದೆ. ಕ್ಷೇತ್ರಜ್ಞನು ಹೀಗೆ ಬ್ರಹ್ಮದಲ್ಲಿ ಒಂದಾದರೆ ಕೃತಕೃತ್ಯನಾಗುವನು.

**ತದ್ಭಾವಭಾವಮಾಪನ್ನಸ್ತತೋಽಸೌ ಪರಮಾತ್ಮನಾ ।**
**ಭವತ್ಯಭೇದೀ ಭೇದಶ್ಚ ತಸ್ಯಾಜ್ಞಾನಕೃತೋ ಭವೇತ್ ॥**
**ವಿಭೇದಜನಕೇಜ್ಞಾನೇ ನಾಶಮಾತ್ಯನ್ತಿಕಂ ಗತೇ ।**
**ಆತ್ಮನೋ ಬ್ರಹ್ಮಣೋ ಭೇದಮಸನ್ತಂ ಕಃ ಕರಿಷ್ಯತಿ ॥** ವಿ.ಪು.೬–೭–೯೫,೯೬

ಆತ್ಮನಿಗೂ ಪರಮಾತ್ಮನಿಗೂ ಭೇದವು ಅಜ್ಞಾನದಿಂದ ಆಗಿರುತ್ತದೆ; ಪರಮಾತ್ಮ ಭಾವನೆಯಿಂದ ಸಂಪೂರ್ಣವಾಗಿ ಅಜ್ಞಾನವು ತೊಲಗಲು ಭೇದವು ಇಲ್ಲವೇ ಇಲ್ಲವೆಂದಾಗುವದು– ಎಂಬುದು ಉಪದೇಶದ ಸಾರ. ಭಗವಂತನ ಮಾನಸಪೂಜೆ, ನಿರಾಕಾರಧ್ಯಾನ, ಬ್ರಹ್ಮಾತ್ಮೈಕ್ಯ– ಇವುಗಳು ಇಲ್ಲಿ ಕ್ರಮಕ್ರಮವಾಗಿ ಉಕ್ತವಾಗಿವೆ.

## (೨) ಭಾಗವತಪುರಾಣ

ಭಾಗವತಪುರಾಣವನ್ನು ಆಚಾರ್ಯರು ತಮ್ಮ ಭಾಷ್ಯಗಳಲ್ಲಿ ಪರಾಮರ್ಶಿಸಿರುವಂತೆ ಕಾಣಲಿಲ್ಲ. ಆದರೆ ಭಕ್ತಿಮಾರ್ಗದವರಿಗೆ ಇದೊಂದು ಅನುಪಮ ರತ್ನಭಾಂಡಾಗಾರವಾಗಿದೆ. ಇದನ್ನು ಯಾರು ಯಾವಾಗ ಮಾಡಿದರು?– ಎಂದು ಮುಂತಾಗಿ ನೋಡುವವರು ಸುಂದರಚಿತ್ರವನ್ನು ನೋಡುವದಕ್ಕೆ ಮೂಗನ್ನು ಉಪಯೋಗಿಸುವವನಂತೆ ಆಗುತ್ತದೆ. ಈ ಕಾಲಕ್ಕೆ ದಕ್ಷಿಣದೇಶದಲ್ಲಿರುವ ದ್ವೈತ, ಅದ್ವೈತ, ವಿಶಿಷ್ಟಾದ್ವೈತ–ಈ ಮೂರು ಸಿದ್ಧಾಂತಗಳ ಶ್ರದ್ಧಾಲುಗಳಾಗಿರುವವರೆಲ್ಲರೂ ಇದನ್ನು ಪ್ರಮಾಣಗ್ರಂಥವಾಗಿ ನಂಬಿರುತ್ತಾರೆ. ಈ ಗ್ರಂಥಕ್ಕೆ ಎಲ್ಲಾ ವೈಷ್ಣವಸಂಪ್ರದಾಯದವರೂ ವ್ಯಾಖ್ಯಾನ ಮಾಡಿರುತ್ತಾರೆ.[1] ಈಗ ಇರುವ ಅನೇಕ ವಾಖ್ಯಾನಗಳಲ್ಲಿ ಶ್ರೀಧರಸ್ವಾಮಿಗಳ "ಭಾವಾರ್ಥದೀಪಿಕೆ"ಯೇ ಸರ್ವಶ್ರೇಷ್ಠವಾಗಿರುತ್ತದೆ. ಈ ವ್ಯಾಖ್ಯಾನವನ್ನು ಇಟ್ಟುಕೊಂಡು ಭಗವದ್ಗೀತೆಗೆ ಹೊಂದುವಂತೆ ಈ ಪುರಾಣಕ್ಕೆ ಅರ್ಥವನ್ನು ಮಾಡಿಕೊಳ್ಳುವದರಿಂದ ಭಾಗವತಸಂಪ್ರದಾಯದವರಿಗೆ ಶ್ರೇಯಸ್ಸುಂಟು.

1. 'ಶ್ರೀಧರಸ್ವಾಮಿ ; ಸುದರ್ಶನಸೂರಿ, ವೀರರಾಘವ, ವಿಜಯಧ್ವಜ, ವಲ್ಲಭಾಚಾರ್ಯ, ಶುಕದೇವಾಚಾರ್ಯ, ಸನಾತನಗೋಸ್ವಾಮಿ, ಜೀವಗೋಸ್ವಾಮಿ, ವಿಶ್ವನಾಥಚಕ್ರವರ್ತಿ' ಎಂದು ಬಲದೇವ ಉಪಾಧ್ಯಾಯರು (ಭಾ.ಸಂ. ೧೫೭-೧೬೧).

## (ಅ) ಸಿದ್ಧಾಂತ

ಈಗ್ಗೆ ನಮ್ಮಲ್ಲಿ ಬ್ರಹ್ಮಸೂತ್ರಗಳಿಗೆ ಶ್ರೀಮಚ್ಛುಕಭಾಷ್ಯವೆಂಬ ವಿಲಕ್ಷಣನಾಮಧೇಯದ ಗ್ರಂಥವೊಂದುಂಟು. ಅದನ್ನು **ಶ್ರೀವತ್ಸಕುಲತಿಲಕಾವಿರತ ಬೃಹದ್ವ್ರತಪ್ರಥಿತಸಕಲವಿದ್ಯ- ಪರಮಹಂಸಪರಗುರುನಿರ್ಧಾರಿತ ಶ್ರೀಮದ್ಭಾಗವತ ರಾದ್ಧಾಂತ ಶ್ರೀಶುಕಭಗವತ್ಪಾದಾಚಾರ್ಯರು** ವಿರಚಿಸಿರೆಂದು ಸಮಾಪ್ತಿವಾಕ್ಯದಲ್ಲಿ (ಪು. ೨೩)ವರ್ಣನೆಯಿದೆ! ಇವು 'ಶ್ರೀಮದ್ಭಗವದ್ಬಾದರಾಯಣಿ **ಶುಕಾಚಾರ್ಯಾಪರಾವತಾರ**'ರೆಂದೂ ವರ್ಣನೆಯಿದೆ. ಆದ್ದರಿಂದ ಇವರು ಸಾಕ್ಷಾಚ್ಛುಕಾಚಾರ್ಯರಂತೂ ಅಲ್ಲ. ಭಾಷ್ಯಕ್ಕೆ ಬರೆದಿರುವ ಮಂಗಲಶ್ಲೋಕದಲ್ಲಿ,

**ತಂ ವನ್ದೇ ಪರಮಾಚಾರ್ಯಂ ಪಾದುಕೀಕೃತಮನ್ಮಥಮ್ ।**
**ಶುಕಶಾಸ್ತ್ರಗುರುಂ ಸೀತಾರಾಮಾರ್ಯಂ ಮನುಜಾಕೃತಿಮ್ ॥**

ಎಂದಿದೆ. ಭಾಷ್ಯಕಾರರ ಗುರುಗಳಾದ ಸೀತಾರಾಮಾರ್ಯರು ಯಾರೆಂಬುದೂ ತಿಳಿಯುವಂತಿಲ್ಲ. ಇದನ್ನು ಕೆಲವರು ಭಾಗವತಸಂಪ್ರದಾಯದವರು ತಮ್ಮ ಸಂಪ್ರದಾಯಕ್ಕೆ ಅನುಗುಣವಾದ ಬ್ರಹ್ಮಸೂತ್ರಭಾಷ್ಯವೆಂದು ಹೇಳಿಕೊಳ್ಳುತ್ತಿರುತ್ತಾರೆ. ಬ್ರಹ್ಮಸೂತ್ರಗಳೆಂದು ಪ್ರಸಿದ್ಧವಾಗಿರುವ ವೇದಾಂತಸೂತ್ರಗಳು ಉಪನಿಷದ್ವಾಕ್ಯಗಳ ತಾತ್ಪರ್ಯವನ್ನು ನಿರ್ಣಯಿಸುವದಕ್ಕೆ ಹೊರಟಿವೆ- ಎಂದು ಸಕಲವೇದಾಂತ ಸಿದ್ಧಾಂತಗಳವರೂ ಹೇಳುತ್ತಿರುವದು ಸರ್ವವಿದಿತವಾಗಿರುವಾಗ ಆ ಸೂತ್ರಗಳಲ್ಲಿ ಭಾಗವತಪುರಾಣದ ತಾತ್ಪರ್ಯವನ್ನು ನಿರ್ಣಯಿಸಿದೆ- ಎಂದು ಹೇಳುವ ಶುಕಭಗವತ್ಪಾದಾಚಾರ್ಯರಾಗಲಿ, ಅದನ್ನೊಂದು ಪ್ರಮಾಣಗ್ರಂಥವೆಂದು ನಂಬುವ ಈಗಿನ ಭಾಗವತಸಂಪ್ರದಾಯದವರಾಗಲಿ ವೇದಾಂತಿಗಳೆಲ್ಲರಿಗೂ ಉಪಹಾಸ್ಯರಾಗದೆ ಇದ್ದಾರೆ? ಇದನ್ನು ಮೊದಲು ಸಂಪ್ರದಾಯಸ್ಥರೆಲ್ಲರೂ ಆಲೋಚನೆಮಾಡಬೇಕು.

ಇದು ಭಾಗವತಸಂಪ್ರದಾಯದವರಿಗೆ ಉಚಿತವಾದ ಪ್ರಮಾಣಗ್ರಂಥವಲ್ಲ- ಎಂಬುದಕ್ಕೆ ಈ ಭಾಷ್ಯದ ಒಂದು ಭಾಗವನ್ನು ಇಲ್ಲಿ ಉದಾರಿಸುತ್ತೇವೆ. (ಪುಟ ೨೩, ೨೪ ರಲ್ಲಿರುವುದು ಹೀಗೆ ):-

"ಏವಂ ಬದ್ಧಮುಕ್ತೇಭ್ಯೋ ಜೀವೇಭ್ಯಃ ಪ್ರಕೃತಿತಶ್ಚ ಅತ್ಯನ್ತವಿಲಕ್ಷಣಃ ಸರ್ವಜ್ಞಃ, ಸರ್ವಶಕ್ತಿಃ, ಸರ್ವಕಾರಣಕಾರಣಭೂತಃ, ಸರ್ವನಿಯನ್ತಾ, ಸರ್ವಾನ್ತರ್ಯಾಮೀ, ಸರ್ವೋಪಾಸ್ಯಃ, ಸರ್ವಪುರುಷಾರ್ಥಹೇತುಃ, ಸರ್ವೋಪಾಯವಿತ್, ಸರ್ವಸಾಕ್ಷೀ, ಆಕಾಶವದಖಿಲಂ ಜಗತ್ ಅನ್ತರ್ಬಹಿರ್ವ್ಯಾಪ್ತಃ, ಚಿದಚಿಚ್ಛರೀರಕಃ, ಬ್ರಹ್ಮರುದ್ರಾದ್ಯಖಿಲದೇವವನ್ದ್ಯಃ, ಅಶೇಷಶರಣಃ (ಣ್ಯಃ) ಅಕಿಞ್ಚನಾಯನಃ, ಮಹಾವಿಭೂತಿಪತಿಃ, ಅವಾಪ್ತಸಮಸ್ತಕಾಮಃ, ಸತ್ಯಕಾಮಃ, ಸತ್ಯಸಙ್ಕಲ್ಪಃ, ಪರ(ಮ?) ಕಾರುಣಿಕಃ, ಅಸಙ್ಖ್ಯೇಯಪರಮ ಕಲ್ಯಾಣಗುಣಗಣಪರಿಪೂರ್ಣಃ, ಶ್ರೀಭಗವಾನ್ ನಾರಾಯಣ ಏವ, ಇದಮಖಿಲಂ ಜಗತ್ ಸೃಷ್ಟ್ವಾ ತತ್ರಾನುಪ್ರವಿಶ್ಯ, ತತ್ತಜ್ಜೀವಕರ್ಮಾನುಗುಣ್ಯೇನ, ವಿಚಿತ್ರತಯಾ ನಾಮರೂಪೇ ವ್ಯಾಕೃತ್ಯ ಸ್ವಭಕ್ತಾನಾಂ ಮೋಕ್ಷದಿತ್ಸಯಾ ಆವಿಷ್ಕೃತಾಸಙ್ಖ್ಯೇಯಾವತಾರಃ ಅಸ್ಮಿನ್ ಜಗತಿ ಕ್ರೀಡನ್ ಆಸ್ತೇ- ಇತ್ಯೇವಂ ಚಿದಚಿದೀಶ್ವರಾಣಾಂ ಸ್ಥಿತಿರ್ಭವತಿ ।

ಮೇಲೆ ಕೊಟ್ಟಿರುವ ಗ್ರಂಥಭಾಗದಲ್ಲಿ ಭಗವಂತನು ಬದ್ಧಮುಕ್ತ ಜೀವರುಗಳಿಗಿಂತ ಅತ್ಯಂತವಿಲಕ್ಷಣನು, ಚಿದಚಿಚ್ಛರೀರಕನು, ಕಲ್ಯಾಣಗುಣಗಣಪರಿಪೂರ್ಣನು ಎಂದು ಮುಂತಾಗಿ ಬರೆದಿರುವ ವಿಶೇಷಣಗಳು ವಿಶಿಷ್ಟಾದ್ವೈತಿಗಳಾದ ಶ್ರೀರಾಮಾನುಜಾಚಾರ್ಯರು ತಮ್ಮ ಶ್ರೀಭಾಷ್ಯವೇ ಮುಂತಾದ ಗ್ರಂಥಗಳಲ್ಲಿ ಮತ್ತೆ ಮತ್ತೆ ಉಪಯೋಗಿಸಿರುವವಾಗಿವೆ; ಮತ್ತೆ ಯಾವ ವೈಷ್ಣವರು ಎಂದರೆ ಮಧ್ವವಲ್ಲಭಾದಿಗಳುಕೂಡ ಇವನ್ನು ಒಪ್ಪುವದಿಲ್ಲ; ಆದ್ದರಿಂದ ಈ ಗ್ರಂಥ'ವು ಶ್ರೀವೈಷ್ಣವರದು, ಅದ್ವೈತಿಗಳಾದ ಕೇವಲ ಭಾಗವತಸಂಪ್ರದಾಯದವರದ್ದಲ್ಲ. ಈ ಭಾಷ್ಯಕ್ಕೆ ಕೃಷ್ಣಮಾಚಾರ್ಯ ಎಂಬುವರು ಶಂಕರಾಚಾರ್ಯರ ಅದ್ವೈತಸಿದ್ಧಾಂತವನ್ನು ಹಾಸ್ಯಮಾಡಿ[1] ವ್ಯಾಖ್ಯಾನವನ್ನು ಬರೆದಿರುತ್ತಾರೆ. ಹೆಸರಿನಿಂದಲೇ ಅವರು ಶ್ರೀವೈಷ್ಣವರೆಂದು ಗೊತ್ತಾಗುತ್ತದೆ. ಹೀಗಿರುವದರಿಂದ ಇಂದಿನವರೆಗೂ ಸ್ಮಾರ್ತಸಂಪ್ರದಾಯಗಳನ್ನೂ ವೈಷ್ಣವಸಂಪ್ರದಾಯಗಳನ್ನೂ ಅನುಸರಿಸಿಕೊಂಡಿರುವ ಭಾಗವತಮತದವರಿಗೆ ಬರೆದ ಗ್ರಂಥ ಇದಲ್ಲ ಎಂದು ಸ್ಪಷ್ಟವಾಗಿ ಹೇಳಬಹುದಾಗಿದೆ. ಆದ್ದರಿಂದ ಈ ಶುಕಭಾಷ್ಯವನ್ನು ಶುಕದಂತೆ ಪಠಿಸುತ್ತಾ ಕುಳಿತಿರುವದು ನಮಗೆ ಸಲ್ಲದು ಎಂದು ತಿಳಿದು ನೇರವಾಗಿ ಭಾಗವತಪುರಾಣದಲ್ಲಿಯೇ ಏನು ಹೇಳಿದೆಯೆಂದು ನೋಡೋಣ.

## (ಆ) ಸಿದ್ಧಾಂತ

(೧) ದ್ವಾದಶಸ್ಕಂಧದ ಕೊನೆಯ (೧೩) ನೆಯ ಅಧ್ಯಾಯದಲ್ಲಿ ಹೀಗಿದೆ :

**ಆದಿಮಧ್ಯಾವಸಾನೇಷು ವೈರಾಗ್ಯಾಖ್ಯಾನಸಂಯುತಮ್ ।**
**ಹರಿಲೀಲಾಕಥಾವ್ರಾತಾಮೃತಾನನ್ದಿತಸತ್ಸುರವ್ ॥೧೧॥**

---

1. ಅನ್ಯೇ ಪುನಃ ಅಸ್ಥಪರಮ್ಪರಯಾ ವಿಶ್ವಮಿಥ್ಯಾತ್ವವಾದಿನೋ ಬ್ರಹ್ಮಸೂತ್ರಾಣಿ ಸ್ವಯಂ ಚ ಮಿಥ್ಯಾಭೂತಾ ಇತಿ ವದನ್ತಃ ಸನ್ತಃ, ಪ್ರಮಾದತೋ ಮಿಥ್ಯಾಭೂತಾನಿ ಬ್ರಹ್ಮಸೂತ್ರಾಣಿ ವ್ಯಾಚಕ್ಷಾಣಾಃ ಬ್ರಹ್ಮಣಿ ಏವ ಮಿಥ್ಯಾಭೂತೋಪಾಧಿವಶಾತ್, ನಾನಾಜೀವಭಾವಂ ಪರಿಕಲ್ಪ್ಯ ತಸ್ಮಿನ್ ಪರಬ್ರಹ್ಮಣ್ಯೇವ ಸ್ವಾನುಭೂಯಮಾನವಿಶ್ವಭ್ರಮಾಜ್ಞಾನ ಸಂಸಾರಾದಿನಿಖಿಲದೋಷಾನಾರೋಪ್ಯ ಮಿಥ್ಯಾಭೂತಸ್ಯ ಜೀವಸ್ಯ ಮಿಥ್ಯಾಭೂತಶ್ರುತಿಸಿದ್ಧಬ್ರಹ್ಮಣಾ ಸಹ ಮಿಥ್ಯಾಭೂತೈಕ್ಯಜ್ಞಾನಮೇವ ತಸ್ಯ ಮಿಥ್ಯಾಭೂತಮೋಕ್ಷೋಪಾಯ ಇತ್ಯೇವಂ ಬಹುವಿಪ್ರತಿಷಿದ್ಧಪ್ರಲಾಪೇನ ಅಖಿಲಾನ್ ವೇದಾನ್ ಆಕುಲೀಕೃತ್ಯ ಆತ್ಮಾನಮ್ ಅನ್ಯಾನ್ ಮನ್ದಮನುಜಾಂಶ್ಚ ಯಥೋಕ್ತನೈಃಶ್ರೇಯಸಾತ್, ಭಕ್ತಿಮಾರ್ಗಾದ್ ಭ್ರಂಶಯಿತ್ವಾ ಅನ್ಧೇ ತಮಸಿ ನಿಮಜ್ಜಯನ್ತಿ। ಅತೋ ವೇದೋಽಪ್ಯೇವಂವಿಧಾನ್ ದೃಷ್ಟುಮಪಿ ಬಿಭ್ಯೇತ್ ॥ (ಪು. ೬, ೭)

ಈ ವಾಕ್ಯದಲ್ಲಿರುವ ಶಂಕರಾಚಾರ್ಯರ ನಿಂದೆಯು ಸ್ವಲ್ಪ ಸಂಸ್ಕೃತವನ್ನು ಬಲ್ಲವರಿಗೂ ಅರ್ಥವಾಗುವದರಿಂದ ನಾವು ಕನ್ನಡಿಸಿಲ್ಲ. ಯಾರೋ ಕ್ಷುದ್ರಮತಿಗಳಾದ ಶ್ರೀ ವೈಷ್ಣವರು ಈ ಗ್ರಂಥವನ್ನು ನಿರ್ಮಿಸಿ ಅರಿಯದ ಸ್ಮಾರ್ತರಿಗೆ ಇದು ನಿಮ್ಮ ಭಾಗವತ ಸಂಪ್ರದಾಯದ ಭಾಷ್ಯ ಎಂದು ಮೋಸ ಮಾಡಿರಬಹುದು. ಹೀಗೆಯೇ ವೈಖಾನಸ ಮತದವರಿಗೂ ಅನ್ಯಾಯವನ್ನು ಮಾಡುವ ಕ್ಷುದ್ರಬುದ್ಧಿಯಿಂದ ಕೆಲವರು ಲಕ್ಷ್ಮೀ ವಿಶಿಷ್ಟಾದ್ವೈತಭಾಷ್ಯವೆಂಬ ಒಂದು ಗ್ರಂಥವನ್ನು ಕಲ್ಪಿಸಿ ಬರೆದಿರುತ್ತಾರೆ. ಅದರ ಕೈಬರಹದ ಪ್ರತಿಯೂ ನಮ್ಮಲ್ಲಿದೆ. ಇಂಥ ಮೋಸದ ಕೃತಿಗಳಿಗೆ ಮರುಳಾಗುವ ಭಾಗವತ ಸಂಪ್ರದಾಯದವರೂ ವೈಖಾನಸಸಂಪ್ರದಾಯದವರೂ ಅನುಕಂಪನೀಯರೆಂದು ಮತ್ತೆ ಬೇರೆ ಹೇಳಬೇಕಾಗಿಲ್ಲ

**ಸರ್ವವೇದಾನ್ತಸಾರಂ ಯದ್ ಬ್ರಹ್ಮಾತ್ಮೈಕತ್ವಲಕ್ಷಣಮ್ ।**
**ವಸ್ತ್ವದ್ವಿತೀಯಂ ತನ್ನಿಷ್ಠಂ ಕೈವಲ್ಯೈಕಪ್ರಯೋಜನಮ್ ॥೧೨॥**
**ಶ್ರೀಮದ್ಭಾಗವತಂ ಪುರಾಣಮಮಲಂ ಯದ್ ವೈಷ್ಣವಾನಾಂ ಪ್ರಿಯಂ ।**
**ಯಸ್ಮಿನ್ ಪಾರಮಹಂಸ್ಯಮೇಕಮಮಲಂ ಜ್ಞಾನಂ ಪರಂ ಗೀಯತೇ ॥**
**ತತ್ರ ಜ್ಞಾನವಿರಾಗಭಕ್ತಿಸಹಿತಂ ನೈಷ್ಕರ್ಮ್ಯಮಾವಿಷ್ಕೃತಂ ।**
**ತಚ್ಛೃಣ್ವನ್ ವಿಪಠನ್ ವಿಚಾರಣಪರೋ ಭಕ್ತ್ಯಾ ವಿಮುಚ್ಯೇನ್ನರಃ ॥**

ಈ ಶ್ಲೋಕಗಳಲ್ಲಿ ಹೇಳಿರುವದಿಷ್ಟು :

'ಇಲ್ಲಿ ಮೊದಲು, ನಡುವೆ, ಕೊನೆ– ಎಲ್ಲೆಲ್ಲಿಯೂ ವೈರಾಗ್ಯದ ಕಥೆಗಳಿವೆ, ಶ್ರೀಹರಿಯ ಲೀಲೆಗಳ ವರ್ಣನೆಯಿದೆ; ಸರ್ವೋಪನಿಷತ್ತುಗಳ ಸಾರವಾದ ಬ್ರಹ್ಮಾತ್ಮೈಕತ್ವವನ್ನೇ ಹೇಳಿದೆ, ಅದ್ವಿತೀಯವಸ್ತುವನ್ನೂ ಅದರಲ್ಲಿರುವ ನಿಷ್ಠೆಯಿಂದಾಗುವ ಕೈವಲ್ಯವನ್ನೂ ವರ್ಣಿಸಿದೆ. ಇದು ವೈಷ್ಣವರಿಗೆ ಪ್ರಿಯವಾದದ್ದು, ಪರಮಹಂಸರಿಗೆ ತಕ್ಕ ಜ್ಞಾನವೇ ಇಲ್ಲಿದೆ, ಜ್ಞಾನವೈರಾಗ್ಯಭಕ್ತಿಗಳೊಡಗೂಡಿದ ನೈಷ್ಕರ್ಮ್ಯವನ್ನು ತಿಳಿಸಿದೆ. ಇದನ್ನು ಭಕ್ತಿಯಿಂದ ಶ್ರವಣಮಾಡಿ, ಪಠಿಸಿ ಮನನಮಾಡಿದರೆ ಮನುಷ್ಯನು ಮುಕ್ತನಾಗುವವನು.' ಇದಕ್ಕಿಂತ ಸ್ಪಷ್ಟವಾಗಿ ಹೇಳುವದಾಗದು. ಭಾಗವತವು ಭಕ್ತಿಜ್ಞಾನವೈರಾಗ್ಯಗಳಿಂದ ಅದ್ವೈತತತ್ತ್ವವನ್ನನುಭವಿಸಿ ಮುಕ್ತರಾಗುವ ಮಾರ್ಗವನ್ನು ಹೇಳುತ್ತಿದೆ. ಇಲ್ಲಿ ಜೀವನು ಬ್ರಹ್ಮವೇ ಆಗುವ ಮುಕ್ತಿಯ ಸಾಧನವನ್ನೂ ಹೇಳಿದೆ.

(೨) ಈಗ ಪರೀಕ್ಷಿತನಿಗೆ ಶುಕರು ಹೇಳುವದನ್ನು ಕೇಳಿ :

**ತ್ವಂ ತು ರಾಜನ್ ಮರಿಷ್ಯೇತಿ ಪಶುಬುದ್ಧಿಮಿಮಾಂ ಜಹಿ ।**
**ನ ಜಾತಃ ಪ್ರಾಗಭೂತೋಽದ್ಯ ದೇಹವತ್ತ್ವಂ ನ ನಙ್ಕ್ಷ್ಯಸಿ ॥**
**ನ ಭವಿಷ್ಯಸಿ ಭೂತ್ವಾ ತ್ವಂ ಪುತ್ರಪೌತ್ರಾದಿರೂಪವಾನ್ ।**
**ಬೀಜಾಙ್ಕುರವದ್ ದೇಹಾದೇರ್ವ್ಯತಿರಿಕ್ತೋ ಯಥಾನಲಃ ॥೩॥**
**ಸ್ವಪ್ನೇ ಯಥಾ ಶಿರಶ್ಛೇದಂ ಪಞ್ಚತ್ವಾದ್ಯಾತ್ಮನಃ ಸ್ವಯಮ್ ।**
**ಯಸ್ಮಾತ್ ಪಶ್ಯತಿ ದೇಹಸ್ಯ ತತ ಆತ್ಮಾ ಹ್ಯಜೋಽಮರಃ ॥೪॥**
**ಘಟೇ ಭಿನ್ನೇ ಯಥಾಕಾಶ ಆಕಾಶಃ ಸ್ಯಾದ್ ಯಥಾ ಪುರಾ ।**
**ಏವಂ ದೇಹೇ ಮೃತೇ ಜೀವೋ ಬ್ರಹ್ಮ ಸಂಪದ್ಯತೇ ಪುನಃ ॥೫॥**
**ಮನಃ ಸೃಜತಿ ವೈ ದೇಹಾನ್ ಗುಣಾನ್ ಕರ್ಮಾಣಿ ಚಾತ್ಮನಃ ।**
**ತನ್ಮನಃ ಸೃಜತೇ ಮಾಯಾ ತತೋ ಜೀವಸ್ಯ ಸಂಸೃತಿಃ ॥೬॥**

ಭಾಗ. ೧೨...೫...೨ರಿಂದ ೬

ಈ ಶ್ಲೋಕಗಳಲ್ಲಿ ಗೀತೆಯ ಎರಡನೆಯ ಅಧ್ಯಾಯದಲ್ಲಿ ಹೇಳಿರುವಂತೆಯೇ ಆತ್ಮನಿಗೆ ಸ್ಥೂಲಸೂಕ್ಷ್ಮದೇಹಗಳ ಸಂಬಂಧವು ಇಲ್ಲವೇಇಲ್ಲವೆಂದೂ ಅವುಗಳೆಲ್ಲ ಕಲ್ಪಿತವಾದವುಗಳೆಂದೂ ಸುಸ್ಪಷ್ಟವಾಗಿ ಹೇಳಿದೆ.

(೩) ಅಹಂ ಬ್ರಹ್ಮ ಪರಂ ಧಾಮ ಬ್ರಹ್ಮಾಹಂ ಪರಮಂ ಪದಮ್ ।
ಏವಂ ಸಮೀಕ್ಷನ್ನಾತ್ಮಾನಮಾತ್ಮನ್ಯಾಧಾಯ ನಿಷ್ಕಲೇ ॥೧೧॥
ದಶನ್ತಂ ತಕ ಕಂ ಪಾದೇ ಲೇಲಿಹಾನಂ ವಿಷಾನನೈಃ ।
ನ ದ್ರಕ್ಷ್ಯಸಿ ಶರೀರಂ ಚ ವಿಶ್ವಂ ಚ ಪೃಥಗಾತ್ಮನಃ ॥೧೨॥

ಭಾಗ. ೧೨–೬–೧೧,೧೨

ಈ ಎರಡು ಶ್ಲೋಕಗಳಲ್ಲಿ ಬ್ರಹ್ಮನಿಗೂ ಆತ್ಮನಿಗೂ ಭೇದವೇ ಇಲ್ಲ, ಎಲ್ಲವೂ ಬ್ರಹ್ಮವೇ ಎಂದು ಅರಿತುಕೊಂಡಾಗ ಪ್ರಪಂಚವೇ ಇಲ್ಲವಾಗುವದು– ಎಂಬ ಅದ್ವೈತಾನುಭವವನ್ನು ವರ್ಣಿಸಿರುತ್ತದೆ.

ಹೀಗಿರುವದರಿಂದ ಶುಕಭಾಷ್ಯದಲ್ಲಿರುವ ಸಿದ್ಧಾಂತಕ್ಕೂ ಭಾಗವತದಲ್ಲಿರುವ ಸಿದ್ಧಾಂತಕ್ಕೂ ಹೊಂದುಗಡೆಯಿಲ್ಲ. ಶಂಕರಭಗವತ್ಪಾದರವರು ಹೇಳಿರುವ ಅದ್ವೈತಸಿದ್ಧಾಂತವೇ ಭಾಗವತಕ್ಕೆ ಒಪ್ಪು– ಎಂದು ಸ್ಪಷ್ಟವಾಗುತ್ತದೆ.

## (ಆ) ಸಾಧನ

ಇನ್ನು ಸಾಧನದ ಕಡೆಗೆ ಹೊರಟರೆ :

ಭಾಗ. ೮–೧೬ ಅಧ್ಯಾಯದಲ್ಲಿ ಪುತ್ರಪ್ರಾಪ್ತಿಗಾಗಿ ಪ್ರಾರ್ಥಿಸಿದ ಅದಿತಿಗೆ ಪಯೋವ್ರತವನ್ನು ಕಶ್ಯಪರು ಹೀಗೆ ಬೋಧಿಸಿರುತ್ತಾರೆ:- ಅದು ಕಾಮ್ಯವ್ರತ . ಅದರಲ್ಲಿ ಅರ್ಚಾದಿಗಳಲ್ಲಿ ಪೂಜೆಯನ್ನು ಮಾಡುವಾಗ **'ಅರ್ಚೇದ್ ದ್ವಾದಶಾಕ್ಷರವಿದ್ಯಯಾ'** (ಶ್ಲೋ.೩೯)' **ಜುಹುಯಾನ್ಮೂಲವಿದ್ಯಯಾ**'(೪೦), **ಜಪೇದಷ್ಟೋತ್ತರಂ ಶತಮ್**' (ಶ್ಲೋ.೪೨) ಎಂದುಮುಂತಾಗಿ ಹೇಳಿರುವದು ಭಾಗವತಧರ್ಮಕ್ಕೆ ತಕ್ಕಂತೆಯೇ ಇದೆ. ಈ ವಿಷಯವನ್ನು 'ಆಚರಣೆಗಳ' ವಿಷಯವಾಗಿ ಮಾತನಾಡುವಾಗ ಮತ್ತೆ ಪ್ರಸ್ತಾಪಿಸುವೆವು. ಈಗ್ಗೆ ಭಕ್ತಿ ಮತ್ತು ಯೋಗ ಇವುಗಳ ವಿಷಯವಾಗಿ ಈ ಪುರಾಣದಲ್ಲಿ ಹೇಳಿರುವದನ್ನು ಸಂಕ್ಷೇಪವಾಗಿ ತಿಳಿಸುವದು ಅವಶ್ಯವಾಗಿರುತ್ತದೆ.

ಭಾಗವತಶಾಸ್ತ್ರಕ್ಕೆ ಭಕ್ತಿಯೇ ಮುಖ್ಯವಾಗಿರುತ್ತದೆಯಾಗಿ ಇದರ ಶ್ರವಣಪಠನಗಳೇ ಭಾಗವತಧರ್ಮಕ್ಕೆ ಒಂದು ವ್ರತವಾಗಿರಬೇಕೆಂಬುದನ್ನು ಹೇಳಬೇಕಾದದ್ದೇಇಲ್ಲ. ಭಕ್ತಿಧ್ಯಾನಗಳ ವಿಚಾರವು ಈ ಪುರಾಣದಲ್ಲಿ ತುಂಬಿ ತುಳುಕುತ್ತಿರುವವು. ಇಲ್ಲಿ ಮಾದರಿಗಾಗಿ ಒಂದು ಉದಾಹರಣೆಯನ್ನು ಕೊಡುವೆವು. ಉದ್ಧವನಿಗೆ ಭಗವಂತನು ಮಾಡಿದ ಉಪದೇಶದಲ್ಲಿ (ಭಾಗ. ೧೧–೧೪) ಭಕ್ತಿಯ ವಿಷಯಕ್ಕೆ ಹೇಳಿರುವ ಮಾತುಗಳಿವು,

(೧) **ಅಕಿಞ್ಚನಸ್ಯ ದಾನ್ತಸ್ಯ ಶಾನ್ತಸ್ಯ ಸಮಚೇತಸಃ ।**
**ಮಯಾ ಸಂತುಷ್ಟಮನಸಃ ಸರ್ವಾಃ ಸುಖಮಯಾ ದಿಶಃ** ॥೧೩॥

[ಇಲ್ಲಿ ವಿಷ್ಣುಭಕ್ತನಿಗೆ ಎಲ್ಲಿ ನೋಡಿದರೂ ಆನಂದವೇ ಗೋಚರವಾಗುತ್ತಿರುವದು ಎಂದಿದೆ.]

**ನ ಪಾರಮೇಷ್ಠ್ಯಂ ನ ಮಹೇನ್ದ್ರಧಿಷ್ಣ್ಯಂ**
**ನ ಸಾರ್ವಭೌಮಂ ನ ರಸಾಧಿಪತ್ಯಮ್**
**ನ ಯೋಗಸಿದ್ಧೀರಪುನರ್ಭವಂ ವಾ ।**
**ಮಯ್ಯರ್ಪಿತಾತ್ಮೇಚ್ಛತಿ ಮದ್ವಿನಾಽನ್ಯತ್** ॥೧೪॥

[ಇಲ್ಲಿ ಭಕ್ತನಿಗೆ ಇಹಪರಸುಖಗಳಾಗಲಿ ಯೋಗಸಿದ್ಧಿಗಳಾಗಲಿ ಮುಕ್ತಿಯಾಗಲಿ ಬೇಕಿರುವದಿಲ್ಲ;– ಅವನಿಗೆ ಭಗವಂತನೊಬ್ಬನೇ ಬೇಕಾಗಿರುತ್ತಾನೆ;– ಎಂದಿದೆ.]

**ನ ತಥಾ ಮೇ ಪ್ರಿಯತಮ ಆತ್ಮಯೋನಿರ್ನ ಶಙ್ಕರಃ ।**
**ನ ಚ ಸಙ್ಕರ್ಷಣೋ ನ ಶ್ರೀರ್ನೈವಾಽಽತ್ಮಾ ಚ ಯಥಾ ಭವಾನ್ ॥** ॥೧೫॥

[ಇಲ್ಲಿ ಬ್ರಹ್ಮ,ರುದ್ರ,ಶೇಷ, ಲಕ್ಷ್ಮಿ, ಕೊನೆಗೆ ತಾನು ಕೂಡ– ಈ ಎಲ್ಲಕ್ಕಿಂತಲೂ ಭಕ್ತನೇ ತನಗೆ ಪ್ರಿಯತಮನೆಂದು ಹೇಳಿರುತ್ತಾನೆ.]

ಭಕ್ತಿಯನ್ನು ಹೊಗಳುವದಕ್ಕೆ ಇದಕ್ಕಿಂತ ಹೆಚ್ಚಿನ ಪ್ರಕಾರವು ಇನ್ನೆಲ್ಲಿಯೂ ಸಿಕ್ಕಲಾರದೆಂಬುದು ಸ್ಪಷ್ಟ. ಇದೇ ಅಧ್ಯಾಯದಲ್ಲಿ ಮೂವತ್ತನೆಯ ಶ್ಲೋಕದವರೆಗೂ ಭಕ್ತಿಯ ವರ್ಣನೆಯೇ ಇದೆ. ಭಕ್ತಿಯ ಫಲವನ್ನು ಹೇಳುವ ಮೂರು ಶ್ಲೋಕಗಳನ್ನು ಮಾತ್ರ ಇಲ್ಲಿ ಕೊಟ್ಟಿರುವೆವು.

ಇನ್ನು ಯೋಗದ ವಿಷಯಕ್ಕೆ ಇದೇ ಅಧ್ಯಾಯದಲ್ಲಿ ಭಗವಂತನ ಉಪದೇಶವು ಹೇಗಿದೆ ಎಂಬುದನ್ನು ನೋಡೋಣ:–

(೨) **ಯಥಾಗ್ನಿನಾ ಹೇಮ ಮಲಂ ಜಹಾತಿ**
**ಧ್ಮಾತಂ ಪುನಃ ಸ್ವಂ ಭಜತೇ ಚ ರೂಪಮ್ ।**
**ಆತ್ಮಾ ಚ ಕರ್ಮಾನುಶಯಂ ವಿಧೂಯ**
**ಮದ್ಭಕ್ತಿಯೋಗೇನ ಭಜತ್ಯಥೋ ಮಾಮ್** ॥೨೫॥

[ಬೆಂಕಿಯಲ್ಲಿ ಪುಟವಿಟ್ಟು ಕರಗಿಸಿದ ಚಿನ್ನವು ತನ್ನ ರೂಪವನ್ನೇ ಪಡೆದುಕೊಳ್ಳುವಂತೆ ಭಕ್ತಿಯೋಗದಿಂದ ಜೀವಾತ್ಮನು ಕರ್ಮವಾಸನೆಯನ್ನು ಕಳೆದುಕೊಂಡು ಭಗವತ್ಸ್ವರೂಪವನ್ನೇ ಹೊಂದುವನು.]

ಯಥಾ ಯಥಾಽಽತ್ಮಾ ಪರಿಮೃಜ್ಯತೇಽಸೌ
ಮತ್ಪುಣ್ಯಗಾಥಾಶ್ರವಣಾಭಿಧಾನೈಃ ।
ತಥಾ ತಥಾ ಪಶ್ಯತಿ ವಸ್ತು ಸೂಕ್ಷ್ಮಂ
ಚಕ್ಷುರ್ಯಥೈವಾಞ್ಜನಸಂಪ್ರಯುಕ್ತಮ್ ॥೨೬॥

[ಪರಮಾತ್ಮನ ಪುಣ್ಯಚರಿತೆಯನ್ನು ಕೇಳಿ ಹೇಳುವದರಿಂದ ಶುದ್ಧನಾಗುತ್ತಾ ಬಂದಂತೆಲ್ಲ, ಅಂಜನದಿಂದ ಶುದ್ಧವಾದ ಕಣ್ಣಿನಂತೆ ಸೂಕ್ಷ್ಮವಸ್ತುವನ್ನು ಕಾಣುವದಕ್ಕೆ ತಕ್ಕವನಾಗುವನು,]

ವಿಷಯಾನ್ ಧ್ಯಾಯತಶ್ಚಿತ್ತಂ ವಿಷಯೇಷು ವಿಷಜ್ಜತೇ ।
ಮಾಮನುಸ್ಮರತಶ್ಚಿತ್ತಂ ಮಯ್ಯೇವ ಪ್ರವಿಲೀಯತೇ ॥೨೭॥

[ವಿಷಯಚಿಂತನೆಯಿಂದ ವಿಷಯಾಸಕ್ತಿ ಹೆಚ್ಚುತ್ತದೆ, ಭಗವಂತನ ಸ್ಮರಣೆಯಿಂದ ಚಿತ್ತವು ಭಗವಂತನಲ್ಲಿಯೇ ಕರಗಿಹೋಗುವದು.]

ಸಮಆಸನಆಸೀನಃ ಸಮಕಾಯೋ ಯಥಾಸುಖಮ್ ।
ಹಸ್ತಾವುತ್ಸಜ್ಗ ಆಧಾಯ ಸ್ವನಾಸಾಗ್ರಕೃತೇಕ್ಷಣಃ ॥೩೨॥
ಪ್ರಾಣಸ್ಯ ಶೋಧಯೇನ್ಮಾರ್ಗಂ ಪೂರಕುಮ್ಭಕರೇಚಕೈಃ ।
ವಿಪರ್ಯಯೇಣಾಪಿ ಶನೈರಭ್ಯಸೇನ್ನಿರ್ಜಿತೇನ್ದ್ರಿಯಃ ॥೩೩॥
ಹೃದ್ಯವಿಚ್ಛಿನ್ನಮೋಙ್ಕಾರಂ ಘಣ್ಟಾನಾದಂ ಬಿಸೋರ್ಣವತ್ ।
ಪ್ರಾಣೇನೋದೀರ್ಯ ತತ್ರಾಥ ಪುನಃ ಸಂವೇಶಯೇತ್ ಸ್ವರಮ್ ॥
ಏವಂ ಪ್ರಣವಸಂಯುಕ್ತಂ ಪ್ರಾಣಮೇವ ಸಮಭ್ಯಸೇತ್ ।
ದಶಕೃತ್ವಸ್ತ್ರಿಷವಣಂ ಮಾಸಾದರ್ವಾಗ್ ಜಿತಾನಿಲಃ ॥೩೫॥

[ಆಸನಪ್ರಾಣಾಯಾಮಗಳ ಪ್ರಕಾರವನ್ನು ಇಲ್ಲಿ ಹೇಳಿದೆ.]

ಹೃತ್ಪುಣ್ಡರೀಕಮನ್ತಃಸ್ಥಮೂರ್ಧ್ವನಾಲಮಧೋಮುಖಮ್ ।
ಧ್ಯಾತ್ವೋರ್ಧ್ವಮುಖಮುನ್ನಿದ್ರಮಷ್ಟಪತ್ರಂ ಸಕರ್ಣಿಕಮ್ ॥೩೬॥

[ಹೃತ್ಕಮಲವು ಕೆಳಗಡೆಗೆ ಜೋಲಿರುವದನ್ನು ಮೇಲಕ್ಕೆದ್ದು ಅರಳಿಕೊಂಡಂತೆಯೂ ಅದಕ್ಕೆ ಎಂಟು ದಳಗಳಿರುವಂತೆಯೂ ಭಾವಿಸಿಕೊಳ್ಳಬೇಕು.]

ಕರ್ಣಿಕಾಯಾಂ ನ್ಯಸೇತ್ ಸೂರ್ಯಸೋಮಾಗ್ನೀನುತ್ತರೋತ್ತರಮ್ ।
ವಹ್ನಿಮಧ್ಯೇ ಸ್ಮರೇದ್ರೂಪಂ ಮಮೈತದ್ಧ್ಯಾನಮಙ್ಗಲಮ್ ॥೩೭॥
ಸಮಂ ಪ್ರಶಾನ್ತಂ ಸುಮುಖಂ ದೀರ್ಘಚಾರುಚತುರ್ಭುಜಮ್ ।
ಸುಚಾರುಸುನ್ದರಗ್ರೀವಂ ಸುಕಪೋಲಂ ಶುಚಿಸ್ಮಿತಮ್ ॥೩೮॥

ಸಮಾನಕರ್ಣವಿನ್ಯಸ್ತಸ್ಫುರನ್ಮಕರಕುಣ್ಡಲಮ್ ।
ಹೇಮಾಮ್ಬರಂ ಘನಶ್ಯಾಮಂ ಶ್ರೀವತ್ಸಶ್ರೀನಿಕೇತನಮ್ ॥೩೯॥
ಶಙ್ಖಚಕ್ರಗದಾಪದ್ಮವನಮಾಲಾವಿಭೂಷಿತಮ್ ।
ನೂಪುರೈರ್ವಿಲಸತ್ಪಾದಂ ಕೌಸ್ತುಭಪ್ರಭಯಾ ಯುತಮ್ ॥೪೦॥
ದ್ಯುಮತ್ಕಿರೀಟಕಟಕಕಟಿಸೂತ್ರಾಙ್ಗದಾಯುತಮ್ ।
ಸರ್ವಾಙ್ಗಸುನ್ದರಂ ಹೃದ್ಯಂ ಪ್ರಸಾದಸುಮುಖೇಕ್ಷಣಮ್ ॥೪೧॥
ಸುಕುಮಾರಭಿಧ್ಯಾಯೇತ್ ಸರ್ವಾಙ್ಗೇಷು ಮನೋ ದಧತ್ ॥
ಇನ್ದ್ರಿಯಾಣೀನ್ದ್ರಿಯಾರ್ಥೇಭ್ಯೋ ಮನಸಾಽಽಕೃಷ್ಯ ತನ್ಮನಃ ।
ಬುದ್ಧ್ಯಾ ಸಾರಥಿನಾ ಧೀರಃ ಪ್ರಣಯೇನ್ ಮಯಿ ಸರ್ವತಃ ॥೪೨॥
ತತ್ಸರ್ವವ್ಯಾಪಕಂ ಚಿತ್ತಮಾಕೃಷ್ಯೈಕತ್ರ ಧಾರಯೇತ್ ।
ನಾನ್ಯಾನಿ ಚಿನ್ತಯೇದ್ ಭೂಯಃ ಸುಸ್ಮಿತಂ ಭಾವಯೇನ್ಮುಖಮ್ ॥೪೩॥
ತತ್ರ ಲಬ್ಧಪದಂ ಚಿತ್ತಮಾಕೃಷ್ಯ ವ್ಯೋಮ್ನಿ ಧಾರಯೇತ್ ।
ತಚ್ಚ ತ್ಯಕ್ತ್ವಾ ಮದಾರೋಹೋ ನ ಕಿಞ್ಚಿದಪಿ ಚಿನ್ತಯೇತ್ ॥೪೪॥
ಏವಂ ಸಮಾಹಿತಮತಿರ್ಮಾಮೇವಾಽಽತ್ಮಾನಮಾತ್ಮನಿ ।
ವಿಚಷ್ಟೇ ಮಯಿ ಸರ್ವಾತ್ಮನ್ ಜ್ಯೋತಿರ್ಜ್ಯೋತೀಂಷಿ ಸಂಯುತಮ್ ॥೪೫॥
ಧ್ಯಾನೇನೇತ್ಥಂ ಸುತೀವ್ರೇಣ ಯುಞ್ಜತೋ ಯೋಗಿನೋ ಮನಃ ।
ಸಂಯಾಸ್ಯತ್ಯಾಶು ನಿರ್ವಾಣಂ ದ್ರವ್ಯಜ್ಞಾನಾಕ್ರಿಯಾಭ್ರಮಃ ॥೪೬॥

ಭಾಗ. ೧೧–೧೪–೩೨ರಿಂದ ೪೬

ಮೇಲಿನ ವರ್ಣನೆಯಲ್ಲಿ ಸೂರ್ಯ,ಚಂದ್ರ,ಅಗ್ನಿ– ಮಂಡಲಗಳನ್ನು ಹೃದಯದಲ್ಲಿ ಧ್ಯಾನಿಸಿಕೊಂಡು ವಹ್ನಿಮಧ್ಯದಲ್ಲಿ ಶ್ರೀಕೃಷ್ಣಪರಮಾತ್ಮನ ಶರೀರದ ಅವಯವಗಳು, ಆಯುಧಗಳು, ವಸ್ತ್ರಾಭರಣಗಳು– ಇವುಗಳನ್ನು ಚಿಂತಿಸಿಕೊಂಡು ಕ್ರಮಕ್ರಮವಾಗಿ ಮುಖವೊಂದರಲ್ಲಿಯೇ ಚಿತ್ತವನ್ನಿಟ್ಟು, ಆ ಬಳಿಕ ಅದನ್ನು ಬಿಟ್ಟು ಆಕಾಶದಲ್ಲಿ ಚಿತ್ತವನ್ನಿಡುವದನ್ನು ಅಭ್ಯಾಸಮಾಡಿ, ಕೊನೆಗೆ ಭಗವತ್ಸ್ವರೂಪಮಾತ್ರವನ್ನೇ ಧ್ಯಾನಿಸುತ್ತಿದ್ದರೆ ಆ ಭಗವಂತನಲ್ಲಿಯೇ ತನ್ನನ್ನು ಐಕ್ಯಗೊಳಿಸಿಕೊಂಡಾಗ ನಾಮರೂಪಕರ್ಮಾತ್ಮಕವಾದ ಪ್ರಪಂಚಭ್ರಮೆಯು ಇಲ್ಲವಾಗುವದು– ಎಂದು ವಿವರಿಸಿರುತ್ತದೆ.

## ಭಗವದ್ಗೀತೆ

೩೬. ಭಗವದ್ಗೀತೆಯೂ ಭಾಗವತಮತಕ್ಕೆ ಸೇರಿದ ಗ್ರಂಥವಂಬುದಕ್ಕೆ ಹಿಂದೆ (ಪು. ೭೦) ನಾವು ಕೆಲವು ಯುಕ್ತಿಗಳನ್ನು ಕೊಟ್ಟಿರುತ್ತೇವೆ. ಭಗವದ್ಗೀತೆಯು ಭಾಗವತಮತವನ್ನೇ ಹೇಳುತ್ತದೆ ಎಂದು ಒಪ್ಪಿದ ಬಳಿಕವೂ ಆ ಧರ್ಮವು ಮೊದಲು ಪ್ರವೃತ್ತಿಪರ–

ಕರ್ಮಪ್ರಧಾನವಾಗಿತ್ತೆಂದೂ ಮುಂದೆ ಅದಕ್ಕೆ ಭಕ್ತಿಪ್ರಾಧಾನ್ಯವೂ ಕೊನೆಗೆ ರಾಮಾನುಜಾಚಾರ್ಯರ ಕಾಲಕ್ಕೆ ವಿಶಿಷ್ಟಾದ್ವೈತಸ್ವರೂಪವೂ ಬಂತೆಂದೂ **ಬಾಲಗಂಗಾಧರತಿಲಕರೇ ಮುಂತಾದವರು** (ಪು.೫೪೭)ಕೆಲವರು ಭಾವಿಸಿರುತ್ತಾರೆ. ಜನಕನ ಮಾರ್ಗವು ಜ್ಞಾನಕರ್ಮಸಮುಚ್ಚಯವಾಗಿದ್ದರೂ ಆ ಮಾರ್ಗದಲ್ಲಿ ಭಕ್ತಿಯು ಸೇರಿದ್ದಿಲ್ಲವೆಂದೂ (ಗೀ.ರ.೪,ಪು.೫೩೫)ಅವರ ನಂಬಿಕೆ. ನೈಷ್ಕರ್ಮ್ಯವೆಂದರೆ ನಿಷ್ಕಾಮ ಕರ್ಮವೇ ಎಂದು ಅವರು ಹೇಳುವದು ಸರಿಯಲ್ಲವೆಂಬುದಕ್ಕೆ ಕರ್ಮಜಸಿದ್ಧಿಯನ್ನು ಹೇಳಿದ ಬಳಿಕ ಆ ನೈಷ್ಕರ್ಮ್ಯಸಿದ್ಧಿಯು ಸಂನ್ಯಾಸದಿಂದ ದೊರಕುವದು (ಗೀ. ೧೮–೪೯)ಎಂಬ ಭಗವದುಕ್ತಿಯೇ ಪ್ರಮಾಣವಾಗಿರುತ್ತದೆ. ಏಕಾಂತಭಕ್ತಿಯೇ ಭಾಗವತದ ಪರಮಸಾರವೆಂಬುದು ಹಿಂದೆ ನಾರಾಯಣೀಯದ ವಿಚಾರದಲ್ಲಿಯೇ ತೋರಿಸಿರುತ್ತೇವಾದ್ದರಿಂದ ಈ ವಾದಗ್ರಸ್ತವಿಷಯವು ಇಲ್ಲಿ ಪರಿಶೀಲನೀಯವಲ್ಲ. ಪ್ರಕೃತಕ್ಕೆ **ವೈಷ್ಣವಪುರಾಣಗಳಲ್ಲಿ ಹೇಗೋ ಹಾಗೆ ಭಗವದ್ಗೀತೆಯಲ್ಲಿಯೂ ಭಗವದ್ಭಕ್ತಿಯನ್ನೇ ಮುಖ್ಯವಾಗಿ** ಎಣಿಸಿದೆಯೆಂಬುದನ್ನು ಇಲ್ಲಿ ಲಕ್ಷ್ಯಕ್ಕೆ ತಂದುಕೊಂಡರೆ ಸಾಕಾಗಿದೆ.

"ಚತುರ್ವಿಧಭಕ್ತರಲ್ಲಿ ಆರ್ತ, ಜಿಜ್ಞಾಸು, ಅರ್ಥಾರ್ಥಿ– ಎಂದು ಮೂವರು ಗೌಣಭಕ್ತರು; ಜ್ಞಾನಿಯು ಮುಖ್ಯಭಕ್ತನು, ಅವನೇ ಏಕಭಕ್ತಿಯುಳ್ಳವನು (ಗೀ. ೭–೧೭) ಅವನು ಭಗವಂತನ ಆತ್ಮನೇ (೭–೧೮) ಭಗವಂತನೇ ಅವನಿಗೆ ಪ್ರಿಯನು, ಜ್ಞಾನಿಭಕ್ತನೇ ಭಗವಂತನಿಗೆ ಪ್ರಿಯನು (ಗೀ. ೭–೧೭) ಸ್ವಕರ್ಮದಿಂದ ಭಗವಂತನನ್ನು ಅರ್ಚಿಸಿದರೆ ಸಂಸಿದ್ಧಿಯನ್ನು ಪಡೆಯುತ್ತಾನೆ (೧೮–೪೬) ಹೀಗೆ ಸಿದ್ಧಿಯನ್ನು ಪಡೆದವನೂ ಜ್ಞಾನದ ಪರನಿಷ್ಠೆ ಎಂಬ ಚತುರ್ಥಭಕ್ತಿಯನ್ನು (೧೮–೫೦) ಪಡೆದುಕೊಳ್ಳುತ್ತಾನೆ.

ಈ ನಿಷ್ಠೆಯನ್ನು ಅಥವಾ ಪರಭಕ್ತಿಯನ್ನು ಪಡೆದುಕೊಳ್ಳುವದಕ್ಕೆ ಚಿತ್ತಶುದ್ಧಿ, ಆತ್ಮನಿಗ್ರಹ, ವಿಷಯತ್ಯಾಗ, ರಾಗದ್ವೇಷತಿರಸ್ಕಾರ (೧೮–೫೧) ಏಕಾಂತವಾಸ, ಧ್ಯಾನಯೋಗನಿತ್ಯತೆ (೧೮–೫೨)ಇವು ಅವಶ್ಯ. ಅಹಂಕಾರ, ಬಲ, ದರ್ಪ, ಕಾಮ, ಕ್ರೋಧ, ಪರಿಗ್ರಹ– ಇವುಗಳನ್ನು ಬಿಟ್ಟವನು ಬ್ರಹ್ಮಭಾವಕ್ಕೆ ತಕ್ಕವನಾಗುತ್ತಾನೆ. ಪರಮನೈಷ್ಕರ್ಮ್ಯಸಿದ್ಧಿಯು ಸಂನ್ಯಾಸದಿಂದಲೇ ಸಿಕ್ಕುವದು (೧೮–೪೯). ಧ್ಯಾನಯೋಗದಿಂದ ಬ್ರಹ್ಮಭಾವವನ್ನು ಪಡೆದುಕೊಂಡವನು ಪರಭಕ್ತಿಯನ್ನು ಹೊಂದಿದವನಾಗಿ ಭಗವಂತನ ತತ್ತ್ವವನ್ನೂ ಸರ್ವವ್ಯಾಪಕತ್ವವನ್ನೂ ಅರಿತುಕೊಂಡು ಆತನಲ್ಲಿಯೇ ಸೇರಿಹೋಗುತ್ತಾನೆ . (ಗೀ. ೧೮–೫೫) ಎಂಬುದು **ಗೀತೆಯ ಸಾಧನೋಪದೇಶದ ಸಾರವು. ಭಕ್ತಿಯಿಂದ ಮೊದಲಾಗಿ, ಭಕ್ತಿಯುಕ್ತಸಾಧನಗಳಿಂದಲೇ ಮುನ್ನಡೆದು ವಾಸುದೇವನೇ ಸರ್ವವೆಂದು ತಿಳಿದುಕೊಳ್ಳುವ ಪರಭಕ್ತಿಯಲ್ಲಿಯೇ**

**(೭–೧೯)ಕೊನೆಗಾಣುವ ಪರಿಯನ್ನು ತೋರಿಸುವ ಗೀತೆಯು ಭಾಗವತಧರ್ಮದ ಪರಮಮಾನ್ಯಗ್ರಂಥವಾಗಿದೆ ಎಂಬುದಕ್ಕೆ ಸಂದೇಹವಿಲ್ಲ.** ಶ್ರೀಮದ್ಭಾಗವತವು ಅದರ ಅಭಿಪ್ರಾಯವನ್ನು ಬಗೆಬಗೆಯ ಆಖ್ಯಾನಗಳಿಂದಲೂ ಪರಿಪರಿಯ ಉಪದೇಶಗಳಿಂದಲೂ ವಿಸ್ತರಿಸಿ ಮನಗಾಣಿಸುವದರಿಂದ ಭಾಗವತಧರ್ಮದ ಭಾಂಡಾಗಾರವಾಗಿದೆ ಎನ್ನಬಹುದು.

## ನಿತ್ಯಾಹ್ನಿಕವೂ ಆಚರಣೆಗಳೂ

೩೭. ಅಭಿಗಮನಾದಿಗಳ ತತ್ತ್ವವನ್ನು ನಿರ್ಣಯಿಸುವದಕ್ಕಾಗಿ ಸ್ಮೃತಿಗಳನ್ನೂ ಪುರಾಣಗಳನ್ನು ಮೊದಲು ವಿಮರ್ಶಿಸಿದ್ದಾಯಿತು. ಅಭಿಗಮನಾದಿಗಳೇ ವೈಷ್ಣವರ ನಿತ್ಯಾಹ್ನಿಕಕ್ಕೆ ಸಂಬಂಧಪಟ್ಟ ಕರ್ಮಗಳಾಗಿವೆ. ಇವಕ್ಕೆ ಸಂಬಂಧಪಟ್ಟಂತೆ ಕೆಲವು ಆಚರಣೆಗಳೂ ಹೆಣೆದುಕೊಂಡಿವೆ. ಇನ್ನು ಇವಕ್ಕೆ ಸಂಬಂದಪಟ್ಟಂತೆ ವ್ರತಗಳೂ ವಿಶೇಷೋತ್ಸವದಿನಗಳ ಆಚರಣೆಗಳೂ ಸೇರಿರುತ್ತವೆ. ಶ್ರೀಶಂಕರಾಚಾರ್ಯರವರು ಪರೀಕ್ಷಿಸಿರುವ ಭಾಗವತಮತದಲ್ಲಿ ಜೀವಾದ್ಯುತ್ಪತ್ತಿಯನ್ನಲ್ಲದೆ ಬೇರೆ ಏನನ್ನೂ ಖಂಡಿಸಿಲ್ಲ; ಭಗವಂತನ ವ್ಯೂಹಗಳು, ಅನನ್ಯಚಿತ್ತತೆಯಿಂದ ಭಗವಂತನನ್ನು ಆರಾಧಿಸುವದು– ಇವೆರಡೂ ಶ್ರುತಿ ಸ್ಮೃತಿಗಳಿಗೆ ಅನುಸಾರವಾಗಿಯೆ ಇವೆ ಎಂದು ಒಪ್ಪಿಕೊಂಡಿರುತ್ತಾರೆ. ಇದಕ್ಕೆ ಸಂಗಾನವಾಗಿ ನಾವು ಈವರೆಗೆ ಸ್ಮೃತಿಪುರಾಣಗಳನ್ನು ಉದಾಹರಿಸಿಯೂ ಇರುತ್ತೇವೆ. 'ಈ ಶಾಸ್ತ್ರವನ್ನು ಶಾಂಡಿಲ್ಯರು ಚತುರ್ವೇದಗಳನ್ನೂ ಅಧ್ಯಯನಮಾಡಿದ ಬಳಿಕ ಅಭ್ಯಾಸಮಾಡಿ ಕೃತಾರ್ಥರಾದರು' ಎಂದು ಹೇಳುವ (ಶಾಂಕರಸೂತ್ರಭಾಷ್ಯ ೨–೨–೪೫) ಪಾಂಚರಾತ್ರಗ್ರಂಥವು ನಮಗೆ ಈವರೆಗೆ ಸಿಕ್ಕಿರುವದಿಲ್ಲವಾದ್ದರಿಂದ ನಾವು ಹಿಂದೆ (೯೧) ಪರಾಮರ್ಶಿಸಿದ್ದ **ವೃದ್ಧಹಾರೀತ ಸ್ಮೃತಿ**ಯನ್ನೂ ನಮ್ಮಲ್ಲಿರುವ **ಶಾಂಡಿಲ್ಯಸಂಹಿತೆ**ಯನ್ನೂ ಆಧಾರವಾಗಿಟ್ಟುಕೊಂಡು ಶ್ರುತಿಸ್ಮೃತಿಪುರಾಣಗಳಿಗೆ ಏಕವಾಕ್ಯತೆಯಾಗುವಂತೆ ಈ ಆಹ್ನಿಕವನ್ನೂ ಆಚರಣೆಯನ್ನೂ ಸಂಗ್ರಹವಾಗಿ ತಿಳಿಸುವೆವು.

ತಂತ್ರಗ್ರಂಥಗಳಲ್ಲಿ **ಜ್ಞಾನ** (ಎಂದರೆ ಭಗವಂತ, ಜೀವರುಗಳು ಮತ್ತು ಜಗತ್ತು ಇವುಗಳ ತತ್ತ್ವನಿರ್ಣಯ) **ಯೋಗ** (ಮುಕ್ತ್ಯುಪಾಯವಾಗಿರುವ ಧ್ಯಾನ), **ಕ್ರಿಯೆ** (ಮಂದಿರನಿರ್ಮಾಣ, ಮೂರ್ತಿಪ್ರತಿಷ್ಠಾಪನ– ಮುಂತಾದವುಗಳ ವಿವರ) **ಚರ್ಯೆ** (ಆಹ್ನಿಕ, ಅರ್ಚನ, ಉತ್ಸವಾದಿಗಳ ವಿಶೇಷಾನುಷ್ಠಾನ) ಇವುಗಳೇ ಮುಖ್ಯ. ಇವುಗಳಲ್ಲಿ ಮೊದಲನೆಯ ಎರಡರ ವಿಚಾರಕ್ಕಿಂತಲೂ ಕೊನೆಯ ಎರಡರ ವಿಚಾರವೇ ಹೆಚ್ಚಾಗಿರುತ್ತದೆ. ಅವುಗಳನ್ನೇ ಈಗ ನಾವು ಪರಶೀಲನೆಗೆ ತೆಗೆದುಕೊಂಡಿರುವದು.

## (೧) ಅರ್ಚನಸಿದ್ಧಿ

ಭಗವದರ್ಚನೆಯಿಂದ ಸಂಸಿದ್ಧಿಯು ಹೇಗೆ ಆಗುವದೆಂಬುದನ್ನು ಶಾಂಡಿಲ್ಯ ಸಂಹಿತೆಯ ದ್ವಿತೀಯಾಧ್ಯಾಯದ ಕೊನೆಯಲ್ಲಿ ಹೀಗೆ ತಿಳಿಸಿರುತ್ತದೆ :

**ದೀಕ್ಷಾವಿಧಿಂ ಗುರೋರ್ಲಬ್ಧ್ವಾ ಕೃತ್ವಾ ದೇಹಂ ತದಾತ್ಮಕಮ್ ।**
**ಶ್ರದ್ಧಯಾ ಪ್ರಯತೋ ನಿತ್ಯಂ ಸಮರ್ಚೇದ್ ಭಗವತ್ಪದಮ್ ॥೩೫॥**

ಭಾವಾರ್ಥ:- ಗುರುವಿನಿಂದ ದೀಕ್ಷಾವಿಧಿಯನ್ನು ಪಡೆದುಕೊಂಡು ದೇಹವನ್ನು ತನ್ಮಯನಾಗಿ ಮಾಡಿಕೊಂಡು ಶ್ರದ್ಧೆಯಿಂದ , ಶುಚಿಯಾಗಿ ನಿತ್ಯವೂ ಭಗವಂತನನ್ನು ಅರ್ಚನೆಮಾಡಬೇಕು.

**ಪ್ರಾಣಾಯಾಮಾದಿಭಿಃ ಶುದ್ಧಂ ಧಾರಣಾದಗ್ಧಕಿಲ್ಬಿಷಮ್ ।**
**ಸಮರ್ಚನ್ ಯದಸೌ ಚೇತಃಸುಖಮತ್ಯನ್ತಮಶ್ನುತೇ ॥೩೬॥**

ಭಾವಾರ್ಥ:- ಪ್ರಾಣಾಯಾಮದಿಂದ ಶುದ್ಧನಾಗಿ ಧಾರಣೆಯಿಂದ ಪಾಪವನ್ನು ಸುಟ್ಟುಹಾಕಿಕೊಂಡು ಅರ್ಚನೆಮಾಡಿದರೇ ಚಿತ್ತದಲ್ಲಿ ಆನಂದವನ್ನು ಹೊಂದುತ್ತಾನೆ.

**ಪ್ರಾತರ್ಧ್ಯಾತ್ವಾ ತಥಾ ಸ್ನಾತ್ವಾ ನಿವೃತ್ತಃ ಸ್ವಾಹ್ನಿಕಾದಪಿ ।**
**ಭೂತಾನಿ ಶೋಧ್ಯ ಪ್ರಾಣಾಂಶ್ಚ ಸಂಸ್ಥಾಪ್ಯಾಸೌ ವಿಶುಧ್ಯತಿ ॥೩೭॥**

ಭಾವಾರ್ಥ:- ಬೆಳಗ್ಗೆ ಧ್ಯಾನಮಾಡಿ, ಸ್ನಾನಮಾಡಿ, ಆಹ್ನಿಕವನ್ನು ಮಾಡಿದ ಬಳಿಕ ಭೂಮಿಶುದ್ಧಿಯನ್ನು ಮಾಡಿಕೊಂಡು ಪ್ರಾಣಾಯಾಮವನ್ನು ಮಾಡಿಕೊಂಡರೆ ವಿಶುದ್ಧನಾಗುತ್ತಾನೆ.

**ನ್ಯಾಸೈರ್ನಾನಾವಿಧೈಸ್ತಸ್ಯ ಭವೇತ್ ಸರ್ವಾತ್ಮಭಾವನಾ ।**
**ತಯಾಸ್ಯಾರ್ಚನಸಂಸಿದ್ಧಿರ್ಭಾವವೃದ್ಧಿಃ ಸಮರ್ಚನಾತ್ ॥೩೮॥**

ಭಾವಾರ್ಥ:- ಬಗೆಬಗೆಯ ನ್ಯಾಸಗಳಿಂದ ಸರ್ವಾತ್ಮಭಾವನೆಯುಂಟಾಗುವದು, ಅದರಿಂದ ಅರ್ಚನಸಿದ್ಧಿಯಾಗುವದು. ಅರ್ಚನಸಿದ್ಧಿಯಿಂದ ಭಾವವು ವೃದ್ಧಿಯಾಗುವದು.

ಈ ಮೇಲಿನ ಸಾಮಾನ್ಯವಚನಗಳು ಸಾಂಗೋಪಾಂಗವಾಗಿ ಮಾಡುವ ಅರ್ಚನೆಯ ಅವಶ್ಯಕತೆಯನ್ನು ತಿಳಿಸುವವು.

## (೨) ಪಂಚಸಂಸ್ಕಾರಗಳು

**ಅಥಾರ್ಚಾವಸಥಂ ತಸ್ಯ ಶೃಣ್ವನ್ತು ಮುನಿಸತ್ತಮಾಃ ।**
**ದಿವ್ಯಸೂರೀನ್ ಪ್ರಪದ್ಯಾಶು ಪಞ್ಚಧಾ ಸಂಸ್ಕೃತಃ ಸ್ವಯಮ್ ॥೧॥**

ಪಞ್ಚಾರ್ಥವಿತ್ ಪುಣ್ಯಮೂರ್ತಿರ್ವೇದಶಾಸ್ತ್ರಾರ್ಥವಿದಗ್ರಣೀಃ ।
ಅಮಾನೀ ಮಾನದಃ ಶಾನ್ತೋ ಮೈತ್ರಃ ಕರುಣ ಆತ್ಮವಾನ್ ॥
ನಿಸ್ಪೃಹಃ ಸರ್ವಕಾಮೇಭ್ಯೋ ವಿರಕ್ತೋ ನಿಜಧರ್ಮಕೃತ್ ।
ಶುಚಿಃ ಪ್ರಸನ್ನೋ ಗಮ್ಭೀರೋ ಧೀರೋ ವಿಷ್ಣುಜನಪ್ರಿಯಃ ॥ ೩–೧ ರಿಂದ ೩

ವಿಷ್ಣ್ವರ್ಚನೆಯನ್ನು ಮಾಡುವದಕ್ಕೆ ಇರಬೇಕಾದ ಯೋಗ್ಯತೆಗಳೊಳಗೆ 'ಪಞ್ಚಧಾ ಸಂಸ್ಕೃತಃ' ಎಂಬ ವಿಶೇಷಣವೊಂದು ಇಲ್ಲಿದೆ ಎಂಬುದನ್ನು ಲಕ್ಷಿಸಬೇಕು. ವೃದ್ಧಹಾರೀತಸ್ಮೃತಿಯಲ್ಲಿ

(೧) ಸಂಸ್ಕಾರಾಣಾಂ ತು ಸರ್ವೇಷಾಮಾದ್ಯಂ ಚಕ್ರಾದಿಧಾರಣಮ್ ।
ತತ್ಕರ್ತವ್ಯಂ ಹಿ ಸರ್ವೇಷಾಂ ವಿಧಿನಾ ವೈ ದ್ವಿಜನ್ಮನಾಮ್ ॥೨–೩॥
(೨) ತ್ರಿಸನ್ಧ್ಯಾಸು ಮೃದಾ ವಿಪ್ರೋ ಯಾಗಕಾಲೇ ವಿಶೇಷತಃ ।
ಶ್ರಾದ್ಧೇ ದಾನೇ ತಥಾ ಹೋಮೇ ಸ್ವಾಧ್ಯಾಯೇ ಪಿತೃತರ್ಪಣೇ
ಶ್ರದ್ಧಾಲುರೂರ್ಧ್ವಪುಣ್ಡ್ರಾಣಿ ಬಿಭೃಯಾದ್ ದ್ವಿಜಸತ್ತಮಃ ॥
ಏವಂ ಪುಣ್ಡ್ರಾಣಿ ಸತತಂ ಧಾರಯೇತ್ ವೈಷ್ಣವೋತ್ತಮಃ ।
ಪುಣ್ಡ್ರಸಂಸ್ಕಾರ ಇತ್ಯೇವಂ ಶಿಷ್ಯೇಣಾಪಿ ಚ ಕಾರಯೇತ್ ॥೯೨॥
(೩) ತೃತೀಯಂ ನಾಮಸಂಸ್ಕಾರಂ ಕುರ್ವೀತ ಶುಭವಾಸರೇ॥ ೩–೧
ಯಸ್ಮಿನ್ ಮಾಪಿ ಭವೇದ್ದೀಕ್ಷಾ ತನ್ಮೂರ್ತೇರ್ನಾಮ ಚೋದಿತಮ್
(೪) ಏವಂ ತೃತೀಯಸಂಸ್ಕಾರಂ ಕೃತ್ವಾ ವೈ ವೈಷ್ಣವೋತ್ತಮಃ ।
ಚತುರ್ಥಂ ಮನ್ತ್ರಸಂಸ್ಕಾರಂ ಕುರ್ವೀತ ದ್ವಿಜಸತ್ತಮಃ ॥ ೪–೧
(೫) ಮನ್ತ್ರಾರ್ಥತತ್ತ್ವವಿದುಷಂ (ವಿದ್ವಾಂಸಂ) ಯೋಗತನ್ತ್ರೇ ನಿಯೋಜಯೇತ್ ।
ಪೂರ್ವಾಹ್ಣೇ ಪೂಜಯೇದ್ ವಿಷ್ಣುಂ ತಸ್ಯ ಪ್ರಿಯತರಂ ಶುಭಮ್ ॥

ಈ ಶ್ಲೋಕಗಳಲ್ಲಿ ಹೇಳಿರುವ ಚಕ್ರಾದಿಧಾರಣ, ಊರ್ಧ್ವಪುಂಡ್ರ, ನಾಮಸಂಸ್ಕಾರ, ಮನ್ತ್ರಸಂಸ್ಕಾರ, ಯೋಗ (?)– ಇವೇ ಪಂಚಸಂಸ್ಕಾರಗಳೆಂದು ತಿಳಿಯಬೇಕಾಗಿದೆ.

ವೃದ್ಧಹಾರೀತಸ್ಮೃತಿಯು ಸ್ವಮತಾಭಿನಿವೇಶಿಗಳ ಕೈಗೆ ಸಿಕ್ಕಿ ಈಗಿನ ರೂಪಕ್ಕೆ ತಿರುಗಿರಬಹುದೆಂಬುದಕ್ಕೆ ಅವಕಾಶವಿದೆ. ಏಕೆಂದರೆ ಇದರಲ್ಲಿ ವೈಷ್ಣವಾಚಾರಕ್ಕೆ ಸೇರಿದ ಮುದ್ರಾಧಾರಣವೇ ಮುಂತಾದವುಗಳಿಲ್ಲದ, ಅಥವಾ ಶೈವಾಚಾರವುಳ್ಳ ಜನರನ್ನು ಮತ್ತೆ ಮತ್ತೆ ಕಟುವಾಗಿ ನಿಂದಿಸಿರುವದು ಕಂಡುಬರುತ್ತದೆ.

ಉದಾಹರಣೆಗೆ :

**(ಅ) ಅಚಕ್ರಧಾರೀ ವಿಪ್ರಸ್ತು ಸರ್ವಕರ್ಮಸು ಗರ್ಹಿತಃ ।**
**ಅವೈಷ್ಣವಃ ಸಮಾಪನ್ನೋ ನರಕಂ ಚಾಧಿಗಚ್ಛತಿ ॥** ೨-೨೯
**ಅನಾಯುಧಾಸೋ ಅಸುರಾ ಅದೇವಾ ಇತಿ ವೈ ಶ್ರುತಿಃ ।**
**ಚಕ್ರೇಣ ತಾಮಪವಪ ಇತ್ಯೃಚಾ ಸಮುದೀರಿತಮ್ ॥** ೨-೩೪

ಎಂದು ಶ್ರುತಿಯಲ್ಲಿ ಚಕ್ರಾದ್ಯಾಯುಧಗಳಿಲ್ಲದವರನ್ನು ನಿಂದೆಮಾಡಿರುವಂತೆ ವಾಖ್ಯಾನಮಾಡಿರುತ್ತದೆ.

ಮುದ್ರಾಧಾರಣೆಯಿಲ್ಲದವರಿಗೆ ಅವೈಷ್ಣವತ್ವವೂ ನರಕಪ್ರಾಪ್ತಿಯೂ ಆಗುವವೆಂದು ಹೇಳಿದೆ, ಇದರಂತೆ ಊರ್ಧ್ವಪುಂಡ್ರದ ಪ್ರಶಂಸೆಗಾಗಿ

**(ಆ) ರುದ್ರಾರ್ಚನಂ ತ್ರಿಪುಣ್ಡ್ರಸ್ಯ ಧಾರಣಂ ಯತ್ರ ದೃಶ್ಯತೇ ।**
**ತಚ್ಛೂ (ಸ ಶೂ) ದ್ರಾಣಾಂ ವಿಧಿಃ ಪ್ರೋಕ್ತೋ ನ ದ್ವಿಜಾನಾಂ ಕದಾಚನ ॥**

ಎಂದು (ಶ್ಲೋ.೪೪) ರುದ್ರಾರ್ಚನೆಯೂ ತ್ರಿಪುಂಡ್ರಧಾರಣೆಯೂ ಶೂದ್ರರಿಗೆ ಎಂದೇ ಹೇಳಿರುತ್ತದೆ.

**ತಿರ್ಯಕ್ಪುಣ್ಡ್ರಧರಂ ವಿಪ್ರಂ ಚಣ್ಡಾಲಮಿವ ಸಂತ್ಯಜೇತ್ ।**
**ಸೋಽನರ್ಹಃ ಸರ್ವಕೃತ್ಯೇಷು ಸರ್ವಲೋಕೇಷು ಗರ್ಹಿತಃ ॥** ೨-೬೬

ಎಂದು ಭಸ್ಮಧಾರಣೆಯನ್ನು ಮಾಡಿದವರು ಚಂಡಾಲಸಮರೆಂದೂ ಯಾವ ಕರ್ಮಕ್ಕೂ ಅರ್ಹರಲ್ಲವೆಂದೂ ನಿಂದಿಸಿದೆ !

**(3) ಯಸ್ಯ ವೈ ವೈಷ್ಣವಂ ನಾಮ ನಾಸ್ತಿ ಚೇತ್ತು ದ್ವಿಜನ್ಮನಃ ।**
**ಅನಾಮಿ(ಮ)ಕಃ ಸ ವಿಜ್ಞೇಯಃ ಸರ್ವಕರ್ಮಸು ಗರ್ಹಿತಃ ॥**

ಯಾವನಿಗೆ ವಿಷ್ಣುವಿನ ಹೆಸರನ್ನು ಇಟ್ಟಿಲ್ಲವೋ ಅವನು ಅನಾಮಧೇಯನು, ಕರ್ಮಬಹಿಷ್ಕೃತನು –ಎಂದಿದೆ.

ಈ ವಾಕ್ಯಗಳನ್ನು ನೋಡಿ ಇಲ್ಲಿ ನಿಂದಿಸಿರುವ ಸಂಸ್ಕಾರಗಳೆಲ್ಲ ಭಾಗವತಧರ್ಮಕ್ಕೆ ನಿಷಿದ್ಧವೆಂದು ಭಾವಿಸಬಾರದು; ಕುಲಕ್ರಮಾಗತವಾಗಿ ಬಂದಿರುವ ಆಚಾರಗಳನ್ನು ಆವಶ್ಯವಾಗಿ ಅನುಸರಿಸಬಹುದು. ಶ್ರೀಕೃಷ್ಣಭಗವಂತನೇ–

**ಅಹಮಾತ್ಮಾ ಹಿ ಲೋಕಾನಾಂ ವಿಶ್ವೇಷಾಂ ಪಾಣ್ಡುನನ್ದನ ।**
**ತಸ್ಮಾದಾತ್ಮಾನಮೇವಾಗ್ರ ರುದ್ರಂ ಸಂಪೂಜಯಾಮ್ಯಹಮ್ ॥**

ಮೋ. ಧ. ೩೪೧–೨೩,೨೪

**ರುದ್ರೋ ನಾರಾಯಣಶ್ಚೈವ ಸತ್ತ್ವಮೇಕಂ ದ್ವಿಧಾ ಕೃತಮ್**
**ಲೋಕೇ ಚರತಿ ಕೌನ್ತೇಯ ವ್ಯಕ್ತಿಸ್ಥಂ ಸರ್ವಕರ್ಮಸು** ॥೨೭॥

ಎಂದು ಸ್ಪಷ್ಟವಾಗಿ ಹೇಳಿರುತ್ತಾನೆ. ಆದ್ದರಿಂದ ಮೇಲೆ ಕೊಟ್ಟಿರುವ ಸ್ಮೃತಿಯ ನಿಂದಾವಾಕ್ಯಗಳನ್ನು 'ನ ಹಿ ನಿಂದಾನ್ಯಾಯ'ದ ಅರ್ಥವಾದಗಳೆಂದು ತಿಳಿಯಬೇಕು. ಭಾಗವತಸಂಪ್ರದಾಯದ ಅನುಯಾಯಿಗಳು ಅವಕ್ಕೆ ಬೆದರಿ ಪರಂಪರಾಗತವಾದ ಶೈವಾಚಾರಗಳನ್ನು ಬಿಡುವದಕ್ಕೆ ಕಾರಣವಿಲ್ಲ.

## (೩) ಅರ್ಚನ, (ಪೂಜೆ)

(1) ವಿಷ್ಣುಪುರಾಣದಲ್ಲಿ ಸಾಮಾನ್ಯವಾಗಿ ಆರಾಧನೆಯನ್ನು ಹೀಗೆ ಹೇಳಿದೆ :

**ವರ್ಣಾಶ್ರಮಾಚಾರವತಾ ಪುರುಷೇಣ ಪರಃ ಪುಮಾನ್ ।**
**ವಿಷ್ಣುರಾರಾಧ್ಯತೇ ಪನ್ಥಾ ನಾನ್ಯಸ್ತತ್ತೋಷಕಾರಕಃ ॥** ೩-೮-೯
**ಯಜನ್ ಯಜ್ಞಾನ್ ಯಜತ್ಯೇನಂ ಜಪತ್ಯೇನಂ ಜಪನ್ನೃಪ ।**
**ನಿಘ್ನನ್ನನ್ಯಾನ್ ಹಿನಸ್ತ್ಯೇನಂ ಸರ್ವಭೂತೋ ಯತೋ ಹರಿಃ** ॥೧೦॥
**ತಸ್ಮಾತ್ ಸದಾಚಾರವತಾ ಪುರುಷೇಣ ಜನಾರ್ದನಃ ।**
**ಆರಾಧ್ಯತೇ ಸ್ವವರ್ಣೋಕ್ತಧರ್ಮಾನುಷ್ಠಾನಕಾರಿಣಾ** ॥೧೧॥

ಮೇಲಿನ ಶ್ಲೋಕಗಳಲ್ಲಿ ಹೇಳಿರುವದರ ಸಾರವಿದು: ತನ್ನ ತನ್ನ ವರ್ಣಧರ್ಮ, ತನ್ನತನ್ನ ಆಶ್ರಮಧರ್ಮ– ಇವುಗಳನ್ನು ಅನುಷ್ಠಾನಮಾಡಿದರೆ ವಿಷ್ಣುವಿನ ಆರಾಧನೆಯಾಗುವದು, ಯಾರಿಗೆ ಉಪಕಾರವನ್ನು ಮಾಡಿದರೂ ವಿಷ್ಣುವಿನ ಆರಾಧನೆ, ಯಾರಿಗೆ ಹಿಂಸಾದಿಗಳನ್ನು ಮಾಡಿದರೂ ವಿಷ್ಣುವಿನ ಅಪಚಾರ.

ಇದೇ ಅಭಿಪ್ರಾಯವನ್ನು ಭಗವದ್ಗೀತೆಯಲ್ಲಿಯೂ :

**ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್ ।**
**ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿನ್ದತಿ ಮಾನವಃ ॥** ೧೮–೪೬

ಎಂಬ ಶ್ಲೋಕದಲ್ಲಿ ಪ್ರಕಟಿಸಿರುತ್ತದೆ.

ಈ ಪುರಾಣದಲ್ಲಿ ವರ್ಣಾಶ್ರಮಧರ್ಮಗಳನ್ನು ತಕ್ಕಷ್ಟು ವಿಸ್ತಾರವಾಗಿ ವರ್ಣಿಸಿದೆ. ಸಕಲವರ್ಣಾಶ್ರಮಗಳಿಗೂ ಸಾಧಾರಣವಾಗಿರುವ ಧರ್ಮಗಳನ್ನು ಹೀಗೆಂದು ವರ್ಣಿಸಿದೆ:

**ದಯಾ ಸಮಸ್ತಭೂತೇಷು ತಿತಿಕ್ಷಾ ನಾತಿಮಾನಿತಾ ।**
**ಸತ್ಯಂ ಶೌಚಮನಾಯಾಸೋ ಮಙ್ಗಲಂ ಪ್ರಿಯವಾದಿತಾ ॥** ೩-೮-೩೬
**ಮೈತ್ರ್ಯಸ್ಪೃಹಾ ತಥಾ ತದ್ವದಕಾರ್ಪಣ್ಯಂ ನರೇಶ್ವರ ।**
**ಅನಸೂಯಾ ಚ ಸಾಮಾನ್ಯ (ನ್ಯಾ?) ವರ್ಣಾನಾಂ ಕಥಿತಾ ಗುಣಾಃ** ॥೩೭॥
**ಆಶ್ರಮಾಣಾಂ ಚ ಸರ್ವೇಷಾಮೇತೇ ಸಾಮಾನ್ಯಲಕ್ಷಣಾಃ** ॥೩೮॥

ಇಲ್ಲಿ ಹೇಳಿರುವ ದಯಾದಿಗುಣಗಳು ಎಲ್ಲರಿಗೂ ಇರಬೇಕಾದ ಗುಣಗಳು; ಅವುಗಳಿಂದಲೇ ವಿಷ್ಣುವು ತುಷ್ಟನಾಗುತ್ತಾನೆ; ಅದೇ ಆರಾಧನೆಯ ಪರಮರಹಸ್ಯ. ಗೃಹಸ್ಥನು ಅನುಸರಿಸಬೇಕಾದ ಸದಾಚಾರವನ್ನು (೩–೧೧, ೧೨) ಇಲ್ಲಿ ವಿವರವಾಗಿ ವರ್ಣಿಸಿದೆ.

**ದೇವರ್ಷಿಪೂಜಕಃ ಸಮ್ಯಕ್ ಪಿತೃಪಿಣ್ಡೋದಕಪ್ರದಃ ।**
**ಸತ್ಕರ್ತಾ ಚಾತಿಥೀನಾಂ ಯಃ ಸ ಲೋಕಾನುತ್ತಮಾನ್ ವ್ರಜೇತ್ ॥**

ವಿ.ಪು. ೩–೧೨–೩೩

ದೇವತೆಗಳನ್ನೂ ಋಷಿಗಳನ್ನೂ ಪೂಜಿಸುವವನೂ ಪಿತೃಗಳಿಗೆ ಪಿಂಡೋದಕಗಳನ್ನು ಕೊಡುವವನೂ ಅತಿಥಿಗಳನ್ನು ಸತ್ಕರಿಸುವವನೂ ಉತ್ತಮಲೋಕಗಳನ್ನು ಪಡೆಯುವನು-ಎಂಬ ಸಾಮಾನ್ಯೋಕ್ತಿಯಿಲ್ಲಿದೆ. ಮನೆದೇವರ ಪೂಜೆಯ ವಿಷಯಕ್ಕೆ,

**ತತೋ ಗೃಹಾರ್ಚನಂ ಕುರ್ಯಾದಭೀಷ್ಟಸುರಪೂಜನಮ್ ।**
**ಜಲಾಭಿಷೇಕೈಃ ಪುಷ್ಪೈಶ್ಚ ಧೂಪಾದ್ಯೈಶ್ಚ ನಿವೇದನಮ್ ।**
**ಅಪೂರ್ವಮಗ್ನಿಹೋತ್ರಂ ಚ ಕುರ್ಯಾತ್ ಪ್ರಾಗ್ಬ್ರಹ್ಮಣೇ ನೃಪ ॥**

ವಿ.ಪು. ೩–೧೧–೪೧,೪೫

**ಪ್ರಜಾಪತಿಂ ಸಮುದ್ದಿಶ್ಯ ದದ್ಯಾದಾಹುತಿಮಾದರಾತ್ ॥**
**ಗುಹ್ಯೇಭ್ಯಃ ಕಾಶ್ಯಪಾಯಾಥ ತತೋಽನುಮತಯೇ ಕ್ರಮಾತ್ ॥೪೨॥**

ಎಂದು ಮುಂತಾಗಿ 'ಇಷ್ಟದೇವತೆಯನ್ನು ಅಭಿಷೇಕ, ಪುಷ್ಪಧೂಪಾದಿಗಳಿಂದ ಪೂಜಿಸಬೇಕು' ಎಂದು ಅತಿಸಂಕ್ಷಿಪ್ತವಾಗಿ ಹೇಳಿ ಹೋಮ, ಬಲಿಹರಣ- ಇವುಗಳನ್ನು ವರ್ಣಿಸಿದೆ.

**(2)** ಭಾಗವತದಲ್ಲಿ– ಅರ್ಚನಾಕ್ರಮವನ್ನು ಒಂದುಕಡೆ ಹೀಗೆ ಸಂಕ್ಷೇಪದಿಂದ ಹೇಳಿದೆ.

**ವೇದೋಕ್ತಮೇವ ಕುರ್ವಾಣೋ ನಿಸ್ಸಙ್ಗೋಽರ್ಪಿತಮೀಶ್ವರೇ ।**
**ನೈಷ್ಕರ್ಮ್ಯಂ ಲಭತೇ ಸಿದ್ಧಿಂ ರೋಚನಾರ್ಥಾ ಫಲಶ್ರುತಿಃ ॥** ೧೧–೩–೪೬

ವೇದೋಕ್ತಕರ್ಮವನ್ನೇ ಸಂಗವರ್ಜಿತನಾಗಿ ಈಶ್ವರಾರ್ಪಿತವಾಗಿ ಮಾಡಿದರೆ ನೈಷ್ಕರ್ಮ್ಯಸಿದ್ಧಿಯನ್ನು ಪಡೆದುಕೊಳ್ಳುತ್ತಾನೆ ಎಂದ ಬಳಿಕ,

**ಯ ಆಶು ಹೃದಯಗ್ರನ್ಥಿಂ ನಿರ್ಜಿಹೀರ್ಷುಃ ಪರಾತ್ಮನಃ ।**
**ವಿಧಿನೋಪಚರೇದ್ದೇವಂ ತನ್ತ್ರೋಕ್ತೇನ ಚ ಕೇಶವಮ್ ॥೪೭॥**
**ಲಬ್ಧಾನುಗ್ರಹ ಆಚಾರ್ಯಾತ್ತೇನ ಸಂದರ್ಶಿತಾಗಮಃ ।**
**ಮಹಾಪುರುಷಮಭ್ಯರ್ಚೇನ್ಮೂರ್ತ್ಯಾಭಿಮತಯಾಽಽತ್ಮನಃ ॥೪೮॥**

ಶುಚಿಃ ಸಮ್ಮುಖಮಾಸೀನಃ ಪ್ರಾಣಸಂಯಮನಾದಿಭಿಃ ।
ಪಿಣ್ಡಂ ವಿಶೋಧ್ಯ ಸನ್ನ್ಯಾಸಕೃತರಕ್ಷೋಽರ್ಚಯೇದ್ ಹರಿಮ್ ॥೪೯॥

ಅರ್ಚಾದೌ ಹೃದಯೇ ಚಾಪಿ ಯಥಾಲಬ್ಧೋಪಚಾರಕೈಃ ।
ದ್ರವ್ಯಕ್ಷಿತ್ಯಾತ್ಮಲಿಙ್ಗಾನಿ ನಿಷ್ಪಾದ್ಯ ಪ್ರೋಕ್ಷ್ಯ ಚಾಸನಮ್ ॥೫೦॥

ಪಾದ್ಯಾದೀನುಪಕಲ್ಪ್ಯಾಥ ಸಂನಿಧಾಪ್ಯ ಸಮಾಹಿತಃ ।
ಹೃದಾದಿಭಿಃ ಕೃತನ್ಯಾಸೋ ಮೂಲಮನ್ತ್ರೇಣ ಚಾರ್ಚಯೇತ್ ॥೫೧॥

ಸಾಙ್ಗೋಪಾಙ್ಗಾಂ ಸಪಾರ್ಷದಾಂ ತಾಂ ತಾಂ ಮೂರ್ತಿಂ ಸ್ವಮನ್ತ್ರತಃ ।
ಪಾದ್ಯಾರ್ಘ್ಯಾಚಮನೀಯಾದ್ಯೈಃ ಸ್ನಾನವಾಸೋವಿಭೂಷಣೈಃ ॥೫೨॥

ಗನ್ಧಮಾಲ್ಯಾಕ್ಷತಸ್ರಗ್ಭಿರ್ಧೂಪದೀಪೋಪಹಾರಕೈಃ।
ಸಾಙ್ಗಂ ಸಂಪೂಜ್ಯ ವಿಧಿವತ್ ಸ್ತವೈಃ ಸ್ತುತ್ವಾ ನಮೇದ್ ಹರಿಮ್ ॥
ಆತ್ಮಾನಂ ತನ್ಮಯಂ ಧ್ಯಾಯನ್ ಮೂರ್ತಿಂ ಸಮ್ಪೂಜಯೇದ್ ಹರೇಃ ।
ಶೇಷಾಮಾಧಾಯ ಶಿರಸಿ ಸ್ವಧಾಮ್ನ್ಯುದ್ವಾಸ್ಯ ಸತ್ಕೃತಮ್ ॥೫೪॥

ಏವಮಗ್ನ್ಯರ್ಕತೋಯಾದಾವತಿಥೌ ಹೃದಯೇ ಚ ಯಃ ।
ಯಜತೀಶ್ವರಮಾತ್ಮಾನಮಚಿರಾನ್ಮುಚ್ಯತೇ ಹಿ ಸಃ ॥ ಭಾಗ. ೪೭-೫೫

ಇಲ್ಲಿ ವಿಷ್ಣುಪುರಾಣಕ್ಕಿಂತಲೂ ಹೆಚ್ಚು ವಿಸ್ತಾರವಾಗಿ ಅರ್ಚಾ (ಪ್ರತಿಮಾ) ಗಳಲ್ಲಿಯೂ ಹೃದಯದಲ್ಲಿಯೂ ಅಗ್ನಿ, ಸೂರ್ಯ, ಜಲ-ಮುಂತಾದವುಗಳಲ್ಲಿಯೂ ಪೂಜಿಸಬೇಕೆಂದು ಪೂಜಾಪ್ರತೀಕಗಳನ್ನೂ ಪೂಜಾವಿಧಾನವನ್ನೂ ವೈದಿಕ ಮತ್ತು `ತಂತ್ರೋಕ್ತ'[1] ಪ್ರಕಾರಗಳಿಂದ ಶರೀರಶುದ್ಧಿ, ಭೂತಶುದ್ಧಿ-ಮುಂತಾದವುಗಳನ್ನು ಮಾಡಿಕೊಂಡು ಪೂಜಿಸಬೇಕೆಂಬುದನ್ನೂ ಹೇಳಿದೆ.

ಈಗ (3) ಶಾಂಡಿಲ್ಯಸಂಹಿತೆಯಲ್ಲಿ ಈ ವಿಷಯಕ್ಕೆ ಕೊಟ್ಟಿರುವ ವಿವರಗಳನ್ನು ನೋಡೋಣ:

(೧) ಸ್ವಯಂ ವ್ಯಕ್ತೇ ತಥಾಽವ್ಯಕ್ತೇ ಸ್ವರೂಪೇ ಪೂಜನಂ ಭವೇತ್ ।
[ಸ್ವಯಂವ್ಯಕ್ತದಲ್ಲಿ ಅಥವಾ ಅವ್ಯಕ್ತದಲ್ಲಿ ಪೂಜಿಸಬೇಕು. ]

---

1. ವಿಷ್ಣುಪುರಾಣದಲ್ಲಿಯೂ ತಂತ್ರದ ಪರಾಮರ್ಶವಿದೆ ಎನ್ನಬಹುದು ಅಕ್ರೂರನು ಯಮುನಾನದಿಯಲ್ಲಿ ಮುಳುಗಿದಾಗ ಕೃಷ್ಣಬಲರಾಮರನ್ನು ಶೇಷವಿಷ್ಣುಗಳ ರೂಪದಿಂದ ಕಂಡು 'ಓಂ ನಮೋ ವಾಸುದೇವಾಯ ನಮಃ ಸಙ್ಕರ್ಷಣಾಯ ಚ । ಪ್ರದ್ಯುಮ್ನಾಯ ನಮಸ್ತುಭ್ಯಮನಿರುದ್ಧಾಯ ತೇ ನಮಃ । (ವಿ. ಪು. ೫-೧೮-೫೮) ಎಂದು ಸ್ತುತಿಸಿರುತ್ತಾನೆ. ಭಾಗವತದಲ್ಲಿ ಸ್ಪಷ್ಟವಾಗಿ ತಂತ್ರವೆಂಬ ಶಬ್ದವನ್ನು ಉಚ್ಚರಿಸಿದೆ. ಅಷ್ಟೆ.

(೨) ಶಿಲಾಮೃದ್ದಾರುಲೋಹಾದ್ಯೈಃ ಕೃತ್ವಾ ಪ್ರತಿಕೃತಿಂ ವಿಭೋಃ ।
ಶ್ರೌತಸ್ಮಾರ್ತಾಗಮೈಸ್ತಸ್ಯ ಪ್ರತಿಷ್ಠಾಪನಮಿಷ್ಯತೇ ॥೫॥
ಯತ್ರ ಸಂನಿಹಿತೋ ದೇವಃ ಸ್ವಯಮೇವ ಸದಾ ಭವೇತ್ ।
ಶಾಲಗ್ರಾಮಾದಿಸಂಸ್ಥಾನಂ ಸ್ವಯಂ ವ್ಯಕ್ತಂ ಹಿ ತನ್ಮತಮ್ ॥

ಭಕ್ತಿಖಂಡ ೩-೪,೫,೬,

[ಕಲ್ಲು, ಮೃತ್ತಿಗೆ, ಕಟ್ಟಿಗೆ, ಲೋಹ-ಮುಂತಾದವುಗಳಿಂದ ಮಾಡಿದ ವಿಭುವಿನ ಪ್ರತಿಮೆಯನ್ನು ಶ್ರೌತಸ್ಮಾರ್ತಾಗಮಗಳಿಂದ ಪ್ರತಿಷ್ಠೆ ಮಾಡಬೇಕು. ಸಾಲಗ್ರಾಮಾದಿಗಳಲ್ಲಿ ಸ್ವಯಂವ್ಯಕ್ತ]

(೩) ಚಿರನ್ತನಾರ್ಚಾ ಯತ್ರಾಸ್ತಿ ಮುನಿದೇವಾಭಿವನ್ದಿತಾ ।
ಅರ್ಚಾವತಾರರೂಪೇಣ ತತ್ರ ದೇವೋ ಜನಾರ್ದನಃ ॥೭॥

[ಎಲ್ಲಿ ಬಹಳಕಾಲದಿಂದ ಮುನಿದೇವಾದಿಗಳಿಂದ ಪೂಜಿತವಾದ ಪ್ರತಿಮೆಯಿರುವದೋ ಅಲ್ಲಿ ಜನಾರ್ದನನು ಅರ್ಚಾವತಾರರೂಪದಿಂದ ಇರುತ್ತಿರುವನು.]

ತತ್ರ ಪೂಜಾಪ್ರವಾಹೋಽಪಿ ಮಹತಾಂ ಸಮಯಾನುಗಃ
ತತ್ತಥೈವಾನುಸರ್ತವ್ಯೋ ದೂಷಯಂಶ್ಚ ಪತತ್ಯಸೌ ॥
ತೀರ್ಥೇ ದೇವೇ ತಥಾ ಕ್ಷೇತ್ರೇ ಕಾಲೇ ದೇಶೇ ಚ ಧಾಮನಿ ।
ಯಾ ಯಥಾ ವರ್ತತೇ ರೀತಿಸ್ತಾಂ ತಥೈವಾಭಿಮಾನಯೇತ್ ॥೯॥
ಯೇ ಯತ್ರ ದೇವಾ ಭೂದೇವಾ ಯೋ ಧರ್ಮಃ ಶಾಸ್ತ್ರಸಮ್ಮತಃ ।
ತೇ ತಥೈವಾನುಸರ್ತವ್ಯಾ ಇತ್ಯಾಹ ಭಗವಾನಜಃ ॥
ಸಾಷ್ಟಾಙ್ಗಯೋಗಯಜ್ಞಾದ್ಯೈರ್ಮನ್ಸಾನಾಂ ದೃಕ್ಫಲಂ (ದೃಕ್ಪಥಂ?)ಗತಃ ।
ಸ ಏವಾರ್ಚಾವತಾರೇಣ ಯಾತಿ ಪ್ರತ್ಯಕ್ಷತಾಂ ನೃಣಾಮ್ ॥ ೩-೮ ರಿಂದ ೧೧

ತೀರ್ಥ, ಕ್ಷೇತ್ರ, ಕಾಲ, ದೇಶ, ಸ್ಥಾನ-ಇವುಗಳಿಗನುಸಾರವಾಗಿ ಅಲ್ಲಲ್ಲಿರುವ ಅರ್ಚಾರೂಪಗಳನ್ನೂ ಅರ್ಚನಪದ್ಧತಿಗಳನ್ನೂ ಹಾಗೆಯೇ ಗೌರವಿಸಬೇಕು. ಯೋಗಯಜ್ಞಾದಿಗಳಿಂದ ದರ್ಶನವನ್ನು ಕೊಡದೆ ಇರುವ ಭಗವಂತನು, ಅಷ್ಟರಿಂದಲೇ ಪ್ರಸನ್ನನಾಗಿ ಶ್ರದ್ಧಾವಂತರಾದ ಭಕ್ತರನ್ನು ಅನುಗ್ರಹಿಸುತ್ತಾನೆ ಎಂದು ಮೇಲಿನ ಶ್ಲೋಕಗಳಲ್ಲಿ ಹೇಳಿರುತ್ತದೆ. ಮುಂದಿನ ಶ್ಲೋಕಗಳಲ್ಲಿ `ಕಲಾಪ, ವಿಶಾಲ, ಸಾಲಂಕಾಯನ (?) ಇಂದ್ರದ್ಯುಮ್ನ, ಉತ್ಕಲ, ಕೂರ್ಮಕ್ಷೇತ್ರ. ಕಾವೇರಿ, ದ್ರಾವಿಡದೇಶ, ಪದ್ಮನಾಭ, ವೇಂಕಟ, ಕುಶಸ್ಥಲಿ, ದ್ವಾರಕೆ, ಶಂಖೋದ್ಧಾರ, ಪ್ರಭಾಸ, ಮಧುರೆ, ಗೋಕುಲ, ಬೃಂದಾವನ, ಗೋವರ್ಧನ -ಮುಂತಾದ ಕ್ಷೇತ್ರಗಳಲ್ಲಿ ಶ್ರೀಹರಿಯು ಸ್ವಯಂವ್ಯಕ್ತನಾಗಿರುತ್ತಾನೆ -ಎಂದು

ಬರೆದಿರುತ್ತದೆ . ಅಂಥ ಸ್ಥಳಗಳಲ್ಲಿ ಭಕ್ತರ ಭಾವವೇ ಮುಖ್ಯ ಎಂಬುದರಲ್ಲಿ ಗ್ರಂಥಕ್ಕೆ ತಾತ್ಪರ್ಯವನ್ನು ಕಲ್ಪಿಸಬೇಕು.

**ಅರ್ಚನಂ ಮನ್ತ್ರಪಠನೇ ಯಾಗೋ ಯೋಗೋ ಮಧುದ್ವಿಷಃ ।**
**ನಾಮ್ನಾಂ ಸಙ್ಕೀರ್ತನಂ ಸೇವಾ ತಥಾ ತಚ್ಚಿಹ್ನಧಾರಣಮ್ ।**
**ತದೀಯಾರಾಧನಂ ಚರ್ಯಾ ನವಧಾ ದ್ವಿಜಸತ್ತಮ॥** ೩-೨೦,೨೧

[ವಿಷ್ಣುವಿನ ಅರ್ಚನೆ, ಮಂತ್ರಜಪ , ಅಧ್ಯಯನ , ಯಾಗ, ಧ್ಯಾನ, ನಾಮಕೀರ್ತನ, ಸೇವೆ, ಆತನ ಚಿಹ್ನೆಯನ್ನು ಧರಿಸುವದು, ಆತನ ಭಕ್ತರ ಆರಾಧನೆ-ಹೀಗೆ ಚರ್ಯೆಯು ಒಂಬತ್ತು ವಿಧ.]

**ಜನ್ಮನಾ ವಿದ್ಯಯಾತ್ರಾಪಿ ತಪಸಾ ಹರಿಸೇವಯಾ ।**
**ಸತ್ಸಙ್ಗೇನ ನೃಣಾಂ ಶುದ್ಧಿಃ ಪಞ್ಚಧಾ ಪರಿಕೀರ್ತಿತಾ॥** ೩-೨೧,೨೨

[ಜನ್ಮದಿಂದ, ವಿದ್ಯೆಯಿಂದ, ತಪಸ್ಸಿನಿಂದ, ಹರಿಸೇವೆಯಿಂದ, ಸತ್ಸಂಗದಿಂದ- ಹೀಗೆ ಐದು ಬಗೆಯಿಂದ ಜನರು ಶುದ್ಧರಾಗುವರು.]

ಇಲ್ಲಿ ಹೇಳಿರುವ ಚರ್ಯೆಯೂ ಶುದ್ಧಿಯೂ ಪೂಜೆಗೆ ಅಂಗವಾಗಿ ಎಂದು ತಿಳಿಯಬೇಕಾಗಿದೆ. ಮುಖ್ಯವಾಗಿ ಭಕ್ತಿಯಿಂದ ಮಾಡಿದ ಪೂಜೆಯೇ ಶ್ರೇಷ್ಠವೆಂದು ೨೯ ರಿಂದ ೭೨ ರವರೆಗಿನ ಶ್ಲೋಕಗಳಲ್ಲಿ ಹೇಳಿದೆ.

(೪) **ಶಙ್ಖಚಕ್ರಾದಿಸಙ್ಕೀರ್ಣಾ ಶ್ಯಾಮಲಾಮಲಕೋನ್ಮಿತಾ ।**
**ಶಾಲಗ್ರಾಮಶಿಲಾ ಪೂಜ್ಯಾ ಸ್ವಯಂ ವ್ಯಕ್ತಾ ದ್ವಿಜೈರ್ಗೃಹೇ ॥**

[ಶಂಖಚಕ್ರಾದಿಚಿಹ್ನಿತವಾಗಿ ನೆಲ್ಲಿಯಕಾಯಿಯ ಗಾತ್ರದಲ್ಲಿ ತಾನೇ ತೋರಿಕೊಂಡ ಶಾಲಗ್ರಾಮಶಿಲೆಯು ಮನೆಯಲ್ಲಿ ಪೂಜಿಸುವದಕ್ಕೆ ಹೆಚ್ಚು ಯೋಗ್ಯವಾದದ್ದು.]

ಶಾಲಗ್ರಾಮಪೂಜೆಯ ಮಹಿಮೆಯನ್ನು ಇಲ್ಲಿ ಹೊಗಳಿರುತ್ತದೆ.

(೫) **ಚುಲಕೇನ ಪಿಬೇತ್ತೀರ್ಥಂ ಶೇಷಂ ಶೀರ್ಷ್ಣಿ ಸಮಾವಹೇತ್॥**
**ಪೂಜಾಪರಾಧದೋಷಾಣಾಂ ಪಾಪಾನಾಂ ಶಮನಂ ಭವೇತ್ ॥**
**ತೀರ್ಥಪಾನಾಚ್ಛತಗುಣಂ ದೋಷಸ್ತೀರ್ಥಚ್ಯುತೌ ಭವೇತ್।**
**ತಸ್ಮಾತ್ಪಾತ್ರೇಣ ತತ್ಪೇಯಂ ಕಿಂ ಬಾಧಃ ಕರವಾಸಸಾ॥** ೩-೪೩,೪೪

[ತೀರ್ಥವನ್ನು ಸಾಂಪ್ರದಾಯಿಕರೀತಿಯಲ್ಲಿ ಕೈಯಚುಲಕದಿಂದ ಕೈ ಕೆಳಗೆ ಕರವಸ್ತ್ರವನ್ನಿಟ್ಟು ಕೊಂಡು ಗುಟುಕಿಸಬೇಕು ; ಅಥವಾ ಉದ್ಧರಣೆ ಮುಂತಾದ ಪಾತ್ರೆಗಳಿಂದ ಕುಡಿಯಬೇಕು. ನೀರು ನೆಲಕ್ಕೆ ಬಿದ್ದರೆ ದೋಷ.]

(೬) ಶಾಲಗ್ರಾಮಾಃ ಸಮಾಃ ಪೂಜ್ಯಾ ವಿಷಮಾ ನ ಕದಾಚನ ।
ವಿಷಮೇಷ್ವೇಕಮೇವಾರ್ಚ್ಯಂ ಸಮೇಷು ದ್ವಿತಯಂ ನ ಹಿ ।
ಯಥಾ ಯಥಾ ಶಿಲಾ ಸೂಕ್ಷ್ಮಾ ಮಹತ್ಪುಣ್ಯಂ ತಥಾ ತಥಾ॥ ೩-೪೫, ೪೬

[ಶಾಲಗ್ರಾಮವು ಬೆಸಸಂಖ್ಯೆಯಾದರೆ ಒಂದೇ, ಸರಿಸಂಖ್ಯೆಯಾದರೆ ಎರಡಾಗದು. ಅದು ಎಷ್ಟು ಸಣ್ಣದಾದರೆ ಅಷ್ಟು ಶ್ರೇಷ್ಠ.]

(೭) ಆಸನ್ನೇ ಮರಣೇ ಪ್ರಾಪ್ತೇ ಶಾಲಿಗ್ರಾಮಂ ಪ್ರಪೂಜ್ಯ ಚ ।
ಹೃದಿ ಕೃತ್ವಾ ಪಿಬೇತ್ತೀರ್ಥಂ ಸ ಯಾತಿ ಭವನಂ ಹರೇಃ ॥೫೧॥

[ಹರಿಸ್ಮರಣಪೂರ್ವಕವಾಗಿ ಶಾಲಗ್ರಾಮವನ್ನು ಪೂಜಿಸಿ ತೀರ್ಥವನ್ನು ಸೇವಿಸಿದವನು ವಿಷ್ಣುಲೋಕಕ್ಕೆ ಹೋಗುವನೆಂದು ಇಲ್ಲಿ ಹೇಳಿದೆ.]

ಬೆಳಗ್ಗೆ ಮುಂಜಾವದಲ್ಲಿ ಎದ್ದು ನಾರಾಯಣ, ಗುರು, ಲಕ್ಷ್ಮೀದೇವಿ, ಗರುಡ, ಭಗವಂತನ ಲೀಲಾವಿಭೂತಿಗಳು-ಇವುಗಳನ್ನು ಸ್ಮರಿಸಿಕೊಂಡು ಊರ ಹೊರಗೆ ಶೌಚವನ್ನು ಮುಗಿಸಿಕೊಂಡು ದಂತಧಾವನವನ್ನು ಮಾಡಿ, ಮಲಾಪಕರ್ಷಣಸ್ನಾನವನ್ನು ಹೊರಗೆಮಾಡಿ ಬಳಿಕ ತೀರ್ಥಸ್ನಾನವನ್ನು ಮಾಡಬೇಕು. ತುಲಸೀಮೂಲದ ಮೃತ್ತಿಕೆಯನ್ನು ಬಳಿದುಕೊಂಡು ಗಂಗಾದಿಗಳನ್ನು ಸ್ಮರಿಸಿಕೊಂಡು ಅಘಮರ್ಷಣಸ್ನಾನವನ್ನು ಮಾಡಿದಮೇಲೆ ಸ್ನಾನಾನಂತರ ಆಚಮನ, ಮಾರ್ಜನ, ಪುರುಷಸೂಕ್ತಪಠನ, ನಾರಾಯಣಮಂತ್ರಜಪ-ಇವುಗಳನ್ನು ಮಾಡಿ ಅರ್ಚನತರ್ಪಣಗಳಾದ ಬಳಿಕ ಶುದ್ಧವಸ್ತ್ರಧಾರಣವನ್ನು ಮಾಡಬೇಕು. ಗೋಪೀಚಂದನದಿಂದ ಹನ್ನೆರಡು ಅಂಗಗಳಲ್ಲಿಯೂ ನಾಮಕೀರ್ತನಮೂಲಕವಾಗಿ ಊರ್ಧ್ವಪುಂಡ್ರಗಳನ್ನು ಇಡಬೇಕು. ಆ ಬಳಿಕ ತನ್ನ ಶಾಖೆಗೆ ಅನುಸಾರವಾಗಿ ಸಂಧ್ಯಾದೇವರ್ಷಿಪಿತೃತರ್ಪಣಗಳನ್ನು ಆಚರಿಸಿ ಮನೆಗೆ ಬಂದು ಪಾದಪ್ರಕ್ಷಾಲನೆಯನ್ನು ಮಾಡಿಕೊಂಡು, ಅಂಗನ್ಯಾಸಕರನ್ಯಾಸಗಳನ್ನು ಮಾಡಿ ಶುಚಿಯಾಗಿ ಶಾಂತನಾಗಿ ಮುದ್ರಾಧಾರಣೆಯನ್ನು ಮಾಡಿ ಜಪಮಣಿಮಾಲಿಕೆಯನ್ನು ಧರಿಸಿ ರಮ್ಯವಾದ ಪುಷ್ಪಾದಿಗಳಿಂದ ಅಲಂಕೃತವಾದ ಪೀಠದಲ್ಲಿ ಲಕ್ಷ್ಮೀಪತಿಯಾದ ನಾರಾಯಣನನ್ನು ಪೂಜಿಸಬೇಕು-ಎಂದು ಪೂಜೆಗೆ ಮೊದಲು ಮಾಡಬೇಕಾದ ಪೂರ್ವಾಹ್ಣದ ಕೃತ್ಯಗಳನ್ನು(೫೨ ರಿಂದ ೫೮ ರ ವರೆಗಿನ ಶ್ಲೋಕಗಳಲ್ಲಿ) ವಿವರಿಸಿದೆ.

ಬಳಿಕ ಸಾಂಗನಾಗಿ ಸಾಯುಧನಾಗಿ ಸಪರಿವಾರನಾಗಿರುವ ಮಧುಸೂದನನನ್ನು ಸರ್ವೋಪಚಾರಗಳಿಂದಲೂ ಪೂಜಿಸಬೇಕು. (ಶ್ಲೋಕ ೫೮-೬೧).

(೮) ಯಥೋಪದೇಶಂ ಕುರ್ವೀತ ಪೂಜನಂ ಮುರವೈರಿಣಃ ।
ಶ್ರೌತಸ್ಮಾರ್ತವಿಧಾನೇನ ಆಗಮೋಕ್ತೇನ ವಾ ದ್ವಿಜಃ ॥

**ಶ್ರೌತಂ ವೈಖಾನಸಾದ್ಯುಕ್ತಂ ಸ್ಮಾರ್ತಂ ಪ್ರೋಕ್ತಂ ವಶಿಷ್ಠಕೈಃ ।**
**ರಹಸ್ಯಂ ಪಞ್ಚರಾತ್ರೋಕ್ತಮಾಗಮಂ ಮುನಯೋ ಜಗುಃ ॥** ೬-೨-೬೩

[ಇಲ್ಲಿ ಶ್ರೌತವೆಂದರೆ ವೈಖಾನಸಾದಿ, ಸ್ಮಾರ್ತವೆಂದರೆ ವಸಿಷ್ಠಾದಿ, ರಹಸ್ಯವೆಂದರೆ ಪಾಂಚರಾತ್ರಾಗಮ-ಎಂದರೆ. ಇದರ ವಿವೇಚನೆಯನ್ನು ಆಗಮವಿದರು ನಿರ್ಣಯಿಸಬೇಕು.]

ಇದಾದಬಳಿಕ ಪುರುಷಸೂಕ್ತ ನಾರಾಯಣಸೂಕ್ತಗಳಿಂದ ಪೂಜಿಸಿ ನಾಗಶಯನದಲ್ಲಿ ಮಲಗಿಸಬೇಕು; ಹೋಮವನ್ನೂ ಬಲಿ– ಮುಂತಾದವುಗಳಿಂದ ಅರ್ಚನೆಯನ್ನೂ ಸಮಾಪ್ತಿಗೊಳಿಸಬೇಕು. ಭಕ್ತರ ಪೂಜೆಯನ್ನು ಮಾಡಬೇಕು . ಅವರನ್ನು ಸರ್ವೋಪಚಾರಗಳಿಂದಲೂ ಸಂತೋಷಗೊಳಿಸಿ ಹೀಗೆ ಸ್ತುತಿಸಬೇಕು ಎಂದಿದೆ. ಸ್ತೋತ್ರದಲ್ಲಿರುವ ಕೆಲವು ಶಬ್ದಗಳು ಅರ್ಥವಾಗುವಂತಿಲ್ಲ;ಆದರೂ ಬಲ್ಲವರಿಂದ ತಿದ್ದಿಸಿಕೊಳ್ಳಬಹುದೆಂದು ಇಲ್ಲಿ ಬರೆದಿದೆ:

(೯) **ಅನನ್ತಕೋಟಿಬ್ರಹ್ಮಾಣ್ಡ ಯಾದೋಽಣ್ಡ ಚಯವಾರಿಧಿಃ ।**
**ಕಾರುಣ್ಯಾಮೃತಸಂಪೂರ್ಣೋ ಯೇಷು ತೇಭ್ಯೋ ನಮೋ ನಮಃ**
**ಸಮಸ್ತವೇದವೇದಾನ್ತಸರ್ವಾಗಮಮಹೋದಧಿಃ ।**
**ಭಕ್ತೇನ್ದೋಃ(ಭಕ್ತೇನ್ದು:?) ಸಂಶ್ರಿತೇಭ್ಯೋ ವೋ ನಿತ್ಯಮೇವ ನಮೋ ನಮಃ॥೭೭॥**
**ಸರ್ವತ್ರ ವ್ಯಾಪಕೋ ವಿಷ್ಣುರ್ಯೋ ನ ಗಮ್ಯೋ ಮಹೇಶ್ವರೈಃ ।**
**ಸ ಯತ್ರ ವ್ಯಕ್ತಿಮಾಪನ್ನಸ್ತೇಭ್ಯೋ ನಿತ್ಯಂ ನಮೋ ನಮಃ ॥**
**ಸರ್ವತ್ರ ಸಮಭಾವೇನ ವರ್ತಮಾನೋಽಪಿ ಮಾಧವಃ ।**
**ಯಃ ಸು (ಯೇಷು ?)ಪ್ರಸಾದರೂಪೇಣ ಆಸ್ತೇ ತೇಭ್ಯೋ ನಮೋ ನಮಃ ॥೭೯॥**
**ಸಂಸಾರಗ್ರಾಹಗೀರ್ಣಾನಾಂ ಯೇ ಸಂಜೀವನಭೇಷಜಾಃ ।**
**ತೇಭ್ಯೋ ಮಹದ್ಭ್ಯೋ ಭಕ್ತೇಭ್ಯೋ ನಿತ್ಯಮೇವ ನಮೋ ನಮಃ ॥**
**ಪ್ರವರ್ತತೇ ಯತೋ ಭಕ್ತಿಶಾಸ್ತ್ರಂ ತೇಭ್ಯೋ ನಮೋ ನಮಃ ।**
**ಸರ್ವಶಾಸ್ತ್ರೈಕಸಾರಂ ಯದ್ಬ್ರಹ್ಮವಿಷ್ಣುಶಿವೋದಿತಮ್** ॥೮೧॥
**ಏವಮಾದಿಸ್ತವೈಃ ಸ್ತುತ್ವಾ ಕೃತ್ವಾ ಚೈವ ಪ್ರದಕ್ಷಿಣಾಮ್ ।**
**ವಿಸೃಜ್ಯ ಸ್ವಗೃಹೇ ಭಕ್ತೋ ಯಾತ್ಯಸೌ ಕೃತಕೃತ್ಯತಾಮ್** ॥೮೨॥

-ಎಂದು ಉಪಸಂಹಾರಮಾಡಿದೆ.

### (೪) ಆಚಾರಭೇದಗಳು

ವೃದ್ಧಹಾರೀತಸ್ಮೃತಿಯಲ್ಲಿಯೂ ಶಾಂಡಿಲ್ಯಸಂಹಿತೆಯಲ್ಲಿರುವಂತೆ -ಅಥವಾ ಅದಕ್ಕಿಂತಲೂ ವಿಸ್ತಾರವಾಗಿಯೇ ಮಂತ್ರಗಳ ವಿಚಾರ (ಆರನೆಯ ಅಧ್ಯಾಯದಲ್ಲಿ), ವಿಷ್ಣುವಿನ ಆರಾಧನಕ್ರಮ (ಏಳನೆಯ ಅಧ್ಯಾಯದಲ್ಲಿ), ಉತ್ಸವ ವಿಧಾನ (ಒಂಭತ್ತನೆ ಅಧ್ಯಾಯದಲ್ಲಿ), ವಿಶೇಷದಿನಗಳಲ್ಲಿ ಮಾಡುವ ಅನುಷ್ಠಾನ (ಹತ್ತನೆಯ ಅಧ್ಯಾಯ)-

ಇವೆಲ್ಲ ಇವೆ.[1] ಆದರೆ ಇವುಗಳನ್ನು ಶಾಂಡಿಲ್ಯಸಂಹಿತೆಯೇ ಮುಂತಾದ ಭಾಗವತ ಸಂಪ್ರದಾಯದ ಗ್ರಂಥಗಳಿಗೂ ವಿಷ್ಣು ಪುರಾಣಭಾಗವತಪುರಾಣಗಳಿಗೂ ದೇಶಾಚಾರಕುಲಾಚಾರಗಳಿಗೂ ಹೋಲಿಸಿ ಏಕವಾಕ್ಯತೆಯನ್ನು ಮಾಡಿಕೊಂಡು ಅನುಸರಿಸಬೇಕು. ಏಕೆಂದರೆ ನಾವು ಮೊದಲೇ ಹೇಳಿರುವಂತೆ ಈ ಸ್ಮೃತಿಯಲ್ಲಿ ಕೆಲವು ಸ್ವಮತಾಭಿನಿವೇಶದವರ ಹಸ್ತಕ್ಷೇಪವೂ ಆಗಿರುವ ಸಂಭವವಿದೆ. ಉದಾಹರಣೆಗೆ ವೃದ್ಧಹಾರೀತ ಸ್ಮೃತಿಯಲ್ಲಿ ತಪ್ತಮುದ್ರೆಯ ಧಾರಣೆಯು ಅತ್ಯವಶ್ಯವೆಂದು ಧಾರಣೆಯನ್ನು ಪ್ರಶಂಸಿಸಿ,

**ವೈಷ್ಣವಾನಾಂ ತು ಹೇತೀನಾಂ ಪ್ರಧಾನಂ ಚಕ್ರಮುಚ್ಯತೇ।**
**ತೇನೈವ ಬಹುಮೂಲೇ ತು ಪ್ರತಪ್ತೇನಾಙ್ಕಯೇದ್ಬುಧಃ ॥೨-೨೪॥**

**ತಸ್ಮಾಚ್ಚಕ್ರಂ ವಿಧಾನೇನ ತಪ್ತಂ ವೈ ಧಾರಯೇದ್ ದ್ವಿಜಃ ॥೨-೩೩॥**
**(ಎಂದು ಸಾವಧಾರಣವಾಗಿ ಹೇಳಿದೆ. ಆದರೆ) ಶಾಂಡಿಲ್ಯ ಸಂಹಿತೆ(ಯಲ್ಲಿ)**
**ಮುದ್ರಾ ತತ್ರ ದ್ವಿಧಾ ಶೀತಲಾ ತಥಾ ತಾಪಿತಾಗ್ನಿನಾ ।**
**ಶೀತಲಾ ಹ್ಯುಪದೇಶಾದೌ ತಪ್ತಾ ದೀಕ್ಷಾಸು ಕಥ್ಯತೇ ॥**
**ತಥಾಪಿ ಶ್ರೌತನಿಷ್ಠಸ್ಯ ವೈಷ್ಣವಸ್ಯ ತು ಶೀತಲಾ।**
**ಶ್ರೌತತನ್ತ್ರ ಪ್ರಸಕ್ತಸ್ಯ ದ್ವಿಜಾತೇರಪಿ ತಾಪಿತಾ॥**
**ಶೀತಲಾ ದ್ವಿವಿಧಾ ತತ್ರ ಚಕ್ರತೀರ್ಥಮೃದಾದಿನಾ ।**
**ತಥಾ ತೀರ್ಥಮೃದಾ ಚಾನ್ಯಾ ಮೃದೈವೇತಿ ಚ ತಾಂ ವಿಧುಃ ॥೩-೬-೩ ರಿಂದ ೫॥**

ಎಂದು ಮುಂತಾಗಿ ಶೀತಲಮುದ್ರೆಯ ಧಾರಣೆಯನ್ನು ಹೇಳಿದೆ. ಆಯಾ ಆಚಾರದಿಂದಲೂ ಕುಲಾಚಾರದಿಂದಲೂ ಇದನ್ನು ನಿಶ್ಚಯಿಸಿಕೊಳ್ಳಬೇಕೆಂಬುದು ಸ್ಪಷ್ಟ.

ಇದೇ ರೀತಿಯಲ್ಲಿ ಪುಂಡ್ರದ ವಿಷಯವನ್ನೂ ತಿಳಿಯಬೇಕು. ವೈಷ್ಣವರಿಗೆ ಊರ್ಧ್ವಪುಂಡ್ರವು ಪ್ರಶಸ್ತವೆಂಬುದಕ್ಕೆ ಎರಡಿಲ್ಲ;ಎಲ್ಲಾ ವೈಷ್ಣವಗ್ರಂಥಗಳಲ್ಲಿಯೂ ಊರ್ಧ್ವಪುಂಡ್ರವನ್ನೇ ಪ್ರಶಂಸಿಸಿದೆ. ಆದರೆ ತಿರ್ಯಕ್ಪುಂಡ್ರವನ್ನು ಧರಿಸಿದವನನ್ನು ಚಾಂಡಾಲನಂತೆ ಕಾಣಬೇಕೆಂದು ವೃದ್ಧಹಾರೀತಸ್ಮೃತಿಯಲ್ಲಿ(೨-೬೪) ಹೇಳಿದೆಯೆಂಬುದು ಸ್ವಮತಾಭಿನಿವೇಶಿಗಳ ದುರಭಿಮಾನಮಾತ್ರವೇ ಎಂದು ಆಗಲೇ(ಪು. ೧೦೪ ರಲ್ಲಿ) ತಿಳಿಸಿರುತ್ತೇವೆ. ಶಾಂಡಿಲ್ಯಸಂಹಿತೆಯಲ್ಲಿಯೂ ಊರ್ಧ್ವಪುಂಡ್ರವನ್ನು (೩ ನೆಯ ಅಂಶ ೭ ನೆಯ ಅಧ್ಯಾಯದಲ್ಲಿ)ಬಹಳವಾಗಿ ಹೊಗಳಿದೆಯಾದರೂ ತ್ರಿಪುಂಡ್ರವು ಅತ್ಯಂತವಾಗಿ ನಿಕೃಷ್ಟವೆಂದು ತೆಗಳಿರುವದಿಲ್ಲ.

---

1. ಪೂನಾಪಟ್ಟಣದಲ್ಲಿ ಪ್ರಕಾಶಿತವಾಗಿರುವ 'ಸ್ಮೃತೀನಾಂ ಸಮುಚ್ಚಯಃ' ಎಂಬ ಗ್ರಂಥದಲ್ಲಿ ಇಪ್ಪತ್ತೇಳುಸ್ಮೃತಿಗಳ ಸಂಗ್ರಹವಿದೆ, ವೃದ್ಧಹಾರೀತಸ್ಮೃತಿಯು ಅವುಗಳೊಳಗೆ ಒಂದು.

**ಏಕೋ ದೇವಃ ಸದಾ ಧ್ಯೇಯಃ ಕೇಶವೋ ವಾ ಶಿವೋऽಪಿ ವಾ ।**
**ಏಕಂ ಪುಣ್ಡ್ರಂ ಸದಾ ಕಾರ್ಯಂ ಊರ್ಧ್ವಂ ವಾಪಿ ತ್ರಿಪುಣ್ಡ್ರಕಮ್ ॥೭-೨೩॥**

ಎಂದು ತ್ರಿಪುಂಡ್ರಕ್ಕೂ ಅವಕಾಶವನ್ನು ಕೊಟ್ಟಿರುವದು ಕಂಡುಬರುತ್ತಿದೆ. ನಿಬಂಧಗಳಲ್ಲಿ `ಪ್ರಾತಃ ಪುಣ್ಡ್ರಂ ಮೃದಾ ಕುರ್ಯಾದ್ದುತ್ವಾ ಚೈವ ತು ಭಸ್ಮನಾ' ಎಂದಿರುತ್ತದೆ. ಆದ್ದರಿಂದ ಏಕಕಾಲದಲ್ಲಿ ಮೃತ್ಪುಂಡ್ರವನ್ನೂ ಭಸ್ಮಪುಂಡ್ರವನ್ನೂ ಯಾರೂ ಧರಿಸಬಾರದೆಂದಾಗುತ್ತದೆ. **ಶಾಂಡಿಲ್ಯಸಂಹಿತೆಯಲ್ಲಿಯೂ**

**ಊರ್ಧ್ವಪುಣ್ಡ್ರಂ ತ್ರಿಪುಣ್ಡ್ರಂ ವಾ ನ ಸಹೈವ ತಥಾಚರೇತ್ ॥** ಶಾಂ. ೭-೨೦

ಎಂದಿದೆ. ಪುಂಡ್ರಕ್ಕೆ ಬಳಸಬಹುದಾದ ಮೃದ್ವಿಶೇಷಗಳನ್ನು ಶಾಂಡಿಲ್ಯಸ್ಮೃತಿಯಲ್ಲಿ (ಆರನೆಯ ಅಧ್ಯಾಯದಲ್ಲಿ)ಹೇಳಿರುತ್ತದೆ. ಧರ್ಮಸಿಂಧುಸಾರವೇ ಮುಂತಾದ ನಿಬಂಧಗಳಲ್ಲಿ `ಗೋಪೀಚಂದನ, ತುಲಸೀಮೂಲ, ಸಿಂಧುತೀರ, ಜಾಹ್ನವೀತೀರವಲ್ಮೀಕಾದಿ'ಗಳಿಂದ (ಧ. ಸಿಂ. ೯೯ ತಿಲಕವಿಧಿ ) ಸಂಗ್ರಹಿಸಿದ ಮೃತ್ತನ್ನು ತಿಲಕಧಾರಣೆಗೆ ಬಳಸಬಹುದೆಂದು ಹೇಳಿರುತ್ತದೆ. ತಿಲಕವನ್ನು ಹನ್ನೆರಡು ಸ್ಥಾನಗಳಲ್ಲಿ ( ಹಣೆ, ಹೊಟ್ಟೆ, ಹೃದಯ, ಕತ್ತು, ಬಲಪಕ್ಕ, ಬಲತೋಳು, ಎಡಪಕ್ಕ, ಎಡತೋಳು, ಕಿವಿ, ಬೆನ್ನು, ಕತ್ತಿನ ಹಿಂಬಾಗ ಎಂಬಲ್ಲಿ) ಶುಕ್ಲಪಕ್ಷದಲ್ಲಿ ಕೇಶವಾದಿನಾಮಗಳಿಂದಲೂ ಕೃಷ್ಣಪಕ್ಷದಲ್ಲಿ ಸಂಕರ್ಷಣಾದಿ ನಾಮಗಳಿಂದಲೂ ತಲೆಯಮೇಲೆ ವಾಸುದೇವನಾಮದಿಂದಲೂ ಧಾರಣ ಮಾಡಬೇಕೆಂದು ನಿಬಂಧಗಳಲ್ಲಿದೆ.

**ಶಾಂಡಿಲ್ಯಸಂಹಿತೆ(ಯಲ್ಲಿ)**

**ನಾಸಿಕಾಮೂಲಮಾಶ್ರಿತ್ಯ ದಣ್ಡಾಕಾರಂ ಸುಶೋಭನಮ್ ।**
**ಸಾನ್ತರಾಲಂ ದಧೇದ್ಭಾಲಂ ಕೇಶವಾಯ ನಮೋऽಸ್ತ್ವಿತಿ** ॥೧-೧೧-೩೬
**ಉದರೇ ಕುಮುದಾಕಾರಂ ನಮೋ ನಾರಾಯಣಾಯ ಚ ।**
**ಹೃದಯೇ ಕಮಲಾಕಾರಂ ಮಾಧವಾಯ ನಮೋऽಸ್ತ್ವಿತಿ** ॥೩೭॥
**ಶಙ್ಖಾಕೃತಿಂ ಕಣ್ಠಕೂಪೇ ಗೋವಿನ್ದಾಯ ನಮೋऽಸ್ತ್ವಿತಿ।**
**ಕಟ್ಯಾಂ ತು ದಕ್ಷಿಣೇ ವಿಷ್ಣುರ್ಮತ್ಸ್ಯಾಕಾರೋ ವ್ಯವಸ್ಥಿತಃ** ॥೩೮॥
**ದಕ್ಷಿಣೇऽಥ ಭುಜೇ ವಂಶತ್ರಯೇ ಸ್ಯಾನ್ಮಧುಸೂದನಃ ।**
**ದೀಪವರ್ತಿಸಮೇ ದಕ್ಷಕರ್ಣಪ್ರಾನ್ತೇ ತ್ರಿವಿಕ್ರಮಃ** ॥೩೯॥
**ವಾಮಕಟ್ಯಾಂ ವಾಮನಾಯ ನಮೋ ವಾಮಭುಜೇ ತಥಾ।**
**ಶ್ರೀಧರಾಯ ನಮಃ ಕರ್ಣೇ ಹೃಷೀಕೇಶಾಯ ವೈ ನಮಃ** ॥೪೦॥
**ಕೂರ್ಮಾಕಾರೇ ಪೃಷ್ಠದೇಶೇ ಪದ್ಮನಾಭಾಯ ವೈ ನಮಃ ।**
**ದಾಮೋದರಂ ಕಕುದ್ದೇಶೇ ಗದಾಕಾರೇऽಭಿಧಾರಯೇತ್** ॥೪೧॥
**ವಾಸುದೇವಂ ನಿರಾಕಾರೇ ಮೂರ್ಧ್ನಿ ಭಕ್ತೋऽಭಿಧಾರಯೇತ್ ।**
**ಸಙ್ಕರ್ಷಣಾದಿಭಿಃ ಕೃಷ್ಣೇ ಏವಂ ನಾಮಭಿರರ್ಪಯೇತ್** ॥೪೨॥

ಎಂದಿರುವದಲ್ಲದೆ ಕಲ್ಪಾಂತರವನ್ನೂ ಬರೆದಿದೆ.

**ಸಂಪ್ರದಾಯಾನುಸಾರೇಣ ಪುಣ್ಡ್ರಂ ಮುದ್ರಾಸ್ತ್ವನೇಕಧಾ ॥೪೯॥**

ಎಂದು ಇರುವದರಿಂದ ಇಲ್ಲಿ ಸಂಪ್ರದಾಯವೇ ಶರಣು -ಎಂದಾಗುತ್ತದೆ.

## ತುಲಸೀಮಾಲಿಕೆ, ಪಾದೋದಕ, ಪ್ರಸಾದಗ್ರಹಣ,ದೈನಂದಿನಕರ್ಮಗಳು

**ಶಾಂಡಿಲ್ಯಸಂಹಿತೆಯಲ್ಲಿ:-**

**ಹರಿಪಾದಾಮ್ಬುಜಾ ಮುದ್ರಾ ತುಲಸೀಕಾಷ್ಠಮಾಲಿಕಾ।**
**ಊರ್ಧ್ವಪುಣ್ಡ್ರಂ ದ್ವಿಜಾತೀನಾಂ ಸ್ನಾನಸನ್ಧ್ಯಾದಿವಚ್ಛುಭಮ್ ॥**
**ದ್ವಾದಶಾಙ್ಗೋರ್ಧ್ವತಿಲಕಾಸ್ತುಲಸೀಕಾಷ್ಠಮಣ್ಡಿತಾಃ।**
**ತೀರ್ಥಮೃದ್ಧೂಸರಾಙ್ಗಾಶ್ಚ ವಿರಕ್ತಾ ವೈಷ್ಣವೋತ್ತಮಾಃ ॥**

ಶಾಂ. ಭಕ್ತಿಖಂಡ ೧-೧೧-೫೯, ೬೦

**ನಿತ್ಯಂ ಸಮರ್ಚನೀಯೋऽಸೌ ಶ್ರೀಹರಿರ್ದ್ವಿಜಸತ್ತಮೈಃ।**
**ತತಃ ಪಾದೋದಕಂ ಪೇಯಂ ಇತ್ಯೇಷಾ ವೈದಿಕೀ ಶ್ರುತಿಃ॥**

ಅಂಶ. ೩-೮-೧೯

**ಹರೇರ್ಭುಕ್ತಂ ಪ್ರಸಾದಂ ಸ್ಯಾನ್ನೈವೇದ್ಯಂ ದೇವತಾನ್ತರೈಃ।**
**ರುದ್ರಭುಕ್ತಂ ತು ನಿರ್ಮಾಲ್ಯಮಿತ್ಯೇವಂ ಶ್ರುತಿನಿರ್ಣಯಃ ॥**

ಶಾಂ. ೩-೯-೨

ಎಂದು ವೈಷ್ಣವಾಚಾರಗಳನ್ನು ಪ್ರಶಂಸಿಸಿರುತ್ತದೆ.

ಗುರುವಿನ ಸೇವೆ, ಆತನಿಂದ ಆಚಾರವನ್ನು ಗ್ರಹಿಸುವದು, ವಿದ್ಯಾಪ್ರಾಪ್ತಿ, ಆಗಮಾಭ್ಯಾಸ-ಇವುಗಳಿಂದಲೂ ಕ್ಷೇತ್ರಯಾತ್ರೆಯೇ ಮುಂತಾದವುಗಳಿಂದಲೂ ಭಕ್ತರ ಸಮಾಗಮ ಮುಂತಾದವುಗಳಿಂದಲೂ ನಾಮಕೀರ್ತನೆ ಮುಂತಾದವುಗಳಿಂದಲೂ ಆಗುವ ಕಾರ್ಯಕರಣಗಳ ಶುದ್ಧಿಯನ್ನು (೩-೧೦)ವಿಸ್ತಾರವಾಗಿ ವರ್ಣಿಸಿದೆ; ಭಗವಂತನು ಪ್ರಸನ್ನನಾಗುವದಕ್ಕೆ ಮಾಡಬೇಕಾದ ಸಾಧನಗಳನ್ನೂ (೩-೧೧) ವಿವರಿಸಿದೆ. ಇವುಗಳನ್ನೆಲ್ಲ ಸಂಹಿತೆಯ ಅವಲೋಕನದಿಂದಲೂ ಶಿಷ್ಟಾಚಾರದಿಂದಲೂ ತಿಳಿದುಕೊಳ್ಳಬೇಕು.

## ವಿಶೇಷದಿನಗಳಲ್ಲಿ ಅನುಸರಿಸಬೇಕಾದ ಧರ್ಮವಿಶೇಷಗಳು

ಭಗವಂತನ ನಿತ್ಯಪೂಜನಪದ್ಧತಿಯಲ್ಲಿ

**ವೈದಿಕಂ ತಾನ್ತ್ರಿಕಂ ಸ್ಮಾರ್ತಂ ಮಿಶ್ರಂ ಪೌರಾಣಿಕಂ ತಥಾ।**
**ಭಕ್ತಿಶಾಸ್ತ್ರೋದಿತಂ ಚಾಪಿ ಷಡ್ವಿಧಂ ನಿತ್ಯಪೂಜನಮ್॥**

ಶಾಂ. ೧-೧೦-೩೩

ಎಂದು ಆರು ಬಗೆಯಾಗಿ ವರ್ಣಿಸಿರುವದರಿಂದ ತಮ್ಮ ತಮ್ಮ ಚಿತ್ತದ ಅಂತಸ್ತಿಗೂ ಕುಲಾಚಾರಕ್ಕೆ ತಕ್ಕಂತೆಯೂ ಇದನ್ನು ಆಚರಿಸುವದಕ್ಕೆ ಶಾಂಡಿಲ್ಯಸಂಹಿತೆಯಲ್ಲಿ ಅವಕಾಶವನ್ನು ಕಲ್ಪಿಸಿರುತ್ತದೆ. ವೃದ್ಧಹಾರೀತಸಂಹಿತೆಯಲ್ಲಿರುವಂತೆಯೇ ಇಲ್ಲಿಯೂ ದೀಕ್ಷಾವಿಧಿ, ಆಚಾರ, ಆಹ್ನಿಕಕ್ರಮ, ಮಂತ್ರೋಪದೇಶಗ್ರಹಣ, ಮಂತ್ರವಿಶೇಷಗಳು ಮತ್ತು ಅವುಗಳ ನ್ಯಾಸಾದಿಕ್ರಮ-ಮುಂತಾದವುಗಳನ್ನು ವಿಸ್ತಾರವಾಗಿ ಹೇಳಿರುವದಲ್ಲದೆ ಚೈತ್ರಾದಿಯಾಗಿ ಫಾಲ್ಗುನಾಂತವಾಗಿರುವ ಆಯಾ ಮಾಸಗಳಲ್ಲಿ ಅನುಸರಿಸಬೇಕಾದ ವಿಶೇಷವಾದ ನೈಮಿತ್ತಿಕಕರ್ಮಗಳನ್ನೂ ಕಾಮ್ಯಕರ್ಮಗಳನ್ನೂ (೧-೧೫ ರಲ್ಲಿ) ವರ್ಣಿಸಿರುತ್ತದೆ. ಅವುಗಳನ್ನು ಶಾಸ್ತ್ರ, ದೇಶಾಚಾರ, ಕುಲಾಚಾರ-ಇವುಗಳಿಗೆ ಅನುಸಾರವಾಗಿ ಮಾಡಬೇಕಾಗಿರುತ್ತದೆ-ಎಂಬುದು ಸ್ಪಷ್ಟ.

ಪ್ರಕೃತದಲ್ಲಿ ಏಕಾದಶೀಕೃಷ್ಣಾಷ್ಟಮೀದಿನಗಳ ಕೃತ್ಯವನ್ನು ಸ್ವಲ್ಪಮಟ್ಟಿಗೆ ಇಲ್ಲಿ ತಿಳಿಯಿಸಬೇಕಾಗಿದೆ:

ಏಕಾದಶಿಯು ಕಾಮ್ಯವೂ ನಿತ್ಯವೂ ಆದ ವ್ರತವಾಗಿರುತ್ತದೆ. ಧರ್ಮಸಿಂಧುಸಾರದಲ್ಲಿ ಬರೆದಿರುವದರ ಸಂಗ್ರಹವೇನೆಂದರೆ:

೧. ವಿಷ್ಣುಸಾಯುಜ್ಯಕಾಮರೂ ಆಯುಃಪುತ್ರಕಾಮರೂ ಇವನ್ನು ಎರಡು ಪಕ್ಷದಲ್ಲಿಯೂ ಮಾಡಬಹುದು. ವೈಷ್ಣವಗೃಹಸ್ಥರು ಕೃಷ್ಣೈಕಾದಶಿಯಲ್ಲಿ ನಿತ್ಯವಾಗಿ ಉಪವಾಸಮಾಡತಕ್ಕದ್ದು. ೨. ಈ ವ್ರತಕ್ಕೆ ಎಂಟನೆಯ ವರ್ಷದಿಂದ ಎಂಬತ್ತನೆಯ ವರ್ಷದವರೆಗೂ ಅಧಿಕಾರವಿದೆ; ಶಕ್ತನಾಗಿದ್ದರೆ ಆಮೇಲೂ ಮಾಡಬಹುದು. ಸ್ತ್ರೀಯರಿಗೆ ಪತಿಯ ಅನುಜ್ಞೆಯಿಂದ ಅಥವಾ ತಂದೆಯೇ ಮೊದಲಾದವರ ಅನುಜ್ಞೆಯಿಂದ ಅಧಿಕಾರವುಂಟು.

೨. **ಅಶಕ್ತರಾದವರಿಗೆ:**

> **ನಕ್ತಂ ಹವಿಷ್ಯಾನ್ನಮನೌದನಂ ವಾ**
> **ಫಲಂ ತಿಲಾಃ ಕ್ಷೀರಮಥಾಮ್ಬು ಚಾಜ್ಯಮ್।**
> **ಯತ್ಪಞ್ಚಗವ್ಯಂ ಯದಿ ಚಾಪಿ ವಾಯುಃ**
> **ಪ್ರಶಸ್ತಮತ್ರೋತ್ತರಮುತ್ತರಂ ಚ॥**

ಎಂಬಂತೆ ನಕ್ತದಿಂದ ಹಿಡಿದು ಅವರವರಿಗೆ ಶಕ್ತಿಯಿದ್ದಷ್ಟುಮಟ್ಟಿಗೆ ಹೆಚ್ಚು ಹೆಚ್ಚಿನ ಉಪವಾಸವನ್ನು ಮಾಡಬೇಕು. ಏಕಾದಶಿಯನ್ನು ತ್ಯಾಜ್ಯವೆಂದು ಸರ್ವಥಾ ಎಣಿಸಬಾರದು. ಪ್ರಮಾದದಿಂದ ಬಿಟ್ಟರೆ ಪ್ರಾಯಶ್ಚಿತ್ತವುಂಟು. ನಾಸ್ತಿಕ್ಯದಿಂದ ಬಿಟ್ಟವರಿಗೆ ಹೆಚ್ಚಿನ ಪಾಪ.

## ಭಾಗವತರು

ಆಚಾರವಂತರಲ್ಲಿ ವೈಷ್ಣವರೆಂದೂ ಸ್ಮಾರ್ತರೆಂದೂ ಎರಡು ಪಂಗಡ. ವೈಷ್ಣವದೀಕ್ಷೆಯಿರುವವರೇ ವೈಷ್ಣವರು ಎಂದು ನಿಬಂಧಗಳಲ್ಲಿದ್ದರೂ ಪರಂಪರೆಯಿಂದ

ವೈಷ್ಣವರೆಂದು ಪ್ರಸಿದ್ಧರಾಗಿರುವವರನ್ನೇ ವೈಷ್ಣವರೆಂದು (ಭಾಗವತರೆಂದು) ಕರೆಯುವದು ಎಲ್ಲಾ ದೇಶಗಳಲ್ಲಿಯೂ ಪ್ರಚಾರದಲ್ಲಿರುತ್ತದೆ- ಎಂದು **ನಿರ್ಣಯಸಿಂಧುಕಾರರು** ಬರೆದಿರುತ್ತಾರೆ. ಅಲ್ಲಿ ಉದಾಹರಿಸಿರುವ ವೈಷ್ಣವಲಕ್ಷಣದ ವಾಕ್ಯಗಳು (ಪು.೩೦)ಇಂತಿವೆ:-

**ಪರಮಾಪದಮಾಪನ್ನೋ ಹರ್ಷೇ ವಾ ಸಮುಪಸ್ಥಿತೇ ।**
**ನೈಕಾದಶೀಂ ತ್ಯಜೇದ್ಯಸ್ತು ತಸ್ಯ ದೀಕ್ಷಾಽಸ್ತಿ ವೈಷ್ಣವೀ ॥**
**ವಿಷ್ಣ್ವರ್ಪಿತಾಖಿಲಾಚಾರಃ ಸ ಹಿ ವೈಷ್ಣವ ಉಚ್ಯತೇ ।**
**ಯಥಾ ಶುಕ್ಲಾ ತಥಾ ಕೃಷ್ಣಾಯಥಾ ಕೃಷ್ಣಾ ತಥೇತರಾ ।**
**ತುಲ್ಯೇ ತೇ ಮನ್ಯತೇ ಯಸ್ತು ಸ ವೈ ವೈಷ್ಣವ ಉಚ್ಯತೇ ।**

ಈ ವಾಕ್ಯಗಳಿಂದ ಭಾಗವತಮತದವರಿಗೆ ಏಕಾದಶೀವ್ರತವು ನಿತ್ಯವೆಂದು ಸಿದ್ಧವಾಗುತ್ತದೆ.

**ಭಾಗವತಮತವೆಂದರೆ** ವಿಷ್ಣುಭಗವಂತನಲ್ಲಿ ಏಕಾಂತಭಕ್ತಿಯುಳ್ಳವರು ಎಂಬ ವಿಶಾಲಾರ್ಥವನ್ನಿಟ್ಟುಕೊಂಡರೆ ನಮ್ಮ ದೇಶದಲ್ಲಿರುವ ಮಾಧ್ವರು, ಶ್ರೀವೈಷ್ಣವರು, ವೈಖಾನಸರು- ಇವರೇ ಅಲ್ಲದೆ ಉತ್ತರದೇಶದಲ್ಲಿರುವ ರಾಮಾನಂದ, ನಿಂಬಾರ್ಕ, ವಲ್ಲಭ, ರಾಧಾವಲ್ಲಭೀಯ, ಚೈತನ್ಯ, ಮಹಾರಾಷ್ಟ್ರದ ರಾಮದಾಸೀಪಂಥವೇ ಮುಂತಾದ ಅನೇಕವೈಷ್ಣವಪಂಥಗಳನ್ನೂ ಈ ಹೆಸರಿನಲ್ಲಿಯೇ ಸೇರಿಸಬೇಕಾಗುವದು. ಹೀಗಿದ್ದರೂ ನಮ್ಮ ದೇಶದ ಪಂಚಾಂಗಗಳಲ್ಲಿ ಏಕಾದಶಿಯ ವ್ರತದ ವಿಷಯಕ್ಕೆ ಸ್ಮಾರ್ತ, ವೈಷ್ಣವ (ಮಾಧ್ವ), ಶ್ರೀವೈಷ್ಣವರ ಜೊತೆಗೆ `ಭಾಗವತ' ಏಕಾದಶಿಯನ್ನು ಬೇರೆಯಾಗಿಯೇ ಬರೆದಿರುತ್ತದೆ. ಸ್ಮಾರ್ತರಲ್ಲಿಯೇ ಇದ್ದುಕೊಂಡು ಅದ್ವೈತಸಿದ್ಧಾಂತವನ್ನೇ ನಂಬಿ - ವೈಷ್ಣವಾಚಾರವನ್ನೇ ಇಟ್ಟುಕೊಂಡಿರುವ ಅಥವಾ ವೈಷ್ಣವಾಚಾರಗಳು ಹಲಕೆಲವು ಉಳಿದುಕೊಂಡಿದ್ದರೂ ಪಂಚಾಯತನಪೂಜೆಯೇ ಮುಂತಾದವುಗಳನ್ನು ಅನುಸರಿಸುತ್ತಾ ಕೆಲವು ಶೈವಾಚಾರಗಳನ್ನು ಬೆರೆಯಿಸಿಕೊಂಡಿದ್ದರೂ- ಭಾಗವತೈಕಾದಶಿಯ ಆಚರಣೆಯನ್ನು ಪರಂಪರೆಯಿಂದ ನಡೆಯಿಸಿಕೊಂಡುಬಂದಿರುವ ಭಾಗವತರು ನಮ್ಮಲ್ಲಿ ಈಗಲೂ ಹೇರಳವಾಗಿರುತ್ತಾರೆ.

## ಶುದ್ಧವಿದ್ಧೈಕಾದಶೀಭೇದಗಳು

ದಶಮಿಯ ಸಂಬಂಧವಿರುವ ಏಕಾದಶಿಯನ್ನು ವಿದ್ಧೈಕಾದಶಿ ಎನ್ನುತ್ತಾರೆ. ದಶಮೀವೇಧೆಯು ಅರುಣೋದಯವೇಧ, ಸೂರ್ಯೋದಯವೇಧ-ಎಂದು ಎರಡುವಿಧ. ಸೂರ್ಯೋದಯಕ್ಕಿಂತ ಮುಂಚೆ ನಾಲ್ಕು ಘಳಿಗೆ ಮುಂಚೆ ಐವತ್ತಾರುಘಳಿಗೆಗಳ ಮೇಲೆ ಒಂದು ಪಲೆಯಷ್ಟು ದಶಮಿಯು ಇದ್ದರೂ **ಅರುಣೋದಯವೇಧ**ವೆನಿಸುವದು ಅರುವತ್ತು ಘಳಿಗೆಗಳ ರೂಪವಾದ ದಿನಪ್ರಮಾಣದಲ್ಲಿ ಸೂರ್ಯೋದಯವಾದಬಳಿಕ ಒಂದು ಪಲೆಯಷ್ಟು ದಶಮಿಯಿದ್ಧರೂ **ಸೂರ್ಯೋದಯವೇಧ**. ವೈಷ್ಣವರು (ಭಾಗವತರು) **ಅರುಣೋದಯವೇಧ**ವಿರುವ ಏಕಾದಶಿಯನ್ನು ಬಿಟ್ಟು ದ್ವಾದಶಿಯಲ್ಲಿಯೇ ಉಪವಾಸವನ್ನು

ಮಾಡಬೇಕು. ಪಂಚಾಂಗದವರ ವಾಕ್ಯಗಳಲ್ಲಿ ಅನ್ಯೋನ್ಯವಿರೋಧವಿದ್ದು ನಿರ್ಣಯವಾಗದೆ ಇರುವಾಗ :

**ಬಹುವಾಕ್ಯವಿರೋಧೇನ ಬ್ರಾಹ್ಮಣೇಷು ವಿವಾದಿಷು।**

**ಏಕಾದಶೀಂ ಪರಿತ್ಯಜ್ಯ ದ್ವಾದಶೀಂ ಸಮುಪೋಷಯೇತ್॥**

ಎಂಬ ವಚನದಂತೆ ಏಕಾದಶಿಯನ್ನು ಬಿಟ್ಟು ದ್ವಾದಶಿಯದಿನವೇ ಭಾಗವತರು ಉಪವಾಸಮಾಡಬೇಕು.

ಅರುಣೋದಯವೇಧೆಯಿಲ್ಲದ್ದು ಶುದ್ಧ.

(೧) ಏಕಾದಶೀಮಾತ್ರಾಧಿಕ್ಯ (೨) ದ್ವಾದಶೀಮಾತ್ರಾಧಿಕ್ಯ (೩) ಉಭಯಾಧಿಕ್ಯ (೪) ಅನುಭಯಾಧಿಕ್ಯ-ಎಂದು ಅದು ನಾಲ್ಕುಬಗೆ. ಆಧಿಕ್ಯವೆಂದರೆ ಸೂರ್ಯೋದಯವಾದಮೇಲೂ ಇರುವದು.

(1) ಉದಾಹರಣೆಗೆ ದಶಮಿ ೫೫; ಏಕಾದಶೀ ೬೦-೧; ದ್ವಾದಶೀಕ್ಷಯ ೫೮-ಹೀಗಿದ್ದರೆ ಏಕಾದಶೀಮಾತ್ರಾಧಿಕ್ಯ. ವೈಷ್ಣವರು ಎರಡನೆಯ ದಿನವೇ ಉಪವಾಸಮಾಡಬೇಕು (ಸ್ಮಾರ್ತರು ಮೊದಲಿನ ದಿನ).

(2) ದಶಮೀ ೫೫ ; ಏಕಾದಶಿ ೫೮; ದ್ವಾದಶಿ ೬೦-೧; ಇದು ದ್ವಾದಶೀಮಾತ್ರಾಧಿಕ್ಯ. ವೈಷ್ಣವರು ದ್ವಾದಶಿಯದಿನ ಉಪವಾಸಮಾಡಬೇಕು. (ಸ್ಮಾರ್ತರು ಮುನ್ನಿದಿನವೇ).

(3) ದಶಮೀ ೫೫ ; ಏಕಾದಶೀ ೬೦-೧; ದ್ವಾದಶೀ ೫-೮ ಇದು ಉಭಯಾಧಿಕ್ಯ. ಈ ದಿನ ವೈಷ್ಣವರೂ ಸ್ಮಾರ್ತರೂ ಎರಡನೆಯ ದಿನವೇ ಉಪವಾಸಮಾಡಬೇಕು.

(4) ದಶಮೀ ೫೫; ಏಕಾದಶೀ ೫೭; ದ್ವಾದಶೀ ೫೮. ಇದು ಅನುಭಯಾಧಿಕ್ಯ. ವೈಷ್ಣವರೂ ಸ್ಮಾರ್ತರೂ ಮುನ್ನಿನದಿನವೇ ಉಪವಾಸ ಮಾಡಬೇಕು.

ಮೇಲೆ ಬರೆದಿರುವದು ಧರ್ಮಸಿಂಧುಸಾರದಲ್ಲಿರುವಂತೆ. ಶಾಂಡಿಲ್ಯಸಂಹಿತೆಯಲ್ಲಿ ಹೀಗಿದೆ:

**ಪಂಚಪಂಚಾಶತಾ ವಿದ್ಧಾಂ ದಶಮ್ಯೈಕಾದಶೀಂ ತ್ಯಜೇತ್।**
**ದ್ವಿತಯೇ ದ್ವಾದಶೀವೃದ್ಧೌ ಕ್ಷಯೇ ವಾ ಸಂಶಯೇ ಪರಾ ॥೨-೪-೬॥**

ಇಲ್ಲಿ ದಶಮೀ ೫೫ ಘಳಿಗೆಯ ಮೇಲೆ ವೇಧೆಯನ್ನು ಹೇಳಿರುವಂತೆ ಕಾಣುತ್ತಿದೆ. ವಿದ್ಧೈಕಾದಶಿಯನ್ನು ಬಿಡಬೇಕು ; ಆಧಿಕ್ಯವಿರುವಲ್ಲಿ ಶುದ್ಧೈಕಾದಶಿಯನ್ನು ಬಿಡಬೇಕು-ಎಂಬುದು ವೈಷ್ಣವರಿಗೆಲ್ಲ ಸಮಾನ. ನಮ್ಮ ದೇಶದಲ್ಲಿ ವಿದ್ಧೈಕಾದಶಿ ಎಂದರೆ ೫೬ ಘಳಿಗೆಯ ಮೇಲೆ ಒಂದು ಪಲವಿದ್ಧರೂ ವಿದ್ಧವೆಂದು ನಿಶ್ಚಯಿಸುವ ಧರ್ಮಸಿಂಧುಮತವೇ ಆಚರಣೆಯಲ್ಲಿದೆ. ಅವರವರ ಕುಲಾಚಾರದಂತೆ ನಡೆಯತಕ್ಕದೆಂಬುದು ನಿಸ್ಸಂಶಯ.

# ಜನ್ಮಾಷ್ಟಮಿಯೇ ಮುಂತಾದ ವ್ರತಗಳು

ಏಕಾದಶಿಯು ಕೃಷ್ಣಜಯಂತೀವ್ರತದಂತೆ ನಿತ್ಯವೂ ಕಾಮ್ಯವೂ ಆಗಿದೆ-ಎಂದು ಧರ್ಮಗ್ರಂಥಗಳು ಹೇಳುತ್ತಿವೆ. ಮುಖ್ಯವಾಗಿ ಏಕಾದಶಿಯ ವಿಚಾರವನ್ನು ಭಾಗವತೈಕಾದಶಿಯ ನಿರ್ಣಯಕ್ಕಾಗಿ ಬರೆಯಲಾಯಿತು. ಜನ್ಮಾಷ್ಟಮೀವ್ರತದಲ್ಲಿಯೂ ಸಪ್ತಮೀವಿದ್ಧ, ಶುದ್ಧ-ಎಂದು ಅಷ್ಟಮಿಯಲ್ಲಿ ಭೇದಗಳನ್ನು ವಿವರವಾಗಿ ಹೇಳಿರುತ್ತದೆ. ಅದನ್ನು ಧರ್ಮಶಾಸ್ತ್ರಗಳಿಂದಲೂ ಶಿಷ್ಟಾಚಾರನುಸಾರವಾಗಿಯೂ ನಿರ್ಣಯಿಸಿಕೊಂಡು ಆಚರಿಸಬೇಕು. ಆ ದಿನ ಮಾಡುವ ವ್ರತದಲ್ಲಿ ದೇವಕೀಸಹಿತಕೃಷ್ಣಪೂಜೆಯನ್ನೂ ವಸುದೇವನಂದಗೋಪೀಗೋಪಾಲಾದಿಗಳ ಪೂಜೆಯನ್ನೂ ಸಂಪ್ರದಾಯಾನುಸಾರವಾಗಿ ಮಾಡತಕ್ಕದ್ದು. ಶಕ್ತ್ಯನುಸಾರವಾಗಿ ಉಪವಾಸಫಲಹಾರಾದಿಗಳನ್ನು ಮಾಡಬೇಕು. ಇವುಗಳನ್ನು ಇಲ್ಲಿ ವಿಸ್ತರಿಸಿಲ್ಲ.

**ಶ್ರವಣದ್ವಾದಶಿಯ ವಿಷಯದಲ್ಲಿಯೂ ಹೀಗೆಯೇ ತಿಳಿದುಕೊಳ್ಳಬೇಕು:** ಮುಹೂರ್ತಮಾತ್ರಾದಿಯಾಗಿ ಶ್ರವಣಸಂಬಂಧವಿರುವದಾದರೆ ದ್ವಾದಶಿಯದಿನವೂ ಉಪವಾಸಮಾಡುವದು ಪದ್ಧತಿ. ಮೊದಲನೆಯ ದಿನ ದ್ವಾದಶಿಯು ಏಕಾದಶೀವಿದ್ಧವಾದರೆ ಮುಂದಿನ ದಿನವೂ ಇದ್ದು ಕೊಂಡಿದ್ದರೆ ಮತ್ತು ಎರಡುದಿನವೂ ಶ್ರವಣವಿದ್ಧರೆ, ಏಕಾದಶಿ, ದ್ವಾದಶಿ, ಶ್ರವಣ-ಎಂಬ ಮೂರೂ ಒಟ್ಟಿಗೆ ಸೇರಿರುವದೆಂಬ ವಿಷ್ಣು ಶೃಂಖಲಯೋಗವಿರುವದರಿಂದ ಮೊದಲನೆಯ ದಿನವೇ ಉಪವಾಸವನ್ನು ಮಾಡಬೇಕು, ಹೆಚ್ಚಿನ ವಿವರವನ್ನು ಶಾಸ್ತ್ರಾಚಾರಗಳಿಗನುಸಾರವಾಗಿ ಮಾಡತಕ್ಕದ್ದು.

# ಉಪಸಂಹಾರ

೩೮. ಭಾಗವತಸಂಪ್ರದಾಯವೆಂಬ ಮಾತಿಗೆ ಎರಡರ್ಥಗಳಿವೆ: (1) ವಿಷ್ಣುಭಗವಂತನನ್ನು ನಿಯಮದಿಂದ ಆರಾಧಿಸುವವರೂ ವೈಷ್ಣವದೀಕ್ಷೆಯನ್ನು ಕೈಕೊಂಡಿರುವವರೂ ಯಾವ ಸಿದ್ಧಾಂತವನ್ನೇ ಅನುಸರಿಸಿರಲಿ, ಅವರೆಲ್ಲರೂ ವೈಷ್ಣವರೇ. ಅವರೆಲ್ಲ ಈ ವಿಶಾಲಾರ್ಥದಲ್ಲಿಭಾಗವತರೇ ಆಗಿರುತ್ತಾರೆ. ಆದರೂ ನಮ್ಮ ದೇಶದಲ್ಲಿ ವೈಷ್ಣವರೆಂದರೆ ಮಾಧ್ವಸಂಪ್ರದಾಯದ ದ್ವೈತಿಗಳು; ಶ್ರೀವೈಷ್ಣವರೆಂದರೆ ಶ್ರೀ ರಾಮಾನುಜಾಚಾರ್ಯರ ಅನುಯಾಯಿಗಳಾದ ವಿಶಿಷ್ಟಾದ್ವೈತಿಗಳು;(2) ಭಾಗವತರು ಎಂದರೆ ಶ್ರೀಶಂಕರಭಗವತ್ಪಾದರವರು ಅನುಸರಿಸಿರುವ ಅದ್ವೈತಸಿದ್ಧಾಂತವನ್ನೇ ಅವಲಂಬಿಸಿ ವೈಷ್ಣವಸಂಪ್ರದಾಯವನ್ನು ವಿಶೇಷರೀತಿಯಿಂದ ಆಚರಿಸುವವರು-ಎಂಬ ಸಂಕೇತವು ಬಂದಿರುತ್ತದೆ. ಈ ಚಿಕ್ಕಪುಸ್ತಕದಲ್ಲಿ ನಾವು ಎರಡನೆಯ ಅರ್ಥವನ್ನಿಟ್ಟುಕೊಂಡೇ ವಿಷಯಪರಿಶೀಲನೆಯನ್ನು ಮಾಡುತ್ತಾಬಂದಿದೇವೆ.

ವಾಸುದೇವಭಗವಂತನೇ ಪರಮಾರ್ಥತತ್ತ್ವವು; ಆತನ ನಿತ್ಯನಿರಂತರಾ ರಾಧನೆಯಿಂದಲೇ ಪರಮಪುರುಷಾರ್ಥಲಾಭವಾಗುವದು ಎಂಬುದು ಶ್ರುತಿಸ್ಮೃತಿ

ಪುರಾಣಗಳಿಂದ ಪ್ರಸಿದ್ಧವಾಗಿರುತ್ತದೆ. ಈ ಮತವನ್ನೇ ಭಾಗವತರು ಅನುಸರಿಸುತ್ತಿದ್ದದ್ದರಿಂದ ಅವರು ಈಗ ಅದ್ವೈತಿಗಳೊಳಗೇ ಪೂರ್ಣವಾಗಿ ಸೇರಿಕೊಂಡು ಬಿಟ್ಟಿರುತ್ತಾರೆ. ಅನಾದಿಕಾಲದಿಂದ ಬಂದಿದ್ದ ಭಾಗವತಸಂಪ್ರದಾಯಕ್ಕೂ ಶ್ರೀ ಶಂಕರಭಗವತ್ಪಾದರವರು ಉಪದೇಶಿಸಿರುವ ಸಾಧನಸಿದ್ಧಾಂತಗಳಿಗೂ ಯಾವ ಭೇದವೂ ಇರುವದೇ‌ಇಲ್ಲ. ನಡುವಣಕಾಲದಲ್ಲಿ ಭಾಗವತಮತದವರು ಕಾರಣಾಂತರದಿಂದ ಅಂಗೀಕರಿಸಿದ್ದ ಜೀವೋತ್ಪತ್ತಿಯೇ ಮುಂತಾದ ಕೆಲವು ಸಿದ್ಧಾಂತಗಳನ್ನು ಈಗ್ಗೆ ಅವರು ಸಂಪೂರ್ಣವಾಗಿ ಕೈ ಬಿಟ್ಟಿರುತ್ತಾರೆಂಬುದನ್ನು ಈ ಹೊತ್ತಿಗೆಯಲ್ಲಿ ನಾವು ನಿರ್ವಿವಾದವಾಗಿ ತೋರಿಸಿಕೊಟ್ಟಿರುತ್ತೇವೆ. ಕೆಲವರು ಭಾಗವತಸಂಪ್ರದಾಯದವರಲ್ಲಿಯೇ ಈಗ್ಗೆ ಕೆಲವು ಶೈವಾಚಾರಗಳೂ ಸೇರಿಕೊಂಡಿವೆ; ಇನ್ನುಕೆಲವರು ತಮ್ಮ ಅಸಾಧಾರಣಸಿದ್ಧಾಂತಗಳನ್ನೂ ಆಚಾರ ರಹಸ್ಯಗಳನ್ನೂ ನಿಶ್ಚಯಿಸಿಕೊಳ್ಳಲಾರದೆ, ತಾವಿರುವ ಜನಸಮಾಜದ ಪ್ರಭಾವದಿಂದ ಮಾಧ್ವಾದಿಗಳ ಕೆಲವು ಆಚಾರಗಳನ್ನು ಅನುಸರಿಸಿರುವದೂ ಉಂಟು. ಅಂಥವರಿಗೆ ಸ್ವಸಂಪ್ರದಾಯದಲ್ಲಿ ವಿಶ್ವಾಸವುಂಟಾಗಲೆಂಬ ಕಾರಣದಿಂದ ಈ ಗ್ರಂಥವನ್ನು ಬರೆಯಲಾಗಿದೆ.

ಈಗ್ಗೆ ಭಾಗವತರು ಶುದ್ಧಸಂಪ್ರದಾಯವನ್ನು ಅನುಸರಿಸಬೇಕಾದರೆ ಸದ್ಗುರುಗಳಿಂದ ಅಷ್ಟಾಕ್ಷರೀ, ದ್ವಾದಶಾಕ್ಷರೀ– ಮುಂತಾದ ವೈಷ್ಣವಮಂತ್ರಗಳನ್ನು ಉಪದೇಶಮಾಡಿಸಿಕೊಂಡು ನಿರಂತರವಾಗಿ ಜಪಿಸುತ್ತಾ ಸ್ವಸ್ವಕುಲಾಚಾರಗಳಂತೆ ವೈಷ್ಣವವ್ರತಗಳನ್ನು ಮಾಡುತ್ತಾಬರಬೇಕು. ಭಗವದರ್ಚನೆ, ಶ್ರೀಮದ್ಭಾಗವತ, ವಿಷ್ಣುಪುರಾಣ-ಮುಂತಾದ ವೈಷ್ಣವಪುರಾಣಗಳ ಶ್ರವಣ; ವಿಷ್ಣುಸಹಸ್ರನಾಮ, ಭೀಷ್ಮಸ್ತವರಾಜ, ಅನುಸ್ಮೃತಿ, ಗಜೇಂದ್ರಮೋಕ್ಷ, ಭಗವದ್ಗೀತಾದಿಗಳ ಪಾರಾಯಣ-ಇವುಗಳನ್ನು ತಪ್ಪದೆ ಮಾಡಬೇಕು. ವೈಷ್ಣವಕ್ಷೇತ್ರಾದಿಗಳ ದರ್ಶನ, ತೀರ್ಥಸ್ನಾನ, ದೇವತಾದರ್ಶನ, ಅಲ್ಲಿ ವಿಹಿತವಾಗಿರುವ ಪೂಜಾದಿಗಳು-ಇವುಗಳನ್ನು ಯಥಾಶಕ್ತಿಯಾಗಿ ಮಾಡಬೇಕು. ಮಹಾಭಾರತದಲ್ಲಿರುವ ನಾರಾಯಣೀಯ ಆಖ್ಯಾನವನ್ನು ಓದಬೇಕು; ಅಥವಾ ಅದರ ಶ್ರವಣವನ್ನು ಮಾಡಬೇಕು.

ತಾವು ಶ್ರೀಶಂಕರಭಗವತ್ಪಾದರವರ ಅದ್ವೈತಸಿದ್ಧಾಂತಾನುಯಾಯಿಗಳೆಂಬುದನ್ನು ಯಾವ ಕಾರಣದಿಂದಲೂ ಮರೆಯಬಾರದು; ಶಿವದ್ವೇಷವನ್ನು ಮಾಡುವ ದುರಭಿಮಾನದ ವೈಷ್ಣವರನ್ನು ಅನುಸರಿಸಬಾರದು. `**ಸರ್ವಂ ವಿಷ್ಣುಮಯಂ ಜಗತ್**'-ಎಂಬ ಕಲ್ಯಾಣಸಿದ್ಧಾಂತವನ್ನು ಸ್ಮರಿಸುತ್ತಿರಬೇಕು. ಇದರಿಂದ ಅವರಿಗೆ ಇಹದಲ್ಲಿ ಸುಖವೂ ಪರದಲ್ಲಿ ಗತಿಯೂ ಉಂಟಾಗುವವು.

**ಶ್ರೀವಾಸುದೇವಾರ್ಪಣಮಸ್ತು**

## ಸಂಸ್ಥಾಪಕರ ಸ್ಮರಣೆ



ಕರ್ನಾಟಕದೇಶದ ಅಭಿನವಶಂಕರಾಚಾರ್ಯರೆಂದೇ ಸುಪ್ರಸಿದ್ಧರಾಗಿರುವ ಬ್ರಹ್ಮೀಭೂತ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿಗಳು ಶಾಂಕರ ವೇದಾಂತದ ವಿಷಯಕ್ಕೆ 20ನೆಯ ಶತಮಾನದ ಅಧಿಕೃತ ವಕ್ತಾರರೂ, ಬರಹಗಾರರೂ ಆಗಿದ್ದರು. ಪೂಜ್ಯಶ್ರೀಶ್ರೀಗಳವರ ಅನುವಾದ, ಟಿಪ್ಪಣಿ, ವಿಮರ್ಶಾತ್ಮಕ ಪೀಠಿಕೆಗಳಿಂದ ಅಲಂಕೃತವಾದ ಶ್ರೀಶಂಕರರ ಪ್ರಸ್ಥಾನತ್ರಯ ಭಾಷ್ಯಗಳು, ಸಂಸ್ಕೃತವು ಬಾರದ ಕನ್ನಡಿಗರಾದ ಅಧ್ಯಾತ್ಮ ವಿಚಾರ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

5. 1. 1880ರಂದು ಜನಿಸಿದ ಪೂಜ್ಯ ಶ್ರೀಶ್ರೀಗಳವರ ಪೂರ್ವಾಶ್ರಮದ ಹೆಸರು ವೈ. ಸುಬ್ಬರಾವ್ ಎಂದಿತ್ತು. 1948ರವರೆಗೆ (68ನೆಯ ವಯಸ್ಸಿನವರೆಗೆ) ಅವರು ''ಸುಬ್ರಾಯ''ರೆಂದೇ ಪ್ರಖ್ಯಾತರಾಗಿದ್ದರು. 10. 6. 1948ರಂದು ಸಂನ್ಯಾಸವನ್ನು ಸ್ವೀಕರಿಸಿ **ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳಾದರು.**

'ಬೆಳಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿದಂದಿನಿಂದ ಬದುಕಿರುವವರೆಗೂ ವೇದಾಂತಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀಶ್ರೀಗಳವರು ತಮ್ಮ ಬಾಲ್ಯದಿಂದ 96ನೆಯ ವಯಸ್ಸಿನವರೆಗೂ ವೇದಾಂತಗ್ರಂಥಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದು **''ಪುರುಷಸರಸ್ವತಿ''** ಎಂಬ ಅನ್ವರ್ಥನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲಿಷ್, ಸಂಸ್ಕೃತಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತ ಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಅವರು ಸಂಸ್ಥಾಪಿಸಿರುವ **ಅಧ್ಯಾತ್ಮಪ್ರಕಾಶ ಕಾರ್ಯಾಲಯವು** ದೇಶ ವಿದೇಶಗಳಲ್ಲೂ ಪ್ರಖ್ಯಾತವಾಗಿದ್ದು ಈಗಲೂ ನಿಜವಾದ ಅಧ್ಯಾತ್ಮವಿದ್ಯೆಯ ಅಂತರರಾಷ್ಟ್ರೀಯ ಕೇಂದ್ರವಾಗಿದೆ.

ಪೂಜ್ಯರು ಕರ್ನಾಟಕದ ಅಭಿನವಶಂಕರಾಚಾರ್ಯರಾಗಿ ಬಾಳಿ 1975ನೇ ಆಗಸ್ಟ್ 5 (1880-1975)ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿಪೀಠವು ಹೊಳೆನರಸೀಪುರದಲ್ಲಿದೆ.

**ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹಿ ।**
**ತನ್ನಃ ಸಚ್ಚಿದಾನಂದಃ ಪ್ರಚೋದಯಾತ್ ॥**
**''ಓಂ ನಮೋ ಭಗವತೇ ಸಚ್ಚಿದಾನಂದಾಯ''**